ಶ್ರೀ ವಾಟಾಳ್‌ನಾಗರಾಜ್ : ನನ್ನದು ಯಾವ ತರಹ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು : ನಾನು ಆಗಲೇ ಹೇಳಿದ್ದೇನೆ. ಇನ್ನೇನು ಹೇಳಬೇಕು?ಇವರದು ಮುಗಿದ ತಕ್ಷಣ ತಾವು ಎರಡು ನಿಮಿಷದಲ್ಲಿ ಮುಗಿಸಿ ಎಂದು ನಾನು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಶೂನ್ಯವೇಳೆಗೆ ಅವಕಾಶ ಇದೆಯೋ ಇಲ್ಲವೋ ಎಂಬುದನ್ನು ಹೇಳಿ. ಇವತ್ತು ಕೋಲಾರದ ಜನತೆಗೆ ಬಹಳ ಅನ್ಯಾಯವಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಬೇಕೋ ಬೇಡವೋ. ಮನಸ್ಸಿಗೆ ಬಂದಹಾಗೆ ಮಾತನಾಡಿದರೆ, ಯಾರಿಗೆ ಅರ್ಥವಾಗುತ್ತದೆ.? ನಾನು ತಮ್ಮ ಪರ್ಮಿಷನ್ ತೆಗೆದುಕೊಂಡು ನಿಂತಿದ್ದೇನೆ. ತಾವು ಅವರಿಗೂ ಪರ್ಮಿಷನ್ ಕೊಟ್ಟಿದ್ದರೆ ನನ್ನದೇನೂ ಅಭ್ಯಂತರ ಇಲ್ಲ.

ಉಪಧ್ಯಾಕ್ಷರು : ತಾವು ಬೇಡಿಕೆ ಮೇಲೆ ಮಾತನಾಡಬಹುದು. ಇವತ್ತು ಶೂನ್ಯವೇಳೆ ಇಲ್ಲ.

ಶ್ರೀವಾಟಾಳ್ ನಾಗರಾಜ್ : ಸಾರ್ ಹಾಗಾದರೆ ನಾನು ಧರಣಿ ಮಾಡಬೇಕಾಗುತ್ತದೆ. ತಾವು ನನಗೆ ಹೇಳಬೇಕು.

ಉಪಾಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿ, ಮುಗಿಸಿದ ತಕ್ಷಣ ತಾವು ಏಳಿ. ಎರಡು ನಿಮಿಷದಲ್ಲಿ ತಾವು ಮುಗಿಸಬೇಕೆಂದು ಹೇಳಿದ್ದೇನೆ.

ಶ್ರೀವಾಟಾಳ್ ನಾಗರಾಜ್ : ನನ್ನ ವಿಷಯವನ್ನು ಯಾವ ತರಹದಲ್ಲಿ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿಬಿಟ್ಟರೆ, ನಾನು ಕುಳಿತುಕೊಳ್ಳತ್ತೇನೆ.

ಉಪಾಧ್ಯಕ್ಷರು : ಈಗಾಗಲೇ ಹೇಳಿದ್ದೇನೆ. ಇನ್ನು ಯಾವ ರೀತಿ ಹೇಳಬೇಕು? ಇವರದು ಮುಗಿದ ತಕ್ಷಣ, ಎರಡು ನಿಮಿಷದಲ್ಲಿ ತಾವು ಮುಗಿಸಿ ಎಂದು ನಾನು ಹೇಳಿದ್ದೇನೆ.

5 ನಿಲುವಳಿ ಸೂಚನೆ

ವಿಷಯ : ಕೃಷ್ಣಾ ಮೇಲ್ದಂಡೆಯೋಜನೆ ಕಾಮಗಾರಿಗಳು ಸ್ಥಗಿತಗೊಡಿರುವುದು

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಅನಗತ್ಯ ಹೇಳಿಕೆಗಳನ್ನು ಕೊಟ್ಟಿದ್ದರಿಂದ ನೆರೆ ರಾಜ್ಯಗಳು ವಿವಾದವನ್ನುಂಟು ಮಾಡಿ, ಯೋಜನೆಯ ಕಾರ್ಯ ಸ್ಥಗಿತಗೊಳ್ಳುವಂತೆ ಮಾಡಿರುವ ಬಗ್ಗೆ ಚರ್ಚಿಸುವುದು. ಈ ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ ಈಗಾಗಲೇ ವಿವಾದ ನಡೆದಿದೆ. ಇದು ತಮಗೆ ಗೊತ್ತಿದ್ದಹಾಗೆ 173 ಟಿಎಂಸಿ ನೀರನ್ನು ನಾವು ಈ ಕಣಿವೆಯಿಂದ ಉಪಯೋಗ ಮಾಡಿಕೊಳ್ಳಬೇಕು ಎಂಬ ಸರ್ಕಾರದ ಒಂದು ನಿಲುವು ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಇದು ಪ್ರಮುಖವಾದ ಒಂದು ಅಣೆಕಟ್ಟು. ಇಲ್ಲಿ ಸಂಗ್ರಹಿಸತಕ್ಕ ನೀರು, ತನ್ನ ಪಾಲಿಗಿಂತಲೂ ಹೆಚ್ಚಿನ ನೀರನ್ನು ಸಂಗ್ರಹಿಸುತ್ತಿದ್ದಾರೆ ಎನ್ನತಕ್ಕ ಆಪಾದನೆ ಮೇರೆಗೆ ಆಂಧ್ರಪ್ರದೇಶದವರು ಇದಕ್ಕೆ ಒಂದು ಆಕ್ಷೇಪಣೆಯನ್ನು ಎತ್ತಿದ್ದರು.

ನಂತರ ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರವೂ ಕೂಡ, ಅದೇ ರೀತಿಯಾಗಿ ಆಕ್ಷೇಪಣೆಯನ್ನು ಎತ್ತಿದ್ದರು. ಹೀಗಾಗಿ ಇವೆರಡರ ಮಧ್ಯದಲ್ಲಿ ನಾವೇನು ಎರಡು ಸಾವಿರ ಇಸವಿಯೊಳಗಾಗಿ ನಮ್ಮ ನೀರಿನ ಬಳಕೆಯನ್ನು ಮಾಡಿಕೊಳ್ಳಬೇಕಾಗಿತ್ತು ಅದಕ್ಕೆ ತೊಂದರೆ ಉಂಟಾಗಿದೆ ಮತ್ತು ನಮ್ಮ ಪಾಲಿನ ನೀರನ್ನು ಕಳೆದುಕೊಳ್ಳತಕ್ಕಂತಾದ್ದನ್ನು ಇವತ್ತು ನೋಡುತ್ತಾ ಇದ್ದೇವೆ. ಈ ಪರಿಸ್ಥಿತಿ ಏಕೆ ಉಂಟಾಯಿತು?

ಇದಕ್ಕೆ ಕಾರಣಕರ್ತರು ಯಾರು?ಇದರ ಹಿನ್ನೆಲೆ ಏನು ಎಂಬುದನ್ನು ಕೂಡ ಇವತ್ತು ನಾವು ನೋಡಬೇಕಾಗಿದೆ. ಅನೇಕ ಸಾರಿ ಮಾನ್ಯ ನೀರಾವರಿ ಸಚಿವರು ಹಲವಾರು ಹೇಳಿಕೆಗಳನ್ನು ಕೊಟ್ಟುಕೊಂಡು ಬಂದರು. ಎರಡು ಸಾವಿರ ಇಸವಿಯೊಳಗೆ ಬಚಾವತ್ ಅವಾರ್ಡ್ ಪ್ರಕಾರ. ನಾವು ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತೇವೆ. ಇದರಲ್ಲಿ ಯಾವ ಸಂಶಯವು ಕೂಡ ಬೇಡ, ಸಂದೇಹವೂ ಬೇಡ ಎನ್ನತಕ್ಕ ಮಾತುಗಳನ್ನು ಸತತವಾಗಿ ಹೇಳಿಕೊಂಡು ಬರುತ್ತಿದ್ದಾರೆ. ನಾಲ್ಕೂವರೆ ವರ್ಷಗಳಿಂದ ಅನೇಕ ಸಾರಿ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿಕೊಂಡು ಬಂದಿದ್ದೇವೆ. ಅಂದರೆ ಅಪ್ಪರ್ ಕೃಷ್ಣಾದಲ್ಲಿರತಕ್ಕ ಪ್ರಾಜೆಕ್ಟ್ ಇರಬಹುದು ಅಥವಾ ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್ ಇರಬಹುದು. ಇವುಗಳ ಬಗ್ಗೆ ಒಂದು ಸಲ ಅಲ್ಲ, ಅನೇಕ ಸಲ ಪ್ರಸ್ತಾಪವನ್ನು ಮಾಡಿದ್ದೇವೆ. ಪ್ರತಿಯೊಂದು ಸಲವೂ ಕೂಡ ಒಂದೇ ಉತ್ತರ. ಶಕ್ತಿಮೀರಿ ಪ್ರಯತ್ನ ಮಾಡಿ, ನಾವು ಎರಡು ಸಾವಿರ ಇಸವಿಯೊಳಗೆ ಇವೆಲ್ಲವನ್ನೂ ಸಂಪೂರ್ಣಗೊಳಿಸುತ್ತೇವೆಂಬ ಮಾತನ್ನು ಪದೇಪದೇ ಮಾನ್ಯ ನಾಗೇಗೌಡರವರು ಮತ್ತು ಹಿಂದೆ ದೇವೇಗೌಡರೂ, ಕೂಡ ಹೇಳಿದ್ದರು. ಮತ್ತು ಮುಖ್ಯಮಂತ್ರಿಗಳೂ, ಕೂಡ ಅನೇಕಸಾರಿ ಹೇಳಿದ್ದಾರೆ. ಆದರೆ, ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ನಾವು ಯಾವ ಅಣೆಕಟ್ಟನ್ನು 524 ಮೀಟರ್ ಎತ್ತರಕ್ಕೆ ಏರಿಸಿ, ನೀರನ್ನು ಸಂಗ್ರಹಿಸಿಕೊಂಡು, ನೀರಾವರಿ ಜೊತೆಯಲ್ಲೇ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕೆಂಬ ಬಯಕೆ ಏನಿತ್ತು. ಅದಕ್ಕೆ ಇವತ್ತು ದೊಡ್ಡ ಕೊಡಲಿಪೆಟ್ಟು ಬಿದ್ದಂತಾಗಿದೆ. ಮೊಟ್ಟಮೊದಲನೆಯದಾಗಿ, ಆಂಧ್ರಪ್ರದೇಶದ ಕೃಷ್ಣಯ್ಯ ಎಂಬ ರೈತರು ಆಂಧ್ರ ಹೈಕೋರ್ಟಿನಲ್ಲಿ ಒಂದು ಪಿಟಿಷನ್ ಹಾಕಿ, ಆಲಮಟ್ಟಿಯಲ್ಲಿ ನಡೆಯತಕ್ಕ ಕೆಲಸವನ್ನು ತಡೆಯತಕ್ಕ ಪ್ರಯತ್ನ ಮಾಡಿದರು. ಆದರೆ, ಆ ಹೈಕೋರ್ಟಿನಲ್ಲಿ ಆ ಪಿಟಿಷನ್ ಡಿಸ್‌ಮಿಸ್ ಆಯಿತು. ಪುನಃ ಅವರು ಸುಪ್ರೀಂ ಕೋರ್ಟಿನಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ಅಥವಾ ಇಂಟ್ರಲ್ ಲೋಕ್ಯುಟರಿ ಪಿಟಿಷನ್ (ಐ.ಎ) ಹಾಕಿ, ಅಲ್ಲಿಯೂ ಕೂಡ ಇವತ್ತು ಪೆಂಡಿಂಗ್ ಇದೆ. ಅಂದರೆ, ಆಂಧ್ರ ಪ್ರದೇಶದವರು ಒಂದುಕಡೆ ಒರಿಜಿನಲ್ ಸೂಟ್,524ಮೀಟರ್‌ಗಿಂತ ಎತ್ತರ ಮಾಡ ಮಾಡಬಾರದು, ಆದರಿಂದ ನ್ಯಾಚುರಲ್ ಫ್ಲೋ ಆಫ್ ಏನಿದೆ, ಆಂಧ್ರಪ್ರದೇಶಕ್ಕೆ ಬರತಕ್ಕ ನೀರಿಗೆ ಕಡಿವಾಣ ಹಾಕಿದಂತೆ ಆಗುತ್ತದೆ, ನಿಲ್ಲಿಸಿದಂತೆ ಆಗುತ್ತದೆ ಅದಕ್ಕಾಗಿ ಇದನ್ನು ತಾವು ನಿಲ್ಲಿಸಬೇಕು, ಇದನ್ನು ಮಾಡಗೊಡಬಾರದು ಮತ್ತು ಇದು ಕೇವಲ 519 ಮೀಟರ್‌ಗೆ ಮಾತ್ರ ಸೀಮಿತವಾಗಿರಬೇಕು. 512ಮೀಟರ್ ಮೊದಲು ಒಪ್ಪಿಗೆಯಾದ ಪ್ರಪೋಸಲ್. ಆದರೆ, ನಾವು ಹೇಳತಕ್ಕಂತಾದ್ದು 519 ಮೀಟರ್ ಇಲ್ಲಿಗೆ ಸೀಮಿತವಾಗಿರಬೇಕೆಂಬ ಮಾತನ್ನು ಅವರು ಹೇಳುತ್ತಿದ್ದಾರೆ, ಮತ್ತು ಅದೇ ಹಠವನ್ನು ಹಿಡಿದುಕೊಂಡು ಎಲ್ಲಾ ಪ್ರಯತ್ನ ಮಾಡುತ್ತಿದ್ದಾರೆ

ಈ ಹಿಂದೆ ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗಲೂ ಕೂಡ, ಅಲ್ಲಿನ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಮೇಲೆ ಒತ್ತಡವನ್ನು ಹೇರಿ, ಒಂದು ಸ್ಪೆಷಲ್ ಆದಂಥ ಕಮಿಟಿಯನ್ನು ರಚನೆ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಇದು ಎಲ್ಲೂ ಕೂಡ ಯಾವಾಗಲೂ ನಡೆದಿಲ್ಲ. ಏಕೆಂದರೆ ಒಂದು ಪೊಲಿಟಿಕಲ್ ಪಾರ್ಟಿ ಸ್ಟೀರಿಂಗ್ ಕಮಿಟಿ ನೇರವಾಗಿ ನೀವು ಆಲಮಟ್ಟಿ ಡ್ಯಾಮ್ ಇನ್‌ಸ್ಪೆಕ್ಷನ್ ಮಾಡಿ, ಅಲ್ಲಿ ನಿಜವಾಗಿಯೂ ಅವರು 524 ಮೀಟರ್ ಹೋಗತಕ್ಕ ಪ್ರಯತ್ನ ಮಾಡುತ್ತಿದ್ದಾರೆಯೇ ಹೇಗೆ ಎನ್ನುವುದಕ್ಕೆ ಎಲ್ಲಾ ಪೊಲಿಟಿಕಲ್ ಪಾರ್ಟಿ ಮುಖಂಡರನ್ನು ಮುಖ್ಯಮಂತ್ರಿಗಳದೇ ಒಂದು ಸಮಿತಿ ಮಾಡಿ ಅವರ ಮುಖಾಂತರ ಅವರ ಚೀಫ್ ಇಂಜಿನಿಯರ್ಸ್ ಬಂದು ಅವರು ಈ ಡ್ಯಾಮನ್ನು ನೋಡತಕ್ಕಂಥಾದ್ದು. ಇನ್‌ಸ್ಪೆಕ್ಷನ್ ಮಾಡತಕ್ಕಂಥಾದ್ದು ಮಾಡಿದರು, ಇದು ಎಲ್ಲಿಯೂ ಕೂಡ ನಡೆದಿಲ್ಲ

ಮತ್ತು ಇಂತಹ ಒಪ್ಪಿಗೆಯನ್ನು ಯಾರೂ ಕೊಟ್ಟಿರಲಿಲ್ಲ. ಆದರೆ ನಾವೇ ಸೃಷ್ಟಿ ಮಾಡಿಕೊಳ್ಳತಕ್ಕಂಥಾದ್ದು ಸಮಸ್ಯೆಗಳನ್ನು ಹುಟ್ಟಿಸಿಕೊಳ್ಳುವುದು ಆಮೇಲೆ ಆ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಮತ್ತೆ ಆಮೇಲೆ ಪ್ರಯತ್ನ ಮಾಡತಕ್ಕಂಥಾದ್ದು ಅಂದರೆ, ಒಂದು ಕಡೆ ನಾವು ಸೃಷ್ಟಿ ಮಾಡುವುದು, ಇನ್ನೊಂದುಕಡೆ ಅದನ್ನು ಶಮನ ಮಾಡುವುದಕ್ಕೆ ಮತ್ತೆ ಪ್ರಯತ್ನ ಮಾಡುವುದು. ಇದು ಏಕೆ ಎಂದು ನಾನು ಕೇಳುತ್ತೇನೆ. ಹಿಂದೆ ಈ ತಪ್ಪು ಆಯಿತು. ಅದನ್ನು ಅವರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

The Chier Ministers of Assam, Bihar, Tamil Nadu and West Bengal Constituted an expert committee to recommend measures to be taken.

ಅಂದರೆ ನಮ್ಮ ರಾಜ್ಯದಲ್ಲಿ ಏನು ಈ ವಿವಾದ ನಡೆದಿತ್ತು, ಈ ವಿವಾದಕ್ಕೆ ಹಾದಿಯನ್ನು ತೋರಿಸುವುದಕ್ಕೆ ಈ ನಾಲ್ಕು ಮುಖ್ಯಮಂತ್ರಿಗಳ ಒಂದು ಕಮಿಟಿ. ಅಂದರೆ, ಮುಂದೆ ಅವರೇನು ಮಾಡಿದರು ಅಂದರೆ 14-11-96 ರಿಂದ 18-11-96 ರವರೆಗೆ ಎಲ್ಲಾ ಕಡೆ ಅಡ್ಡಾಡಿ ಒಂದು ವರದಿಯನ್ನು ಕೊಟ್ಟರು.

ತದನಂತರ ಟೆಕ್ನಿಕಲ್ ಕಮಿಟಿ ಜನವರಿ 1997ರಲ್ಲಿ ತನ್ನದೇ ಆದಂತಹ ಒಂದು ವರದಿಯನ್ನು ಕೊಟ್ಟರು. ಆಮೇಲೆ ಜನವರಿ 1997ರಲ್ಲಿ ಶ್ರೀ ಕೃಷ್ಣಯ್ಯ ಎನ್ನುವವರು ಏನು ಒಂದು ಕೇಸ್‌ಫೈಲ್ ಮಾಡಿದ್ದರು ಆ ಒಂದು ಕೇಸ್ ಡಿಸ್‌ಮಿಸ್ ಆಯಿತು. ಮುಂದೆ ನಾನು ಈಗಾಗಲೇ ಹೇಳಿದಂತೆ ಪಿ.ಐ.ಎಲ್ ಸುಪ್ರೀಂ ಕೋರ್ಟ್ ಮುಂದೆ ಫೈಲ್ ಮಾಡಿದರು. ಇದು ಅದೇ ರೀತಿಯಾಗಿ ಮುಂದಕ್ಕೆ ಮುಂದಕ್ಕೆ ಬೆಳೆದುಕೊಂಡು ಹೋಗುತ್ತಿದೆ. ಹೋದ ಮೇಲೆ ಇವತ್ತು ಒರಿಜನಲ್ ಸೂಟ್ ಅಂತೂ ಇನ್ನೂ ಸುಪ್ರೀಂ ಕೋರ್ಟ್ ಮುಂದೆ ಇದೆ. ಅದು ಇನ್ನೂ ಏನೂ ತೀರ್ಮಾನವಾಗಿಲ್ಲ ಇದರ ಮಧ್ಯೆ ಸುಪ್ರೀಂ ಕೋರ್ಟ್ ಕೂಡ ಒಂದು ತಡೆಯಾಜ್ಞೆಯನ್ನು ಕೊಟ್ಟು ನೀವು ಯಥಾ ಸ್ಥಿತಿಯಲ್ಲಿಯೇ ಆ ಡ್ಯಾಮನ್ನು ನಿಲ್ಲಿಸಬೇಕು, ಆಮೇಲೆ ಯಾವ ಕಾರ್ಯಕ್ರಮಗಳನ್ನು ಕೂಡ ಹಾಕಿಕೊಳ್ಳಬಾರದು ಎನ್ನತಕ್ಕಂಥ ಒಂದು ರಿಸ್ಟ್ರಿಕ್ಷನ್ ಹಾಕಿದ ಮೇಲೆ ಪುನಃ ನಮ್ಮ ಸರ್ಕಾರದವರು ಒಂದು ಅಫಿಡವಿಟ್ಟನ್ನು ಹಾಕಿ ನಮಗೆ ಕನಿಷ್ಟ ಪಕ್ಷ ಫ್ರೇಮ್‌ಗಳನ್ನು ಕೂಡಿಸುವುದಕ್ಕಾದರೂ ಅವಕಾಶ ಮಾಡಿಕೊಡಿ, ನಾವು 524 ಅಡಿ ಎತ್ತರಕ್ಕೆ ಗೇಟ್ ಫಿಕ್ಸ್ ಮಾಡುವುದಕ್ಕೆ ಅಥವಾ ನಮ್ಮ ಪ್ಲೇಟನ್ನು ಫಿಕ್ಸ್ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಕನಿಷ್ಟಪಕ್ಷ ಅದರ ಫ್ರೇಮ್ ಮಾಡುವುದಕ್ಕಾದರೂ ಅವಕಾಶ ಕೊಡಿ ಎಂದು ಕೇಳಿಕೊಂಡರು. ಆ ಫ್ರೇಮ್ ಮಾಡಿ ಆದ ಮೇಲೆ ಈಗ ಪ್ಲೇಟ್ ಹಾಕುವುದಕ್ಕೋಸ್ಕರ ಅವಕಾಶ ಮಾಡಿಕೊಡಿ ಎಂದು ಕೇಳಿದರೂ ಇವತ್ತು ಇಲ್ಲಿಯವರೆಗೂ ಪರ್ಮಿಶನ್ ಇಲ್ಲ. ಮತ್ತು ಈ ಮಳೆಗಾಲದಲ್ಲಿಯೂ ಕೂಡ ನಮ್ಮ ನೀರು ಸಂಪೂರ್ಣವಾಗಿ ಆಂಧ್ರಪ್ರದೇಶಕ್ಕೆ ಹೋಗತಕ್ಕಂಥಾದ್ದು ಇದೆ ಎನ್ನತಕ್ಕಂಥ ಮಾತೂ ಕೂಡ ಅವರಿಗೆ ಗೊತ್ತಿದೆ. ಇವತ್ತಿಗೂ ಸಹ ನಾವು ನಮ್ಮ ಸಾಲಿಡ್ ಕ್ರಸ್ಟ್ ಗೇಟ್ಸ್‌ನ್ನು ಹಾಕುವುದಕ್ಕೆ ಆಗಲಿಲ್ಲ. 509 ಮೀಟರ್ಸ್ shall not commence before December 1997.

ಆಮೇಲೆ ಇದರ ಮಧ್ಯೆ 5ನೇ ಮೇ 1998ಕ್ಕೆ ನಮ್ಮ ಮಾನ್ಯ ನೀರಾವರಿ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರು. ನಾವು ಈ ಆಲ್ಮಟ್ಟಿ ಡ್ಯಾಮನ್ನು ತ್ವರಿತಗತಿಯಿಂದ ಕಂಪ್ಲೀಟ್ ಮಾಡುತ್ತಿದ್ದೇವೆ. ಅದರ ಎತ್ತರ ಕೂಡ 524ಕ್ಕೆ ಏರಿಸುತ್ತೇವೆ ಎನ್ನತಕ್ಕಂಥಾದ್ದನ್ನು ಕೂಡ ಹೇಳಿದರು. ಇದರ ಮೇಲೆ

ಈ ವಾದಗಳು ವಿವಾದಗಳು ಪ್ರಾರಂಭವಾಗಿದ್ದು, ಇದರ ಪರಿಣಾಮ ಏನಾಗಿದೆ ಅಂದರೆ ಅದನ್ನು ಮಾಡುವುದಕ್ಕಿಂತ ಮುಂಚೆ ನಾವು ಹೇಳುವುದು. ಒಂದು ಕಡೆ ಹೇಳುವುದು ನಾವು ಕ್ರಸ್ಟ್ ಗೇಟ್ಸ್‌ನ್ನು ಕೂರಿಸುತ್ತೇವೆ. 26ರಲ್ಲಿ ಸುಮಾರು ಈಗಾಗಲೇ 7 ಕ್ರಸ್ಟ್ ಗೇಟನ್ನು ಕೂರಿಸಿದ್ದೇವೆ. ಇನ್ನು ಉಳಿದವುಗಳನ್ನು ಕೂರಿಸುತ್ತಿದ್ದೇವೆಂದು ಒಂದು ಹೇಳಿಕೆಯನ್ನು ಹಿಂದೂ ಪತ್ರಿಕೆಯಲ್ಲಿ ಕೊಟ್ಟರು. ಆಮೇಲೆ ಆ ರೀತಿಯಾಗಿ ನಾನು ಹೇಳಿಲ್ಲವೆಂದು ಡಿನೈ ಸಹ ಮಾಡಿದರು. ನಾವಿಲ್ಲಿ ವಾದವಿವಾದ ಮಾಡಿದ್ದೇವೆ, ಅದಕ್ಕೆ ನೀವು ಆಂಧ್ರಪ್ರದೇಶದ ಪರ ವಾದ ಮಾಡುತ್ತಿದ್ದೀರಿ, ಎನ್ನತಕ್ಕಂಥಾದ್ದು ಇಲ್ಲೇ ಬಂತು. ಆದರೆ ನಾವು ಹೇಳಿದ್ದು ಸದುದ್ದೇಶದಿಂದ. ನಿಮಗೆ ಪಬ್ಲಿಸಿಟಿ ಬೇಕೋ ಅಥವಾ ಕೆಲಸ ಬೇಕೋ ? ಕೆಲಸ ಬೇಕು ಅಂದರೆ ಸುಮ್ಮನೆ ಬಾಯಿ ಮುಚ್ಚಿ ಕೆಲಸ ಮಾಡತಕ್ಕಂಥಾದ್ದು ಮಾಡಬೇಕು. ಅದು ಬಿಟ್ಟು ಪ್ರತಿ ಹಂತದಲ್ಲೂ ಪ್ರತಿ ದಿನ ನಾನು ನಿಮಗೆ ಡೇಟ್ ವೈಸ್ ಕೊಡಿ ಅಂದರೂ ಕೊಡುತ್ತೇನೆ. ಪ್ರತಿ ತಿಂಗಳೂ ಒಂದೊಂದು ಸ್ಟೇಟ್‌ಮೆಂಟ್ ಕೊಡುವುದು. ಕಾಂಪ್ಲಿಕೇಷನ್ ಕ್ರಿಯೇಟ್ ಮಾಡುವುದು. ಮತ್ತೆ ಈ ಕಾಂಪ್ಲಿಕೇಷನ್ ಕ್ರಿಯೇಟ್ ಮಾಡುವುದಕ್ಕೆ ಸುಪ್ರೀಂ ಕೋರ್ಟ್, ಹೈಕೋರ್ಟ್, ಆಮೇಲೆ ಮುಖ್ಯಮಂತ್ರಿಗಳ ಸಭೆ, ಆಮೇಲೆ ಮುಖ್ಯಮಂತ್ರಿಗಳಿಂದ ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿಸುವುದು, ಆಮೇಲೆ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ಮಾಡನಾಡಿಸುವುದು; ಸೃಷ್ಟಿ ಮಾಡುವವರೂ ನೀವೇ, ಆಮೇಲೆ ಅದು ಪುನಃ ಕಾಂಪ್ಲಿಕೇಟ್ ಆದ ಮೇಲೆ ಇಷ್ಯೂವನ್ನು ಪುನಃ ಶಮನ ಮಾಡುವುದಕ್ಕೆ ಅಡ್ಡಾಡುವಂಥಾದ್ದು ಮತ್ತು ಕೊನೆಗೆ ನೀವು ಕೊಟ್ಟಂತಹ ಸಲಹೆ ಕೂಡ ಆಂಧ್ರಪ್ರದೇಶದವರು ಒಪ್ಪಲಿಲ್ಲ. ನಿಮಗೆ ಹ್ಯುಮಿಲಿಯೇಟ್ ಮಾಡಿದರು. ನೀವು ಮಾನಿಟರಿಂಗ್ ಕಮಿಟಿಯನ್ನು ಸಜಸ್ಟ್ ಮಾಡಿದಿರಿ, ಆಮೇಲೆ ಅವರು ಅದನ್ನು ರಿಜೆಕ್ಟ್ ಮಾಡಿದ ಮೇಲೆ ಅದು ನಮ್ಮ ಸಲಹೆಯಲ್ಲ, ಆ ಸಲಹೆ ಸುಪ್ರೀಂ ಕೋರ್ಟಿನವರದ್ದು ಸುಪ್ರೀಂ ಕೋಟ್‌ನವರು ಹೇಳಿದಂತೆ ನಾವು ಮಾಡಿದ್ದೇವೆಯೇ ಹೊರತಾಗಿ ನಾವು ಮಾಡಲಿಲ್ಲ ಎನ್ನತಕ್ಕಂಥ ಮಾತನ್ನುಹೇಳಿದರು. ಈ ಒಂದು ರೀತಿಯಾಗಿ ಇವತ್ತು ಈ ಆಲ್ಮಟ್ಟಿ ಡ್ಯಾಮ್ ಕೆಲಸ ನಡೆಯುತ್ತಿದೆ. ಆಮೇಲೆ ಇನ್ನೊಂದು ವಿಶೇಷವಾಗಿ 9ನೇ ಏಪ್ರಿಲ್‌ನಲ್ಲಿ ನಾವು ಕೊಟ್ಟಂತಹ ಪ್ರೊಪೋಸಲ್‌ನ್ನು ಆಂಧ್ರಪ್ರದೇಶದವರು ರಿಜೆಕ್ಟ್ ಮಾಡಿದರು. ಆಮೇಲೆ ಏಪ್ರಿಲ್ 21ಕ್ಕೆ ನಮ್ಮ ಇರಿಗೇಷನ್ ಮಿನಿಸ್ಟರ್ ಹೇಳಿದರು ಇದು ನಮ್ಮ ಪ್ರೊಪೋಸಲ್ ಅಲ್ಲ ಸುಪ್ರೀಂ ಕೋರ್ಟ್‌ನವರದ್ದು ಇತ್ತು, ಕೇಂದ್ರ ಸರ್ಕಾರದವರದ್ದು ಇತ್ತು. ಅದಕ್ಕಾಗಿ ಸೆಂಟ್ರಲ್ ಗೌರ್ನಮೆಂಟ್‌ನವರು ಹೇಳಿದಂತೆ ನಾವು ಪ್ರೊಪೋಸಲ್ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆಮೇಲೆ ಏಪ್ರಿಲ್ 23ಕ್ಕೆ " Karnataka' s Advocate in Supreme court Nariman agress for impounding water at 515 meters and reservoir level at Almatti reservoir and also agrees to annual utilisation of 155 TMCFT in UKP even after erection of all crest gates that is planned 173 TMC. On May 3rd Supreme Court orders for statusquo on Almatti dam and refers this matter to Five Judge bench and directs that the matter may be posted on July 19 for further hearing. On April 23rd, the Maharashtra Government files affidavit in the Supreme court that if Karnataka raises the hight of Almatti dam to 524 meters, 85 Villages in Maharashtra will be submerged. On June 20th, Hon'ble Chief Minister states before the press that Karnataka Government would seek extension of deadline set by Bachawat Tribunal even after........"

ಇದು ಬರೆದಿದ್ದಾರೆ. ಅಂದರೆ ನಮ್ಮ ನೀರಿನ ಪಾಲು ಏನೂ ಹೋಗುವುದಿಲ್ಲ. ನಾವು ಕೋರ್ಟಿನಲ್ಲಿ ಫೈಟ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಇವರು ಹೇಳಿದರು. ನಾನು ತಮ್ಮನ್ನು ಕೇಳುತ್ತೇನೆ. ಯಾವ ಉದ್ದೇಶದಿಂದ ನೀವು ಸುಪ್ರೀಂ ಕೋರ್ಟ್ ಮುಂದೆ ಮಾನಿಟರಿಂಗ್ ಕಮಿಟಿ ಆಗಬೇಕೆಂದು ಒಪ್ಪಿಕೊಂಡಿದ್ದೀರಿ, ಅದನ್ನು ಆಂಧ್ರಪ್ರದೇಶದವರು ರಿಜೆಕ್ಟ್ ಮಾಡಿದರು ಅಂದರೆ ಅವರಿಗೆ ನೀವು ಆ ಪ್ರೊಪೋಸ್‌ಲನ್ನು ಕೊಟ್ಟಿದ್ದೀರೋ ಹೇಗೆ ? ಏಕೆಂದರೆ ಈ ಸದನಕ್ಕೆ ಏನೂ ಗೊತ್ತಿಲ್ಲ. ವಿರೋಧ ಪಕ್ಷದ ಯಾವ ಮುಖಂಡರನ್ನೂ ಸಹ ಕರೆದು ಮಾತನಾಡತಕ್ಕಂಥಾದ್ದು ಆಗಲಿ, ಅಥವಾ ಹೇಳತಕ್ಕಂಥ ಪ್ರಯತ್ನವನ್ನು ಅವರು ಮಾಡಲಿಲ್ಲ. ಇವತ್ತು ನಾನು ಒಂದು ಪ್ಯಾರಾ ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಇವರು ಯಾವ ರೀತಿಯಾಗಿ ಆಫಿಡವಿಟ್‌ನ್ನು ಮಾಡಿಫೈ ಮಾಡಿ ಸುಪ್ರೀಂ ಕೋರ್ಟ್ ಮುಂದೆ ಕೊಡಬೇಕು ಎನ್ನುತಕ್ಕಂಥ ತಯಾರಿಯಲ್ಲಿ ಇತ್ತು ಎನ್ನತಕ್ಕಂಥಾದ್ದನ್ನು ಮತ್ತು ಆ ಪ್ರೊಪೋಸಲನ್ನು ಆಂಧ್ರಪ್ರದೇಶದವರು ಯಾವ ರೀತಿಯಾಗಿ ರಿಜೆಕ್ಟ್ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. "Karnataka in modification of its earlier stand has offered to constitute an Inter-State Authority under the control of Central water commission on the lines of the Thungabhadra Board for monitoring the inflow and outflow at Almatti and thus ensure Krishna water to Andhra pradesh. The Authority will have the officials drawn from Karnataka and Andra Pradesh apart from those of the central water commission as in the case of Tungabhadra Board which is now regulating the flows from the Hospet Dam for Andhra pradesh. While making the offer, the Karnataka Government however wanted Andhra pradesh to allow erection of crest gates over the solid structure of the completed dam of Almatti reaching a height of 509 meters, taking the total height to 524 meters as a pre-condition for constitution of Monitoring body. Karnataka s revised stand on the controversial issue became known through the Affidavit submitted to the supreme Court a couple of days ago through its Advocate the copy of which was made available to Andhra pradesh Government. The Affidavit, according to top officials in A.P. Government, followed the Apex Court 's interim order that Karnataka Should not obstruct the free flow of the river beyond 509 meters and that if it is obstructed, it would be at its own risk and cost."

12.40 ಪಿ.ಎಂ

ಎಂದು ಅವರು ಇವರ ಪ್ರೊಪೋಸಲ್‌ನ್ನು ರಿಜೆಕ್ಟ್ ಮಾಡಿದರು. ಆಲ್‌ಪಾರ್ಟಿ ಮೀಟಿಂಗ್‌ನಲ್ಲಿ ಅವರು ಕೆನ್ವೇ ಮಾಡಿದಾಗ ಇದನ್ನು ಒಪ್ಪಿಕೊಳ್ಳಬೇಡಿ ಎಂದು ಅವರೂ ಕೂಡ ಸಲಹೆ ಮಾಡಿದರು. ಪ್ರೊಪೋಸಲ್ ಇಲ್ಲದೆ ಮಾನ್ಯ ನೀರಾವರಿ ಸಚಿವರು ಯಾವ ದೃಷ್ಟಿಯಿಂದ. ಯಾರ ಸಲಹೆ ಮೇರೆಗೆ ಈ ಪ್ರೊಪೋಸಲ್‌ನ್ನು ಅವರ ಮುಂದಿಟ್ಟರು? ಯಾರದೋ ಒಂದು ಒತ್ತಡದ ಮೇರೆಗೆ ಈ ಪ್ರೊಪೋಸಲ್‌ನ್ನು ಕೊಡತಕ್ಕಂಥ ಒಂದು ಪ್ರಯತ್ನವನ್ನು ಮಾನ್ಯ ನಾಗೇಗೌಡರು ಮಾಡಿದರು. ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್‌ನಲ್ಲಿದೆ ಎಂದು ಹೇಳಿ ನಮ್ಮ ವಕೀಲರಾದ ನಾರೀಮನ್ ಅವರು ಮತ್ತೆ ಮಾಡಿಫೈಡ್ ಅಫಿಡವಿಟ್ ಅನ್ನು ಏತಕ್ಕೆ ಹಾಕಿದರು ? ಇಂಥ ವಿಚಾರಗಳು ನಮಗೆ

ಗೊತ್ತಾಗ ಬೇಕು. ಏಕೆಂದರೆ ಇದು ಜನರಿಗೆ ಗೊತ್ತಾಗಬೇಕು. ನೀವು ಜನರ ಸಲಹೆಯನ್ನು ತೆಗೆದುಕೊಳ್ಳುವುದಿಲ್ಲ, ವಿರೋಧಪಕ್ಷಗಳನ್ನು ಈ ಕುರಿತು ಕರೆದು ಮಾತನಾಡುವುದಿಲ್ಲ. ಇಂಥ ಒಂದು ಸ್ಥಿತಿಯು ಇವೊತ್ತು ಉಂಟಾಗಿದೆ. ಈಗ ಮಹಾರಾಷ್ಟ್ರದವರು ಬಂದು ನಿಂತಿದ್ದಾರೆ. ಅವರಿಗೆ ಇದರ ಯಾವ ಸಂಬಂಧವೂ ಇಲ್ಲ. ಆಂಧ್ರದವರು ನೋಡಿನೋಡಿ ಕಾಲು ಕೆರೆದು ಜಗಳ ತೆಗೆದರು. ಅವರು ಹಾಗೆ ಜಗಳವಾಡಲು ನಮ್ಮ ನಾಗೇಗೌಡರು ಕಾರಣರಾದರು. ಇವರು ಪದೇಪದೇ ಸ್ಟೇಟ್‌ಮೆಂಟ್ ಕೊಡುವುದು, ಅವರನ್ನು ರೇಗಿಸುವುದು ಮಾಡುತ್ತಿದ್ದಾರೆ. ಅವರು ಬರೆದ ಪತ್ರಕ್ಕೆ ಇವರು ಉತ್ತರವನ್ನು ಕೊಡುವುದಿಲ್ಲ. ಇದರ ಬಗ್ಗೆ ಜವಾಬ್ದಾರಿಯಿಂದ ಹೇಳ ತಕ್ಕಂಥಾದ್ದು ಕೂಡ ಇಲ್ಲ. ಹೀಗಾಗಿ ಅವರು ಕೋರ್ಟ್‌ನಲ್ಲಿ ಕೇಸ್ ಹಾಕಿ ಆಲಮಟ್ಟಿ ಡ್ಯಾಂನ ಎತ್ತರವನ್ನು, ಕಟ್ಟಡವನ್ನು ನಿಲ್ಲಿಸಲು, ನೀರನ್ನು ಸಂಗ್ರಹಿಸಲು ಅಡಚಣೆಯನ್ನು ಉಂಟು ಮಾಡಿದ್ದಾರೆ, ಅದೇ ರೀತಿಯಲ್ಲಿ ಮಹಾರಾಷ್ಟ್ರದವರೂ ಕೂಡ ಕುಂಟು ನೆಪವನ್ನು ಎತ್ತಿದ್ದಾರೆ, ಇದೇ ಮಹಾರಾಷ್ಟ್ರದವರು ಹಿಂದೆ ಒರಿಜನಲ್ ಸೂಟ್ ಏನಿದೆ, Original Suit No.2./97, State of Andhra Pradesh through its Chief Secretary, Hyderabad- Appliecant V/s State of Karnataka through its Chief Secretary, Bangalore, union of India, New Delhi, State of Maharastra represented by its chief Secretary, Narriman Point. Bombay - Respondents.

ಅಂದರೆ ಒಟ್ಟು ಮೂರು ಜನರನ್ನು ಪಾರ್ಟಿ ಮಾಡಿ, ಆಂಧ್ರ ಸರಕಾರದವರು ಈ ಕೇಸ್‌ನ್ನು ಹಾಕಿದರು. ಆದರೆ ಒರಿಜನಲ್ ಸೂಟ್ ನಂಬರ್ 2-1997ನಲ್ಲಿ ಮಹಾರಾಷ್ಟ್ರ ಸರಕಾರದವರೇ ಅಫಿಡವಿಟ್ ಕೊಟ್ಟಿದ್ದಾರೆ. ಯಾವುದೇ ರಾಜ್ಯದ ಒಳಗಡೆ ಅವರ ಅಧೀನದಲ್ಲಿರತಕ್ಕಂಥ ಡ್ಯಾಂನ ಎತ್ತರವನ್ನಾಗಲಿ, ನೀರಿನ ಬಳಕೆಯಾಗಲಿ, ಎಷ್ಟು ಎತ್ತರ ತೆಗೆದುಕೊಳ್ಳಬೇಕು ಯಾವ ರೀತಿಯಲ್ಲಿ ಕನ್‌ಸ್ಟ್ರಕ್ಟ್ ಮಾಡ ಬೇಕೆಂಬುದನ್ನು ಸಂಪೂರ್ಣವಾಗಿ ಆ ರಾಜ್ಯಕ್ಕೆ ಬಿಟ್ಟದ್ದು. ಅದು ಸಂಬಂಧಪಟ್ಟ ರಾಜ್ಯದವರ ಸ್ವಾತಂತ್ರ್ಯ ಎನ್ನುವ ಮಾತನ್ನು ಅವರು ಒರಿಜನಲ್ ಸೂಟ್ ಏನು ಇತ್ತು, ಅದರಲ್ಲಿ ಅಫಿಡವಿಟ್ ಫೈಲ್ ಮಾಡಿದಾಗ ಅವರು ಕೌಂಟರ್ ಅಫಿಡವಿಟ್ ಕೊಡುವಾಗ ಮಾಹಾರಾಷ್ಟ್ರದವರು ಈ ರೀತಿಯಾಗಿ ಹೇಳಿದ್ದಾರೆ. ಅವರು ಬೇರೆಯವರು ಮಧ್ಯಪ್ರವೇಶ ಮಾಡಬಾರದು ಎಂದು ಹೇಳಿದ್ದಾರೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇದು ಅವರ ಹತ್ತಿರ ಕೂಡ ಇರಬಹುದೆಂದು ತಿಳಿದಿದ್ದೇನೆ. ಪ್ಯಾರಾ-13ರಲ್ಲಿ ಮಹಾರಾಷ್ಟ್ರದವರು ಹೀಗೆ ಹೇಳುತ್ತಾರೆ. ಇದು ಫೈಲ್ ಮಾಡಿದ್ದು 11-7-97 OS No 2197 in which clear and categorical stand has been taken and set out in paras 13 and 16 of written statement "Adverting to para 65,66,67 & 68 of the plaint it is submitted that it is within the powers of the State to raise its own funds for its project, otherwise than by approaching the central Government. It is submitted that a State can extend the area of irrigation, alter the designs of any reservoir, , change the purpose of any project, alter the design and scope of any project, execute the project without the consent of the other State...."

ಅಂದರೆ ಇವರ ಹೇಳಿಕೆಯ ಪ್ರಕಾರವೇ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರನ್ನು ಕೇಳದೆ ಕರ್ನಾಟಕ ಸರಕಾರದವರು ಮಾಡಬಹುದೆಂಬ ರೀತಿಯಲ್ಲಿ ಅವರ ಅಫಿಡವಿಟ್ ಇದೆ. ಅದನ್ನು ಅವರು ಓಪನ್ ಆಗಿ ಹೇಳಿದ್ದಾರೆ.

"... execute the project without the consent of other state and without the obligation to furnish details of the projects to the other states. Likewise, a state is entitled to increase the capacity of the canal and undertake a lift irrigation scheme for irrigating land, can create oversize canals and reservoirs to impound, utilisation of water from the inter-state rivers. It is submitted that a state is perfectly within its powers and entitiled to do all the above acts and things without any reference to other state so long as the state does not exceed its quantity of water sanctioned in the final orders of the Tribunal. It is further submitted that it is perfectly legitimate for a state government to permit any corporate entity within its jurisdiction, which is owned and controlled by the state to execute any of the project that it undertakes. Adverting to the prayer and the relief sought, it is submitted that the plaintiff does not deserve to be granted any of the prayers prayed for in this para and the suit should be dismissed with costs to the defendants."

ಅಂದರೆ ಆಂಧ್ರದವರು ಏನು ಅಪ್ಲಿಕೇಷನ್ ಹಾಕಿದ್ದಾರೆ ಆ ಅಪ್ಲಿಕೇಷನ್‌ನ್ನು ರಿಜೆಕ್ಟ್ ಮಾಡಿ ಎಂದು ಮಹಾರಾಷ್ಟ್ರ ಸರ್ಕಾರದವರೇ ಕೌಂಟರ್ ಹಾಕಿದ್ದಾರೆ. ಆದರೆ ಇಲ್ಲಿ ದುರ್ದೈವದ ಸಂಗತಿ ಅಂದರೆ, ಆಂಧ್ರ ಪ್ರದೇಶದವರ ಜೊತೆಯಲ್ಲಿಯೇ ಇವರು ಮತ್ತೆ ಹೊಸ ಪಿಟಿಷನ್ ಹಾಕಿ ನಮ್ಮ ಹಿಪ್ಪರಗಿ ಬ್ಯಾರೇಜ್, ಆಲಮಟ್ಟಿ ಡ್ಯಾಂ ಎತ್ತರ ಮಾಡಬಾರದು ಮತ್ತು ಅದು 524 ಮೀಟರ್‌ಗಿಂತಲು ಮೇಲೆ ಹೋಗಬಾರದು ನಮ್ಮ 80-90 ಹಳ್ಳಿಗಳು ಅದರಿಂದ ಮುಳುಗಡೆಯಾಗುತ್ತವೆ, ಇದರಿಂದ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆಗೆ ಅನಾನುಕೂಲ ಮತ್ತು ತೊಂದರೆಯಾಗುತ್ತದೆ ಎಂದು ಹೇಳಿ, ಇನ್ನೊಂದು ಕಡೆ ಸುಪ್ರೀಂಕೋರ್ಟ್‌ನಲ್ಲಿ ಅಫಿಡೆವಿಟ್ ಅನ್ನು ಕೊಟ್ಟಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನೀವು ಮಾಡಿಫೈಡ್ ಅಫಿಡವಿಟ್ ಹಾಕಿ ಮಾನಿಟರಿಂಗ್ ಸಿಸ್ಟಂನ್ನು ಮಾಡಿ ಎಂದು ನೀವೇಕೆ ಹೇಳಿದಿರಿ? ಅವರು ಒರಿಜನಲ್ ಸೂಟ್‌ನಲ್ಲಿ ಅಫಿಡವಿಟ್ ಹಾಕಿ ಕಮಿಟ್ ಮಾಡಿಕೊಂಡಿದ್ದಾರೆ ಮಹಾರಾಷ್ಟ್ರದವರಿಗಂತೂ ಯಾವ ಹಕ್ಕೂ ಇಲ್ಲ, ಮಾರಲ್ ರೈಟ್ಸ್ ಇಲ್ಲ, ಅದೇ ರೀತಿಯಲ್ಲಿ ಅವರು ಕೈಕಟ್ಟಿಕೊಂಡು ಈಗಾಗಲೇ ಹೇಳಿದ್ದಾರೆ, ನಮಗೆ ಮಹಾರಾಷ್ಟ್ರ ದವರದು ಸೆಟಲ್ ಆದ ವಿಷಯ. ಆದರೂ ವಿಚಾರವನ್ನು ಅವರು ಹೊಸದಾಗಿ ಕ್ರಿಯೇಟ್ ಮಾಡಿದ್ದಾರೆ ಇದಕ್ಕೆ ಏನು ಕಾರಣ? ಅಮೇಲೆ ನೀವು ಆಂಧ್ರದವರ ಮುಂದೆ ಮಾಡಿಫೈಡ್ ಅಫಿಡವಿಟ್ ಬಗ್ಗೆ ಮಾನಿಟರಿಂಗ್ ಸಿಸ್ಟಂ ಮಾಡಬೇಕು, ಅದರಲ್ಲಿ ಸೆಂಟ್ರಲ್ ವಾಟರ್‌ಕಮಿಷನ್‌ನವರು, ಆಂಧ್ರಪ್ರದೇಶ ದವರು ಇರಬೇಕು ಎಂದೆಲ್ಲಾ ಹೇಳಿದ್ದೀರಿ. ಇದು ತುಂಗಭದ್ರ ಡ್ಯಾಂನಲ್ಲಿ ಆದರೆ ಒಂದು ಕೆನಾಲ್ ನಮ್ಮದು ಇದೆ, ಒಂದು ಕೆನಾಲ್ ಅವರದ್ದು ಇದ್ದು ನೀರು ತೆಗೆದುಕೊಂಡು ಹೋಗಬಹುದು. ನ್ಯಾಚುರಲ್ ಡಿಸ್ಟ್ರಿಬ್ಯೂಷನ್ ಆಫ್‌ವಾಟರ್ ಸರಿಯಾಗಿ ಆಗುತ್ತದೋ ಇಲ್ಲವೋ ಎಂದು ನೋಡಲು ಕಂಟ್ರೋಲ್ ಬೋರ್ಡ್, ರೆಗ್ಯಲೇಟರಿ ಅಥಾರಿಟಿ ಇರಲಿ ಎಂದು ಇದೆ. ಆದರೆ ಆಲಮಟ್ಟಿ ಡ್ಯಾಂ ಇರುವುದು ಬಿಜಾಪುರ ಜಿಲ್ಲೆಯಲ್ಲಿ ಹಾಗೆಯೇ ನಮ್ಮ ಅಧೀನದಲ್ಲಿ ಇರತಕ್ಕಂಥ ಡ್ಯಾಂಗೆ ಮಾನಿಟರಿಂಗ್ ಸಿಸ್ಟಮ್ಮನ್ನು ನೀವೆ ಸಜೆಸ್ಟ್ ಮಾಡಿದರೆ ನಾವೇನು ತಿಳಿದುಕೊಳ್ಳಬೇಕು? ನಿಮಗೆ ನಮ್ಮ ಬಗ್ಗೆ ಆಸಕ್ತಿ ಇಲ್ಲ ಎಂದು ತಿಳಿದುಕೊಳ್ಳಣವೇ ? ಇದರ ಬಗ್ಗೆ ಕಾಳಜಿವಹಿಸಿ ನೀವು ಬೇಗನೆ ಕೆಲಸವನ್ನು ಮುಗಿಸುತ್ತೀರಿ ಎಂದು ಕೊಳ್ಳೋಣವೆ ? ಅಥವಾ ಇದನ್ನು ಮುಂದುವರಿಸಿ ಕೊಂಡು ಪ್ರೊಲೋಂಗ್ ಮಾಡಿ ಅ ಭಾಗದ ಜನತೆಗೆ ಅನ್ಯಾಯ ಮಾಡಲು ಹೊರಟಿದ್ದೀರಾ

ಎಂದು ಕೊಳ್ಳೋಣವೆ? ಈ ಬಗ್ಗೆ ಸ್ಪಷ್ಟಪಡಿಸಬೇಕು. ಇದನ್ನು ನಾವೇನೂ ಇವೊತ್ತು ಸೃಷ್ಟಿ ಮಾಡಿ ಹೇಳತಕ್ಕಂಥಾದ್ದು ಅಲ್ಲ. ಇದಕ್ಕೆಲ್ಲಾ ರೆಕಾರ್ಡ್ಸ್ ಇದೆ. ಅದರ ಮೇಲೆ ತಾವುಗಳು ಉತ್ತರ ಹೇಳ ಬೇಕಾಗುತ್ತದೆ. ಇಂಥ ಪರಿಸ್ಥಿತಿ ಇದ್ದಾಗ್ಯೂ ಮಾಹಾರಾಷ್ಟ್ರದವರು ಯಾಕೆ ಕೇಳುತ್ತಾ ಇದ್ದಾರೆ? ಈಗಾಗಲೇ 3ನೇ ಮೇ ಗೆ ಅವರು ಸ್ಟೇಟಸ್‌ಕೋ ಮಾಡಿದ್ದಾರೆ. ಹೀಗೆ ಮಾಡಿ ಇರತಕ್ಕಂಥ ನಮ್ಮ ಅಪ್ಲಿಕೇಷನ್ಸ್‌ನ್ನೂ ಕೂಡ ಫೈವ್‌ಜಡ್ಜ್ ಬೆಂಚ್‌ಗೆ ಶಿಫಾರ್ ಮಾಡಿದ್ದಾರೆ. ನಮ್ಮ ಒರಿಜನ್‌ಲ್‌ಸೂಟ್ ಫುಲ್‌ಬೆಂಚ್ ಮುಂದೆ ಪೆಂಡಿಂಗ್ ಇದೆ, ಅದರ ಮುಂದೆ ಪುನಃ ನಾವು ಆಲಮಟ್ಟಿಗೆ ಕೊಟ್ಟಂಥ ಸ್ಟೇಯನ್ನು ವೆಕೇಟ್ ಮಾಡಿ ಎಂದು ಕೇಳಿ ಅಪ್ಲಿಕೇಷನ್ ಹಾಕಿದ್ದೇವೆ, ಅದುಕೂಡ ಅಲ್ಲಿಯೇ ಹೋಯಿತು.

ಅಂದರೆ ಇವತ್ತು ತಾವು ಒಂದು ಹೇಳಿಕೆಯನ್ನು ಕೊಟ್ಟು ಅದಕ್ಕೆ ಯಾವ ಯಾವ ರೀತಿಯಾಗಿ ಇವತ್ತು ತಿರುಚುಮರುಚು ಮಾಡುವ ಒಂದು ಪ್ರಯತ್ನ ನಡೆಯಿತು, ಆ ಪ್ರಯತ್ನದಿಂದಲೇ ಇವೆಲ್ಲಾ ಕೂಡ ಇವತ್ತು ಗೋಜಿಗೆ ಸಿಕ್ಕಿಬಿದ್ದಿದೆ ಎನ್ನುವ ಮಾತನ್ನು ನಾನು ನೇರವಾಗಿ ಹೇಳುತ್ತೇನೆ. ನನಗೆ ಗೊತ್ತಿದೆ, ನೀವು ಏನು ಹೇಳುತ್ತೀರಿ, ಅದರ ಬಗ್ಗೆ ತಯಾರಿಗಳು ಏನಿವೆ ಎನ್ನುವುದು ನನಗೆ ಗೊತ್ತಿದೆ. ಆದರೆ ಈ ತಯಾರಿಯಿಂದ ನೀವು ಡಿನ್ಯೆ ಮಾಡುವುದರಿಂದ ಈ ಪ್ರಶ್ನೆ ಬಗೆಹರಿಯುವುದಿಲ್ಲ ಆದರೆ ನೀವು ಸ್ಪಷ್ಟವಾಗಿ ಇವತ್ತು ಹೇಳಬೇಕು. 524 ಮೀಟರ್‌ಗೆ ನೀರನ್ನು ಅಲ್ಲಿಯವರೆಗೆ ನಾವು ನಿಲ್ಲಿಸಬೇಕು ಮತ್ತು 509 ಮೀಟರ್ ಮೇಲೆಯೇ 15 ಮೀಟರ್ ಗೇಟನ್ನು ಕೂಡಿಸಿಕೊಂಡು ಸಂಪೂರ್ಣವಾಗಿ 173 ಟಿಎಂಸಿ ನೀರನ್ನು ಸಂಗ್ರಹಿಸಿ ಅದನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವ ತಮ್ಮ ನಿಲುವು ಏನಿತ್ತು ಈಗ ಬದಲಾವಣೆ ಏಕೆ ಆಯಿತು? ಈಗ 155 ಟಿಎಂಸಿಗೆ ನಾವು ಸೀಮಿತವಾಗುತ್ತೇವೆ ಎನ್ನುವ ದೃಷ್ಟಿಯಿಂದ ತಾವು ಸುಪ್ರೀಂಕೋರ್ಟ್ ಮುಂದೆ ಇವತ್ತು ಹೇಳಿದಿರಿ ಅದಕ್ಕೆ ಅಲ್ಲಿಯವರೆಗಾದರೂ ನಮಗೆ ಪರ್ಮಿಷನ್ ಕೊಡಿ ಎನ್ನತಕ್ಕಂಥದ್ದು ನಾರಿಮನ್‌ರವರು ಈ ಮಾತನ್ನು ಕೂಡ ಹೇಳಿದ್ದಾರೆ. ಅಂದರೆ ನಮಗೆ ಹೇಳುವುದೇ ಒಂದು ಮತ್ತು ನೀವು ಅಲ್ಲಿ ಮಾಡುವುದೇ ಒಂದು ಎಂದರೆ ಇದು ನಿಜವಾಗಲೂ ನಮಗೆ ದಿಕ್ಕು ತಪ್ಪಿಸವುದಕ್ಕೆ ಅಥವಾ ಸದನದ ಮುಂದೆ ತಾವು ಹೇಳಿಯೂ ಅಥವಾ ಕರ್ನಾಟಕ ರಾಜ್ಯದ ಜನತೆಗೆ ಏನು ಹೇಳಿದ್ದಿರಿ ಅದರ ತದ್ವಿರುದ್ಧವಾಗಿ ನೀವು ನಡೆದು ಕೊಂಡಿದ್ದೀರಿ ಎನ್ನುವ ಆಪಾದನೆಯನ್ನು ನಾನು ನೇರವಾಗಿ ಮಾಡುತ್ತೇನೆ. ಮತ್ತೆ ಇಷ್ಟೆಲ್ಲಾ ಮಲ್ಲಾಮುರಿಗೆ ನೀವೇ ಕಾರಣರು ಎನ್ನುವುದನ್ನು ಕೂಡ ಹೇಳುತ್ತೇನೆ. ಏಕೆಂದರೆ ನೀವು ಪದೇ ಪದೇ ಸ್ಟೇಟ್‌ಮೆಂಟನ್ನು ಕೊಡುವ ಚಟ ಬಿಡದೆ ಹೋದರೆ ಈ ಸಮಸ್ಯೆ ಹೀಗೆ ಕ್ರಿಯೇಟ್ ಆಗುತ್ತಾ ಹೋಗುತ್ತದೆ. ಅದನ್ನು ಪುನಃ ಆಂಧ್ರದ್ದು ಬಂದಮೇಲೆ ಇವರು ಸ್ಟೇಟ್‌ಮೆಂಟನ್ನು 21ನೇ ತಾರೀಖು ಗುಲ್ಬರ್ಗದಲ್ಲಿ ಕೊಟ್ಟರು. ಏನೆಂದರೆ.

"The Major and Medium Irrigation Minister K.N.Nage Gowda to - day clarified that the proposl for a joint monitoring system for the utilisation of the allocated water in the Almatti Dam in the UKP by Karnataka, Andhra Pradesh and Union Government was made by the Central Government and not the Karnataka government."

ಇದನ್ನು ಹೇಳುತ್ತಾರೆ. ಒಂದು ಕಡೆ ಇದನ್ನು ಸೆಂಟ್ರಲ್ ಗೌರ್‍ನಮೆಂಟ್ ಸಜೆಸ್ಟ್ ಮಾಡಿತ್ತು. ಅದನ್ನು ಅವರ ಅನಿಸಿಕೆ ಪ್ರಕಾರ, ಅವರ ಹೇಳಿಕೆ ಪ್ರಕಾರ ನಾವು ಇದನ್ನು ಸಜೆಸ್ಟ್ ಮಾಡಿದ್ದೇವೆ ಎನ್ನುವ ಹೇಳಿಕೆ ಸ್ಟೇಟ್‌ಮೆಂಟನ್ನು 21ನೇ ತಾರೀಖು ಅವರು ಕೊಟ್ಟಿದ್ದಾರೆ. ಆ ರೀತಿ ಕೊಟ್ಟು ಮುಂದೆ

ಏನು ಹೇಳುತ್ತಾರೆ ಎಂದರೆ :

"He had agreed to the proposal for joint monitoring. The Union Government had sent the proposal to the Andhra Pradesh and for the reasons best known to Andhra Pradesh. they have rejected."

ಎನ್ನುವ ಮಾತನ್ನು ಹೇಳುತ್ತಾರೆ. ಅದಕ್ಕೆ ಇವತ್ತು ನಾನು ನಿಮಗೆ ಕೇಳುತ್ತೇನೆ. ಇದು ಒಂದು ಕಡೆ ಇದ್ದರೆ ಇನ್ನೊಂದು ಕಡೆ ನೀವು ನೇರವಾಗಿ ಈ ನಾರಿಮನ್‌ರವರು ಏನು ರಿಕ್ವೆಸ್ಟ್ ಮಾಡಿಕೊಂಡಿದ್ದರಲ್ಲಾ 155 ಟಿಎಂಸಿ ಅಷ್ಟಕ್ಕೆ ಮಾತ್ರ ಸದ್ಯಕ್ಕೆ ನೀವು ಪರ್ಮಿಷನ್ ಕೊಡಿ ಎನ್ನುವುದು ಏನು ಇತ್ತು ಏಕೆ ಈ ಪ್ರಶ್ನೆ ಈ ಮಧ್ಯದಲ್ಲಿ ಬಂತು? ಹೀಗಾಗಿ ನಮ್ಮ ಕೇಸನ್ನು ನಾವೇ ವೀಕ್ ಮಾಡಿಕೊಳ್ಳುತ್ತಿದ್ದೇವೆ ಒಂದು ಕಡೆ ಅಫಿಡವಿಟ್ ಹಾಕುವುದು ಪುನಃ ಮಾಡಿಫೈ ಮಾಡಿಕೊಳ್ಳುವುದು ಮತ್ತು ಅವರು ಅಫಿಡವಿಟ್ ಹಾಕಿ ಕಮಿಟ್ ಮಾಡಿಕೊಂಡಿದ್ದಾರೆ ಇವತ್ತು ಅವರು ಸ್ವತಃ ಹೇಳಿದ್ದಾರೆ. ನಿಮಗೆ ಗೊತ್ತಿದೆ ಓಪನ್‌ಲಿ ಏನೆಂದರೆ ರಾಜ್ಯಸರ್ಕಾರಗಳಿಗೆ ಹಕ್ಕು ಇದೆ, ಅವರವರ ರಾಜ್ಯಗಳಲ್ಲಿ ಅವರೇ ನಿರ್ಧಾರವನ್ನು ತೆಗೆದುಕೊಳ್ಳಬೇಕು, ಪಕ್ಕದ ರಾಜ್ಯಗಳಿಗೆ ಅಥವಾ ರೈಪೇರಿಯನ್ ಸ್ಟೇಟ್‌ಗಳಿಗೆ ಇದನ್ನು ಕೇಳುವ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಒರಿಜಿನಲ್ ಸೂಟ್‌ನಲ್ಲಿ ಅವರೇ ಹೇಳಿದಾಗ ಪುನಃ ಇವತ್ತು ಈ ಪ್ರಶ್ನೆ ಏತಕ್ಕ ಬರುತ್ತಾ ಇದೆ? ಮತ್ತು ಇದಕ್ಕೆ ಮಾತುಕತೆಗೆ ಹೋಗಿದ್ದರು. ಮತ್ತು ಅದೇನು ಮಾತುಕತೆ ನಡೆಯಿತೋ ಗೊತ್ತಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ರೆವ್ಯೂ ಮಿಟಿಂಗ್ ಮಾಡುವುದಕ್ಕೆ ಬಂದಿದ್ದರು. ಆ ರೆವ್ಯೂ ಮೀಟಿಂಗ್ ನಡೆಯಲಿಲ್ಲ ನೇರವಾಗಿ ಅಲ್ಲಿಂದ ಹೈದರಾಬಾದ್‌ಗೆ ಬಂದು ಹೈದರಾಬಾದ್‌ನಿಂದ ಬಾಂಬೆಗೆ ಹೋದರು. ಬಾಂಬೆಯಲ್ಲಿ ಪುರುಸೊತ್ತು ಇದ್ದಾಗ ರೆವ್ಯೂಮೀಟಿಂಗ್ ಮಾಡಿರಬೇಕು.

ಆದರೆ ಮೋರ್ ಆರ್ ಲೆಸ್ ಅಲ್ಲಿ ರಾಣೆಯವರ ಜೊತೆಯಲ್ಲಿ ನಾನು ಆಲಮಟ್ಟಿ ಡ್ಯಾಂನ ಬಗ್ಗೆ ಮಾತನಾಡುವುದಕ್ಕೆ ಹೋಗುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದರು. ಆಗ ನಾಗೇಗೌಡರು ಬಾಂಬೆಗೆ ಹೋಗಿದ್ದರೋ ಏನೋ ಗೊತ್ತಿಲ್ಲ ಏಕೆಂದರೆ ಇರಿಗೇಷನ್ ಸೆಕ್ರೆಟರಿ, ಇರಿಗೇಷನ್ ಮಿನಿಸ್ಟರ್ ಆಮೇಲೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಎಲ್ಲರೂ ಕೂಡ ಅಲ್ಲಿ ಇರಬೇಕಾಗುತ್ತದೆ. ಏನು ಬರೀ ಇಬ್ಬರೇ ಮಾತನಾಡಿದರೋ ಏಕಾಂತದಲ್ಲಿ ಅಥವಾ ಎಲ್ಲರೂ ಸಭೆ ಸೇರಿ ಪ್ರೊಸೀಡಿಂಗ್ಸ್ ಮಾಡಿ ಏನಾದರೂ ಆಗಿದ್ದರೆ ಆ ಪ್ರೊಸೀಡಿಂಗ್ಸ್ ಏನಿದೆ ಅದನ್ನು ಸದನದ ಮುಂದೆ ಇಡಿ. ಏನು ಮಾತುಕತೆ ನಡೆಯಿತು ಎನ್ನುವುದನ್ನು ಕೂಡ ಹೇಳಿ. ಇಲ್ಲದಿದ್ದರೆ ಸುಮ್ಮನೆ ನಾವು ಅಲ್ಲಿಗೆ ಹೋಗಿದ್ದೇವೆ ಮಾತನಾಡುವುದಕ್ಕೆ ಎಂದು ಹೇಳುವುದು ಮತ್ತು ಇವತ್ತು ವಾಸ್ತವವಾಗಿ ರಿಟನ್‌ನಲ್ಲಿ ಇರುವುದು ಮತ್ತು ಅಫಿಡವಿಟ್‌ನಲ್ಲಿ ಇರುವುದು ಮತ್ತೊಂದು ಆಗಿರುತ್ತದೆ. ಮತ್ತು ಇನ್ನೊಂದು ವಿಷಯವೇನೆಂದರೆ, ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿಗಳು ಒಂದು ಪತ್ರವನ್ನೂ ಕೂಡ ಬರೆದಿದ್ದರು. ಏನೆಂದರೆ ಹಿಪ್ಪರಗಿ ಬ್ಯಾರೇಜ್ ಆಗಲಿ, ಆಲಮಟ್ಟಿ ಡ್ಯಾಂನ್ನು ಎತ್ತರ ಮಾಡಿದಮೇಲೆ ಎಷ್ಟು ಹಳ್ಳಿಗಳ ಮುಳುಗಡೆಯಾಗುತ್ತದೆ, ಅಥವಾ ಎಷ್ಟು ಜನರಿಗೆ ಅಫೆಕ್ಟ್ ಆಗುತ್ತದೆ ಇದರ ಬಗ್ಗೆ ನಮಗೆ ಸಂಪೂರ್ಣವಾದ ಒಂದು ಮಾಹಿತಿ ಕೊಡಿ ಎನ್ನುವ ಪತ್ರವನ್ನು ಕೂಡ ಮುಖ್ಯ ಕಾರ್ಯದರ್ಶಿಗಳು ಬರೆದಿದ್ದಾರೆ. ಅದಕ್ಕೆ ತಮ್ಮ ಉತ್ತರ ಏನು ಹೋಯಿತು ಮತ್ತು ಆ ಉತ್ತರ ಹೋದ ಮೇಲೆ ಅವರಿಗೆ ಸಮಾಧಾನವಾಯಿತೋ ಇಲ್ಲವೋ? ಒಂದು ವೇಳೆ ನೀವು ಉತ್ತರ ಕೊಟ್ಟಿದ್ದರೆ ಯಾವ ಡೇಟ್‌ಗೆ, ಅವರು ಬರೆದಂಥ ಪತ್ರ ಯಾವ ಡೇಟ್? ನೀವು ಕೊಟ್ಟಂಥ ಉತ್ತರ ಯಾವ ಡೇಟಿಗೆ ? ಎಷ್ಟು ದಿವಸ ಅದು ಪೆಂಡಿಂಗ್ ನಲ್ಲಿತ್ತು?

ಏಕೆಂದರೆ ಹೋದಸಲ ನಾವು ಇದೇ ತಪ್ಪು ಮಾಡಿದ್ದೇವೆ. ಆಂಧ್ರಪ್ರದೇಶದ ಇರಿಗೇಷನ್ ಸೆಕ್ರಟರಿ ನಮ್ಮ ಸೆಕ್ರೆಟರಿಗಳಿಗೆ ಪತ್ರ ಬರೆದರೂ ಕೂಡ ನಾವು ತಿಂಗಳಾನುಗಟ್ಟಲೆ ಅದಕ್ಕೆ ಉತ್ತರ ಬರೆಯಲಿಲ್ಲ. ನಾವು ಬರೆದಂಥ ಪತ್ರಕ್ಕೆ ನೀವು ಉತ್ತರ ಕೊಡಲಿಲ್ಲ ಎಂದು ಹೇಳಿ ನಾವು ಕೋರ್ಟಿಗೆ ಹೋಗುತ್ತೇವೆ ಎಂದು ಹೇಳಿ ಅವರು ಆಗ ಹೋದರು. ಅದೇ ರೀತಿಯಾಗಿ ಮಹಾರಾಷ್ಟ್ರ ಗೌರ್ನಮೆಂಟ್ ಕೂಡ ಇವತ್ತು ಪತ್ರ ಬರೆದಿದೆ. ಪತ್ರವನ್ನು ಬರೆದಮೇಲೆ ನೀವು ಉತ್ತರವನ್ನು ಕಳುಹಿಸಿದ್ದು ಯಾವಾಗ ಮತ್ತು ಈಗಾಗಲೇ ಒರಿಜಿನಲ್ ಸೂಟ್‌ನಲ್ಲಿ ಅವರು ಹೇಳಿಕೊಂಡ ಪ್ರಕಾರ ತಾವು ಅವರಿಗೆ ಉತ್ತರ ಕೊಟ್ಟಿದ್ದೀರೋ ಮತ್ತು ಬೇರೆ ಯಾವ ರೀತಿಯಲ್ಲಿ ತಮ್ಮ ಉತ್ತರ ಹೋಗಿದೆ ಎನ್ನುವುದನ್ನೂ ಕೂಡ ಇವತ್ತು ತಾವು ಹೇಳಬೇಕು. ಇಲ್ಲದಿದ್ದರೆ ಈ ಇಷ್ಯೂವನ್ನು ಸಂಪೂರ್ಣವಾಗಿ ಕಾಂಪ್ಲಿಕೇಟ್ ಮಾಡತಕ್ಕಂಥ ಜವಾಬ್ದಾರಿ ನಿಮ್ಮದೇ ಇದೆ. ಏಕೆಂದರೆ ಪ್ರತಿಯೊಂದು ಸಲ ನೀವು ಹೇಳಿಕೆ ಕೊಡುವಾಗ ಇವತ್ತಿನ ದಿವಸ ಕೆಲವು ವಿಷಯಗಳನ್ನು ಮುಚ್ಚಿ ಕೆಲವು ವಿಷಯಗಳನ್ನು ಎಕ್ಸಾಜಿರೇಟ್ ಮಾಡಿ ಆಮೇಲೆ ಒಂದು ಸಂಪೂರ್ಣ ಮಾಹಿತಿ ಇರಲಾರದೆ ಇವತ್ತು ಹೇಳಿಕೆಗಳನ್ನು ಕೊಟ್ಟು ನಮ್ಮನ್ನು ಇವತ್ತು ಅನಾಥರನ್ನಾಗಿ ಮಾಡುವ ಒಂದು ಸಮಯವನ್ನು ತಾವು ತಂದಿದ್ದೀರಿ. ಮತ್ತು ನಮ್ಮ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿಗೆ ಬರುವ ನೀರು ಏನಿದೆ, ಆ ನೀರನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎನ್ನುವುದು ಇವತ್ತು ಬಹಿರಂಗವಾಗಿದೆ. ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ನಿಮ್ಮ ಸ್ಕೀಮ್ ಏನು? ಏಕೆಂದರೆ ಒಂದು ವರ್ಷ ಆರು ತಿಂಗಳೋ ಮೂರು ತಿಂಗಳೋ ಆಗಿದ್ದರೆ ನೀವು ಸಮಯ ಇರಲಿಲ್ಲ ಎಂದು ಹೇಳಬಹುದಾಗಿತ್ತು. ಈಗ ನಾಲ್ಕೂವರೆ ವರ್ಷವಾಯಿತು. ನಾಲ್ಕೂವರೆ ವರ್ಷದಲ್ಲಿ ನೀವು ಇದನ್ನು ಸಂಪೂರ್ಣವಾಗಿ ತಿಳಿದುಕೊಂಡು ಅರ್ಥ ಮಾಡಿಕೊಂಡು ಇದನ್ನು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಅದನ್ನು ಬಿಟ್ಟು ನೀವು ನೋಡಿ ಮೂರು ವರ್ಷದಲ್ಲಿ ಹೊಸ ಸಮಸ್ಯೆಗಳೇ. ಕಾವೇರಿಯೇ ಇರಬಹುದು, ಕೃಷ್ಣಾನೇ ಇರಬಹುದು ಆಲಮಟ್ಟಿಯದೇ ಇರಬಹುದು. ರೀಹ್ಯಾಬಿಲಿಟೇಷನ್ ಸೆಂಟರ್‌ದೇ ಇರಬಹುದು ಎಲ್ಲಾ ಕಡೆ ಕಾಂಪ್ಲಿಕೇಷನ್ ಮಾಡಿಕೊಳ್ಳುವುದು ಮತ್ತೆ ಅದನ್ನು ಬಿಡಿಸಿಕೊಂಡು ಕುಳಿತುಕೊಳ್ಳುವುದು ಇವತ್ತು ಈ ರೀತಿಯಾಗಿ ಆಗಿದೆ. ಅದಕ್ಕೆ ಅವರು ಉತ್ತರವನ್ನು ಕೊಡಬೇಕು ಮತ್ತು ಆಲಮಟ್ಟಿ ಡ್ಯಾಮ್‌ನ ಎತ್ತರವನ್ನು ಕನ್‌ಸ್ಟ್ರಕ್ಟ್ ಮಾಡುವ ಕೆಲಸ ಅಥವಾ ಪ್ಲೇಟ್ ಹಾಕುವ ಕೆಲಸ ಇವತ್ತು ನಿಂತುಹೋಗಿದೆ. ಆ ರೀತಿ ನಿಂತುಹೋಗಿರುವುದು ಯಾವಾಗ ನೀವು ನೀರನ್ನು ನಿಲ್ಲಿಸುವ ವ್ಯವಸ್ಥೆಮಾಡುತ್ತೀರಿ ಮತ್ತು ಇದಕ್ಕೆ ಕಾರಣಗಳೇನು ಎನ್ನುವ ಸಂಪೂರ್ಣವಾದ ವಿವರವನ್ನು ಕೊಡಬೇಕು. ಮತ್ತು ಈ ಕನ್‌ಸ್ಟ್ರಕ್ಷನ್ಸ್ ಏನು ಸಂಪೂರ್ಣವಾಗಿ ಡಿಲೇಯಾಗಿದೆ ಆ ಡಿಲೇ ಆಗಿದ್ದಕ್ಕೆ ಸಂಪೂರ್ಣವಾದ ಜವಾಬ್ದಾರಿಯನ್ನು ಕೂಡ ನೀವೇ ಹೊತ್ತುಕೊಳ್ಳಬೇಕಾಗುತ್ತದೆ. ನಾನು ಮತ್ತೆ ಹೇಳುವುದಿಲ್ಲ ಏಕೆ ಹೊತ್ತುಕೊಳ್ಳಬೇಕು ಎನ್ನುವುದನ್ನು. ನಾನು ಈಗಾಗಲೇ ಹೇಳಿದ್ದೇನೆ, ನಿಮ್ಮ ಹೇಳಿಕೆಗಳೇ ಕಾರಣ ನಿಮ್ಮ ನಡವಳಿಕೆಗಳೇ ಕಾರಣ ಮತ್ತು ತರಾತುರಿಯ ಪ್ರೆಸ್ ಸ್ಟೇಟ್‌ಮೆಂಟ್‌ಗಳೇ ಕಾರಣ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅದಕ್ಕೆ ದಯವಿಟ್ಟು ತಾವು ಇದರ ಬಗ್ಗೆ ಏನು ಸಮಜಾಯಿಷಿ ಉತ್ತರ ಕೊಡುತ್ತೀರಿ ಅಥವಾ ಯಾವ ರೀತಿ ಯೋಜನೆಯನ್ನು ಸಂಪೂರ್ಣಗೊಳಿಸುತ್ತೀರಿ ಮತ್ತು ಮಹಾರಾಷ್ಟ್ರದವರಿಗೆ ಯಾವ ರೀತಿಯಾಗಿ ಇವತ್ತು ಆ ಪಿಟಿಷನ್ ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ತಾವು ಕಂಪಲ್ ಮಾಡುತ್ತೀರಿ ಎಂಬುದನ್ನು ಕೂಡ ತಾವು ಹೇಳಬೇಕು. ಹೀಗೆ ಇವತ್ತು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ನಾವು ಕೊಚ್ಚಿಕೊಂಡು ಹೋಗುತ್ತಿದ್ದೇವೆ. ಆ ಭಾಗದ ಜನರಿಗೆ ಇದೇ

ಒಂದು ಆಸೆ ಇತ್ತು. ಇಡೀ ನಮ್ಮ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಂದರೆ ರಾಯಚೂರು, ಗುಲ್ಬರ್ಗಾ, ವಿಜಾಪುರ ಈ ಮೂರು ಜಿಲ್ಲೆಯ ಜನತೆಗೆ ಸಮಾಧಾನ ಆಗುತ್ತದೆ ಎನ್ನತಕ್ಕ ಆಸೆ ಇತ್ತು. ಆದರೆ ಇವತ್ತು ಅವು ಯಾವುದೂ ಕೂಡ ಕೆಲಸ ಆಗಲಿಲ್ಲ. ಆದರೆ ಅವರು ಪದೇ ಪದೆ ಹೇಳುತ್ತಾರೆ. ನಾನು ಅದನ್ನು ಪುನಃ ಹೇಳುವುದಿಲ್ಲ. ಬಜೆಟ್ ಮೇಲೆ ಮಾತನಾಡುವಾಗ ಹೇಳುತ್ತೇನೆ. ಇದು ಅವರು ಕೊಟ್ಟ ಡಾಕ್ಯುಮೆಂಟ್. ತಾವು ಎಲ್ಲರಿಗೂ ಸರ್ಕ್ಯುಲೇಟ್ ಮಾಡಿದ್ದೀರಿ. ಬಹುಶಃ ಕೃಷ್ಣಾ ಭಾಗ್ಯಜಲನಿಗಮದ ಜೂನ್ 1999ರ ಲೇಟೆಸ್ಟ್ ರಿಪೋರ್ಟ್ ಇದೆ. ಇದನ್ನು ಅವರು ನೋಡಿಕೊಂಡರೆ ಅವರಿಗೆ ಗೊತ್ತಾಗುತ್ತದೆ ಮತ್ತು ಅವರು ಈಗಾಗಲೇ ಎಲ್ಲಾ ಸದಸ್ಯರಿಗೆ ಇರಿಗೇಷನ್ ಇನ್ ಕರ್ನಾಟಕ 1998-99 ಪುಸ್ತಕ ಕೊಟ್ಟಿದ್ದಾರೆ. ಅವರು ಬಹಳಷ್ಟು ಹೇಳಿದ ಕೂಡಲೇ ಹೇಳುತ್ತಾರೆ. ಯಾವ ಸರ್ಕಾರ ಮಾಡಿದೆ ಹತ್ತು ಸಾವಿರ ಕೋಟಿ? ನಾವು ಇಷ್ಟು ಮಾಡಿದ್ದೇವೆ. ಅದರ ಜೊತೆಯಲ್ಲಿ ಹತ್ತು ಸಾವಿರ ಕೋಟಿ ಹಿಂದಿನ ಸರ್ಕಾರ ಏನೂ ಮಾಡಿಲ್ಲ ಎಂಬ ಭಾವನೆಯಲ್ಲಿ ಹೇಳುತ್ತಾರೆ. ಇವರು ಪದೇ ಪದೇ ಹೇಳುತ್ತಾರೆ ಹಿಂದಿನ ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ನಮಗೇನು ಅಂದರೆ, ನೀವೇ ಇದನ್ನು ಓದಿ ನೋಡಿಕೊಳ್ಳಿ. 1956-57ಕ್ಕಿಂತ ಹಿಂದೆ ಕರ್ನಾಟಕ ರಾಜ್ಯದಲ್ಲಿ ಕೇವಲ ಎರಡು ಲಕ್ಷ ಹೆಕ್ಟೇರ್ ಜಮೀನಿಗೆ ಮಾತ್ರ ನೀರು ಇತ್ತು. ಇವತ್ತು ಕರ್ನಾಟಕ ರಾಜ್ಯದಲ್ಲಿ 17ಲಕ್ಷ ಹೆಕ್ಟೇರಿಗೆ ನೀರಾವರಿ ಆಗಿದೆ. ಅದೆಲ್ಲಾ ಇವರೇ ಜನತಾ ದಳದವರೇ ಮಾಡಿದ್ದು? ಏಕೆಂದರೆ ಇವರು ಸಂಪೂರ್ಣವಾಗಿ ಇದ್ದರಲ್ಲಾ 17ಲಕ್ಷ ಹೆಕ್ಟೇರ್ ನೀರಾವರಿ ಆಗಿದೆ ಪುಸ್ತಕ ಓದಿದರೆ ಗೊತ್ತಾಗುತ್ತದೆ. 1956-57ರ ಹಿಂದೆ ಕರ್ನಾಟಕ ರಾಜ್ಯದಲ್ಲಿ ಕೇವಲ ಈ ಎರಡು ಲಕ್ಷ ಹೆಕ್ಟೇರ್ ಮಾತ್ರ ನೀರಾವರಿ ಇತ್ತು. ಅಂದಾಗ ಕಾಂಗ್ರೆಸ್‌ನವರು ಏನೂ ಮಾಡಿಲ್ಲ ಎಂದು ಹೇಳಿಕೊಂಡು ಹೋಗುತ್ತಿದ್ದಾರೆ. ದುಡ್ಡು ಎಷ್ಟು ಖರ್ಚಾಗಿದೆ. ಅದಕ್ಕೆ ಕ್ಯುಮುಲೇಟೀವ್ ಆಗಿ ಇರಿಗೇಷನ್ ಎಷ್ಟು ಆಗಿದೆ ಎಂಬ ವಿವರ ಕೊಟ್ಟಿದ್ದೀರಿ. ಅದನ್ನು ನೋಡಿಕೊಂಡರೆ ಸ್ವಲ್ಪ ಉತ್ತಮ. ಆದರೆ ಅಡ್ವರ್ಟೈಸ್‌ಮೆಂಟ್ ಮಾತ್ರ ಫುಲ್‌ಪೇಜ್ ಕೊಡುತ್ತಾರೆ. ಮುಖ್ಯಮಂತ್ರಿಗಳು ನಿಂತಿದ್ದು ನಾಗೇಗೌಡರು ಕುಳಿತಿದ್ದು. ಇನ್ನೂ ಮೂರ್‍ನಾಲ್ಕು ಚಿತ್ರ ಪಕ್ಕದಲ್ಲಿ ಹಾಕಿಬಿಡುತ್ತಾರೆ. ನೀರಾವರಿ ಚಿತ್ರದಲ್ಲಿ ಹರಿಯುತ್ತದೆ ಲ್ಯಾಂಡ್‌ನಲ್ಲಿ ಅಲ್ಲ. ಅದು ಮಾತ್ರ ಸರಿಯಾಗಿ ಕೊಡುತ್ತಾರೆ. ಆದರೆ ಅದರಲ್ಲಿ ಪೂರ್ಣವಾಗಿ ಏನು ಅಂದರೆ ಜಾಹಿರಾತಿನಲ್ಲಿ ಎತ್ತಿದ ಕೈ. ಅದಕ್ಕೆ ಇವತ್ತು ನಾನು ಕೇಳುತ್ತೇನೆ ಇವತ್ತು ನಿಮ್ಮ ಪ್ರಚಾರದ ಜೊತೆಯಲ್ಲಿ ಆಚರಣೆ ಏನು? ಆಚರಣೆಯಲ್ಲಿ ಏನು ತಂದಿದ್ದೀರಿ ಎನ್ನುವುದನ್ನು ಹೇಳಿ ಮತ್ತು ಆಲ್ಮಟ್ಟಿ ಡ್ಯಾಮ್ ಕಡೆ ಜನ ನೋಡುತ್ತಿದ್ದಾರೆ. ಏಕೆಂದರೆ ಈಗ ಕೇವಲ ಉಳಿದಿರುವಂತಹದು ಒಂದು ವರ್ಷ ಕೂಡ ಇಲ್ಲ. ಅಷ್ಟರಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕು. ಅದಕ್ಕೆ ದಯವಿಟ್ಟು ಸವಿಸ್ತಾರವಾದ ಮಾಹಿತಿಯನ್ನು ಕೊಡಬೇಕು ಎನ್ನುವಂತಹದರ ಬಗ್ಗೆ ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

+ **ಶ್ರೀ ಎಚ್.ಎನ್.ನಂಜೇಗೌಡ** (ಬಸವನಗುಡಿ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರದಿಂದ ಕೆಲವು ಮಾಹಿತಿಗಳು ಬೇಕಾಗುತ್ತಿದೆ. ಮಾನ್ಯ ಕಾನೂನು ಮಂತ್ರಿಗಳು ಸ್ವಲ್ಪ ಕಿವಿಕೊಟ್ಟರೆ ಒಳ್ಳೆಯದು. ದಯವಿಟ್ಟು ನಮ್ಮ ಮಾತು ಕಿವಿಗೆ ಹಾಕಿಕೊಳ್ಳಿ . ಎಲ್ಲಾ ನಿಮ್ಮ ನಿಮ್ಮ ಮಾತು ಕಿವಿಗೆ ಹಾಕಿಕೊಳ್ಳುವುದು ಬೇಡ. ಇಂತಹ ವೈಟಲ್ ಇಶ್ಯೂ ಚರ್ಚೆ ಆಗುತ್ತಿದೆ. ಯಾರೂ ಕಿವಿಗೊಡುವುದೇ ಇಲ್ಲ. ಯಾರಿಗೂ ಲಕ್ಷ್ಯ ಇಲ್ಲ. ಈಗ ಇರತಕ್ಕದ್ದು ಇಷ್ಟು. ಈಗ ಒಂದು ಸ್ಟೇಟಸ್ಕೋ ಆರ್ಡರ್ ಕೊಟ್ಟಿದ್ದಾರೆ. ಆ ಆರ್ಡರ್,

it is contrary to the decision of the Bachavat Tribunal.

ಕಾರಣ ಏನು ಎಂದು ಹೇಳುತ್ತೇನೆ. ಈಗ ಕ್ರಸ್ಟ್ ಗೇಟ್ ಹಾಕುವ ಹಾಗಿಲ್ಲ. ಸ್ಟೇಟಸ್ಕೋ ಆರ್ಡರ್ ಇದ್ದ ಮೇಲೆ ನೀವು ಪ್ಲೇಟೇ ಹಾಕುವ ಹಾಗಿಲ್ಲ. ಅಲ್ಲವಾ? ಪ್ಲೇಟ್ ಹಾಕಿದ ಮೇಲೆ ನೀರು ನಿಲ್ಲಿಸುವ ಹಾಗಿಲ್ಲ. ಈ ಪ್ಲೇಟ್ ಹಾಕದೇ ಹೋದರೆ ಎಷ್ಟು ನೀರು ನಿಲ್ಲುತ್ತದೆ? 45 ಟಿಎಂಸಿಎಫ್‌ಟಿ ನಿಮ್ಮ ಕೆಪ್ಯಾಸಿಟಿ. ಈಗ ನೀವು ನಿಲ್ಲಿಸಬೇಕಾಗಿದ್ದು ಎಷ್ಟು 175 ಟಿಎಂಸಿಎಫ್‌ಟಿ 175 ನಿಲ್ಲಿಸಬೇಕಾದರೆ ನೀವು ಕ್ರಸ್ಟ್ ಗೇಟ್ ಹಾಕಲೇಬೇಕು. ಆ ಟ್ರಿಬ್ಯೂನಲ್‌ನವರು ಏನು ಹೇಳಿರುವುದು ಅಂದರೆ 154 ನಿಲ್ಲಿಸಿ ಎಂದು. ಟ್ರಿಬ್ಯೂನಲ್‌ನವರು ಹೇಳಿರುವುದನ್ನು ಮಾಡಬೇಕಾದರೂ ಕ್ರಸ್ಟ್ ಗೇಟ್ ಹಾಕಲೇಬೇಕು. ಈ ಸ್ಟೇಟಸ್ಕೋ ಆರ್ಡರ್ it is contrary to the very award of the Bachavat Tribunal.

ಇದು ಏಕೆ ಹೀಗಾಯಿತು? ಇದನ್ನು ಏಕೆ ಕೋರ್ಟಿನ ಗಮನಕ್ಕೆ ನೀವು ತರಲಿಲ್ಲ? ಇದೊಂದು. ಎರಡನೆಯ ವಿಚಾರ ಹೇಳುತ್ತೇನೆ. ಏಕೆಂದರೆ ಬಚಾವತ್ ಟ್ರಿಬ್ಯುನಲ್ ಅವಾರ್ಡ್‌ನಲ್ಲಿ ಕೊಟ್ಟಿರುವಂತಹ ನೀರನ್ನು ಆದರೂ ನಾವು ನಿಲ್ಲಿಸಿಕೊಳ್ಳಬೇಕಲ್ಲಾ. ಆ ನೀರು ನಿಲ್ಲಿಸುವುದಕ್ಕೂ ಅವಕಾಶ ಇಲ್ಲದ ಹಾಗೆ ಕೋರ್ಟ್ ತಡೆ ಕೊಟ್ಟರೆ ಟ್ರಿಬ್ಯೂನಲ್ ಏಕೆ ಬೇಕಿತ್ತು? ಇದು ಒಂದು ಪಾಯಿಂಟ್. ಎರಡನೆಯ ವಿಚಾರ ಅಂದರೆ 734ರಲ್ಲಿ 5 ಟಿಎಂಸಿಎಫ್‌ಟಿ ಕುಡಿಯುವ ನೀರಿಗೆ ಕೊಟ್ಟಿದ್ದೇವೆ. ಇನ್ನು 729 ಟಿಎಂಸಿಎಫ್‌ಟಿ. ಸುಮಾರು 550 ಉಪಯೋಗಿಸಿಕೊಂಡಿದ್ದೇವೆ. ಇನ್ನು179 ಟಿಎಂಸಿ ಎಫ್‌ಟಿ ಉಪಯೋಗಿಸಿಕೊಳ್ಳಬೇಕು. ನೀವೇನೋ ಹರಿನಾಲಾ, ಮಾರ್ಕಂಡೇಯಕ್ಕೆ ಆರು ಟಿಎಂಸಿಎಫ್‌ಟಿ ಪ್ರೊವೈಡ್ ಮಾಡಿಕೊಂಡಿದ್ದೀರಿ. ಇನ್ನು 170 ಮಾಡಿಕೊಳ್ಳಬೇಕು.ನಮಗೆ ರೆಲೆವೆಂಟ್ ಆಗಿ ಬೇಕಾಗಿರುವುದು. ಇನ್ನು ನಮಗೆ ಇರುವುದು ಹತ್ತು ತಿಂಗಳು. ಹತ್ತು ತಿಂಗಳಲ್ಲಿ ಈ 173 ಟಿಎಂಸಿಎಫ್‌ಟಿಯನ್ನು ಅಪ್ರೊಪ್ರಿಯೇಟ್ ಮಾಡಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಏಕೆಂದರೆ ಟ್ರಿಬ್ಯೂನಲ್ ಬಂದಾಗ ನಾಗಾರ್ಜುನ ಸಾಗರಕ್ಕೆ ಅವರು ಇನ್ಸ್‌ಪೆಕ್ಷನ್‌ಗೆ ಬಂದಿದ್ದಾಗ ನಾನೂ ಹೋಗಿದ್ದೆ. ಅಲ್ಲೇನಾಯಿತು ಎಂದರೆ ಡಿಸ್ಟ್ರಿಬ್ಯೂಟರೀಸ್ ಆಗಿರಲಿಲ್ಲ, ಫೀಲ್ಡ್ ಕೆನಾಲ್ಸ್ ಆಗಿರಲಿಲ್ಲ. ಆದರೂ ಸಹ ಮೇನ್ ಕೆನಾಲ್ ಆಗಿತ್ತು. ಡ್ಯಾಮ್ ವರ್ಕ್ ಕಂಪ್ಲೀಟ್ ಆಗಿತ್ತು. ಕಮಿಟೆಡ್ ಎಂದು ಅದನ್ನು ಮಾಡಿಕೊಂಡೆವು. ಈ 178 ಉಪಯೋಗಿಸುವುದಕ್ಕೆ ಇನ್ನು ಹತ್ತು ತಿಂಗಳಲ್ಲಿ ಈ ಕಮಿಟೆಡ್ ಹಂಚಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇದೊಂದು ಮಾಹಿತಿ ಕೊಡಬೇಕು. ಮೂರನೆಯದಾಗಿ ಎರಡು ಸಾವಿರದ ಇಸವಿ ಮೇ 31 ಆದಮೇಲೆ ರಿವ್ಯೂ ಬರುತ್ತದೆ. ಬಿ ಸ್ಕೀಮ್‌ಗೆ ಟ್ರಿಬ್ಯೂನಲ್ ಏನು ಹೇಳಿತು. ಉಳಿದಂತಹ ಸರ್‌ಪ್ಲಸ್ ವಾಟರ್‌ನಲ್ಲಿ ನಮಗೆ ಶೇಕಡಾ 50 ಕೊಟ್ಟರು. ಆಂಧ್ರಕ್ಕೆ 25 ಭಾಗ ಕೊಟ್ಟರು ಮಹಾರಾಷ್ಟ್ರಕ್ಕೆ 25 ಭಾಗ ಕೊಟ್ಟರು. ಎಷ್ಟು ಸರ್‌ಪ್ಲಸ್ ಇರತಕ್ಕದ್ದು 360 ಟಿಎಂಸಿಎಫ್‌ಟಿ ಅಷ್ಟಾದ ಮೇಲೆ ಅಷ್ಟು ನೀರು ಸರ್‌ಪ್ಲಸ್ 2000 ಇಸವಿಗೆ ಉಳಿಯುತ್ತದಾ? ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅವರು ತೆಲುಗು ಗಂಗಾ ಮಾಡಿಕೊಂಡು ಹೋಗಿದ್ದಾರೆ. ಬಚಾವತ್ ಟ್ರಿಬ್ಯೂನಲ್ ಅವಾರ್ಡ್ ಮೀರಿ ಆಂಧ್ರದವರು ಕೆಲವಾರು ವರ್ಕ್ಸ್ ಅನ್ನು ಕಮಿಟ್ ಮಾಡಿಕೊಂಡಿದ್ದಾರೆ. ಸರ್‌ಪ್ಲಸ್ ವಾಟರ್ ಇಲ್ಲದೇ ಹೋದರೆ ನಿಮಗೆ 50 ಪರ್ಸೆಂಟ್ ಎಲ್ಲಿ ಸಿಗುತ್ತದೆ ? ನಿಮ್ಮ 176 ಎಲ್ಲಿ ಹೋಗುತ್ತದೆ. ಆ ಬಿ ಸ್ಕೀಮ್ ಏಕೆ ಬೇಕು? ಆ ಬಿ ಸ್ಕೀಮ್‌ನಲ್ಲಿರತಕ್ಕ ನೀರನ್ನು ರಕ್ಷಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದು ಒಂದು ಮಾಹಿತಿ ಇವತ್ತು ನಮಗೆ

ರೆಲೆವೆಂಟ್ ಆಗಿ ಹೇಳಬೇಕು. ಆಮೇಲೆ ಜಾಯಿಂಟ್‌ಮಾನಿಟರಿಂಗ್ ಸಿಸ್ಟಂ ವಿಚಾರ. ಇದೇನು ಕರ್ನಾಟಕ ಅಂದರೆ ಅಯ್ಯಪ್ಪನ ಜಾವಡಿಗೆ ಕೆಟ್ಟು ಹೋಯಿತಾ? ಇದೊಂದೇ ಪ್ರಾಜೆಕ್ಟ್‌ಗೆ ಏಕೆ ಜಾಯಿಂಟ್ ಮಾನಿಟರಿಂಗ್ ಸಿಸ್ಟಂ ಬೇಕು? ಜಾಯಿಂಟ್ ಮಾನಿಟರಿಂಗ್ ಸಿಸ್ಟಂ ಸಜೆಸ್ಟ್ ಮಾಡಿದಾಗ ನೀವು ಆಂಧ್ರಕ್ಕೂ ಮಾಡಿ ಎಂದು ಹೇಳಬೇಕಾಗಿತ್ತು ಈಗ ನಾಗಾರ್ಜುನ ಸಾಗರದಿಂದ ಶ್ರೀಶೈಲಂವರೆಗೆ ನೀರು ಬಿಟ್ಟುಕೊಂಡು ತೆಲುಗು ಗಂಗಾ ಎಲ್ಲದಕ್ಕೂ ತೆಗೆದುಕೊಂಡು ಹೋಗುತ್ತಿದ್ದಾರೆ. ಅಲ್ಲಿ ಏಕೆ ಮಾನಿಟರಿಂಗ್ ಸಿಸ್ಟಂ ಬಗ್ಗೆ ಸರ್ಕಾರದವರು ಕೇಳಲಿಲ್ಲ? ಮಹಾರಾಷ್ಟ್ರದವರಿಗೆ ಏಕೆ ಕೇಳಲಿಲ್ಲ? ಮಾನಿಟರಿಂಗ್ ಸಿಸ್ಟಂ ಒಂದು ಪ್ರಾಜೆಕ್ಟ್‌ಗೆ ಮಾಡಿದ ಮೇಲೆ ಎಲ್ಲಾ ಪ್ರಾಜೆಕ್ಟಿಗೂ ಮಾಡಬೇಕಾಗುತ್ತದೆ. ನೀವು ಒತ್ತಾಯ ಮಾಡುವುದರಲ್ಲಿ ಏಕೆ ವಿಫಲರಾದಿರಿ?

ಸರ್ಕಾರ ಇದಕ್ಕೊಂದು ಉತ್ತರ ಹೇಳಬೇಕು. ಇಷ್ಟನ್ನು ಸ್ವಲ್ಪ ಖಚಿತವಾಗಿ ಸ್ಪಷ್ಟ ಮಾತುಗಳಲ್ಲಿ ಈ ಸದನಕ್ಕೆ ತಿಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ನಾಯಕರು ಬಹಳ ಅತ್ಯಂತ ಸಮರ್ಥ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಮುಂದೆ ಬಹಳ ಮುಖ್ಯವಾದಂಥ ಪ್ರಶ್ನೆ ಇದೆ. ಮೇ 2000ವರ್ಷದೊಳಗಾಗಿ 729 ಟಿಎಂಸಿ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಲೇಬೇಕಾದಂತಹ ಪ್ರಸಂಗ ನಮ್ಮ ಮುಂದೆ ಇದೆ. ಅದರಲ್ಲೂ ಕೂಡ ಕಳೆದ 20-22 ವರ್ಷಗಳ ಹಿಂದೆ ಬಂದಂತಹ ಬಚಾವತ್ ತೀರ್ಪು ಆದ ಮೇಲೆ ಈಗ ಈ ಅವಧಿಯಲ್ಲಿ ಐದು ವರ್ಷದಿಂದ ಆಡಳಿತ ಮಾಡುತ್ತಿರತಕ್ಕ ಸರ್ಕಾರಕ್ಕೆ ಅತ್ಯಂತ ಹೆಚ್ಚಿನ ಜವಾಬ್ದಾರಿಕೆ ಮತ್ತು ಹೆಚ್ಚಿನ ನಿಗ ಇರ ಬೇಕಾಗುತ್ತದೆ. ಇವರೂ ಕೂಡ ಅಧಿಕಾರಕ್ಕೆ ಬರಬೇಕಾದರೆ ಎಲ್ಲಾ ತರಹದ ಆಶ್ವಾಸನೆಯನ್ನು ಕೊಟ್ಟರು. ಕೃಷ್ಣನ ಮೇಲೆ ಆಣೆ ಇಟ್ಟರು. ಕಾವೇರಿ ಮೇಲೆ ಆಣೆ ಇಟ್ಟರು. ಆಣೆ ಇಟ್ಟು ಭಾಷೆಯನ್ನು ಐದು ಕೋಟಿಜನಕ್ಕೆ ಕೊಟ್ಟು ಇವತ್ತು ಅಧಿಕಾರದ ಗದ್ದುಗೆಯಲ್ಲಿ ಕರ್ನಾಟಕದ ಜನ ಇವರನ್ನು ಕೂರಿಸಿದ್ದಾರೆ. ಇವರು ಅಧಿಕಾರದಲ್ಲಿ ಕುಳಿತಿದ್ದಾರೆ. ಆದರೆ ಇವರು ಮಾಡಿದ್ದಾದರೂ ಏನು? ಈಗಲೂ ಕೂಡ ಜನಕ್ಕೆ ಕೊಟ್ಟಂತಹ ವಚನವನ್ನು ಉಳಿಸತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನ ಆಯಿತೇ ಎನ್ನತಕ್ಕ ವಿಚಾರದಲ್ಲಿ ನಾವೇನಾದರೂ ಸೂಕ್ಷ್ಮವಾಗಿ ನೋಡುವುದಾದರೆ ನನಗೆ ಅದಕ್ಕೆ ಉತ್ತರ ಸಿಗಲಿಲ್ಲ.

1.10 ಪಿ.ಎಂ

ಸನ್ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಸರ್ಕಾರದಿಂದ ಸ್ಪಷ್ಟೀಕರಣ ಕೇಳುವಂಥ ಸಂದರ್ಭದಲ್ಲಿ ಬಹಳ ಉಪಯುಕ್ತವಾಗಿರುವ ಪ್ರಶ್ನೆಗಳನ್ನು ಇವೊತ್ತು ಸರ್ಕಾರದ ಮುಂದಿಟ್ಟಿದ್ದಾರೆ. ಅದಕ್ಕೆ ಸರ್ಕಾರದವರು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಬಹುಶ: ಸ್ಪಷ್ಟೀಕರಣ ಕೊಟ್ಟರೆ ನಮಗೂ ಉತ್ತರ ಸಿಗುತ್ತದೆಂಬ ಭಾವನೆ ನನಗೂ ಇದೆ. ಇವೊತ್ತು ಬಹಳ ಮುಖ್ಯವಾಗಿ 729 ಟಿಎಂಸಿಎಫ್‌ಟಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕಾದರೆ ಸರ್ಕಾರ ಎಲ್ಲಾ ತರಹದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿತ್ತು. ಮತ್ತು ಅದಕ್ಕೆ ಬೇಕಾಗಿರತಕ್ಕಂಥ ಹಣಕಾಸಿನ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ವಹಿಸುವುದಕ್ಕೋಸ್ಕರ ಕೃಷ್ಣ ಭಾಗ್ಯ ಜಲ ನಿಗಮದ ಸ್ಥಾಪನೆಗೆ ಒಪ್ಪಿಗೆ ಕೊಟ್ಟು ಎಷ್ಟು ಹಣವನ್ನು ಬೇಕಾದರೂ ತೆಗೆದುಕೊಂಡು ಯಥೇಚ್ಛವಾಗಿ ಖರ್ಚು ಮಾಡಿರೆಂದು ಬ್ಲಾಂಕೆಟ್ ಆರ್ಡರ್ ಸಹ ಕೊಟ್ಟಿದ್ದೇವೆ. ಅವರು ಕೆಲಸ ಮಾಡುತ್ತಿದ್ದಾರೆ. ನಾವು ಅಷ್ಟು ಖರ್ಚು ಮಾಡಿದ್ದೇವೆ, ಇಷ್ಟು ಖರ್ಚು

ಮಾಡಿದ್ದೇವೆ ಎಂದು ಹೇಳಬಹುದು. ಅದು ಮುಖ್ಯವಲ್ಲ. ಮೂಲಭೂತವಾಗಿ ಇರುವ ಪ್ರಶ್ನೆಯೇನೆಂದರೆ, ನಮ್ಮ ಮೇಲೆ ಇವೊತ್ತು ತೂಗುಗತ್ತಿಯ ರೂಪದಲ್ಲಿರುವುದೇನೆಂದರೆ ಮೇ ಮುಂದಕ್ಕೆ ನಾವು ಹೋಗುವುದಕ್ಕಾಗುವುದಿಲ್ಲ ಬಚಾವತ್ ತೀರ್ಪಿನ ಪ್ರಕಾರ ಸಂಪೂರ್ಣವಾಗಿ ನಾವು ಬಳಸಿಕೊಳ್ಳಲೇ ಬೇಕಾಗುತ್ತದೆ, ಕಮಿಟ್ ಆಗಲೇಬೇಕಾಗುತ್ತದ. ಅದಕ್ಕೆ ಇವರೇನಾದರೂ ಕೆಲಸ ಮಾಡಿದ್ದಾರೆಯೇ ಎನ್ನುವುದರ ಬಗ್ಗೆ ನಾನು ಒಂದು ಮಾಹಿತಿ ಕೊಡುವುದಾದರೆ ಇವತ್ತು ನಮ್ಮ ಮುಂದೆ ಸ್ಟೇಜ್-2 ಇದ್ದು ಪ್ಲಾನ್ ಇನ್ ಯುಟಿಲೈಜೇಷನ್ ಈಸ್ 173 ಟಿಎಂಸಿಎಫ್‌ಟಿ. ಆದರೆ ನಾವು ಕಾಂಟೆಂಪ್ಲೇಟ್ ಮಾಡಿರುವುದಾದರೂ ಏನು? we contemplated for 524.25 meters to impound and 227 meters by installing 26 crest gates. That is our intention.

- ಉದ್ದೇಶ ಬಹಳ ಚೆನ್ನಾಗಿಯೇ ಇತ್ತು. ನಮ್ಮ ಪ್ಲಾನ್ ಅಲೋಕೇಷನ್ ಪ್ರಕಾರ 173 ಟಿಎಂಸಿ ಎಫ್‌ಟಿ ಜೊತೆಗೆ 227 ಟಿಎಂಸಿಎಫ್‌ಟಿ ಮಾಡತಕ್ಕಂಥಾದ್ದು ಎಂದು ಹೇಳಿದರೆ ಸ್ಕೀಮ್ 'ಬಿ'. ನಲ್ಲಿ ಬರುವ ನೀರನ್ನೂ ಕೂಡ ಇದರಲ್ಲಿ ಶೇಖರಿಸಬಹುದೆಂಬ ಉದ್ದೇಶವಿಟ್ಟುಕೊಂಡು ತಾವು ಮಾಡಿದಿರಿ ನೀವು ಸುಪ್ರಿಂ ಕೋರ್ಟಿಗೆ ಹೋಗಿ ಕೇಸ್ ಹಾಕಿದಿರಿ. ಅಥಾರಿಟಿ ಆಗಬೇಕು ಸ್ಕೀಮ್ ಬಿ ಅಲೋಕೇಷನ್ ಆಗಬೇಕೆಂದು ಒತ್ತಾಯ ಮಾಡಿದಿರಿ. ಆದರೆ ಆಗಿದ್ದಾದರೂ ಏನು? ಅದನ್ನು ಉಪಯೋಗಿಸಿಕೊಳ್ಳುವ ಯಾವ ಮಟ್ಟಕ್ಕೆ ನೀವು ಮಾಡಿದಿರಿ? ಇವೊತ್ತು ನಾವು ಬಹಳ ಮುಖ್ಯವಾಗಿ ಪ್ರಶ್ನಿಸಬೇಕಾಗಿರುವುದೇ ನೆಂದರೆ, ನಿಮ್ಮ ಮೇಲೆ. ಜವಾಬ್ದಾರಿ ಇತ್ತು Stage II- was it cleared by the central water commission? was it cleared by the planning commission?

ಇಲ್ಲ. ಸೆಂಟ್ರಲ್ ವಾಟರ್ ಕಮಿಷನ್ ಆಗಲಿ, ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್ ಆಗಲಿ ಅಥವಾ ಪರಿಸರ ಇಲಾಖೆಯ ಕ್ಲಿಯರೆನ್ಸ್ ಆಗಲಿ, ಇದ್ಯಾವದೇ ಕ್ಲಿಯರೆನ್ಸ್ ಅನ್ನು ಕೂಡ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನ ನಿಮ್ಮಿಂದಾಗಲಿಲ್ಲ.ಪ್ರಪೋಸಲ್ಸ್ ಕೊಟ್ಟೆವು ಎಂದು ನೀವು ಹೇಳಬಹುದು. ಅದು ನಮಗೆ ಬೇಕಾಗಿಲ್ಲ.ನೀವು ಪ್ರಪೋಸಲ್ಸ್ ಕ್ಲಿಯರೆನ್ಸ್ ಮಾಡಿಸಬೇಕಾಗಿತ್ತು ರಾಜಕೀಯ ಇಚ್ಛಾಶಕ್ತಿಯಿಂದ ಉಳಿದಿರುವುದನ್ನು ಉಪಯೋಗಿಸಿಕೊಳ್ಳುತ್ತೇವೆಂದು ಇವೊತ್ತು ನೀವು ಯಾವ ಜನರಿಗೆ ವಚನ ಕೊಟ್ಟಿದ್ದೀರೋ, ಕ್ಲಿಯರೆನ್ಸ್ ಸಿಗದೆ ಯಾವ ರೀತಿ ಬಳಸಿಕೊಳ್ಳುವುದಕ್ಕೆ ಸಾಧ್ಯವೆಂದು ನೀವು ಯೋಚಿಸಬೇಕು. ನಿಮಗೆ ಸ್ಟೇಜ್ 2ಕ್ಕೆ ಕ್ಲಿಯರೆನ್ಸ್ ಸಿಗಲಿಲ್ಲ you have taken the formal approval, ಫಾರ್ಮಲ್ ಅಪ್ರೂವಲ್ ಅಷ್ಟೇ ತೆಗೆದುಕೊಂಡಿರಿ ವಿನಾ ಪ್ಲಾನ್ಡ್ ಅಲೋಕೇಷನ್ ಪ್ರಕಾರ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಒಪ್ಪಿಗೆ ಸಿಗಲಿಲ್ಲ. ಸೆಂಟ್ರಲ್ ವಾಟರ್ ಕಮಿಷನ್‌ನಿಂದ ಒಪ್ಪಿಗೆ ಸಿಗಲಿಲ್ಲ. 512.2ಮೀಟರ್‌ಗಳವರೆಗೆ ಮಾತ್ರ ರೈಸ್ ಮಾಡುವುದಕ್ಕೆ ಅಪ್ರೂವಲ್ ಸಿಕ್ಕಿತು. and to instal spillway gates,

ಪೂರ್ತಿ ಎತ್ತರದವರೆಗೆ ಹೋಗುವುದಕ್ಕೆ ಒಪ್ಪಿಗೆ ಸಿಕ್ಕಿತೇ ವಿನಾ ಸಂಪೂರ್ಣವಾಗಿ 173 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಮಗೆ ಅವಕಾಶ ಸಿಗಲಿಲ್ಲ. ಇದರ ಜೊತೆಗೆ ಪ್ರಾಮಾಣಿಕ ಪ್ರಯತ್ನವೂ ನಿಮ್ಮಿಂದಾಗಲಿಲ್ಲ. ಬದಲಿಗೆ ನೀವು ಏನು ಮಾಡಿದಿರೆಂದರೆ ನೀವು ಅನಗತ್ಯವಾಗಿ ಕೊಡುವ ಪ್ರಚೋದನಕಾರಿ ಹೇಳಿಕೆಯಿಂದಾಗಿ ಇವೊತ್ತು ನೀರಿನ ಸಂಪೂರ್ಣ ಬಳಕೆಗೆ ನಮಗೆ ಧಕ್ಕೆ ಬಂದಿತು. ಈ ರಾಜ್ಯದ, ಈ ಮನೆಯಲ್ಲಿ ಮುಖ್ಯ ಮಂತ್ರಿಗಳಾಗಿದ್ದಂಥವರು ಪ್ರಧಾನಮಂತ್ರಿಗಳಾದಂಥ ಸಂದರ್ಭದಲ್ಲಿ ಮತ್ತು ಈಗಿನ ಸಚಿವರು ಕೂಡ ಅನೇಕ ತರಹದ ಹೇಳಿಕೆಗಳನ್ನು ಕೊಟ್ಟರು. ನಮ್ಮ ರಾಜ್ಯದವರೇ ಪ್ರಧಾನಮಂತ್ರಿಗಳಾದಾಗ ಪ್ಲಾನ್ ಸ್ಕೀಮ್‌ನಲ್ಲಿರುವ ಬಹಳ ಹಿಂದುಳಿದಿರತಕ್ಕ ಇಂತಹ

ಒಂದು ಪ್ರಾಜೆಕ್ಟ್‌ಗೆ ಸಹಾಯ ಮಾಡುವ ದಿಸೆಯಲ್ಲಿ ದುಡ್ಡು ಒದಗಿಸಿಕೊಡುತ್ತೇನೆಂದು ಒಂದು ಸ್ಪೆಷಲ್ ಸ್ಕೀಮ್ ಮಾಡಿದರು. ಆ ಸ್ಕೀಮ್‌ನಿಂದ ನಮ್ಮ ರಾಜ್ಯಕ್ಕೆ ಎಷ್ಟು ಬಂತು, ಎಷ್ಟು ಹೋಯಿತು ಎನ್ನುವುದಕ್ಕಿಂತ ಹೆಚ್ಚಾಗಿ ರಾಷ್ಟ್ರದಲ್ಲಿ ಅದು ಸಾಕಷ್ಟು ಪ್ರಚಾರವಾಯಿತು. ಅವೊತ್ತು ರಾಷ್ಟ್ರದಲ್ಲಿ ವಿವಾದಿತ ರಾಜ್ಯಗಳೇನಿದ್ದವು, ಮಹಾರಾಷ್ಟ್ರವಿರಬಹುದು, ಆಂಧ್ರಪ್ರದೇಶವಿರಬಹುದು. ಅವೆರಡೂ ರಾಜ್ಯಗಳೂ ಕೂಡ ಇವೊತ್ತು ಕರ್ನಾಟಕದ ಕಡೆ ನೋಡುವಂಥ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟು ಪ್ರಚೋದಿಸಿದರು. ನಮ್ಮ ಪ್ರಾಜೆಕ್ಟ್‌ಗಳ ಬಗ್ಗೆ ಇಲ್ಲದ ಮಾಹಿತಿಗಳನ್ನು ಇವೊತ್ತು ಕಣ್ಣಲ್ಲಿ ಕಣ್ಣಿಟ್ಟು ನೋಡುವಂಥ ವಾತಾವರಣವನ್ನು ಸೃಷ್ಟಿಸಿದರು. ಯೋಜನೆಯಡಿ ನಿಮಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂತು, ಹೋಯಿತು ಎನ್ನುವುದಕ್ಕಿಂತ ಹೆಚ್ಚಾಗಿ ನೀವು ಹೇಳಿಕೆ ಕೊಟ್ಟಿರಿ. ಪತ್ರಿಕೆಗಳಿಗೆ ವಿಶೇಷ ಸಂದರ್ಶನ ಹಾಗೂ ಹೇಳಿಕೆಗಳನ್ನು ಕೊಟ್ಟಿರುವ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಸಲ ಚರ್ಚೆಯಾಗಿರುವುದರಿಂದ ನಾನು ಅದರ ಬಗ್ಗೆ ಪ್ರಸ್ತಾಪಿಸುವುದಿಲ್ಲ. ನಾವು ಎಂಟೈರ್ ಪ್ರಾಜೆಕ್ಟ್ ಅನ್ನು 524 ಮೀಟರ್‌ಗಳವರೆಗೆ ಹೆಚ್ಚಿಸುವುದಕ್ಕೆ ಎಲ್ಲಾ ರೀತಿಯಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆಂದು ಹೇಳಿರುವುದು ನಮ್ಮ ರಾಜ್ಯಕ್ಕಿಂತ ಹೆಚ್ಚಾಗಿ ಹೊರ ರಾಜ್ಯಗಳಲ್ಲಿ ಅಂದರೆ ಆಂಧ್ರಪ್ರದೇಶದಲ್ಲಿ ಕುರಿತು ಸಾಕಷ್ಟು ಸಲ ಪ್ರಸ್ತಾಪವಾಯಿತು. ಆ ಹೇಳಿಕೆಯ ಮೂಲ ಕಾರಣದಿಂದ ಇವೊತ್ತು ಅನಗತ್ಯವಾಗಿ ಕೋರ್ಟಿನ ಬಾಗಿಲಿಗೆ ಹೋಗುವ ಸಂದರ್ಭ ಒದಗಿ ಬಂತು. ಸುಪ್ರಿಂ ಕೋರ್ಟ್‌ನಲ್ಲಿ ಕಂಟೆಂಪ್ಟ್ ಪಿಟಿಷನ್ ಆಯಿತು. ಸುಪ್ರಿಂ ಕೋರ್ಟ್‌ನಲ್ಲಿ ಕರ್ನಾಟಕ ರಾಜ್ಯದವರು ಒಂದು ಕೇಸ್ ಹಾಕಿದರೂ, ಆಂಧ್ರಪ್ರದೇಶದವರೂ ಕೂಡ ಒಂದು ಕೇಸ್ ಹಾಕಿದರು. ಇವೊತ್ತು ಆ ಎರಡೂ ಕೇಸುಗಳು ಸುಪ್ರಿಂಕೋರ್ಟ್‌ನ ಮುಂದಿರಬೇಕಾದರೆ ಸುಪ್ರಿಂಕೋರ್ಟ್ ಅಂತಿಮವಾಗಿ ಒಂದು ನಿರ್ಣಯ ಮಾಡುತ್ತದೆ. ಎಸ್‌ಎಂ.ಸೇಥಿ ಡೈರೆಕ್ಟರ್ ಆಫ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈಡ್ರಾಲಜಿ ಇವರನ್ನು ಎಕ್ಸಪರ್ಟ್ ಕಮಿಷನ್‌ಗೆ ಅಧ್ಯಕ್ಷರನ್ನಾಗಿ ಅಪಾಯಿಂಟ್ ಮಾಡಿದರು. ಅವರು ಅಧ್ಯಕ್ಷರಾಗಿ ನೇಮಕವಾದ ಬಳಿಕ ಎಲ್ಲವನ್ನೂ ಅಧ್ಯಯನ ಮಾಡಿ ದಿನಾಂಕ 26.10.98ರಂದು ಒಂದು ವರದಿಯನ್ನು ಕೊಡುತ್ತಾರೆ. ಕರ್ನಾಟಕವು 26 ಗೇಟುಗಳಲ್ಲಿ ಯಾವುದೇ ಒಂದು ಗೇಟನ್ನೂ ಹಾಕುವಂಥ ಪ್ರಯತ್ನ ಮಾಡಿಲ್ಲ ಮತ್ತು 509 ಮೀಟರ್‌ಗಿಂತ ಮುಂದಕ್ಕೆ ಮೀರುವುದಕ್ಕಾಗಿಲ್ಲವೆಂದೂ ವರದಿಯಲ್ಲಿ ಹೇಳುತ್ತಾರೆ. ಆ ಮಾತನ್ನು ಹೇಳಿದಾಗ ಮಂತ್ರಿಗಳಾಗಿರ ತಕ್ಕಂಥವರು ಕೊಟ್ಟಂಥ ಹೇಳಿಕೆ ಮತ್ತು Expert Commissioner appointed by the Supreme court and he is an expert, he gives a report that nothing has happened in Karnataka.

ಅಂದಾಗ ನೀವು ಎಲ್ಲಿ ಎಡವಿದ್ದೀರಿ ಎಂಬುದನ್ನು ಯೋಚಿಸಬೇಕು. ಅವರು ಇನ್ನೊಂದು ಅಂಶ ಏನು ಹೇಳುತ್ತಾರೆಂದರೆ, ಯಾವುದೇ ಸಂದರ್ಭದಲ್ಲೂ ಕೂಡ ಜನವರಿ 1999ವರೆಗೂ ಕೂಡ ಅಣೆಕಟ್ಟಿನ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಸುಪ್ರಿಂ ಕೋರ್ಟಿಗೆ ಹೇಳುತ್ತಾರೆ. ಸುಪ್ರಿಂ ಕೋರ್ಟ್, ಆ ಎಕ್ಸ್‌ಪರ್ಟ್ ಒಪಿನಿಯನ್ ಅನ್ನು ಒಪ್ಪುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾವು ನೆನಸಿ ಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ನಮ್ಮವರು ಒಂದು ಅಂಡರ್‌ಟೇಕಿಂಗ್ ಕೊಡುತ್ತಾರೆ, ಏನೆಂದರೆ, state of Karnataka will not raise beyond 509 Tmc ಎಂದು . ಸುಪ್ರಿಂ ಕೋರ್ಟ್‌ನಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಎಫ್.ಎಸ್.ನಾರಿಮನ್‌ರವರು ಸುಪ್ರಿಂ ಕೋರ್ಟ್ ಮುಂದೆ ಒಂದು ಅಂಡರ್‌ಟೇಕಿಂಗ್ ಕೊಡುತ್ತಾರೆ It is on 23.4.99 Sri F.S Nariman, Senior counsel on behalf of State of Karnataka made a proposal before the Su-

preme Court. Propsal is as follows:

Pending the hearing and final disposal of the suits and on further orders of the Hon ble court, Karnataka will agree for the impounding of water at Almatti Reservoir at RL 515.2 Meters and will also agree for annual utilisation of 155Tmc under UKP even after state completes erection of all 26 gates to their full height and with thin plates which corresponds to level of a RL 524.26. meters. All this will be without anything raising the existing solid crest gates beyond 509 meters. In this connection interim period on further orders of the Hon 'ble supreme court, the state of karnataka agrees and undertakes to the impounding and utilisation as mentioned in clause I as monitored and regulated by the central water commission or a body set up by the Hon'ble court for this purpose.

ಇವತ್ತು ತಮಗೆ ಪ್ಲಾನ್ ಅಲೊಕೇಷನ್ ಪ್ರಕಾರ ಉಪಯೋಗಿಸಲೇ ಬೇಕಾಗಿರತಕ್ಕದ್ದು 173 ಟಿ.ಎಂ.ಸಿ ನೀರು. ಆ ರೀತಿ 173 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡರೆ ಮಾತ್ರ ತಾವು ಗರಿಷ್ಟ 729 ಟಿ.ಎಂ.ಸಿ. ನೀರನ್ನು ಮುಟ್ಟಲು ಸಾಧ್ಯವಾಗುತ್ತದೆ. ಆದರೆ ತಾವು ಕೊಟ್ಟಿರುವ ಅಂಡರ್ ಟೇಕಿಂಗ್ಸ್‌ನ ಪ್ರಕಾರ ಕೇವಲ 155 ಟಿ.ಎಂ.ಸಿ. ನೀರನ್ನು ಮಾತ್ರ ಉಪಯೋಗ ಮಾಡಿಕೊಳ್ಳಬಹುದು. ಉಳಿದ 24 ಟಿ.ಎಂ.ಸಿ. ನೀರನ್ನು ತಮ್ಮ ಅಫಿಡೆವಿಟ್ ಮೂಲಕ, ಅಂಡರ್ ಟೇಕಿಂಗ್ಸ್ ಕೊಡುವ ಮೂಲಕ ಮಿತಿಯನ್ನು ಕಡಿತ ಮಾಡಿಕೊಂಡಿದ್ದೀರಿ. ಆ ರೀತಿಯಾಗಲು ಮೂಲ ಕಾರಣವೇನು? ಇಂಥ ಸಂದರ್ಭದಲ್ಲಿ ಅನಗತ್ಯ ವಾಗಿ ಹೇಳಿಕೆಯನ್ನು ಕೊಡುವ ಕೆಲಸವನ್ನು ತಾವು ಮಾಡಿದ್ದರಿಂದ ಈ ರೀತಿ ರಾಜ್ಯಕ್ಕೆ ಅನ್ಯಾಯವಾಯಿತು ಎಂಬುದನ್ನು ತಾವು ಒಪ್ಪಬೇಕಾಗುತ್ತದೆ. ಸುಪ್ರೀಮ್‌ಕೋರ್ಟಿನಲ್ಲಿ ಎರಡು ಕೇಸುಗಳು ಒಂದಲ್ಲಾ ಒಂದು ರೀತಿಯಲ್ಲಿ ಪ್ರತಿ ತಿಂಗಳು ಹಿಯರಿಂಗ್‌ಗೆ ಬರುತ್ತಿರುವ ಸಂದರ್ಭದಲ್ಲಿ, ಪ್ರತಿ ದಿನ ನಮ್ಮ ವಕೀಲರು ಕೋರ್ಟಿನಲ್ಲಿ ಇರುವಂಥ ಸಂದರ್ಭದಲ್ಲಿ, ನಮ್ಮ ನೀರಿನ ಬಳಕೆಯನ್ನು ಕಡಿತಗೊಳಿಸುವ ಸಂದರ್ಭ ಬಂದಾಗ ಯಾವಾತ್ತಾದರೂ ಒಂದು ದಿವಸ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಹುದಾಗಿತ್ತು, ಆದರೆ ತಾವು ಆ ಕೆಲಸವನ್ನು ಮಾಡಲು ಹೋಗಲೇ ಇಲ್ಲ. ತಾವು ಕೊಟ್ಟಿರುವ ಅಂಡರ್‌ಟೇಕಿಂಗ್ಸ್ ತಪ್ಪು ಎಂದು ತಮಗೆ ಈಗ ಗೊತ್ತಾದ ಮೇಲೆ, ಇವತ್ತು ಯವುದೋ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಮಧ್ಯವರ್ತಿಗಳಾಗಿ ಬರಬೇಕು, ಈ ಡಿಸ್‌ಪ್ಯೂಟನ್ನು ಪರಿಹಾರ ಮಾಡಿಕೊಡಬೇಕು ಎಂಬ ಹೇಳಿಕೆ ತಮ್ಮ ಮೂಲಕ ಬರುತ್ತಿರುವುದನ್ನು ನೋಡಿದಾಗ ಬಹುಶಃ ತಾವು ರಾಜ್ಯದ ಜನರಿಗೆ ಕೊಟ್ಟಂಥ ವಚನವನ್ನು ಎಷ್ಟರ ಮಟ್ಟಿಗೆ ಉಳಿಸಿದಿರಿ ಎಂಬ ಬಗ್ಗೆ ನಮಗೆ ಸಂಶಯ ಬರುವುದಿಲ್ಲವೇ ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತು 25 ಟಿ.ಎಂ.ಸಿ. ನೀರನ್ನು ಬಳಕೆ ಮಾಡಲು ಸಾಧ್ಯವಿಲ್ಲ ಮಾರ್ಚ್ 1999ರೊಳಗಾಗಿ ಈ ಯೋಜನೆಯನ್ನು ಪೂರ್ಣವಾಗಿ ಮುಗಿಸಿ ನೀರನ್ನು ಶೇಖರಣೆ ಮಾಡಬೇಕಾಗಿತ್ತು. ಆದರೆ ಇವತ್ತು ಏನಾಯಿತು? ತಮ್ಮ ಸ್ಟೇಟಸ್‌ಕೋ ಆರ್ಡರ್, ಅಲ್ಟಿಮೇಟಲಿ ತಾವು ಕೊಟ್ಟ ಅಂಡರ್‌ಟೇಕಿಂಗ್ಸ್ ಮೇಲೆ ಸುಪ್ರೀಮ್ ಕೋರ್ಟಿನವರು ತೀರ್ಮಾನ ತೆಗೆದುಕೊಳ್ಳಲಿಲ್ಲ

They have referred the whole matter to the Constitution Bench.

ಕಾನ್‌ಸ್ಟಿಟ್ಯೂಷನ್ ಬೆಂಚ್‌ಇನ್ನೂ ಕಾನ್‌ಸ್ಟಿಟ್ಯೂಟ್ ಆಗಿಲ್ಲ. ಜುಲೈ 19ರ ನಂತರ ಸುಪ್ರೀಮ್ ಕೋರ್ಟ್ ಮುಂದೆ ಬರಬೇಕು, ಅದು ಯಾವಾಗ ಆಗುತ್ತದೋ ನಮಗೆ ಗೊತ್ತಿಲ್ಲ. ಅಲ್ಲಿಯವರೆಗೆ

ಸ್ಟೇಟಸ್‌ಕೋ ಆರ್ಡರ್ ಇರುವುದರಿಂದ ನೀವು ಅಲ್ಲಿಗೆ ಯಾವುದೇ ರೀತಿಯಾದ ಕ್ರೈಸ್ಟ್‌ಗೇಟನ್ನು ಅಳವಡಿಸಲು ಆಗುವುದಿಲ್ಲ. ಇವತ್ತು ಸುಪ್ರೀಮ್ ಕೋರ್ಟ್ ಒಪ್ಪಿಗೆ ಕೊಟ್ಟರೂ ಮಳೆಗಾಲ ಪ್ರಾರಂಭವಾಗಿರುವುದರಿಂದ ಆ ಕೆಲಸವನ್ನು ಮಾಡಲು ಆಗುವುದಿಲ್ಲ. ತಮ್ಮ ಬೇಜವಬ್ದಾರಿಕೆಯಿಂದ ಈಕೆಲಸ ಇನ್ನು ಒಂದು ವರ್ಷ ಮುಂದೆ ಹೋಗುವ ಪ್ರಶ್ನೆ ಬಂತು. ಅದರ ಜೊತೆಗೆ ತಮ್ಮ ಅಂಡರ್‌ಟೇಕಿಂಗ್ಸ್‌ನ ಪ್ರಕಾರ ಕೇವಲ 155 ಟಿ.ಎಂ.ಸಿ. ನೀರಿಗೆ ರಿಸ್ಟ್ರಿಕ್ಟ್ ಆಗಿರಬೇಕಾದರೆ, ತಮ್ಮ ಪ್ಲಾನ್ಸ್ ಅಲೋಕೇಷನ್ 179 ಟಿ.ಎಂ.ಸಿ. ಇರಬೇಕಾದರೆ ಈ ವ್ಯತ್ಯಾಸವನ್ನು ಹೇಗೆ ಸರಿಪಡಿಸಲು ಸಾಧ್ಯವಾಗುತ್ತದೆ? ಇದು ಕರ್ನಾಟಕದ ಜನರಿಗೆ ಮಾಡಿದ ಅನ್ಯಾಯವಲ್ಲವೇ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ಅನಾವಶ್ಯಕವಾಗಿ ಇವರು ಕೊಟ್ಟ ಹೇಳಿಕೆಗಳಿಂದ ಈ ಪರಿಸ್ಥಿತಿ ಬಂದಿದೆಯೆಂದು ಹೇಳುವುದರ ಜೊತೆಗೆ ಮುಖ್ಯಮಂತ್ರಿಯವರು ಇದರ ನ್ಯಾಯವನ್ನು ಎತ್ತಿಹಿಡಿಯುವುದಕ್ಕೆ, ಇದರ ಸಮಯವನ್ನು ಹೆಚ್ಚು ಮಾಡುವುದರ ಬಗ್ಗೆ ಸುಪ್ರೀಮ್ ಕೋರ್ಟಿಗೆ ಹೋಗುತ್ತೇವೆಂದು ಹೇಳುತ್ತಿದ್ದಾರೆ. ನಾನು ಮುಖ್ಯಮಂತ್ರಿಯವರನ್ನು ಕೇಳಬೇಕಾಗುತ್ತದೆ. The matter is before the central Government. The Prime Minister is a political man. He could have exercised all his options before the Government of India instead of mentioning that he will go to the Supreme Court.

ಸಮಯವನ್ನು ಹೆಚ್ಚು ಮಾಡುವ ಬಗ್ಗೆ ಕೋರ್ಟಿಗೆ ಹೋಗುವುದು ಅತ್ಯಂತ ಕಡೆಯ ಅಸ್ತ್ರವಾಗುತ್ತದೆ. ಇವತ್ತು ಕೇಂದ್ರ ಸರ್ಕಾರದವರು ನಮಗೆ ಎಲ್ಲಾ ರೀತಿಯಲ್ಲೂ ಸಹಕಾರಿಯಾಗಿದ್ದಾರೆಯೇ? ನಮಗೆ ಆಲಮಟ್ಟಿ ಡ್ಯಾಂನ ಸ್ಟೇಜ್ 2ಕ್ಕೆ ಇನ್ನೂ ಕ್ಲಿಯರೆನ್ಸ್ ಕೊಡಲಿಲ್ಲ, ಎನ್‌ವಿರೂನ್‌ಮೆಂಟಿನ ಕ್ಲಿಯರೆನ್ಸ್ ಕೊಡಲಿಲ್ಲ, ಅನೇಕ ಪ್ರಾಜೆಕ್ಟ್‌ಗಳು ಭಾರತ ಸರ್ಕಾರದ ಒಪ್ಪಿಗೆಗೆ ಹೋಗಿದ್ದು ಇದುವರೆಗೆ ಕ್ಲಿಯರ್ ಆಗಿಲ್ಲ, ಗೋದಾವರಿ ಡೈವರ್ಷನ್‌ನಿಂದಾಗಿ ನಮ್ಮ ರಾಜ್ಯಕ್ಕೆ ಬರಬೇಕಾಗಿರತಕ್ಕ 21 ಟಿ.ಎಂ.ಸಿ. ನೀರನ್ನು ಇವತ್ತಿನವರೆಗೆ ಕ್ಲಿಯರ್ ಮಾಡಿಕೊಟ್ಟಿಲ್ಲ, 1978ನೇ ಇಸವಿಯಲ್ಲಿ ಮಾನ್ಯ ದೇವರಾಜ್‌ಅರಸು ಹಾಗೂ ಚೆನ್ನಾರೆಡ್ಡಿಯವರು ಇದ್ದಂಥ ಕಾಲದಲ್ಲಿ ಮೂರು ತಿಂಗಳಿನಲ್ಲಿ ಇದಕ್ಕೆ ಕ್ಲಿಯರೆನ್ಸ್ ಕೊಡುತ್ತೇವೆಂದು ಹೇಳಿದ್ದಂಥ ಆಂಧ್ರಪ್ರದೇಶ ಸರ್ಕಾರ 20 ವರ್ಷಗಳಾಗಿದ್ದರೂ ಇದುವರೆಗೆ ಆ 21 ಟಿ.ಎಂ.ಸಿ. ನೀರನ್ನು ಕೊಡುವ ಕೆಲಸವನ್ನು ಮಾಡಲಿಲ್ಲ. ತಾವು ದೆಹಲಿಯಲ್ಲಿ ವಿಶೇಷವಾದ ಒಬ್ಬರು ದೂತರನ್ನು ಕೂರಿಸಿದ್ದೀರಿ. ಕಾಲಕಾಲಕ್ಕೆ ಕೇಂದ್ರ ಸರ್ಕಾರ ಯಾವ್ಯಾವ ಪ್ರಾಜೆಕ್ಟ್‌ಗಳನ್ನು ಕ್ಲಿಯರೆನ್ಸ್ ಮಾಡಿತು, ಎನ್‌ವಿರೋನ್‌ಮೆಂಟ್ ಕ್ಲಿಯರೆನ್ಸ್ ಮಾಡಿತು, ಏತಕ್ಕೆ ಮಾಡಲಿಲ್ಲ ಎನ್ನತಕ್ಕಂಥ ಯಾವುದಾದರೂ ಪ್ರೊಟೆಸ್ಟ್‌ನ್ನು ಕೇಂದ್ರ ಸರ್ಕಾರದ ಮೇಲೆ ರಿಜಿಸ್ಟರ್ ಮಾಡಿದ್ದೀರಾ? ಒಂದು ವೇಳೆ ಮಾಡಿದ್ದರೆ ಎಷ್ಟು ಕೇಸುಗಳನ್ನು ಮಾಡಿದ್ದೀರಿ?

It is the duty of the State. ಇದರ ಬಗ್ಗೆ ಯಾರೂ ಮಧ್ಯಪ್ರವೇಶ ಮಾಡಬೇಕಾಗಿಲ್ಲ. 729 ಟಿ.ಎಂ.ಸಿ. ನೀರನ್ನು ನಾವು ಸಂಪೂರ್ಣವಾಗಿ ಬಳಕೆ ಮಾಡಲು ಯಾರ ಇಂಟರ್‌ಫಿಯರೆನ್ಸ್ ಬೇಕಾಗಿಲ್ಲ. ಬೇರ ರಾಜ್ಯ ಸರ್ಕಾರಗಳು ನಮ್ಮ ವಿಚಾರದಲ್ಲಿ ಮಧ್ಯಪ್ರವೇಶ ಮಾಡಬೇಕಾದಂಥ ಪ್ರಶ್ನೆ ಇರಲಿಲ್ಲ. ಇಂಥ ವಿಶೇಷವಾದ ಅವಕಾಶ ಇರಬೇಕಾದರೆ, ಕೇಂದ್ರ ಸರ್ಕಾರದಲ್ಲಿ ತಮಗೆ ಯಾರು ವಿರೋಧ ಬಂದರು; ಯಾವ ಅಧಿಕಾರಿಗಳು ವಿರೋಧ ಬಂದರು; ಸೆಂಟರ್ ವಾಟರ್ ಕಮಿಷನ್ ಏಕೆ ಡಿಲೇ ಮಾಡಿತು; ಇವೆಲ್ಲದರ ಬಗ್ಗೆ ತಾವು ದೂರನ್ನು ರಿಜಿಸ್ಟರ್ ಮಾಡಬೇಕಾಗಿತ್ತು. ಅವರ ಬಗ್ಗೆ ಚಾರ್ಜ್‌ಶೀಟ್ ಮಾಡುವ ಮಟ್ಟಕ್ಕೆ ಹೋಗಬೇಕಾಗಿತ್ತು. ಇವೆಲ್ಲವನ್ನು ತೆಗೆದುಕೊಂಡು ಕೇಂದ್ರ

ಸರ್ಕಾರವನ್ನು ಚಾರ್ಜ್‌ಶೀಟ್ ಮಾಡಿ ಇವೆಲ್ಲದಕ್ಕೂ ನೀವೇ ಹೊಣೆಗಾರರು ಎಂದು ಮಾಡಿ ಅವರನ್ನು ಒಲಿಸತಕ್ಕ ಕೆಲಸವನ್ನು ಮಾಡಬಹುದಾಗಿತ್ತು. ಅಂಥ ಯಾವುದೇ ಪ್ರಯತ್ನ ರಾಜ್ಯ ಸರ್ಕಾರದಿಂದ, ಸಂಬಂಧಪಟ್ಟ ಸಚಿವರಿಂದ ಆಗಲಿಲ್ಲ. ಆ ಕಾರಣದಿಂದಾಗಿ ನಮ್ಮ ಪಾಲಿನ ನೀರಿನ ಹಕ್ಕನ್ನು ಬಳಸಿಕೊಳ್ಳದಿರುವ ಸ್ಥಿತಿಯಾಗಿದೆ. ಇವತ್ತು ಇದರ ಬಗ್ಗೆ ನಿಲುವಳಿ ಸೂಚನೆ ತಂದಿದ್ದೇವೆ ಎಂಬ ಕಾರಣಕ್ಕಾಗಿ ಇದರ ಬಗ್ಗೆ ಪ್ರತಿಪಾದನೆ ಮಾಡುತ್ತಿರುವುದಲ್ಲ. ಇದು ನಮ್ಮ ರಾಜ್ಯದ ಹಕ್ಕು, ಅದರಲ್ಲೂ ಮುಖ್ಯವಾಗಿ ತಾವು ನೀರಿನ ಮೇಲೆ ಆಣೆ ಮಾಡಿ ಅಧಿಕಾರಕ್ಕೆ ಬಂದಿರತಕ್ಕವರು. ಹೀಗಾದರೆ ತಾವು ಅಧಿಕಾರದಲ್ಲಿ ಯಾವ ರೀತಿಯಲ್ಲಿ ಉಳಿಯಲು ಸಾಧ್ಯ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಸುಪ್ರೀಮ್ ಕೋರ್ಟಿನವರು ಒಂದು ಪಕ್ಷ ಕ್ಲಿಯರ್ ಮಾಡಿದ್ದರೂ ಒಂದು ವರ್ಷ ಈ ಕೆಲಸ ಮುಂದೆ ಹೋಗತಕ್ಕ ಪರಿಸ್ಥಿತಿ ಬಂತು. ಇದರಿಂದ ಆಗತಕ್ಕ ಅನಾಹುತಗಳ ಬಗ್ಗೆ ಕೇಂದ್ರ ಸರ್ಕಾರವನ್ನು ಹೊಣೆ ಮಾಡಬೇಕಾಗಿತ್ತು, ಕೇಂದ್ರ ಸರ್ಕಾರದ ಮುಂದೆ ಹೋರಾಟ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಸುಪ್ರೀಮ್ ಕೋರ್ಟಿಗೆ ಹೋಗುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಯಿತು ಎಂದರೆ, ಈ ರೀತಿಯಾದ ಹೇಳಿಕೆ ಆಂಧ್ರ ಪ್ರದೇಶದವರಿಗೆ ಬೇಕಾಗಿತ್ತು. ಕಾವೇರಿ ವಿಚಾರದಲ್ಲಿ ಏನಾಗಿದೆಯೆಂದು ಅವರಿಗೆ ಗೊತ್ತು. ಕಾವೇರಿ ವಿಚಾರದಲ್ಲಿ ಕೇಸಿನ ಮೇಲೆ ಕೇಸನ್ನು ಹಾಕಿಕೊಂಡು ಬರೀ ಅದನ್ನು ಲಿಟಿಗೇಂಟ್ ಆಗಿ ಸುಪ್ರೀಮ್ ಕೋರ್ಟಿನಲ್ಲಿ, ಟ್ರಿಬ್ಯುನಲ್‌ನಲ್ಲಿ ಹೋರಾಡಿ ಹೋರಾಡಿ ಆ ಕಾನೂನು ಹೋರಾಟದಲ್ಲಿ ನಾವು ಹಿಂದೆ ಹೋಗುವಂತೆ ಮಾಡಿದರು, ನಮ್ಮ ಯೋಜನೆಗಳು ಕಡಿತವಾಗುವಂತೆ ಮಾಡಿದರು. ಅಂಥಹದ್ದೇ ಪ್ರಯತ್ನವನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಮಾಡುತ್ತಾರೆ, ಪ್ರಧಾನ ಮಂತ್ರಿಗಳ ಹತ್ತಿರ ಅವರು ಅತ್ಯಂತ ನಿಕಟವಾದ ಸಂಬಂಧ, ಸಂಪರ್ಕ ರಾಜಕೀಯವಾಗಿ ಇರುವಂಥ ಸಂದರ್ಭದಲ್ಲಿ ನೀವು ಈ ರೀತಿ ಪ್ರಚೋದನೆಗಳನ್ನು ಮಾಡಿ, ಅವರೇ ಕೋರ್ಟಿಗೆ ಹೋಗಬೇಕಾಗಿತ್ತು. ಅವರ ಕೇಸು ಕೋರ್ಟಿನಲ್ಲಿ ಇತ್ತು, ಆದರೆ ಸಮಯವನ್ನು ಹೆಚ್ಚು ಕೋರಿ ಕೋರ್ಟಿಗೆ ಹೋಗುತ್ತೇನೆಂದು ತಾವು ಹೇಳುವುದಾದರೆ, ನಮ್ಮ ಅವಧಿ ಇನ್ನು ಮುಗಿದೇ ಇಲ್ಲ, ಇನ್ನೂ ಆರೇಳು ತಿಂಗಳು ಸಮಯವಿದೆ, ಇನ್ನು ಸಮಯವಿರುವಂಥ ಸಂದರ್ಭದಲ್ಲೇ ನೀವು ಕೊನೆಯದಾಗಿ ಈ ರೀತಿ desperate decisionಗೆ ಬಂದಿದ್ದು ಕರ್ನಾಟಕ ಜನತೆಗೆ ಮಾಡಿದಂಥ ಮಹಾ ದ್ರೋಹವೆಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ನಿಲುವಳಿ ಸೂಚನೆಯಲ್ಲಿ ನಮ್ಮ ನಾಯಕರು ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ನಂಜೇಗೌಡರು ಅನೇಕ ಕ್ಲಾರಿಫಿಕೇಷನ್ ಕೇಳಿದ್ದಾರೆ, ಅವುಗಳು ನಿಜವಾಗಿಯೂ ಅಮೂಲ್ಯವಾದ ಕ್ಲಾರಿಫಿಕೇಷನ್‌ಗಳು. ನಾನು ಪೂರಕವಾದ ಮಾಹಿತಿಯನ್ನಿಟ್ಟಿದ್ದೇನೆ. ನಮ್ಮ ನಿಲುವಳಿ ಸೂಚನೆಯನ್ನು ತಾವು ಅಲೊ ಮಾಡಬೇಕಾಗುತ್ತದೆ, ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕಾಗುತ್ತದೆ; ಏಕೆಂದರೆ ಕಳೆದ ಐದು ವರ್ಷಗಳಿಂದ ಸದನ ನಡೆದಂಥ ಯಾವುದೇ ಸಂದರ್ಭದಲ್ಲೂ ಕಾವೇರಿ ಮತ್ತು ಕೃಷ್ಣ ನೀರಿನ ಬಗ್ಗೆ ಪ್ರಸ್ತಾಪವಾಗಿಲ್ಲದಿರುವುದು ಇಲ್ಲ. ಎಲ್ಲಾ ಸಂದರ್ಭದಲ್ಲೂ ಈ ಎರಡು ವಿಚಾರಗಳು ಸದನದಲ್ಲಿ ಪ್ರಸ್ತಾಪವಾಗಿದೆ. ಕೃಷ್ಣಭಾಗ್ಯ ಜಲ ನಿಗಮದಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದೀರಿ, ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂಬ ಮಾತನ್ನು ಪ್ರತಿ ಸಂದರ್ಭದಲ್ಲೂ ಎಲ್ಲಾ ಕಡೆ ಹೇಳಿಕೊಂಡು ಬರುತ್ತಿದ್ದೀರಿ. ಆದರೆ ಅದು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ಖರ್ಚಾಗಿದೆ ಅದರಲ್ಲೇನು ಅವ್ಯವಹಾರವಾಗಿದೆ, ಎಂಬ ವಿಚಾರ ಪ್ರಸ್ತಾಪವಾಗಬೇಕಾಗುತ್ತದೆ; ರಾಜ್ಯದ ಜನರಿಗೆ ನೀರಿನ ಬಗ್ಗೆ ಭರವಸೆಯನ್ನು ಕೊಟ್ಟು ಅಧಿಕಾರಕ್ಕೆ ಬಂದಿದ್ದಂಥ ಸರ್ಕಾರ, ಕೃಷ್ಣಭಾಗ್ಯ ಜಲ ನಿಗಮವನ್ನು ಮಾಡಲು ಈ ಸದನ ಒಪ್ಪಿಗೆ

ಕೊಟ್ಟು, ತಮಗೆ ಬ್ಲಾಂಕೆಟ್ ಆರ್ಡರ್‌ರನ್ನು ಕೊಟ್ಟು, ಬ್ಲಾಂಕ್ ಚೆಕ್ಕನ್ನು ಕೊಟ್ಟು ಖರ್ಚು ಮಾಡಿ ಎಂದು ಹೇಳಿರುವಂಥ ಸಂದರ್ಭದಲ್ಲಿ ತಾವು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ಮಾಡಿದ್ದೀರಿ, ಎಷ್ಟರಮಟ್ಟಿಗೆ ತಾವು ಪ್ರಾಮಾಣಿಕವಾಗಿ ನಡೆದುಕೊಂಡಿದ್ದೀರಿ, ಟೋಟಲ್ ಪಬ್ಲಿಕ್ ಫೈನಾನ್ಸ್‌ನ್ನು ಮ್ಯಾನೇಜ್ ಮಾಡುವುದರಲ್ಲಿ ಯಾವ ರೀತಿಯಾಗಿ ನಡೆದುಕೊಂಡಿದ್ದೀರಿ ಎಂಬುದನ್ನು ರಾಜ್ಯದ ಜನರು ತಿಳಿಯಬೇಕಾಗುತ್ತದೆ. ಈ ಸದನದ ಮೂಲಕ ರಾಜ್ಯದ ಜನರಿಗೆ ಅದರ ಬಗ್ಗೆ ಮನವರಿಕೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಲಿ. ಆ ರೀತಿ ಚರ್ಚೆಯಾದ ಸಂದರ್ಭದಲ್ಲಿ ರಾಜ್ಯದ ಜನರು ತಮ್ಮನ್ನು ಒಪ್ಪಿದರೆ ನಮ್ಮ ಅಭ್ಯಂತರವೇನಿಲ್ಲ. ಆದರೆ ಚರ್ಚೆಯಾಗಬೇಕಾಗುತ್ತದೆ. ಇದರಲ್ಲಿ ಇವತ್ತು ಸಾವಿರಾರು ಕೋಟಿ ರೂಪಾಯಿಗಳನ್ನು ತೊಡಗಿಸಲಾಗಿದೆ. ಈ ಯೋಜನೆ ಪೂರ್ಣವಾಗಬೇಕಾದರೆ ಇನ್ನೂ ಹತ್ತು ಸಾವಿರ ಕೋಟಿ ಹಣ ಬೇಕಾಗುತ್ತದೆ. ತಾವು ಆ ಹತ್ತು ಸಾವಿರ ಕೋಟಿ ಹಣವನ್ನು ತರಲು ಯೋಜನೆ ಮಾಡಿರಬಹುದು, ಶೇಕಡಾ 18 ಪರ್‌ಸೆಂಟ್ ಬಡ್ಡಿಯನ್ನು ಕೊಟ್ಟು ತರತಕ್ಕ ಹಣದಲ್ಲಿ, ರಾಜ್ಯದ ಐದು ಕೋಟಿ ಜನರು ಆ ಹೊರೆಯನ್ನು ಹೊರಬೇಕಾದರೆ ಇದರ ಬಗ್ಗೆ ಮಾಹಿತಿಯನ್ನು ನಾವು ಜನರಿಗೆ ಕೊಡಬೇಕಾಗುತ್ತದೆ.

ನಾನು ಇವತ್ತು ಈ ಸರ್ಕಾರದ ಮೇಲೆ ಸ್ಪಷ್ಟವಾದಂತಹ ಆರೋಪವನ್ನು ನೇರವಾಗಿ ಮಾಡುತ್ತಿದ್ದೇನೆ.
While handling this case, the Minister, the Deputy Chief Minister and the Government are only responsible in mis-handling this case.

ಇವತ್ತು ಅವರ ಹೇಳಿಕೆಯಿಂದಾಗಿ, ಅವರ ಬೇಜವಾಬ್ದಾರಿತನದಿಂದಾಗಿ ನಾವು ಸಂಪೂರ್ಣವಾಗಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದಕ್ಕೆ ತೊಂದರೆಯಾಗಿದೆ ಎಂಬ ಮಾತನ್ನು ನಾನು ನೇರವಾಗಿ ಈ ಸರ್ಕಾರದ ವಿರುದ್ಧ ಆರೋಪಿಸುತ್ತಾ ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಬಿಜಾಪುರ) : ಸನ್ಮಾನ್ಯ ಉಪಾಧ್ಯಕ್ಷರೇ, ಉತ್ತರ ಕರ್ನಾಟಕದ ಜೀವನ್ಮರಣದ ಪ್ರಶ್ನೆ ಇವತ್ತು ತಲೆ ಎತ್ತಿ ನಿಂತಿದೆ. ಇನ್ನುಳಿದ ಕೇವಲ 342 ದಿವಸಗಳಲ್ಲಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನಾವು ಆಲಮಟ್ಟಿ ಅಣೆಕಟ್ಟೆಯಿಂದ 173 ಟಿಎಂಸಿ ಗಳಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಕರ್ನಾಟಕದ ಪಾಲಿನ 734 ಟಿಎಂಸಿ ನೀರಿನಲ್ಲಿ ಚೆನ್ನೈ ನಗರದ ಕುಡಿಯುವ ನೀರಿನ ಉಪಯೋಗಕ್ಕಾಗಿ ನೀಡಲಾದ 5 ಟಿಎಂಸಿ ನೀರನ್ನು ಬಿಟ್ಟರೆ ಉಳಿದ 729 ಟಿಎಂಸಿ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಆಲಮಟ್ಟಿ ಅಣೆಕಟ್ಟನ್ನು 524.256 ಮೀಟರ್ಸ್ ಎತ್ತರ ಕಟ್ಟುವ ಬಗ್ಗೆ ಹಾಗೂ ಹಿಪ್ಪರಗಿ ಬ್ಯಾರೇಜ್ ಅನ್ನು 524.87 ಮೀಟರ್ ಎತ್ತರಕ್ಕೆ ನಿರ್ಮಾಣ ಮಾಡುವ ಬಗ್ಗೆ ಕರ್ನಾಟಕ ಸರ್ಕಾರ, ಕೇಂದ್ರ ಜಲ ಆಯೋಗ, ಪರಿಸರ ಇಲಾಖೆ, ಯೋಜನಾ ಮಂಡಳಿ ಮತ್ತು ರೈಲ್ವೆ ಇಲಾಖೆಯಿಂದ ಒಪ್ಪಿಗೆ ಪಡೆದಿಲ್ಲ ಎಂಬ ನೆಪವೊಡ್ಡಿ ಇವತ್ತು ಮಹಾರಾಷ್ಟ್ರ ಸರ್ಕಾರ ಇದರ ಬಗ್ಗೆ ಆಕ್ಷೇಪಣೆ ಎತ್ತಿದೆ. ಆಂಧ್ರಪ್ರದೇಶ ಎತ್ತಿರುವ ಆಕ್ಷೇಪಣೆ ಜೊತೆಗೆ ಇದೂ ಸೇರಿ ಎರಡೂ ಕರ್ನಾಟಕದ ಮೇಲೆ ಒಂದು ರೀತಿಯಲ್ಲಿ ಅನ್ಯಾಯವಾಗುವಂತೆ ಪರಿಸ್ಥಿತಿ ನಿರ್ಮಾಣ ಮಾಡಿದೆ. ಸನ್ಮಾನ್ಯ ನಾಗೇಗೌಡರು ನೀರಾವರಿ ಸಚಿವರಾದ ನಂತರ ಮಾನ್ಯ ಜೆಹೆಚ್ ಪಟೇಲರವರ ಸರ್ಕಾರ ಆಲಮಟ್ಟಿಯ ವಿಚಾರದಲ್ಲಿ ಬಹಳಷ್ಟು ಆಸಕ್ತಿ ಇಟ್ಟುಕೊಂಡು ಕೆಲಸ ಮಾಡುತ್ತದೆ ಎನ್ನುವ ಒಂದು ಭರವಸೆಯನ್ನು ನಮ್ಮ ಉತ್ತರ ಕರ್ನಾಟಕದ ಜನ ಹೊಂದಿದ್ದರು. ಆದರೆ ಸರ್ಕಾರ

ಅಲ್ಲಿ ಮಾಡುತ್ತಿರುವಂತಹ ಕಾಮಗಾರಿಗಳನ್ನು ವೀಕ್ಷಿಸಿದಾಗ 31ನೇ ಮೇ 2000 ಇಸವಿಯೊಳಗಾಗಿ ನಾವು ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕಾಗುವುದಿಲ್ಲ ಎನ್ನುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಇವತ್ತು ಅಣೆಕಟ್ಟಿನ ಎತ್ತರವನ್ನೇ ನೆಪವನ್ನಾಗಿ ಮಾಡಿಕೊಂಡು ಪಕ್ಕದ ರಾಜ್ಯಗಳು, ಅದು ಆಂಧ್ರಪ್ರದೇಶ ಸರ್ಕಾರ ಇರಬಹುದು, ಮಹಾರಾಷ್ಟ್ರ ಸರ್ಕಾರ ಇರಬಹುದು, ನಮ್ಮ ರಾಜ್ಯದ ಪಾಲಿನ ನೀರಿನಿಂದ ನಮ್ಮನ್ನು ವಂಚಿಸಬೇಕೆನ್ನುವ ದುರುದ್ದೇಶವನ್ನು ಇಟ್ಟುಕೊಂಡಿವೆ. ಇವತ್ತಿನ ಈ ಪರಿಸ್ಥಿತಿಗೆ ಯಾರು ಕಾರಣಕರ್ತರು ಎಂದು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ನಾವು 1964ರ ನಂತರ ಆಡಳಿತ ನಡೆಸಿದಂತಹ ಸರ್ಕಾರಗಳು ಯಾರದ್ದು ಎಂಬ ಬಗ್ಗೆಯೂ ಸಹ ವಿಚಾರ ಮಾಡಬೇಕಾಗುತ್ತದೆ. ನಾವು ಕೇವಲ ಕಳೆದ ನಾಲ್ಕು ವರ್ಷಗಳಲ್ಲಿ ಮಾನ್ಯ ನಾಗೇಗೌಡರು ಏನೂ ಮಾಡಿಲಿಲ್ಲವೆಂದು ಆಪಾದನೆ ಮಾಡುವುದು ಸರಿಯಾದುದಲ್ಲ. ಇದರ ಸಂಪೂರ್ಣವಾದಂತಹ ಜವಾಬ್ದಾರಿಯನ್ನು ನಮ್ಮ ಕಾಂಗ್ರೆಸ್ ಪಕ್ಷದ ನಾಯಕರು ಹೊತ್ತುಕೊಳ್ಳಬೇಕಾಗುತ್ತದೆ. ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ದಿವಂಗತ ಮಾಜಿ ಪ್ರಧಾನ ಮಂತ್ರಿಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ತಮ್ಮ ಅಮೃತ ಹಸ್ತದಿಂದ ಶಂಕುಸ್ಥಾಪನೆ ಮಾಡಿದ ನಂತರ ರಾಜ್ಯದಲ್ಲಿ ಆಡಳಿತ ನಡೆಸಿದಂತಹ ಕಾಂಗ್ರೆಸ್ ಪಕ್ಷದ ನಾಯಕರು, 1964-83ರವರೆಗೆ ಹಾಗೂ 1989-94ರವರೆಗೆ ಏನು ಸಾಧನೆ ಮಾಡಿದರು ಎಂಬುದನ್ನು ಜನತೆಯ ಮುಂದಿಡಬೇಕಾಗುತ್ತದೆ. ಕೇವಲ 1300 ಕೋಟಿ ರೂ.ಗಳ ಅಂದಾಜು ವೆಚ್ಚದ ಯೋಜನೆಗೆ ಇವತ್ತು 10000 ಕೋಟಿ ರೂ.ಗಳಷ್ಟು ಹೆಚ್ಚಿಗೆ ಹಣ ಬೇಕಾಗಿದೆ. ಇದರ ನೈತಿಕ ಜವಾಬ್ದಾರಿಯನ್ನು ಶೇಕಡ 25ರಷ್ಟು ಜನತಾ ದಳದವರು ಹಾಗೂ ಶೇಕಡ 75ರಷ್ಟು ಕಾಂಗ್ರೆಸ್ ಪಕ್ಷದವರು ಹೊರಬೇಕಾಗುತ್ತದೆ. ನಮ್ಮ ಸನ್ಮಾನ್ಯ ಸದಸ್ಯ ಮಿತ್ರರೊಬ್ಬರು 'ಕೇಳಿ ಕೃಷ್ಣೆಯ ಕೂಗು'. ಎಂಬ ಪುಸ್ತಕವೊಂದನ್ನು ಬರೆದರು. ಭೌತಿಕ ಸಾಧನೆ, ಆರ್ಥಿಕ ಸಾಧನೆ ಎಂಬುದೆಲ್ಲಾ ನಮಗೆ ಬೇಡ. ಉತ್ತರ ಕರ್ನಾಟಕದ ಜನರ ಜೀವನ್ಮರಣದ ಪ್ರಶ್ನೆ ಇವತ್ತು ಉದ್ಭವವಾಗಿದೆ. ಮಾನ್ಯ ಕಾಂಗ್ರೆಸ್ ಮಿತ್ರರು ನಾವು ಆರ್ಥಿಕವಾಗಿ ಇಷ್ಟು ಖರ್ಚು ಮಾಡಿದ್ದೇವೆ, ಭೌತಿಕವಾಗಿ ಇಷ್ಟು ಸಾಧನೆ ಮಾಡಿದ್ದೇವೆ ಎಂದು ಹೇಳಬಹುದು. ಆದರೆ ನಮಗೆ ಒಟ್ಟಾರೆ ಈ ಕೆಲಸ ಪೂರ್ಣವಾಗಬೇಕಾಗಿದೆ. 173 ಟಿಎಂಸಿ ಗಳಷ್ಟು ನೀರನ್ನು 1964ರಿಂದ ಇಲ್ಲಿಯವರೆಗೂ ಏಕೆ ಉಪಯೋಗ ಮಾಡಿಕೊಳ್ಳಲಿಲ್ಲ ಎಂಬ ಪ್ರಶ್ನೆ ಇವತ್ತು ಉದ್ಭವವಾಗುತ್ತದೆ. ಪೂರ್ತಿಯಾಗಿ ಇದಕ್ಕೆಲ್ಲಾ ಸಮಸ್ಯೆಗಳನ್ನು ಸೃಷ್ಟಿ ಮಾಡಿದವರು ಕಾಂಗ್ರೆಸ್ ಪಕ್ಷದವರು. ನಾವು ಒಮ್ಮಿಂದೊಮ್ಮೆಗೆ ಇವತ್ತು ಮಾನ್ಯ ನಾಗೇಗೌಡರ ಮೇಲೆ ಮಾತ್ರ ಆಪಾದನೆ ಮಾಡುವುದು ಸರಿಯಾಗಲಿಕ್ಕಿಲ್ಲ. ಆದರೆ ನಾವು ಮಾನ್ಯ ನಾಗೇಗೌಡರ ಮೇಲೆ ಇಟ್ಟಂತಹ ವಿಶ್ವಾಸ ಹುಸಿಯಾಗಿದೆ. ಮಾನ್ಯ ನಾಗೇಗೌಡರು ಆಲಮಟ್ಟಿಯಲ್ಲಿ ಎಲ್ಲಾ ಶಾಸಕರ ಸಭೆಯನ್ನು ಕರೆದಾಗ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದೆವು. ಈ ಭಾಗದ ಜನ ನಮಗೆ ಏನೊಂದು ನೀರಾವರಿ ಯೋಜನೆ ಕಾರ್ಯಗತವಾಗುತ್ತದೆ ಎಂಬ ಭಾವನೆ ಇಟ್ಟುಕೊಂಡಿದ್ದರೋ ಅದು ಇವತ್ತಿನ ದಿವಸ ಮಹಾರಾಷ್ಟ್ರದ ಸರ್ಕಾರದ ತಕರಾರಿನಿಂದಾಗಿ ಯೋಜನೆ ಕಾರ್ಯಗತವಾಗದೆ ನಾವು ನಮ್ಮ ಪಾಲಿನ ನೀರನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆ ಈ ಭಾಗದ ಜನರಲ್ಲಿ ಮೂಡಿ ಅವರು ನೋವನ್ನು ಅನುಭವಿಸುವಂತಾಗಿದೆ. ಬಿಜಾಪುರ ಜಿಲ್ಲೆಯ ಜನ ಈ ಯೋಜನೆಗಾಗಿ 3 ಲಕ್ಷ 20 ಸಾವಿರ ಎಕರೆಗಳಷ್ಟು ಫಲವತ್ತಾದ ಜಮೀನನ್ನು ಕಳೆದುಕೊಂಡಿದ್ದಾರೆ. ಸುಮಾರು ಏರಡು ಲಕ್ಷ ಜನ ಇವತ್ತು ನಿರ್ಗತಿಕರಾಗಿ ಪುನರ್ ವಸತಿ ಕೇಂದ್ರಗಳಿಗೆ ಹೋಗುವಂತಹ

ಪರಿಸ್ಥಿತಿ ನಿರ್ಮಾಣವಾಗಿದೆ. ಪುನರ್ ವಸತಿ ಕೇಂದ್ರಗಳಲ್ಲಿ ಸಮರ್ಪಕವಾದಂತಹ ವ್ಯವಸ್ಥೆ ಇವತ್ತಿನವರೆಗೂ ಆಗಿಲ್ಲ. ಅಲ್ಲಿಗೆ ಬೇಕಾದಂತಹ ಕನಿಷ್ಟ ಸಾಮಾನ್ಯ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬರುವಂಥ ಮುಳವಾಡ ಏತ ನೀರಾವರಿ ಯೋಜನೆಯ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ, 319 ಕೋಟಿ ರೂ.ಗಳ ಅಂದಾಜು ವೆಚ್ಚದ ಸ್ಕೀಮ್-ಎ ನಲ್ಲಿ ಬರುವಂತಹ ಬಳೂತಿ ಜಾಕವೆಲ್ ಇರಬಹುದು, ಹನುಮಾಪುರ ಜಾಕವೆಲ್ ಇರಬಹುದು, ಅಥವಾ 5 ಕಿ.ಮೀ. ಲೀಡ್ ಆಫ್ ಕೆನಾಲ್ ಕಾಮಗಾರಿ ಇರಬಹುದು, ಇವುಗಳ ಕೆಲಸದ ಗತಿಯನ್ನು ನೋಡಿದಾಗ 31ನೇ ಮೇ 2000 ಇಸವಿಯೊಳಗಾಗಿ ಈ ಎರಡೂ ಜಾಕವೆಲ್‌ಗಳ ಕೆಲಸ ಮುಗಿಸಲು ಸಾಧ್ಯವಾಗುತ್ತದೆಯೇ ಎಂಬ ಭಾವನೆ ಇವತ್ತು ವ್ಯಕ್ತವಾಗುತ್ತಿದೆ. ನಾನು ಹಲವಾರು ಬಾರಿ ಆ ಪ್ರದೇಶಕ್ಕೆ ಭೇಟಿ ನೀಡಿ ಕಾಮಗಾರಿಗಳನ್ನು ವೀಕ್ಷಿಸಿದ್ದೇನೆ; ಮಾನ್ಯ ನೀರಾವರಿ ಸಚಿವರು ಈ ಕಡೆಗೆ ಬಂದಾಗಲೆಲ್ಲಾ ನಾವು ಅನೇಕ ಸಲ 31ನೇ ಮೇ 2000 ಇಸವಿಯೊಳಗಾಗಿ ಮುಳವಾಡ ಏತ ನೀರಾವರಿಯ ಪ್ರಮುಖವಾದ ಕೆಲಸಗಳನ್ನಾದರೂ ಮಾಡಿ ಮುಗಿಸಬಹುದು ಎಂಬ ವಿನಂತಿಯನ್ನು ಮಾಡಿಕೊಂಡಿದ್ದೇವೆ. ಆದರೆ ಇದುವರೆಗೂ ಹನುಮಾಪುರ ಜಾಕವೆಲ್‌ನ ಕೆಲಸ ಆಗಿಲ್ಲ. ಅದಕ್ಕೆ ಎಸ್ಟಿಮೇಟ್ ತಯಾರಾದರೂ ಕೂಡ ಸರ್ಕಾರ ಅದಕ್ಕೆ ಮಂಜೂರಾತಿ ನೀಡಿಲ್ಲ. ಕೃಷ್ಣಾ ಭಾಗ್ಯ ಜಲ ನಿಗಮದಿಂದ ಇದಕ್ಕೆ ನಾವು ಹಣವನ್ನು ಕೊಡುತ್ತೇವೆಂದು ಸರ್ಕಾರ ಹೇಳಿದ್ದರೂ ಇದುವರೆಗೂ ಹಣ ಕೊಟ್ಟಿಲ್ಲ. ನಾನು ಮಾನ್ಯ ನೀರಾವರಿ ಸಚಿವರಿಗೆ ಒಂದು ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇವತ್ತಿನ ದಿವಸ ಬಿಟ್ಟು ಇನ್ನುಳಿದ 342 ದಿವಸಗಳಲ್ಲಿ ನಮ್ಮ ರಾಜ್ಯದ ಪಾಲಿನ 173 ಟಿಎಂಸಿಗಳಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಲು ತಾವು ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ರಾಜ್ಯದ ಜನತೆಯ ಮುಂದಿಡಬೇಕಾಗುತ್ತದೆ. ದಿನಕ್ಕೆ ಸುಮಾರು 40 ಕೋಟಿ ರೂ. ಗಳಂತೆ ಸುಮಾರು 10 ಸಾವಿರ ಕೋಟಿ ರೂ.ಗಳಷ್ಟು ಹಣ ಇನ್ನೂ ಇದಕ್ಕೆ ಖರ್ಚುಮಾಡಬೇಕಾಗುತ್ತದೆ ಎಂಬ ಅಂದಾಜನ್ನು ನಾವು ಮಾಡುತ್ತಿದ್ದೇವೆ. ಸಾಂಗಲಿ ಜಿಲ್ಲೆಯ ಮೈಸಾಳ ಎಂಬ ಪ್ರದೇಶದ ಸಮೀಪ ಮಹಾರಾಷ್ಟ್ರ ಸರ್ಕಾರದವರು ಒಂದು ಲಿಫ್ಟ್ ಇರಿಗೇಷನ್ ಸ್ಕೀಮ್ ಅನ್ನು ಮಾಡುತ್ತಿದೆ. ದಯವಿಟ್ಟು ಮಾನ್ಯ ನೀರಾವರಿ ಸಚಿವರು ಇದರ ಕಡೆಗೆ ಗಮನ ಹರಿಸಬೇಕು. ಇದು ಆರನೇ ಲಿಫ್ಟಿಗೆ ರೈತನ ಜಮೀನಿಗೆ ನೀರು ಹರಿಸುವಂತಹ ಒಂದು ಯೋಜನೆಯಾಗಿದೆ. ಬಹುಶ: ಮಹಾರಾಷ್ಟ್ರ ಸರ್ಕಾರ ಬಚಾವತ್ ತೀರ್ಪಿನ ಅನ್ವಯ ತನ್ನ ಪಾಲಿನ 550 ಟಿಎಂಸಿ ಗಳಷ್ಟು ನೀರನ್ನು ಉಪಯೋಗ ಮಾಡಿಕೊಂಡು, ಹೆಚ್ಚುವರಿಯಾಗಿ ಇಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದೆಯೋ ಎನ್ನುವಂತಹ ಸಂಶಯ ನಮ್ಮ ಭಾಗದ ಜನರಿಗೆ ಬರುತ್ತಿದೆ. ಮಹಾರಾಷ್ಟ್ರ ಸರ್ಕಾರದವರು ಮಾಡುತ್ತಿರುವ ಈ ನೀರಾವರಿ ಯೋಜನೆಯಿಂದಾಗಿ ಅದು ಬಚಾವತ್ ತೀರ್ಪನ್ನು ಉಲ್ಲಂಘಿಸಿದಂತಾಗುತ್ತಿದೆಯೇ ಎಂಬ ಬಗ್ಗೆ ಮಾನ್ಯ ನೀರಾವರಿ ಸಚಿವರು ದಯವಿಟ್ಟು ಗಮನಹರಿಸಬೇಕು. ಬಹಳ ಪ್ರಮುಖವಾದಂತಹ ವಿಷಯವೊಂದನ್ನು ನಮ್ಮ ರಾಜ್ಯ ಸರ್ಕಾರ ಲಿಖಿತವಾಗಿ ಸುಪ್ರೀಂಕೋರ್ಟಿನಲ್ಲಿ ಅಫಿಡವಿಟ್ ಮೂಲಕ ಸಲ್ಲಿಸಿದೆ. 173 ಟಿಎಂಸಿ ಗಳಷ್ಟು ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಆದರೆ ಕೇವಲ 155 ಟಿಎಂಸಿ ಗಳಷ್ಟು ಮಾತ್ರ ನಿಗದಿಗೊಳಿಸಿ ನಮಗೆ ಒಂದು ಮಧ್ಯಂತರ ತೀರ್ಪನ್ನು ಕೊಡಬೇಕೆನ್ನುವ ವಿನಂತಿಯನ್ನು ಕೋರ್ಟಿನಲ್ಲಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಈ ರೀತಿಯ ಹೇಳಿಕೆಗಳನ್ನು ಸರ್ಕಾರ ಏಕೆ ನೀಡಿತು? 173 ಟಿಎಂಸಿ ಗಳ ನೀರಿಗಿಂತ ಸುಮಾರು 18 ಟಿಎಂಸಿ ಗಳಷ್ಟು ನೀರನ್ನು ಕಡಿಮೆ ಪ್ರಮಾಣದಲ್ಲಿ ನಿಗದಿಗೊಳಿಸುವಂತೆ ಸರ್ಕಾರ ಏತಕ್ಕೆ ಕೋರ್ಟಿಗೆ ಅಫಿಡವಿಟ್

ಸಲ್ಲಿಸಿದೆ ಎಂಬುದನ್ನೂ ಸಹ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಒಂದು ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಈ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ಇದು ಉತ್ತರ ಕರ್ನಾಟಕದ ಜೀವನ್ಮರಣದ ಪ್ರಶ್ನೆ. ಒಂದು ನಿಮ್ಮ ಸರ್ಕಾರ ನೈರುತ್ಯ ರೈಲ್ವೆ ವಲಯವನ್ನು ಕಸಿದುಕೊಂಡಿದೆ. ನೈರುತ್ಯ ರೈಲ್ವೆ ವಲಯ ಆಗದಂತೆ ಎಲ್ಲಾ ಕಾರ್ಯತಂತ್ರಗಳನ್ನು ಮಾಡಿದಿರಿ. ಇದು ಇಡೀ ನಾಡಿನ ಜನತೆಗೆ ಗೊತ್ತಾಗಿದೆ. ಮುಳುವಾಡ ಏತ ನೀರಾವರಿಯಲ್ಲಿ ಮತ್ತು ಆಲಮಟ್ಟಿಯಲ್ಲಿ ಆಗಬಹುದಾದ ಕೃಷ್ಣ ಮೇಲ್ದಂಡೆ ಯೋಜನೆಯ ನೀರಿನ ಬಗ್ಗೆ ಸಹ ಅನ್ಯಾಯವಾಗದಂತೆ, ತಾವು ಏನು 1994ರ ಚುನಾವಣೆಯಲ್ಲಿ ಕೃಷ್ಣ ಕಾವೇರಿ ಮೇಲೆ ಆಣೆ ಇಟ್ಟು ಯಾವುದೇ ಸಂದರ್ಭದಲ್ಲಿ ಈ ನಾಡಿನ ಪಾಲನ್ನು ನಾವು ಉಳಿಸಿಕೊಳ್ಳುತ್ತೇವೆ. ಎನ್ನುವ ಭರವಸೆಯನ್ನು ಈ ನಾಡಿನ ಜನತೆಗೆ ಕೊಟ್ಟಿದ್ದೀರಿ. ಅದನ್ನು ಮರೆಯಬೇಡಿ. ಈ ಹಂತದಲ್ಲಿ ಬಹಳ ಅಂತಿಮ ಘಟ್ಟದಲ್ಲಿ ತಮ್ಮ ಜವಾಬ್ದಾರಿ ಹೆಚ್ಚಾಗಿದೆ ಎನ್ನುವಂತಹ ಭಾವನೆ ವ್ಯಕ್ತಪಡಿಸಿ ಆ ಭಾಗದ ಜನರ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಸನ್ಮಾನ್ಯ ಜೆ. ಹೆಚ್. ಪಟೇಲರ ಸರ್ಕಾರದ ಜೊತೆ ನೀರಾವರಿ ಸಚಿವರು ವಿಶೇಷ ಗಮನ ಕೊಟ್ಟು ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಒಂದು ಘಂಟೆಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 1.40ಕ್ಕೆ ಮುಂದೂಡಲ್ಪಟ್ಟು ಮತ್ತೆ ಒಂದು ಘಂಟೆ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3-10 ಗಂಟೆಗೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ್ ರೆಡ್ಡಿ ದೇಶಮುಖ್‌ಮುದನಾರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

+ **ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ)** : ಮಾನ್ಯ ಉಪಾಧ್ಯಕ್ಷರೆ, ಇವತ್ತು ನಾವು ಗೇಟಿನಿಂದ ಒಳಗಡೆಗೆ ಬರುವುದಕ್ಕಾಗುವುದಿಲ್ಲ. ಪಾಸ್ ಕೇಳುತ್ತಾರೆ. ನಾನು ಎಂ.ಎಲ್.ಎ. ಎಂದು ಹೇಳಿದರೂ ಒಳಗಡೆಗೆ ಬಿಡುವುದಿಲ್ಲ. ನಮಗೆ ಹೇಳಿಕೊಳ್ಳುವುದಕ್ಕೆ ನಾಚಿಕೆ ಆಗುತ್ತಿದೆ. ನಮಗೆ ಪಾಸ್ ಕೇಳುವುದಾದರೆ ಎಲ್ಲಾ ಎಂ.ಎಲ್.ಎ.ಗಳಿಗೆ ಪಾಸ್ ಕೊಟ್ಟುಬಿಡಿ. ಒಳಗೆ ಬರದ ಹಾಗೆ ಗೇಟಿನಲ್ಲಿ ಬಹಳ ತೊಂದರೆಯಾಗಿದೆ. ಕಾರ ಗೇಟ್ ಧಾಟಿ ಹೊರಕ್ಕೆ ಹೋದರೆ ಪುನಃ ಒಳಕ್ಕೆ ಬರುವ ಹಾಗಿಲ್ಲ. ತುಂಬಾ ಹಿಂಸೆಯಗುತ್ತಿದೆ. ನೀವು ಕಾನೂನು ರೀತಿಯಲ್ಲಿ ಮಾಡುತ್ತೀರಿ ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಅದಕ್ಕೆ ಕ್ರಮ ಬೇಕಲ್ಲವೇ? ಶಾಸಕ ಎಂದು ಹೇಳಿದರೂ ಬಿಡುವುದಿಲ್ಲ. ಪಾಸ್ ಬೇಕೆಂದು ಹೇಳುತ್ತಾರೆ. ನಮ್ಮ ಗುರುತಿನ ಚೀಟಿ ತೋರಿಸಿದರೂ ಪಾಸ್ ಬೇಕೆಂದು ಕೇಳುತ್ತಾರೆ. ಕೊನೆಯ ಪಕ್ಷ ಅಧಿವೇಶನ ಮುಗಿಯುವವರೆಗಾದರೂ ಎಲ್ಲಾ ಶಾಸಕರುಗಳ ಕಾರುಗಳಿಗೆ ಒಂದೊಂದು ಪಾಸ್ ಕೊಡಿ.

ಶ್ರೀ ಸಿ. ಬೈರೇಗೌಡ : ನಿಮಗೆ ಯಾರಿಗೂ ರಕ್ಷಣೆ ಬೇಡವೇ? ರಕ್ಷಣೆ ಕೊಡುವ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ.

ಶ್ರೀ ಬಿ.ಬಿ. ಶಿವಪ್ಪ : ಎಲ್ಲರಿಗೂ ರಕ್ಷಣೆ ಕೊಡಿ. ರಕ್ಷಣೆ ಬಗ್ಗೆ ನಮ್ಮದು ಆಕ್ಷೇಪಣೆ ಇಲ್ಲ. ರಕ್ಷಣೆ ಸರ್ಕಾರದ ಕಡೆಯಿಂದ ಕೊಡಲೇ ಬೇಕು. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ತಮಗೆಲ್ಲಾ ರಕ್ಷಣೆ ಇರಲಿ ಎಂದು ಮಾಡಿದ್ದೇವೆಯೇ ಹೊರತು ಬೇರೆ ಏನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಇಷ್ಟೊಂದು ಬಂದೋಬಸ್ತ್ ಮಾಡುವುದಕ್ಕೆ ಏನಾದರೂ ವಿಶೇಷವಾದಂಥ ಪರಿಸ್ಥಿತಿ ಉಂಟಾಗಿದೆಯೇ? ಎಲ್.ಟಿ.ಟಿ.ಇ ಯವರು ಏನಾದರೂ ಬಂದಿದ್ದಾರೆಯೇ? ಕಾರ್ಗಿಲ್‌ನಿಂದ ಉಗ್ರಗಾಮಿಗಳು ಏನಾದರೂ ಬಂದಿದ್ದಾರೆಯೇ ಅಥವಾ ಇನ್ಯಾರಾದರೂ ಉಗ್ರಗಾಮಿಗಳು ಸೇರಿಕೊಂಡಿದ್ದಾರೆಂಬ ಮಾಹಿತಿ ಸರ್ಕಾರಕ್ಕೆ ಬಂದಿದೆಯೇ? ಇವತ್ತು ಇಷ್ಟು ವಿಶೇಷವಾಗಿ ಸುತ್ತಲೂ ಎಂ.ಎಲ್.ಎ. ಎಂದು ಹೇಳಿದರೂ ಬಿಡುವುದಿಲ್ಲ, ಏಕೆ ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ? ಅಂಥದ್ದು ಏನಾದರೂ ಇದ್ದರೆ ನಮಗೆ ಹೇಳಿ. ಮಾಹಿತಿ ಆದರೂ ಕೊಡಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ನಾನು ಸುಮಾರು 1967ರಿಂದ ಈ ಸದನಕ್ಕೆ ಬರುತ್ತಿದ್ದೇನೆ. ನಾನು ನೋಡಿದ ಮಟ್ಟಿಗೆ ಇಷ್ಟೊಂದು ಪೋಲೀಸ್ ದಳದವರು ವಿಧಾನಸೌಧದ ಸುತ್ತ ಇರುವುದು ನೋಡಿಲ್ಲ. ನಾನು ಇಲ್ಲಿ ಬೆಳಿಗ್ಗೆ ತಿರುಗಾಡಲಿಕ್ಕೆ ಬರುತ್ತೇನೆ. ಬೆಳಿಗ್ಗೆ ಸುಮಾರು 6 ರಿಂದ 6-30 ಗಂಟೆಯ ವೇಳೆಗೆ 8 ಪೊಲೀಸ್ ವಾಹನಗಳು ನಿಂತಿರುತ್ತವೆ. ಈಗಂತೂ ಇಲ್ಲಿಗೆ ಬರುವಾಗ ಎಲ್ಲಾ ಕಡೆ ಗೋಡೆ ನಿರ್ಮಾಣವಾಗಿದೆ. ಯಾರೂ ಇಲ್ಲಿ ಬರುವ ಹಾಗಿಲ್ಲ. ಈ ಸದನವು ಪ್ರಜಾಪ್ರಭುತ್ವದ ಒಂದು ಅಂಗ. ಈ ದೇಶದಲ್ಲಿ ಮಿಲಿಟರಿ ಪ್ರಭುತ್ವ ಏನೂ ಇಲ್ಲ. ದಂಡಿನ ಆಳ್ವಿಕೆ ಇಲ್ಲ. ಮಿಲಿಟರಿ ಜನ ಏನೂ ಇಲ್ಲಿ ಇಲ್ಲ. ನಾವು ಇಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಬಂದಿದ್ದೇವೆ. ಪೊಲೀಸ್ ಮತ್ತು ಗುಪ್ತದಳದವರು ಮೊದಲನೆ ಮಹಡಿಯಿಂದ ಮೂರನೇ ಮಹಡಿವರೆಗೆ ಸುಮ್ಮನೆ ಸುತ್ತುತ್ತಲೇ ಇದ್ದಾರೆ. ಅದಲ್ಲದೆ ನಾವು ಮೆಟ್ಟಿಲು ಹತ್ತಿ ಬರುವಾಗ ಅಕ್ಕಪಕ್ಕ ಎರಡೂ ಕಡೆ ಪೊಲೀಸ್ ಇರುತ್ತಾರೆ. ಇದು ಯಾರ ರಕ್ಷಣೆಗಾಗಿ? ನನಗೆ ತಿಳಿದಿರುವ ಹಾಗೆ ಒಂದೇ ಒಂದು ಚಳುವಳಿ ಅದು ಬಡಪಾಯಿಗಳಾದ ದೇವಸ್ಥಾನದ ಪೂಜಾರಿಗಳದ್ದು.

ದೇವರ ಪೂಜೆ ಮಾಡುವವರು, ಎಂದೂ ಜಗಳಕ್ಕೆ ಹೋಗದವರು, ಬನ್ನಪ್ಪ ಪಾರ್ಕ್‌ನಲ್ಲಿ ಸತ್ಯಾಗ್ರಹ ಮಾಡುವವರು ಕುಳಿತಿದ್ದಾರೆ. ಅವರು ವಿಧಾನಸೌಧದ ಒಳಕ್ಕೆ ಬರುವ ಮಟ್ಟದಲ್ಲಿರಲಿಲ್ಲ. ಪ್ರಶ್ನೆ ಏನಾಗಿದೆಯೆಂದರೆ, ತಮಗೆ ಗೊತ್ತಿರುವ ಹಾಗೆ, ಗೋಪಾಲಗೌಡ ಸರ್ಕಲ್‌ನಲ್ಲಿ ಹಿಂದೆ ಸತ್ಯಾಗ್ರಹ ಮಾಡುತ್ತಿದ್ದೆವು. ಈ ಸತ್ಯಾಗ್ರಹವನ್ನು ಕಿತ್ತು ಹೊರಗಡೆ ಹಾಕಿದರು. ಪ್ರಾಮಾಣಿಕವಾಗಿ ಈ ರಾಜ್ಯಕ್ಕೆ, ರಾಜ್ಯದ ಜನರಿಗೆ ಏನೇನು ಆಗಬೇಕೆಂಬ ಬೇಡಿಕೆಗಳ ಬಗ್ಗೆ ಕೇಳುವ ಅನೇಕ ಸಂಘ-ಸಂಸ್ಥೆಗಳವರು, ರಾಜಕೀಯ ಪಕ್ಷದವರು ಸತ್ಯಾಗ್ರಹ ಮಾಡುತ್ತಿದ್ದರು. ಅದನ್ನು ಹೊರಗಡೆ ಹಾಕಿದರು. ಕಬ್ಬನ್ ಉದ್ಯಾನವನದ ಸುತ್ತ ದೊಡ್ಡ ಗೋಡೆಯನ್ನು ನಿರ್ಮಾಣ ಮಾಡಿ, ಒಳಗಡೆ ಹೋಗುವುದಕ್ಕೆ ಟಿಕೆಟ್ ಬೇರೆ ವ್ಯವಸ್ಥೆ ಮಾಡುತ್ತಿದ್ದೀರಿ. ಇದೇನು ಸರ್ಕಾರವೆ? ಇದೇನು ಕತೆ? ಇದೇನು ಮಿಲಿಟರಿ ಪ್ರಭುತ್ವವೆ? ನನಗೆ ಅರ್ಥವಾಗುತ್ತಿಲ್ಲ. ಇಷ್ಟೊಂದು ಪೋಲೀಸರನ್ನು ಏಕೆ ಇಟ್ಟಿದ್ದೀರಿ? ಪೋಲೀಸ್ ಖಾತೆಯ ಮಂತ್ರಿಗಳನ್ನು ಕೇಳಬೇಕು. ಉಪ ಮುಖ್ಯಮಂತ್ರಿಯವರಿಗೆ ಗೊತ್ತಿದ್ದರೆ ಹೇಳಬೇಕು. ಕಾರಣವೇನು? ಉದ್ದೇಶವೇನು?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಎಂಎಲ್‌ಎಗಳಿಗೆ ಆ ತರಹ ತೊಂದರೆ ಯಾಗುವುದಕ್ಕೆ ಸಾಧ್ಯವಿಲ್ಲ. ಇದು ಮಿಲಿಟರಿ ಸರ್ಕಾರವಲ್ಲ. ಜನಪರ ಸರ್ಕಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮದು ಜನಪರ ಸರ್ಕಾರವೆಂದು ಹೇಳುತ್ತಿದ್ದೀರಿ. ಏಕೆ ಇಷ್ಟೊಂದು ಪೋಲೀಸರು ?

ಶ್ರೀ ಸಿದ್ಧರಾಮಯ್ಯ : ನಿಮಗೆ ರಕ್ಷಣೆ ಇರಲೆಂದು ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲು ಏನೂ ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ : ನಾನು ಅದರ ಬಗ್ಗೆ ಮಾತನಾಡುತ್ತೇನೆ. ವಿಧಾನಸಭೆ ನಡೆಯುವ ಸಂದರ್ಭದಲ್ಲಿ ಅನೇಕ ಪ್ರತಿಭಟನೆಗಳು, ಚಳವಳಿಗಳು ನಡೆಯುತ್ತಿರುತ್ತವೆ. ಇದೊಂದು ಕಾರಣ. ಸಾರ್ವಜನಿಕರು ಮತ್ತು ವಿಧಾನಸೌಧದೊಳಗಡೆ ಜನ ಬರುವುದು, ಹೋಗುವುದು ಇರುತ್ತದೆ. ಅದನ್ನು ನಿಯಂತ್ರಣ ಮಾಡಲು ಸ್ವಲ್ಪ ಪೋಲೀಸರನ್ನು ಇಟ್ಟಿದ್ದಾರೆಯೇ ಹೊರತು, ಶಾಸಕರನ್ನು ನಿಯಂತ್ರಣ ಮಾಡುವುದಕ್ಕಲ್ಲ.

ಶ್ರೀ ವಾಟಳ್ ನಾಗರಾಜ್ : ಸುತ್ತ ಪೋಲಿಸ್ ಗೋಡೆ ನಿರ್ಮಾಣವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿಶೇಷವೇನಾದರೂ ಇದೆಯೇ?

ಶ್ರೀ ಸಿದ್ಧರಾಮಯ್ಯ : ಏನೂ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಶಾಸಕರ ಸಂಖ್ಯೆ ಕಡಿಮೆಯಾಗಿರುವುದನ್ನು ನೋಡಿದರೆ ಅದೊಂದು ಕಾರಣವಿರಬಹುದೆ?

ಶ್ರೀ ಸಿದ್ಧರಾಮಯ್ಯ : ನೀವೆಲ್ಲಾ ಹೇಗೆ ಒಳಗಡೆ ಬಂದಿರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಷ್ಟಪಟ್ಟು ಒಳಗಡೆ ಬಂದಿದ್ದೇವೆ.

ಶ್ರೀ ಸಿದ್ಧರಾಮಯ್ಯ : ನಿಮ್ಮನ್ನು ಅವರು ಕೇಳಿಯೇ ಇಲ್ಲ. ನಿಮ್ಮನ್ನು ಅವರು ಕೇಳುತ್ತಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೇಳಿದ್ದಾರೆ. ಕೌಜಲಗಿಯವರನ್ನು ಒಳಗೆ ಬಿಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿಗೆ ಬರುವ ಹಿರಿಯ ಪತ್ರಕರ್ತರು ತಮ್ಮ ಗುರುತು ಪತ್ರ ತೋರಿಸಿದರೂ ತಡೆಹಿಡಿದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಕೌಜಲಗಿಯವರು ಮಾಜಿ ಸಭಾಧ್ಯಕ್ಷರು ಅವರು ಕಾರಿನಲ್ಲಿ ಬಂದಾಗ, ನಾನು ಎಂಎಲ್ಎ ಎಂದು ಹೇಳಿದರೂ, ಇಲ್ಲ ಸಾರ್, ಕಾರನ್ನು ತಿರುಗಿಸಿರಿ, ಆಮೇಲೆ ಹೇಳಿ ಎಂದರು. ಕಾರು ತಿರುಗಿಸಿ ಎಂದರೇನು ಅರ್ಥ? ಯಾವುದೋ ಕಾರಣವಿರಬಹುದು. ನಾವು ಅಡ್ಡಿ ಬರುವುದಿಲ್ಲ. ಎಂಎಲ್ಎಗಳಿಗೆ ಕಾರ್ ಪಾಸ್ ಆದರೂ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಕಾರು ಪಾಸ್ ಕೊಟ್ಟಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಪಾಸ್ ಕೊಟ್ಟಿದ್ದಾರೆ. ಆದರೆ, ನಾವು ಆ ಕಾರನ್ನೇ ತರಬೇಕು.

ಶ್ರೀ ಆರ್. ಶ್ರೀನಿವಾಸ : ನಾವು ಊರಿನಿಂದ ಬರುತ್ತಿದ್ದೇವೆ. ನಮ್ಮನ್ನು ಯಾರೂ ಕೇಳಲಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರಾಮುಖ್ಯವಾದ ವಿಷಯವನ್ನು ನಾನು ಉಪಮುಖ್ಯ ಮಂತ್ರಿಯವರನ್ನು ಕೇಳುತ್ತೇನೆ. ಏನೆಂದರೆ, ಏಕೆ ಇಲ್ಲಿ ಸದಸ್ಯರು ಬರುತ್ತಿಲ್ಲ. ಅದನ್ನು ಸ್ಪಷ್ಟಪಡಿಸಬೇಕು. ಒಂದೆರಡು ಗಂಟೆ ಊಟ ಮಾಡುವುದಕ್ಕೆ ಸಾಧ್ಯವೆ?

(ಗೊಂದಲ)

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) :- ಮಾನ್ಯ ಸದಸ್ಯರು ಎಷ್ಟು ಜನ ಬಂದಿದ್ದಾರೆ. ಉಳಿದವರೂ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಯಾವಾಗ ಬರುತ್ತಾರೆ ?

ಶ್ರೀ ಸಿ. ಬೈರೇಗೌಡ :- ಸದನಕ್ಕೆ ಬರುವವರನ್ನು ತಡೆದರೆಂದು ಹೇಳುತ್ತಾರೆ. ಪ್ರೇಕ್ಷಕರ ಗ್ಯಾಲರಿಯಲ್ಲಿ ಎಷ್ಟು ಜನ ಕುಳಿತಿದ್ದಾರೆ ನೋಡಿ. ಅವರೆಲ್ಲಾ ಹೇಗೆ ಬಂದರು ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿರ್ಬಂಧವಿದೆ. ನಿಮಗೆ ಕಣ್ಣು ಕಾಣುವುದಿಲ್ಲ. ಮೇಲ್ಗಡೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಯಾವಾಗಲೂ ಜನರು ತುಂಬಿರುತ್ತಿದ್ದರು. ಪ್ರೇಕ್ಷಕರನ್ನೇ ಈಗ ಒಳಗಡೆ ಬಿಡುತ್ತಿಲ್ಲ.

(ಗೊಂದಲ)

ಶ್ರೀ ಆರ್. ಶ್ರೀನಿವಾಸ್ : ಸರ್ಕಾರದ ಮೇಲೆ ಆಪಾದನೆ ಮಾಡಬಾರದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಳಗಡೆ ಬರುವ ಸಾರ್ವಜನಿಕರನ್ನು ತನಿಖೆ ಮಾಡಿ, ತಾವು ಸುತ್ತ ನೋಡಿ ಗೊತ್ತಾಗುತ್ತದೆ. ಇದು ಎಲ್ಲಾದರೂ ಉಂಟೆ?

ಶ್ರೀ ಸಿದ್ದರಾಮಯ್ಯ : ಪಾಸ್ ಇಷ್ಯೂ ಮಾಡುವವರು ವಿಧಾನಮಂಡಲದವರು. ನಾವು ಎಂಟ್ರಿ ಮಾಡುತ್ತೇವೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಇಲ್ಲಿ ರೆಗ್ಯುಲೇಟ್ ಮಾಡುವವರು ಮಾಡುತ್ತಾರೆ. ನೀವು ಟೆಲಿಫೋನ್ ಎಕ್ಸ್‌ಛೇಂಜ್ ಹತ್ತಿರವೇ ತಡೆಯುತ್ತೀರಿ. ಎಲ್ಲರನ್ನೂ ತಡೆದು, ಚೆಕ್ ಮಾಡಿಯೇ ಒಳಗೆ ಬಿಡುವುದು.

ಶ್ರೀ ಸಿದ್ದರಾಮಯ್ಯ :- ನೋಡುವುದಕ್ಕೆ ಬರುವ ಯಾರನ್ನೂ ತಡೆಯುತ್ತಿಲ್ಲ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ :- ಸರ್ಕಾರದ ಮೇಲೆ ಆಪಾದನೆ ಮಾಡಬೇಡಿ. ನಮ್ಮನ್ನು ಯಾರೂ ತಡೆದಿಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ :- ನನ್ನದೊಂದು ಸಲಹೆ. ನಿಮಗೇನು ಸೆಕ್ಯುರಿಟಿ ಬೇಕೋ ಮಾಡಿಕೊಳ್ಳಿ. ಇಲ್ಲಿ ಎರಡು ತೊಂದರೆಗಳಾಗುತ್ತಿವೆ. ಸುಮಾರು 600-700 ಪೋಲೀಸರು ಬೆಂಗಳೂರಿನಿಂದ 20-25 ಪೋಲೀಸ್ ಸ್ಟೇಷನ್‌ಗಳಿಂದ ಬರುತ್ತಾರೆ. ಪೋಲೀಸ್ ಸ್ಟೇಷನ್‌ಗಳಲ್ಲಿ

ಇವತ್ತು ಕೆಲಸ ಸಫರ್ ಆಗುತ್ತದೆ. ನನ್ನ ಪ್ರಕಾರ, ವಿಧಾನಸೌಧಕ್ಕೆ ಸೆಕ್ಯುರಿಟಿ ಗಾರ್ಡ್ಸ್ ಕೊಡಿ. ಅವರು ಶಾಸಕರನ್ನು, ಅಧಿಕಾರಿಗಳನ್ನು ಗುರುತಿಸುವುದಕ್ಕೆ ಸಾಧ್ಯವಾಗುತ್ತದೆ. so that work in the police Stations will not suffer.

ಇದರ ಬಗ್ಗೆ ಯೋಚಿಸಿ.

ಶ್ರೀ ಸಿದ್ದರಾಮಯ್ಯ : ಪೋಲೀಸ್ ಸ್ಟೇಷನ್‌ನಲ್ಲಿರುವ ಪೋಲೀಸರು ಬೇರೆಯವರು. ಇಲ್ಲಿರುವವರು ಬೇರೆ ಪೋಲೀಸರು.

ಶ್ರೀ ಎಸ್. ಸುರೇಶ್‌ಕುಮಾರ : ಬೇರೆಯಲ್ಲ. ಇದೇ ಇನ್ಸ್‌ಪೆಕ್ಟರ್, ಅದೇ ಎಸ್‌ಐ, ಎಎಸ್‌ಐ ಇರುವುದು. ಪ್ರತಿದಿವಸ ಒಬ್ಬೊಬ್ಬ ಎಸಿಪಿಯನ್ನು ಇನಛಾರ್ಜ್‌ಗೆಂದು ಇಲ್ಲಿ ಕರೆಯುತ್ತಾರೆ.

ಶ್ರೀ ಸಿದ್ದರಾಮಯ್ಯ : ಇಲ್ಲಿ ವಿಧಾನಸೌಧದ ಪೋಲೀಸರಿರುತ್ತಾರೆ. ಪೋಲೀಸ್ ಸ್ಟೇಷನ್‌ಗಳಲ್ಲಿ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ.

ಶ್ರೀ ಎಸ್.ಆರ್. ಲಕ್ಷಯ್ಯ : ಸಭೆಯೊಳಗೆ ಬೆಂಕಿ ಹಚ್ಚುವುದಕ್ಕೆ ಹೋಗುತ್ತೀರಿ. ಪ್ರೊಟೆಕ್ಷನ್ ಬೇಕು ತಾನೆ? ವಿಧಾನಸೌಧದಲ್ಲಿ ಕುಳಿತುಕೊಂಡು ಬೆಂಕಿ ಹಚ್ಚುತ್ತೇವೆಂದರೆ. ಅದನ್ನು ಹೊರಗಡೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸದನಕ್ಕೆ ಬೆಂಕಿ ಹಚ್ಚುವುದಕ್ಕೆ ಹೋಗಲಿಲ್ಲ. ಇವರು ಕನ್ನಡಕ್ಕೆ ಅನ್ಯಾಯ ಮಾಡಿರುವುದನ್ನು ಪ್ರತಿಭಟಿಸಿ ಇಂಗ್ಲೀಷನ್‌ನಲ್ಲಿದ್ದ ರಾಜ್ಯಪತ್ರವನ್ನು ಸುಡುವುದಕ್ಕೆ ಹೋದೆ ಅಷ್ಟೆ.

ಶ್ರೀ ಸಿದ್ದರಾಮಯ್ಯ : * * * ಎಂದರೇನರ್ಥ ?

ಶ್ರೀ ವಾಟಾಳ್ ನಾಗರಾಜ್ : ನೀವು ಯಾವಾಗಲೂ ಕನ್ನಡವನ್ನು ಆಡಳಿತ ಭಾಷೆ ಎಂದು ಹೇಳಿ, ಅದನ್ನು ಜಾರಿಗೆ ತರದೆ ಇರುವುದರಿಂದ ಇಂಗ್ಲೀಷ್‌ನಲ್ಲಿದ್ದ ರಾಜ್ಯಪತ್ರವನ್ನು ಸುಡಲು ಹೋದೆನೇ ವಿನಃ ಸದನಕ್ಕೆ ಬೆಂಕಿ ಹಚ್ಚಲು ಅಲ್ಲ.

(ಉಪಾಧ್ಯಕ್ಷರು : ಆಯಿತು ಆ ಪದವನ್ನು ಕಡತದಿಂದ ತೆಗೆದು ಹಾಕಿದ್ದೇನೆ)

ಶ್ರೀ ಎಸ್. ಸುರೇಶ್ ಕುಮಾರ್ : ಕಡತದಿಂದ ಮಾತ್ರವಲ್ಲ, ಆಡಳಿತದಿಂದಲೇ ತೆಗೆದು ಹಾಕಿ. ನಮ್ಮದು, ನಿಮ್ಮದು ಭ್ರಷ್ಟಾಚಾರ ಇಲ್ಲ.

ಶ್ರೀ ಸಿದ್ದರಾಮಯ್ಯ : ನಿಮಗೆ ಭ್ರಷ್ಟಾಚಾರ ಹೋಗಬೇಕೆಂಬ ಬಗ್ಗೆ ಎಷ್ಟು ಕಳಕಳಿ ಇದೆಯೋ, ಅದಕ್ಕಿಂತ ಹೆಚ್ಚು ಕಳಕಳಿ ನಮಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) : ಅಧ್ಯಕ್ಷರೆ, ಇವತ್ತು ಬಹಳ ಪ್ರಾಮುಖ್ಯವಾದಂಥ ವಿಚಾರದ ಬಗ್ಗೆ ನಿಲುವಳಿ ಸೂಚನೆಯನ್ನು ನಮ್ಮ ನಾಯಕರು ಪ್ರಸ್ತಾಪಿಸಿದ್ದಾರೆ. ಇದರ ಅನೇಕ ವಸ್ತು ಸ್ಥಿತಿಯ ಪ್ರಕಾರಗಳನ್ನು ವರ್ಣಿಸಿ ವಿಶ್ಲೇಷಿಸಿ ಭಾಷಣ ಮಾಡಿ ಅದರ ಮೇಲೆ ವಿಶೇಷ ಬೆಳಕನ್ನು ಚೆಲ್ಲಿದ್ದಾರೆ. ಬಚಾವತ್ ಆಯೋಗದ ಪ್ರಕಾರ ಕೃಷ್ಣಾ ನದಿ ನೀರನ್ನು ಕರ್ನಾಟಕ ರಾಜ್ಯ 2000 ಇಸವಿಯೊಳಗೆ ಏನು ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅದರಲ್ಲಿ ರಾಜ್ಯ ಸಂಪೂರ್ಣವಾಗಿ ವಿಫಲವಾಗಿದೆ. ಈ ವಸ್ತುಸ್ಥಿತಿಯನ್ನು ನಾವು ಬದಲಾವಣೆ ಮಾಡತಕ್ಕಂಥ ಸ್ಥಿತಿಯಲ್ಲಿಲ್ಲ. ಇದರ ಅರ್ಥ ಏನೆಂದರೆ, ನಾವು 21ನೇ ಶತಮಾನಕ್ಕೆ ಕಾಲು ಇಡುವಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅತಂತ್ರವಾಗಿ

* * * ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಅತ್ಯಂತ ದುರ್ಬಲವಾಗಿ ಪ್ರವೇಶ ಮಾಡತಕ್ಕಂಥ ಪರಿಸ್ಥಿತಿಗೆ ನಮ್ಮನ್ನು ನಾವು ತಂದಿಟ್ಟಿದ್ದೇವೆ. ಆದುದರಿಂದ ಇಂಥ ವಿಚಾರವನ್ನು ವಿಶ್ಲೇಷಣೆ ಮಾಡುತ್ತಾ ಹೋದಾಗ ನಮಗೆ ಇಂಥ ಪರಿಸ್ಥಿತಿ ಬರಬಾರದು ಎಂದು ನಮ್ಮ ಸರ್ಕಾರ ಇರುವಾಗ ಕೃಷ್ಣಾ ಜಲ ಭಾಗ್ಯ ನಿಗಮ ಎನ್ನುವ ಸಂಸ್ಥೆಯನ್ನು ಪ್ರಾರಂಭ ಮಾಡಿದೆವು. ಇದು ಇನ್ ಕಾರ್ಪೋರೇಟ್ ಆಗಿದ್ದು ಮೇ 1994ರಲ್ಲಿ. ಅದಕ್ಕಿಂತಲೂ ಮೊದಲೇ ವಿಶ್ವಬ್ಯಾಂಕಿನ ಸಹಾಯ ಇದ್ದಾಗ ವಾಷಿಂಗ್‌ಟನ್‌ಗೆ ಹೋಗಿ ವಿಶ್ವಬ್ಯಾಂಕಿನಲ್ಲಿ ಈ ಸಂಸ್ಥೆ ಪ್ರಾರಂಭ ಮಾಡಲು ಕ್ಲಿಯೆರೆನ್ಸ್ ತೆಗೆದುಕೊಂಡೆವು. ಕೇಂದ್ರ ಸರ್ಕಾರದಲ್ಲಿ ಕೂಡ ಕ್ಲಿಯೆರೆನ್ಸ್ ತೆಗೆದುಕೊಂಡೆವು. ಏಕೆಂದರೆ ಇದು ಇಡೀ ದೇಶದಲ್ಲಿ ಇದೊಂದು ಪ್ರಥಮ ಪ್ರಯೋಗ. ಏಕೆಂದರೆ, ಯಾವುದೇ ಒಂದು ರಾಜ್ಯ ಸರ್ಕಾರ ಮಾರುಕಟ್ಟೆಯಿಂದ ಸಾಲ ತೆಗೆಯಬೇಕಾದರೆ ಪ್ಲಾನಿಂಗ್ ಕಮೀಷನ್‌ನಿಂದ ಒಂದು ಲಿಮಿಟೇಷನ್ ಇತ್ತು. ಆಗಿನ ಹಣಕಾಸು ಮಂತ್ರಿಗಳಾದ ಮಾನ್ಯ ಮನಮೋಹನ ಸಿಂಗ್ ಅವರ ಜೊತೆಯಲ್ಲಿ ಮಾತನಾಡಿ, 2000 ಇಸವಿಯೊಳಗೆ ನೀರನ್ನು ಉಪಯೋಗ ಮಾಡಿಕೊಳ್ಳುವ ಜವಾಬ್ದಾರಿ ನಮ್ಮ ರಾಜ್ಯಕ್ಕೆ ಇರುವ ಕಾರಣ ಇಂಥದೊಂದು ನಿಗಮ ಮಾಡಿದರೆ ಸಾಲ ಎತ್ತುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾವು ಹೇಳಿದಾಗ ಕೇಂದ್ರ ಸರ್ಕಾರ ಒಪ್ಪಿಕೊಂಡಿತು. ಇದರ ಜೊತೆಗೆ ಜಾಗತಿಕ ಬ್ಯಾಂಕ್ ಕೂಡ ಒಪ್ಪಿದ ಮೇಲೆ ಈ ಕೃಷ್ಣಾ ಜಲ ಭಾಗ್ಯ ನಿಗಮ ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂತು. ಇದರ ಪ್ರಥಮ ಅಧ್ಯಕ್ಷ ಕೂಡ ನಾನು ಆಗಿದ್ದೆ. ಈ ನಿಗಮದ ಉದ್ದೇಶ ಏನಿತ್ತು ಎಂದು ಹೇಳುವುದಾದರೆ ಅಂದಿನ ಪ್ರೊಸೀಡಿಂಗ್ಸ್ ನೋಡಿದರೆ ಗೊತ್ತಾಗುತ್ತದೆ. ನಿಗಮದಿಂದ ಹಣ ಎತ್ತಿದ್ದರೆ ನಮ್ಮ ಬಜೆಟ್ ಏನು ಇದೆ, ಅದು ಕಡಿಮೆ ಆಗಬಾರದು. ಕೃಷ್ಣಾ ಜಲ ಭಾಗ್ಯ ನಿಗಮದ ವ್ಯವಸ್ಥೆ ಸರ್ಕಾರ ಕೃಷ್ಣಾ ಜಲಾನಯಕ್ಕೆ ಕೊಡತಕ್ಕಂಥ ಹಣಕ್ಕೆ ಪೂರಕವಾಗಿರಬೇಕೇ ಹೊರತು ಇದಕ್ಕೆ ಪರ್ಯಾಯವಾಗಿರಬಾರದು.

It should not substitute the funding by the State Government It was very clear. It is only to mobilise the additional resources.

ಇದೇ ಉದ್ದೇಶ ನಮ್ಮದಾಗಿತ್ತು.

ಬಜೆಟರಿ ಸಪೋರ್ಟನ್ನು ನಿಲ್ಲಿಸಿ ಜಲಭಾಗ್ಯ ನಿಗಮದಿಂದ ಸಾಲ ತೆಗೆದುಕೊಂಡೇ ಮಾಡಬೇಕು ಎಂದು ಅದರ ಉದ್ದೇಶ ಇರಲಿಲ್ಲ. ಈ ವಿಷಯವನ್ನು ನಾನು ಅನೇಕ ಸಾರಿ ಪ್ರಸ್ತಾಪಿಸಿದ್ದೇನೆ. ಈಗ ಏನಾಗಿದೆ ಎಂದರೆ ಜಲಭಾಗ್ಯ ನಿಗಮ ಬಂತು, ಮಾರುಕಟ್ಟೆಯಿಂದ ಸಾಲ ಎತ್ತುವುದಕ್ಕೆ ಪ್ರಾರಂಭ ಮಾಡಿತು. ಬಜೆಟರಿ ಸಪೋರ್ಟ್ ನಿಂತು ಹೋಯಿತು. ಕೊನೇಪಕ್ಷ ಏನು ಸಿಬ್ಬಂದಿಗೆ ಸಂಬಳ ಕೊಡುತ್ತೇವೆ, ಬಡ್ಡಿಯನ್ನು ಕೊಡುತ್ತೇವೆ, ಇದನ್ನಾದರೂ ಕೂಡ ನೀವು ಬಜೆಟರಿ ಸಪೋರ್ಟ್ ಕೊಡುತ್ತಿದ್ದರೆ ಇವತ್ತು ಇಂಥ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಸಾವಿರಾರು ಕೋಟಿ ರೂಪಾಯಿಗಳು ಎಂದು ಹೇಳುತ್ತಾರಲ್ಲಾ ಅದರಲ್ಲಿ ಬಡ್ಡಿ ಸೇರಿದೆ, ಇದರಲ್ಲಿ ನಾನ್‌ಪ್ಲಾನಿಂಗ್ ಎಕ್ಸ್‌ಪೆಂಡಿಚರ್. ಸಂಬಳ ಇದು ಎಲ್ಲಾ ಸೇರಿ ನೆಟ್ ಎಷ್ಟು ಇದೆ ಎಂದರೆ ಒಟ್ಟು ಖರ್ಚು ಮಾಡಿದ್ದು ಎಷ್ಟು ಎಂದರೆ, 1997-98ನೇ ಸಾಲಿನಲ್ಲಿ ಯು.ಕೆ.ಪಿ.ಗಾಗಿ 588 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. 1998-99 ನೇ ಸಾಲಿನಲ್ಲಿ 567ಕೋಟಿ ರೂಪಾಯಿ ಖರ್ಚುಮಾಡಿದ್ದೀರಿ. ಅಂದರೆ ಎರಡು ವರ್ಷದಲ್ಲಿ 1150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದರೆ ಇವರು ಎಂಟು ಸಾವಿರ ಕೋಟಿ ಖರ್ಚು ಮಾಡಿದ್ದೇವೆ, ಆರು ಸಾವಿರ ಕೋಟಿ ಖರ್ಚು ಮಾಡಿದ್ದೇವೆಂದು ಅಂಕಿ-ಅಂಶಗಳನ್ನು ಕೊಡುತ್ತಾರೆ. ಕೃಷ್ಣಾ ಜಲ ಭಾಗ್ಯ ನಿಗಮದಿಂದ ತಾವೇನು ನಿರೀಕ್ಷೆ ಮಾಡುತ್ತೀರಿ, ಅದನ್ನು ನೂರಕ್ಕೆ

ನೂರು ಭಾಗ ಯು.ಕೆ.ಪಿ. ವರ್ಕ್ಸ್‌ಗೆ ಯೂಸ್ ಮಾಡಲಿಲ್ಲ. ನಿಮ್ಮ ರೆಕಾರ್ಡ್ಸ್‌ದಿಂದ ಹೇಳುವುದಾದರೆ 448 ಕೋಟಿ ರೂಪಾಯಿ ಕೇವಲ ಬಡ್ಡಿಗಾಗಿಯೇ ಕೊಡುತ್ತೀರಿ, ನಾನು ಇದನ್ನು ಪೂರ್ತಿ ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ಹತ್ತಿರ ಕೂಡ ಎಲ್ಲಾ ಮಾಹಿತಿ ಇದೆ. 1132.66 ಕೋಟಿ ರೂಪಾಯಿ ವೆಚ್ಚ ಇದ್ದರೆ ಅದರಲ್ಲಿ 448 ಕೋಟಿ ರೂಪಾಯಿ ಬಡ್ಡಿಯ ರೂಪದಲ್ಲಿದೆ. ಇದರಲ್ಲಿ ಪುನಃ ಸಂಬಳಕ್ಕಾಗಿ, ಆ ವರ್ಕ್ಸ್‌ನಲ್ಲಿ ಸ್ಯಾಲರಿ ಬರುತ್ತದೆ, ನಾನ ಪ್ಲಾನಿಂಗ್ ಎಕ್ಸ್‌ಪೆಂಡಿಚರ್ ಬಂತು, ಎಲ್ಲಾ ಕೂಡ ಇದರಲ್ಲಿ ಬರುತ್ತದೆ. 1999-2000ನೇ ಸಾಲಿಗೆ ಖರ್ಚು ಮಾಡಲಿಕ್ಕೆ ಹಣ ಸಿಗತಕ್ಕಂಥದ್ದು From 1997-98 to 1999-2000, It is only Rs. 550 Cores to Rs. 600 Crores.

ಅಂದರೆ ಯು.ಕೆ.ಪಿ.ಗೆ ಸರಾಸರಿ ನೀವು ಖರ್ಚು ಮಾಡುವುದು ಎಷ್ಟು ಎಂದರೆ 550 ಕೋಟಿ. ಹಿಂದೆ ಇರುವುದಕ್ಕೆ ಈಗ ಇರುವುದಕ್ಕೆ ಏನು ವ್ಯತ್ಯಾಸ ಬಂತು? ನೀವು ಕೇವಲ ಘೋಷಣೆ ಮಾಡಿದರೆ ಅಲ್ಲಿ ಕೆಲಸವಾಗುವುದಿಲ್ಲ. ಇದೊಂದು ಶತಮಾನದ ದುರಂತ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಸರ್ಕಾರ ಏನು ಮಾಡಿದೆ ಇದೊಂದು ಹಿಮಾಲಯನ್ ಬ್ಲಂಡರ್ ಈ ನಾಡಿನ ಜನರಿಗೆ ಹಾಗೂ ಈ ನಾಡಿಗೆ ಈ ಶತಮಾನದ ಅತ್ಯಂತ ದೊಡ್ಡ ದುರಂತ ಎಂದು ನಾನು ಹೇಳಬಯಸುತ್ತೇನೆ. ಕನ್ನಡ ನಾಡಿನ ಜನರಿಗೆ ಇದಕ್ಕಿಂತ ದೊಡ್ಡ ದ್ರೋಹ ನೀವು ಆಲೋಚನೆ ಮಾಡುವುದಕ್ಕೆ ಕೂಡ ಸಾಧ್ಯವಾಗುವುದಿಲ್ಲ. ಇಷ್ಟೊಂದು ದೊಡ್ಡ ದ್ರೋಹವನ್ನು ನೀವು ಮಾಡಿದಿರಿ. ಇದರಿಂದ ನಮ್ಮ ಉದ್ದೇಶ ಸಫಲವಾಗಲಿಲ್ಲ. ಏಕೆಂದರೆ, ನೀವು ಸರಾಸರಿ ಆರು ಸಾವಿರ ಕೋಟಿ ರೂಪಾಯಿ ಅಂದರೆ ಪ್ರತಿ ವರ್ಷ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಈ ಜಲ ಭಾಗ್ಯ ನಿಗಮದಿಂದ ತೆಗೆದು ಇದಕ್ಕೆ ಖರ್ಚು ಮಾಡಿದ್ದರೆ ಇವತ್ತು ಈ ಕೆಲಸ ಆಗುತ್ತಿತ್ತು. This is apart from the other legal and technical hurdles. ಯಾವುದೂ ಇರುತ್ತಿರಲಿಲ್ಲ, You could have bulldozed them. ಯಾರು ನಿಮ್ಮನ್ನು ನಿಲ್ಲಿಸುತ್ತಿರಲಿಲ್ಲ. 2000 ಕೋಟಿ ರೂಪಾಯಿಗಳನ್ನು you could have easily mobilised.

ಇನ್ನೊಂದು 500 ಕೋಟಿ ಅಥವ 800 ಕೋಟಿ ರೂ.ಗಳನ್ನು ಮೊಬಲೈಸ್ ಮಾಡುವುದಕ್ಕೆ ಕಷ್ಟ ಇರಲಿಲ್ಲ. ಬೇಕಾದರೆ ತಾವು ಬಾಕಿ ಎಲ್ಲಾ ಕೆಲಸವನ್ನು ನಿಲ್ಲಿಸಿ ಅಥವಾ ಬಜೆಟರಿಯಿಂದ 800 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. Then is total laxity ಇದನ್ನು ನಾವು ಇವತ್ತು ಬಹಳ ಪ್ರಾಮುಖ್ಯವಾಗಿ ಆಲೋಚನೆ ಮಾಡಬೇಕಾಗಿದೆ. ಏಕೆಂದರೆ, ಮಾತು ಮಾತಿಗೂ ನಾವು ಬಹಳ ನೀರಾವರಿ ಸಾಮರ್ಥ್ಯವನ್ನು ಹೆಚ್ಚು ಮಾಡಿ ನೀರಾವರಿಗೆ ಅನುಕೂಲ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ನಾವು ಅಧಿಕಾರ ಬಿಟ್ಟಂತಹ ಸಂದರ್ಭದಲ್ಲಿ 25.02 ಲಕ್ಷ ಹೆಕ್ಟೇರ್ಸ್ ಇದ್ದರೆ 1997-98ಕ್ಕೆ ಇವರು ಮಾಡಿದ್ದು 25.43 ಲಕ್ಷ ಹೆಕ್ಟೇರ್ಸ್. ಅಂದರೆ 31 ಸಾವಿರ ಹೆಕ್ಟೇರ್ಸ್ ಮಾತ್ರ ನೀರಾವರಿ ಸಾಮರ್ಥ್ಯವನ್ನು ಹೆಚ್ಚು ಮಾಡಿದ್ದಾರೆ. ಇಷ್ಟೆಲ್ಲಾ ಹಣ ಖರ್ಚು ಮಾಡಿದರೂ, ultimately it comes to that.

ನೀವು ಕಳೆದ ಮೂರು-ನಾಲ್ಕು ಐದು ವರ್ಷಗಳಲ್ಲಿ ಏನು ಮಾಡಿದಿರಿ? ಒಟ್ಟು ಏನು ಮಾಡಿದಿರಿ? ಕೇವಲ ಕೃಷ್ಣಾದ ಬಗ್ಗೆ ಹೇಳುವುದಿಲ್ಲ ಬೇರೆ ಇತರೆ ಏನು ಮಾಡಿದಿರಿ? ಇಡೀ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಸಾಮರ್ಥ್ಯ ಎಷ್ಟು ಹೆಚ್ಚಾಗಿದೆ ಎಂದರೆ ಕೇವಲ 31 ಸಾವಿರ ಹೆಕ್ಟೇರ್ಸ್. ಇದು 1997-98ಕ್ಕೆ ಸೇರಿದ್ದು; 1998-99ಕ್ಕೆ ಸ್ವಲ್ಪ 20-30 ಸಾವಿರ ಹೆಕ್ಟೇರ್ಸ್ ಹೆಚ್ಚಾಗಿರಬಹುದು.

3.40 ಪಿ.ಎಂ

SRI H.N. NANJE GOWDA :-

This figure includes irrigation potential created under minor irrigation, lift irrigation, etc.

ಇವು ಎಲ್ಲಾ ಸೇರಿಸಿ ಮಹಾರಾಜರ ಕಾಲದಿಂದ ಆಗಿದ್ದು.

ಶ್ರೀ ಎಂ. ವೀರಪ್ಪ ಮೊಯ್ಲಿ :- ಎಲ್ಲಾ ಸೇರಿ ಆಗಿದ್ದು. ನೀರಾವರಿ ಸಣ್ಣ ನೀರಾವರಿ ಬರೀ ಬಹೃತ್ ನೀರಾವರಿ ಅಲ್ಲ. ಒಟ್ಟು ಕರ್ನಾಟಕ ರಾಜ್ಯದಲ್ಲಿ 31 ಸಾವಿರ ಅಚೀವ್ ಮಾಡಿ, ನಾವು 10 ಸಾವಿರ ಕೋಟಿ ರೂಪಾಯಿಗಳನ್ನು ಮೊದಲ ಬಾರಿಗೆ ನೀರಾವರಿಗೆ ಕ್ರಿಯೇಟ್ ಮಾಡಿದ್ದೇವೆ. ಈ ರೀತಿ ಹೇಳಿಕೊಂಡು ನೀವು ಯಾರಿಗೆ ಮೋಸ ಮಾಡುತ್ತಿದ್ದೀರಿ. ನಿಮಗೆ ನೀವೇ ಮೋಸ ಮಾಡುತ್ತಿದ್ದೀರಿ. ನೀವು ಹೇಳುತ್ತೀರಲ್ಲಾ ನಿಮ್ಮ ಅಚೀವ್‌ಮೆಂಟಿನಿಂದ ನಿಮಗೆ ಓಟು ತಂದು ಕೊಡುತ್ತದೆ ಎಂದು. Is this achievement going fo fetch you votes?

ಇಂತಹ ಅಚೀವ್‌ಮೆಂಟ್‌ಗಳು ನಿಮಗೆ ಓಟು ತಂದು ಕೊಡುವುದಕ್ಕೆ ಸಾಧ್ಯವಿದೆಯೇ? ಇದರ ಬಗ್ಗೆ ನೀವೇ ಹೇಳಿ. ಜನ ವಾಸ್ತವಿಕವಾಗಿ ಕೊನೆಗೆ ಅಲ್ಲಿ ಏನು ಇದೆ ಎಂದು ನೋಡುತ್ತಾರೆ. ನಮ್ಮ ಹೇಳಿಕೆಗಳ ಪಟ್ಟಿ ಅಲ್ಲ. ಪ್ರಚಾರಗಳ ಪಟ್ಟಿ ಅಲ್ಲ. ನಿಜವಾಗಿಯೂ ಏನು ಸಾಧನೆ ಆಗಿದೆ ಅದನ್ನು ನೋಡಿ ಜನ ನಿಮ್ಮನ್ನು ಮೆಚ್ಚುತ್ತಾರೆ. ಅಥವಾ ನಿಮ್ಮನ್ನು ಜನ ತಿರಸ್ಕರಿಸುತ್ತಾರೆ. ನಾವು 506 ಮೀಟರ್ಸ್ ಏರಿಸಿ ಬಿಟ್ಟು ಕೊಟ್ಟಿದ್ದೇವೆ. ಆಲಮಟ್ಟಿ ಆಣೆಕಟ್ಟು ಪ್ರಾಕ್ಟಿಕಲಿ 1983-89 ಅದು ಮಲಗಿಯೇ ಇತ್ತು. we revived it in 89-90. ಆ ಸ್ಪೀಡ್ ಪಿಕಪ್ ಆಗಿತ್ತು.

Tempo was there. ಆ ಟೆಂಪೊ ಇದ್ದ ಕಾರಣದಿಂದಲೇ ನಾವು ವರ್ಲ್ಡ್ ಬ್ಯಾಂಕಿಗೆ ಒಪ್ಪಿಸಿ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿ, ಕೃಷ್ಣಾಭಾಗ್ಯ ಜಲ ನಿಗಮವನ್ನು ಮಾಡಿ 2000ಕ್ಕೆ ಇಂತಿಷ್ಟು ಕೋಟಿ ಹಣವನ್ನು ಎತ್ತಿಟ್ಟು ಇದನ್ನು 1999ರಲ್ಲಿ ಮುಗಿಸಿ ಬಿಡಬೇಕೆಂದು ಹೇಳಿ, ಇದನ್ನು ಮುಗಿಸುವುದಕ್ಕೆ ಖಂಡಿತ ಸಾಧ್ಯವಿತ್ತು. ಅದು ಅಸಾಧ್ಯವಾದಂಥ ಕೆಲಸವೆಂದು ಖಂಡಿತವಾಗಿ ಅಲ್ಲ. ನಮ್ಮ ದುರಾದೃಷ್ಟವೆಂದರೆ, ಇವತ್ತು ಅದು ಸಾಧನೆ ಆಗಲಿಲ್ಲ. ಮಾಡಲಿಕ್ಕೆ ಕೂಡ ಇವತ್ತು ಅಸಾಧ್ಯ ಆಯಿತು. ಇಲ್ಲಿ ರಿಪೋರ್ಟ್ ಇದೆ. Comptroller & Auditor General Report. ನೀವು ಕೆಲಸವನ್ನು ಸಮರ್ಪಕವಾಗಿ ಮುಗಿಸಿದ್ದೀರಿ ಎಂದು ನಮ್ಮ ಹೇಳಿಕೆ ಬೇಕಾಗಿಲ್ಲ. ಸಿಐಜಿ ರಿಪೋರ್ಟ್‌ನಲ್ಲಿ, ಈ ಕೆಲಸವನ್ನು ಹೇಗೆ ನಿರ್ವಹಿಸಿದ್ದೀರಿ ಎಂಬುದು ಗೊತ್ತಾಗುತ್ತದೆ. ನೀವು ಹೇಳಬಹುದು ಸುಪ್ರೀಂ ಕೋರ್ಟಿನಲ್ಲಿ ಆಯಿತು, ಮತ್ತೊಂದು ಕಡೆ ಆಯಿತು ಎಂದು. ಆದರೆ ಇವತ್ತು ವ್ಯವಹಾರಿಕವಾದಂಥ ನಿಮ್ಮ ನಿರ್ವಹಣೆ ಯಾವ ದಾರಿಯಲ್ಲಿ ಹೋಗಿದೆ, ಎಂಬ ಬಗ್ಗೆ ಇದು ಬಹಳ ಸ್ಪಷ್ಟವಾದ ಕನ್ನಡಿ. ಸಿಐಜಿ ವರದಿಯನ್ನು ಅವರು ಕೊಟ್ಟಿದ್ದಾರೆ. ಅವರ ವರದಿಯ ಪ್ರಕಾರ ಕೃಷ್ಣಾ ಜಲ ನಿಗಮ ಲಿಮಿಟೆಡ್ ಪ್ರಾರಂಭವಾಗಿದ್ದು- ಮೇ 1994ರಲ್ಲಿ ನಮ್ಮದೇನೂ ಅಭ್ಯಂತರ ಇಲ್ಲ, ಯಾರಾದರೂ ಕ್ಲೇಮ್ ಮಾಡಿದರೆ, ನಾನು ಅನೇಕ ಸಲ ನೋಡಿದ್ದೇನೆ. ದೂರದರ್ಶನದ ಸಂದರ್ಶನದಲ್ಲಿ, ಉದಯ ಟಿವಿ ಸಂದರ್ಶನದಲ್ಲಿ, ಇಲ್ಲಿಯವರು ಯಾರೂ ಅಲ್ಲ, ನಮ್ಮ ಮಾಜಿ ಮುಖ್ಯ ಮಂತ್ರಿಗಳು, ಕೃಷ್ಣಾ ಜಲ ನಿಗಮವನ್ನು ನಾನು ಮಾಡಿದೆ. ಮೈನಾರಿಟಿಗೆ ಶೇಕಡಾ 4 ಮೀಸಲಾತಿಯನ್ನು ಕೊಟ್ಟೆ. ಪಂಚಾಯಿತಿ ಆಕ್ಟ್‌ಮಾಡಿದ್ದೇವೆ, ಶಿಕ್ಷಕರ ನೇಮಕಾತಿ ಮಾಡಿದ್ದೇವೆ ಎಂದು ಎಲ್ಲವನ್ನು ಹೇಳಿದ್ದಾರೆ. ಅದರಂತೆ

ನಮಗಂತೂ ಹೇಳಲಿಕ್ಕೆ ಆಗುವುದಿಲ್ಲ. ಇದು 1994 ಅಂದರೆ he was not the Cheif Minister. I was the Chief Minister at that time. Krishna Jala Bhagya Nigama Ltd. was incorporated in May, 1994 mainly to expedite the completion of Upper Krishna project by 2000. For the execution of works the company adopted the method of direct entrustment.

ಏನು ಉದ್ದೇಶ, ಈ ಕೆಲಸ 2000 ಇಸ್ವಿಯೊಳಗಡೆ ಆಗಬೇಕು. ಆಗಿನ ಮುಖ್ಯಮಂತ್ರಿಗಳು ಅದರ ನಿರ್ಣಯವನ್ನು 1995ರಲ್ಲಿ ತೆಗೆದುಕೊಂಡರು. ಇದರಿಂದ ಏನಾಯಿತು.

"Company incurred additional cost of Rs 73 crores on total cost of works worth Rs. 797.42 crores, by resorting to direct entrustment of works to prequalify contractors at rates which were higher than the rates obtained for similar kinds of works."

ನೇರವಾಗಿ 73 ಕೋಟಿ ರೋಪಾಯಿಗಳು ನಷ್ಟವಾಯಿತು, ಇದಕ್ಕೆ ಯಾರನ್ನು ಜವಾಬ್ದಾರಿ ಮಾಡಬೇಕು ? ಸರ್ಕಾರದ ಹಣ, ಸಾರ್ವಜನಿಕರಿಂದ ಎತ್ತಿದ ಹಣ. The credibility of Krishna Jalabhagya Nigam is involved because the Krishna jalabhagya Nigam stands on certain credibility enjoyed among the people.

ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಇವತ್ತು 79ಕೋಟಿ ರೂಪಾಯಿಗಳು ಎಂಟರೆಸ್ಟ್‌ಮೆಂಟ್ ಆಫ್ ವರ್ಕ್ಸ್ ಇವತ್ತು ಇದು ಕುಸಿಯದಿದ್ದರೆ ಯಾವರೀತಿಯಾದ ವಿಶ್ವಾಸಾರ್ಹವಾದಂಥ ವೇದಿಕೆಯನ್ನು ನೀವು ಇವತ್ತು ನಿರ್ಮಾಣ ಮಾಡಲಿಕ್ಕೆ ಜನರಲ್ಲಿ ಮಾರುಕಟ್ಟೆಯಲ್ಲಿ ಸಾಧ್ಯವಿದೆ? ಆದ್ದರಿಂದ ಇದಕ್ಕೆ ಇವತ್ತು ಏನು ಇಲ್ಲವೆ? ಸಿಬಿಐ ತನಿಖೆ ಮಾಡಿ. ಏಕೆಂದರೆ ನಮ್ಮ ಹಿಂದಿನ ಮುಖ್ಯ ಮಂತ್ರಿಗಳಲ್ಲಿ ಬಹಳ ವಿಶ್ವಾಸ ಇದೆ. ಆದ್ದರಿಂದ ಆ ವಿಶ್ವಾಸದ ಮೇರೆಗೆ ಸಿಬಿಐ ತನಿಖೆ ಮಾಡಲಿ, ಏಕೆಂದರೆ ಸಿಬಿಐಗೆ ರಾಜಕೀಯವಾಗಿ ನಮ್ಮನ್ನೆಲ್ಲಾ ಹಾಕಿದ್ದಾರಲ್ಲಾ ಈಗ ಎಲ್ಲಾ ಸುಳ್ಳು ಎಂದು ಗೊತ್ತಾಗಿದೆ. ಸಿಬಿಐ ತನಿಖೆ ಮೇಲೆ ಬಹಳ ವಿಶ್ವಾಸ ಇರುವವರಿಗೆ, ಯಾರು ಇದನ್ನು ಎಂಟ್ರಸ್ಟ್ ಮಾಡಿದ್ದಾರೆ, ಅವರ ಮೇಲೆ ಸಿಬಿಐ ತನಿಖೆ ಆಗಲಿ. 79 ಕೋಟಿ ರೂಪಾಯಿಗಳು ಇದು ಸಣ್ಣ ಅಮೌಂಟ್ ಅಲ್ಲ, ಬಹಳ ದೊಡ್ಡ ಹಣ. ಇದು ಆಗಬೇಕು. ಏಕೆಂದರೆ, ಈರಾಜ್ಯದ ಜನತೆಗೆ ನದಿ ನೀರಿನಲ್ಲಿ ಆಗಿರುವಂಥ ಅನ್ಯಾಯದಲ್ಲಿ ಇದು ಒಂದು ಪ್ರಮುಖವಾದಂಥ ಪಾತ್ರ. ಇವತ್ತು ಸ್ಪೆಷಲ್ ಎಂಟ್ರೆಸ್ಟ್‌ಮೆಂಟ್ ಏನು ಆಗಿದೆ ಇದರ ಬಗ್ಗೆ ಆಗಬೇಕು. ಡಿ-ವಾಟರಿಂಗ್‌ನಲ್ಲಿ Rs. 147 crores ನಾರಾಯಣಪೂರ ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ 5ಕೋಟಿ 82ಲಕ್ಷ ರೂಪಾಯಿಗಳು

Like this, there is a total violation of codal provisions resulted in loss of Rs. 73 crores.

ನಾನು ಒಂದೊಂದಾಗಿ ವಿವರಣೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅವರು ಕೊಟ್ಟಂಥ ವರದಿಯಲ್ಲಿ Construction of box culvert instead of acqueduct resulted in extra expenditure of Rs. 3.47 crores. As the project work of UKP had not been progressive as per the guidelines of world Bank, the World Bank had stopped further aid for the project.

ರಿ ಹ್ಯಾಬಿಲಿಟೇಷನ್ ಪ್ರಾಜೆಕ್ಟ್‌ನ್ನು 1992ರಲ್ಲಿ ಒಂದು ಸಲ ಸ್ಟಾಪ್ ಮಾಡಿದ್ದರು. ನಾನು ನನ್ನ ಸ್ವಂತ ಖರ್ಚಿನಲ್ಲಿ ವಾಷಿಂಗ್‌ಟನ್‌ಗೆ ಹೋದೆ. ಆಗಿನ ಎಂ.ಡಿ. ಜೊತೆ ಮಾತನಾಡಿದ ಮೇಲೆ they

cleared it. the world Bank aid was restored.

ಪುನಃ ರೆಸ್ಟೋರ್ ಮಾಡಿದ್ದಂಥ ಕೆಲಸವನ್ನು ನಾವು ಪ್ರೋಗ್ರೆಸ್ ಮಾಡಿದ ಮೇಲೆ 1996ನೇ ಇಸ್ವಿಯಲ್ಲಿ ಪುನಃ ವರ್ಲ್ಡ್ ಬ್ಯಾಂಕ್ ಏಡ್ ಆಯಿತು. ನೀವು ದಕ್ಷತೆಯಿಂದ ಬಹಳ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದರೆ 1996ರಲ್ಲಿ ಏಕೆ ವರ್ಲ್ಡ್ ಬ್ಯಾಂಕ್ ಏಡ್ ಸ್ಟಾಪ್ ಆಯಿತು? This is again a point unexecusable. The Government, in order to complete the project by 2000 Ad for utilising 734 Tmc of water and for rehabilitating and resettling the oustees, incopporated a company in 1994 Due to apathy of the government in making available the requisite plan for the project there are undue delays continuing the project. Pending land acquisition, the government directed the company to entrust the construction work directly to the prequalified contractors in place of tender process. Even after the company was put to substantial additional cost through direct investment, most of the works remained incomplete and the scheduled date of completion of the project would not be real truth"

ನಿಮ್ಮ ಉದ್ದೇಶ ಏನಿತ್ತು? ಡೈರಕ್ಟ್ ಎಂಟ್ರೆಸ್ಟ್‌ಮೆಂಟನಿಂದ 2000ಇಸವಿಯೊಳಗೆ ಕೆಲಸ ಆಗಬೇಕಿತ್ತು. ಅದು ಆಗಲಿಲ್ಲ. ಸುಮಾರು 100 ಕೋಟಿ ರೂಪಾಯಿಗಳು ದುಂದು ವೆಚ್ಚವಾಯಿತು ಅನಾವಶ್ಯಕವಾಗಿ ಹಣ ವೆಚ್ಚವಾಯಿತು. ಅಪವ್ಯಯ ಮತ್ತೊಂದು ಕಡೆ 2000ಇಸವಿಯೊಳಗಡೆ ಕೆಲಸ ಆಗದೇ ಇರತಕ್ಕಂಥದ್ದು ಇದಕ್ಕೆ ಯಾರಾದರೂ ಜವಾಬ್ದಾರರು ಇರಬೇಕಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚುನಾವಣೆ ಇತ್ತು ಅದಕ್ಕೆ ಎಂಟ್ರೆಸ್ಟ್‌ಮೆಂಟ್ ಬೇಗನೆ ಮಾಡಬೇಕಾಗಿತ್ತು. ಅದಕ್ಕಾಗಿ 100ಕೋಟಿ ರೂಪಾಯಿಗಳ ಎಕ್ಸೆಸ್ ಆ ರೀತಿ ಬಂದಿದ್ದು. ಇದು ಸಿಐಜಿ ರಿಪೋರ್ಟ್‌ನಲ್ಲಿ ವರದಿ ಬಂದಿದ್ದು.

ಶ್ರೀ ಎಂ.ವೀರಪ್ಪ ಮೊಯ್ಲಿ: 100 ಕೋಟಿ ರೂಪಾಯಿಗಳು ಚುನಾವಣೆಗೆ ಹೋಗಿದೆಯೋ ಅಥವಾ ಎಲ್ಲಿ ಹೋಗಿದೆಯೋ ನನಗೆ ಗೊತ್ತಿಲ್ಲ. ಆದರೆ 100ಕೋಟಿ ರೂಪಾಯಿಯಂತೂ ಸೂರೆ ಹೋಗಿದೆಯೋ ಯಾವುದಾದರೊಂದು ಆಗಬೇಕಲ್ಲಾ. ಇದರ ಬಗ್ಗೆ ನಾನು ಹೇಳಿದೆ. CBI is the fit agency because the government and the persons in authority have full faith in the CBI. Straightaway, you should agree for this.

ಆದ್ದರಿಂದ, ದಿನಾ ಬೆಳಿಗ್ಗೆ ಎದ್ದರೆ ಮಾನ್ಯ ನಾಗೇಗೌಡರು ರಾಜೀನಾಮೆ ಕೊಡಬೇಕು ಎಂದರೆ, ಪಾಪ ಅವರು ಏನು ಮಾಡುತ್ತಾರೆ. ಯಾರು ನಿರ್ಣಯವನ್ನು ತೆಗೆದುಕೊಂಡರು

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಿಐಜಿ ರಿಪೋರ್ಟ್ ಬಂದ ಮೇಲೆ, ಅವರು ಏನು ಹೇಳುತ್ತಿದ್ದರು.

SRI M.VEERAPPA MOILY : In CAG report there is a mention of Ex-Chief Minister, not the Irrigation Minister.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಯಾವಾಗಲೂ ಪ್ರೂಫನ್ನು ಕೇಳುತ್ತಿದ್ದರು. ಮಿಸ್‌ಯೂಸ್ ಆಗಿರುವ ಬಗ್ಗೆ ನಿಮ್ಮ ಹತ್ತಿರ ಏನು ಪ್ರೂಫ್ ಇದೆ ಎಂದು ಕೇಳುತ್ತಿದ್ದರು. ಈ ಸಿಎಜಿ ರಿಪೋರ್ಟೇ ಪ್ರೂಫ್. ಮಾನ್ಯ ದೇವೇಗೌಡರು ಈಕಡೆ ಕುಳಿತಾಗ ಮಾನ್ಯ ದೇವರಾಜಅರಸರವರ ಮೇಲೆ ಟೀಕೆ ಮಾಡುವಾಗ ಸಿಎಜಿ ರಿಪೋರ್ಟನ್ನು ಎದುರುಗಡೆ ಇಟ್ಟುಕೊಂಡು ಕೇಳಿದ್ದರು. ಸಿಎಜಿ ರಿಪೋರ್ಟಿನಲ್ಲಿ

ಈ ರೀತಿಯಾಗಿ ಹೇಳುವಾಗ ಸುಮಾರು 3ರಿಂದ 4 ಕೋಟಿರೂ.ಗಳು ಎಕ್ಸ್‌ಸ್ ಪೇಮೆಂಟ್ ಬಗ್ಗೆ ಬಂದಾಗ ಹೇಳುತ್ತಿದ್ದರು. ಇದೇ ಕನ್ನಡಿ, ಇದಕ್ಕಿಂತ ಬೇರೇ ಬೇಕಾ ಎಂದು ಕೇಳುತ್ತಿದ್ದರು. 3 ಕೋಟಿ ರೂಗಳ ಅವ್ಯವಹಾರ ಆಗಿರುವುದು ಇದು ಕನ್ನಡಿನೋ ಏನೋ ಗೊತ್ತಾಗುವುದಿಲ್ಲ.

ಶ್ರೀ ಎಂ ವೀರಪ್ಪಮೊಯ್ಲಿ: ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಸ್ಪಷ್ಟವಾಗಿದೆ. Ex-Chief Minister is the person who has taken a decision.There is no mention of the name of the Irrigation Minister. Therefore I differ from my Leader when they demanded resignation.

SRI MALLIKARJUN KHARGE: Collective responsibility.

SRI M.VEERAPPA MOILY: Collective responsibility will be there.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿನ್ನೆಯಿಂದ ಅವರು ಕಲೆಕ್ಟಿವ್ ರೆಸ್ಪಾನ್ಸಿಬಿಲಿಟಿಯ ಬಗ್ಗೆ ಮಾತನಾಡುತ್ತಾರೆ. ನಾವು ಮಾತನಾಡುವುದಕ್ಕೆ ಏಕೆ ಅಧಿಕಾರ ಇಲ್ಲವೆಂದು ಹೇಳುತ್ತೀರಿ. ಎಸ್.ಎಸ್.ಪಾಟೀಲರು ಇಲ್ಲದೆ ಇದ್ದಾಗ They were defending and they wanted it.

ಶ್ರೀ ಎಂ.ವೀರಪ್ಪಮೊಯ್ಲಿ :- ಇದು ಒಂದು ಕಡೆ ಆಯಿತು. ಇದರ ಬಗ್ಗೆ ಬಹಳ ವಿಷಯವನ್ನು ಹೇಳಬಹುದು. ಆದರೆ ಅವರು ಈಗಾಗಲೇ ಹೇಳಿದ್ದಾರೆ. ನಾನು ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ ಈ ಆಲಮಟ್ಟಿ ಡ್ಯಾಂ ರೋವನ್ನು ಸುಪ್ರೀಂಕೋರ್ಟ್‌ನವರು ಎಂಟರ್‌ಟೇನ್‌ಮೆಂಟ್ ಮಾಡೇ ಇಲ್ಲ. ಅನೇಕ ಅರ್ಜಿಗಳು ಹಿಂದೆ ಕೂಡ ಬಂದಿತ್ತು ಏಕೆಂದರೆ ನಮ್ಮ ಆಲಮಟ್ಟಿ ಡ್ಯಾಂನ ಹೈಟ್ ಬಗ್ಗೆ ಅದು ವಿವಾದಾಸ್ಪದವಾಗಿ ಇರಲೇ ಇಲ್ಲ. ಅದು ವಿವಾದಾತೀತವಾಗಿತ್ತು. ಇದನ್ನು ಪ್ಲಾನಿಂಗ್ ಕಮೀಷನ್ ಅಪ್ರೂವ್ ಮಾಡಿದೆ. ಪ್ಲಾನಿಂಗ್ ಕಮೀಷನ್ ಇದನ್ನು ಅಪ್ರೂವ್ ಮಾಡದೇ ಇದ್ದರೆ ವರ್ಲ್ಡ್ ಬ್ಯಾಂಕ್ ಏಡ್ ಕೊಡುವುದಿಲ್ಲ. ಇದರ ಬಗ್ಗೆ ಮಾನ್ಯ ನಂಜೇಗೌಡರಿಗೆ ಗೊತ್ತಿದೆ.

This is not like an unapproved project. This is an approved project. Upper Krishna project, including Almatti dam project, is an approved project, by planning commission and the Government of India. ಇದು ಒಂದು ಶಬ್ದ. ಕೃಷ್ಣಾ ನದಿ ನೀರಿನ ಬಗ್ಗೆ ಮುಖ್ಯಮಂತ್ರಿಗಳಾಗಲಿ ಯಾರೇ ಆಗಲಿ ಇವತ್ತು ಈ ವಾದವನ್ನು ಸಮರ್ಥನೆ ಮಾಡುವುದನ್ನು ನಾನು ಯಾವ ಪತ್ರಿಕೆಯಲ್ಲೂ ಕೂಡ ನೋಡಲಿಲ್ಲ.

It is unlike Cauvery, which is under non-plan unapproved project. But including Almatti dam, UKP is a clearly, categorically an approved project. Planning commission had agreed about the height. Gate committe has approved it and the world Bank has also given the aid. ನಾವು ಕೃಷ್ಣಾ ಜಲಭಾಗ್ಯ ನಿಗಮದ ಪ್ರಕಾರ ಒಪ್ಪಿಗೆ ಮಾಡುವಾಗಲೂ ಕೂಡ ಆಲಮಟ್ಟಿ including that project, we got the approval from the Government of India. All the financial institutions have approved this project. ಈಗ ಕಾವೇರಿಯ ಬಗ್ಗೆ 1989ರಲ್ಲಿ ಮೆಸ್‌ಅಫ್ ಮಾಡಿದ್ದೀರಿ. ನಿಮ್ಮ ಕೇಂದ್ರ ಸರ್ಕಾರ ಆಗ ಇದ್ದಂತಹ ಅಡಿಷನಲ್ ಸಾಲಿಸಿಟರ್ ಜನರಲ್‌ರವರೇ ಹೇಳಿದರು. ಇಲ್ಲಿ ನೆಗೋಷಿಯೇಷನ್ ಆಗುತ್ತಿರುವಾಗಲೇ ನಾವು ಟ್ರಿಬ್ಯೂನಲ್‌ನ್ನು ಅಪಾಯಿಂಟ್ ಮಾಡುವುದಕ್ಕೆ ನಿಮಗೆ ಅಧಿಕಾರವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದರು. ಸುಪ್ರಿಂಕೋರ್ಟಿಗೆ, ಕೋರ್ಟುಗಳಿಗೆ ಯಾವ

ಅಧಿಕಾರ ಇರಲಿಲ್ಲವೋ ಆ ಅಧಿಕಾರವನ್ನು ಆಗಿನ ಕೇಂದ್ರ ಸರ್ಕಾರ ಸುಪ್ರಿಂಕೋರ್ಟಿಗೆ ಕೊಟ್ಟರು. 1991ರಿಂದ ನಾವು ಯಾವುದೇ ರೀತಿಯಾದಂತಹ ಇಂಟೀರಿಯಮ್ ಆರ್ಡ್‌ರನ್ನು ಇಂಪ್ಲಿಮೆಂಟ್ ಮಾಡಬಾರದು, ಅದರ ಬಗ್ಗೆ ರೆಗ್ಯುಲೇಷನ್‌ನ್ನು ಮಾಡಬಾರದು ಎಂಬ ಒಂದು ಹಟವನ್ನು 1991 ರಿಂದ ನಾವು ಅದನ್ನು ಮುಂದುವರಿಸಿಕೊಂಡು ಬಂದಿದ್ದೇವೆ.

Again, the Solicitor General of the Government of India where you are the party, made a submission to the supreme court saying, "Yes, we have already framed the Regulations and we are giving the draft to the supreme court. ಆಗ ಮೋಸವಾಯಿತು. ಕಾವೇರಿನಲ್ಲಿ ಮೋಸವಾಯಿತು. ಇದರಲ್ಲಿ ಏನಾಯಿತು.

United Front Government set up a four chief Ministers panel. ಯಾರೆಂದರೆ ನಮ್ಮವರೇ ಪ್ರಧಾನಮಂತ್ರಿಯಾಗಿದ್ದು. ಯಾವ ಒಂದು ಕೃಷ್ಣನ ಆಣೆಯಾಗಿ, ಕಾವೇರಿಯ ಆಣೆಯಾಗಿ ಇವತ್ತು ಚುನಾಯಿತರಾಗಿ ಬಂದು ಅಧಿಕಾರವನ್ನು ಹಿಡಿದಿದ್ದರು, ಇವರು ಏನು ಮಾಡಿದರು ? ಆ ಆಣೆ ನಮ್ಮಲ್ಲಿ ಇಲ್ಲ ಆಣೆಯನ್ನು ನಮ್ಮಲ್ಲಿ ಮುರಿದರೆ ಅದು ಶಾಪ ಸಂತಾನಕ್ಕೆ ತಗಲುತ್ತದೆ. ನಮ್ಮ ಊರಿನಲ್ಲಿ ಆಣೆಗೆ ಅಷ್ಟು ಬೆಲೆ ಇದೆ. ನಿಮ್ಮ ಹಳೆಯ ಮೈಸೂರಿನಲ್ಲಿ ಆಣೆಗೆ ಎಷ್ಟು ಬೆಲೆ ಇದೆಯೋ ಗೊತ್ತಿಲ್ಲ. ನಮ್ಮ ಊರಿನಲ್ಲಿ ಆಣೆ ಎಂದು ಹೇಳಿದರೆ ಒಟ್ಟಾಗಿ ಸಂತಾನ ಮುಚ್ಚಿಹೋಗುತ್ತದೆ. ಇಲ್ಲಿ ಆಣೆಗೆ ಪೈಸೆಯ ಬೆಲೆನಾ ಅಥವಾ ಆಣೆಗೆ ಬೆಲೆನಾ ಗೊತ್ತಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ : ನಮ್ಮಲ್ಲಿ ಸುಳ್ಳು ಹೇಳಬೇಕಾದರೆ ಆಣೆಯನ್ನು ಮಾಡುತ್ತಾರೆ. ಇದನ್ನು ನಂಬುವುದಿಲ್ಲ ಎಂದು ಆಣೆಯನ್ನು ಮಾಡುತ್ತಾರೆ. ನಿಜ ಹೇಳುವವರು ಯಾರೂ ಆಣೆಯನ್ನು ಮಾಡುವುದಿಲ್ಲ.

ಶ್ರೀ ಎಂ.ವೀರಪ್ಪಮೊಯಿಲಿ : ಇರಬಹುದು. ಈ ಕಡೆಯಿಂದ ತಿಳಿದು ಕೊಳ್ಳುವುದು ಬಹಳ ಇದೆ. ಸುಳ್ಳು ಹೇಳುವುದಕ್ಕೂ ಆಣೆ ಮಾಡುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಹಾಗೆ ಇರಬಹುದು. ಇಲ್ಲದಿದ್ದರೆ ಆಣೆ ಎಂದು ಹೇಳಿದರೆ ಒಂದು ಜನ್ಮವಲ್ಲ ಇದು ತಲತಲಾಂತರಕ್ಕೂ ಹೋಗುತ್ತದೆ. ಆಮೇಲೆ ಇದನ್ನು ಪರಿಹಾರ ಮಾಡುವುದಕ್ಕೆ ಏನೇನೋ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಬರೀ ಸಗಣಿಯನ್ನು ಮುಟ್ಟಿ ಆಣೆಯನ್ನು ಮಾಡಿದರೆ ಅದು ಒಂದು ದೊಡ್ಡ ಕರಾರು ಎಂದು ಇತ್ತು. ಮಾನ್ಯ ಮೊಯಿಲಿಯವರೇ ಈಗ ಆ ಕಾಲಕ್ಕೂ, ಈ ಕಾಲಕ್ಕೂ ಬಹಳ ಬದಲಾವಣೆಯಾಗಿದೆ.

ಶ್ರೀ ಎಂ.ವೀರಪ್ಪಮೊಯಿಲಿ : ಈಗ ಬಹಳಷ್ಟು ಬದಲಾವಣೆಯಾಗಿದೆ. ಡಿವ್ಯಾಲ್ಯೂ ಸಹ ಆಗಿದೆ. ಈ ಆಣೆಗಳು ಬಹಳಷ್ಟು ಅಪಮೌಲ್ಯವು ಆಗಿದೆ. ಇದರಲ್ಲಿ ಏನಾಗಿದೆ ಎಂದು ಮಾನ್ಯ ನಂಜೇಗೌಡರಿಗೆ ಗೊತ್ತು. ಇದರ ಬಗ್ಗೆ ತಮಗೂ ಸಹ ಗೊತ್ತು. ಯಾವಾಗಲೂ ನದಿ ವಿವಾದವನ್ನು ನಿರ್ಣಯ ಮಾಡುವಾಗ, ಒಂದು ನೆಗೋಷಿಯೇಟ್ ಮಾಡುವಾಗ ಅದರಲ್ಲೂ ಕೂಡ ಈವನ್ ಟ್ರಿಬ್ಯೂನಲ್ ನೇಮಕ ಮಾಡುವಾಗ ನಾವು ಏನು ಲಾಭ ಮಾಡುತ್ತಿದ್ದೇವೆ. ಯಾವಾಗಲೂ ಕೂಡ ಲೋಯರ್ ರೈಪೇರಿಯನ್‌ರವರನ್ನು ನೀವು ಟ್ರಿಬ್ಯೂನಲ್ ಮೆಂಬರ್ ಎಂದು ಮಾಡಬೇಡಿ.

Am I right ? we never used to engage even a lower riparian advocate to

argue our case. Am I correct ?

ಇದು ಎಷ್ಟು ಸೂಕ್ಷ್ಮ ಎಂದು ಹೇಳಿದರೆ, even an Advocate we don't engage at the supreme court, if he is from a lower riparian area. ಏಕೆಂದರೆ ಅವರ ಬ್ಲಡ್‌ನಲ್ಲಿ ಇದು ರಕ್ತಗತವಾಗಿದೆ. ಆ ಪ್ರಿಜ್ಯುಡಿಸ್.

Against the upper riparian is inbuilt with them. Nobody will be an exception to it. ಅದಕ್ಕೆ ನಾವು ಹೇಳಿದೆವು. ಟ್ರಿಬ್ಯೂನಲ್‌ಗೆ ಚೇರ್ಮನನ್ನು ನೇಮಕ ಮಾಡುವಾಗಲೂ ಕೂಡ ನಾನು ಕೇಂದ್ರಕ್ಕೆ ಹೋಗಿ ಹೇಳಿದ್ದೆ. ನೀವು ದಯಮಾಡಿ ಲೋವರ್ ರೈಪೇರಿಯನ್‌ರವರನ್ನು ಟ್ರಿಬ್ಯನಲ್ ಅಧ್ಯಕ್ಷರಾಗಿ ಮಾಡಬೇಡಿ. ಇವರ ಸರ್ಕಾರ ಅಲ್ಲಿ ಇತ್ತು, ನಮ್ಮ ಮಾತು ನಡೆಯಲಿಲ್ಲ. ಆಗ ನಾವು ಹೇಳಿದೆವು ಲೋವರ್ ರೈಪೇರಿಯನ್‌ರವರನ್ನುಅಂದರೆ ಶ್ರೀ ಮುಖರ್ಜಿಯವರನ್ನೇ ಅಧ್ಯಕ್ಷರನ್ನಾಗಿ ಮಾಡಿದರು. ಈಗ ಕಾವೇರಿಯಲ್ಲಿ, ಕೃಷ್ಣಾದಲ್ಲಿ ನಡೆಸಿದಂತಹ ಹೋರಾಟ ಬರೀ ಕರ್ನಾಟಕ ತಮಿಳುನಾಡು, ಕರ್ನಾಟಕ ಆಂಧ್ರಪ್ರದೇಶವಲ್ಲದೆ, It is a war between the upper riparian and the lower riparian. ಇದು ಇಷ್ಟು ನದಿ ನೀರಿನ ವಿವಾದದ ಬಗ್ಗೆ ಇರತಕ್ಕಂತಹ ಒಂದು ಕನಿಷ್ಟ ಪ್ರಾಥಮಿಕ ಸೂಕ್ಷ್ಮ ವಿಚಾರ ಕೂಡ ಇವರ ತಲೆಗೆ ತಟ್ಟುವುದಿಲ್ಲ ಎಂದು ಹೇಳಿದರೆ ಉಪಾಧ್ಯಕ್ಷರೆ, ಈ Inter state of the states ಕ್ಷೇಮವಾಗಿ ಇರುವುದಕ್ಕೆ ಸಾಧ್ಯವಿದೆಯೇ?

How do we expect ? ಇದರ ಬಗ್ಗೆ ಅನೇಕ ಬಾರಿ ಮುಖ್ಯಮಂತ್ರಿಗಳ ಜೊತೆ ಹೇಳಿದ್ದೇವೆ. ಹಿಂದಿನ ಮುಖ್ಯಮಂತ್ರಿಗಳ ಜೊತೆ ಹೇಳಿದ್ದೇವೆ. ಇದು ಬಹಳ ಸೂಕ್ಷ್ಮವಾದ ವಿಚಾರವೆಂದು ನಾನು ಹೇಳುತ್ತಿದ್ದೆ.

Jyoti Basu is a lower riparian person; Lalu prasad is again a lower riparian; Karumanidhi is again a lower riparian. Lower riperian is one and another is political dominant riparian. ಏಕೆ ಕರುಣಾನಿಧಿಯವರಿಗೆ ಕಾವೇರಿಯ ಬಗ್ಗೆ: ಚಂದ್ರ ಬಾಬುನಾಯಿಡುರವರಿಂದ ಸಪೋರ್ಟ್ ಬೇಕಾಗಿತ್ತು, ಹಾಗೆಯೇ ಚಂದ್ರ ಬಾಬುನಾಯಿಡುರವರಿಗೆ ಕರುಣಾನಿಧಿಯವರ ಸಪೋರ್ಟ್ ಬೇಕಾಗಿತ್ತು. This is mutual passing of the bonanza between those states. It is a mutual benefit committee. " Prime Minister Sri H.D.DeveGowda on Sunday night constituted a high-level committee." This is the result of their committee. "....high-level committee for the non-krishna basin states go into the contentious Almatti dam issue between Andhra pradesh and Karnataka. Andhra pradesh chief Minister Naidu and Karnataka chief Minister have been deposed before the committee to give thier side of the issue. Mr.Devegowda made this proposal at the United Front steering Committee." This coms up before the streering committe. Is it a political issue? Water dispute cannot be a political issue. It cannot be a party issue, it cannot be a political issue. It should have been absolutely a technical issue which should be handled by professional people. First time you have laid down a very very wrong precedent against the Kanrataka interest. What business you have to sacrifice Karnataka as a political scapegoat to subserve the interest of your power ? ನಿಮ್ಮ ಅಧಿಕಾರಕ್ಕೆ ಕರ್ನಾಟಕದ ಜನ ದಾಳಗಳಾಗಬೇಕೆ ? This is what you have done today. It is so

clear. This is the paper of 12th August 1996, Times of India. I am reading from that. " Steering committee took up the issue on a priority basis for following the failure of talks between the chief Ministers. Reddy said the committe which is disposed of..." ಬಹುಶಃ ಕಮಿಟಿ ಪೂರ್ವಗ್ರಹಪೀಡಿತ ಎನ್ನುವುದಕ್ಕೆ ಅನುಮಾನವಿಲ್ಲ. ಏಕೆಂದರೆ ಬಸುರವರ ಪ್ರಥಮ ಹೇಳಿಕೆ ಏನು ಅಂದರೆ " Mr.Basu suggested to the prime Minister that on-going work at the dam site should be stopped first before discussing the issue."

ಮೆರಿಟ್ ಡಿಮೆರಿಟ್ ವಸ್ತು ಸ್ಥಿತಿ ಏನಿದೆ ಒಂದು ವರದಿ, ಒಂದು ಮಾತುಕತೆ ಅದು ಯಾವುದೂ ಇಲ್ಲ Straight-away he takes a decision to stop the work. So arbitrary, so partisan, so politically motivated, to save the Government. This panel is a result of the political black-mail at the highest level in the nation which is unprecedented.

ಯಾರು ಕ್ಷೇಮದಲ್ಲಿರುವುದಕ್ಕೆ ಸಾಧ್ಯವಿದೆ ? ಬೇಲಿಯೇ ಎದ್ದು ಹೊಲವನ್ನು ಮೇಯ್ದ ಹಾಗೆ. ಯಾರು ನಮ್ಮ ರಕ್ಷಣೆ ಮಾಡಬೇಕಿತ್ತು, ಯಾರು ಇವತ್ತು ನಿಷ್ಪಕ್ಷಪಾತವಾದಂಥ ಒಂದು ವಿಚಾರವನ್ನು ನಡೆಸಬೇಕಾಗಿತ್ತು ಅವರೇ ಇವತ್ತು ಪಾಕ್ಷಿಕವಾಗಿ ಒಂದು ರಾಜಕೀಯ ಕಾರಣಕ್ಕಾಗಿ, ಅದು ನಮ್ಮ ಕರ್ನಾಟಕದ ಪ್ರಧಾನಿಗಳೇ ಈ ಪಾತ್ರವನ್ನು ವಹಿಸಿರತಕ್ಕದ್ದು ಇದಕ್ಕಿಂತ ದೊಡ್ಡ ಒಂದು ದುರಂತ ಇಲ್ಲ. ಇದೊಂದು ಶತಮಾನದ ದುರಂತ. ಇದಕ್ಕಿಂತ ಮತ್ತೊಂದು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. I am not talking politics. This is what has happened today. It was unconstitutional. ಯಾವ ಅಧಿಕಾರ ಇದೆ ? Does the water Disputes Act provide for it ? Whether the constitution provides for it ? Whether any Executive order can be passed on this ? Whether any executive order has been passed at all ?

ಈ ಪ್ರಶ್ನೆ ಇವತ್ತು ನಮ್ಮ ಮುಂದೆ ಬಂದು ನಿಲ್ಲುತ್ತದೆ. " Bid to resolve Almatti now suffers setback." This is the next day paper, 14th August 1996, after two days, "United Front' effort to resolve the controversial Almatti Dam issue received a set-back today with the prime Minister Devegowda decide to shelve the proposal for constitution of the nine-member technical experts committee to go into the problem. This follows an opinion understood to have been given by the Law Ministry against the constitution of the Official committee of technical experts on the ground that it might undermine the Bachwat Tribunal Award on Sharing of Krishna waters between Andhra Pradesh & Karnataka. There is said to be differences, difficulty arising out of the petition against the dam construction."

ಇವತ್ತು ಬಚಾವತ್ ಅವಾರ್ಡ್ ಏನಿದೆ. to the extent of Karnataka this panel or the usbsequent Technical panel or the then prime Minister, totally sabotaged the benefits which should have been accrued under the Bachawat Award. They must be held responsible. There could be a public trail in karnataka on this kind of a treacherous act. I think this may be the best

example. Let there be a public trial of all the persons who cheated us, who cheated the posterity.

ಇದು ಇವತ್ತು ನಾವು ನೋಡಿಕೊಳ್ಳಬೇಕಾದ ಸಂಗತಿ ಖಂಡಿತವಾಗಿಯೂ ಕೂಡ ಇದೆ ಎಂಬುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಟೆಕ್ನಿಕಲ್ ಕಮಿಟಿಯವರು ಬಂದರು. ಅವರು ಏನು ಮಾಡಿದರು ಅದರಲ್ಲಿ ಒಂದು ಪಾಯಿಂಟ್ಸ್ ನಮಗೆ ಫೇವರ್ ಆಗಿಲ್ಲ. ಅದನ್ನು ನಾನು ಪ್ರತ್ಯೇಕವಾಗಿ ಓದಿ ಹೇಳಿದರೆ ಅದಕ್ಕೆ ಬಹಳ ಸಮಯ ಹಿಡಿಯುತ್ತದೆ. ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆಮೇಲೆ ನಮ್ಮ ಕರ್ನಾಟಕದ ಕೈ ಕಾಲು ಎಲ್ಲಾ ಕಟ್ಟಿ ಇವತ್ತು ಸುಪ್ರೀಂಕೋರ್ಟ್‌ಗೆ ನಮ್ಮನ್ನು ಒಗೆದರು. ಕರ್ನಾಟಕ ರಾಜ್ಯವನ್ನು ಅಕ್ಷ್ಯುಯಲಿ ನಮ್ಮನ್ನು ಒಗೆದದ್ದು, ಕೈಕಾಲು ಕಟ್ಟಿ ಬಾಯಿ ಮುಚ್ಚಿ ಕಿವಿ ಕಟ್ಟಿ ಎಲ್ಲಾ ಮಾಡಿ We have been thrown to the corridors of the supreme court, so that the supreme court can choose their own weapon to kick us out, kick in and out.

ಸುಪ್ರೀಂಕೋರ್ಟ್‌ನ್ನು ಬೈಯ್ಯುವುದಿಲ್ಲ. ಏಕೆಂದರೆ ಸುಪ್ರೀಂಕೋರ್ಟ್‌ನವರು ನೀವೇನು ಫೀಡಿಂಗ್ ಮಾಡುತ್ತೀರೋ ಅದರ ಮೇಲೆ ನಿರ್ಧಾರ ಕೈಗೊಳ್ಳುತ್ತಾರೆ. Everybody is lined against you, ಈಗ ಎ.ಕೆ.47 ಇಟ್ಟುಕೊಂಡು ನಾಲ್ಕು ದಿಕ್ಕಿನಲ್ಲೂ ಕೂಡ ಕರ್ನಾಟಕವನ್ನು ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡು ಹೊಡೆಯಲಿಕ್ಕೆ ಪ್ರಾರಂಭ ಮಾಡಿದಾಗ ನಮ್ಮನ್ನು ಯಾರು ರಕ್ಷಣೆ ಮಾಡುತ್ತಾರೆ? ನಾವು ಯಾರನ್ನು ತಂದೆತಾಯಿಗಳೆಂದು ನಮ್ಮ ಪ್ರತಿನಿಧಿಗಳನ್ನು ನಂಬಿಕೊಂಡಿರುತ್ತೇವೋ ಆ ಪ್ರತಿನಿಧಿಗಳೇ ಇವತ್ತು, ನಮ್ಮನ್ನು ಯಾರು ರಕ್ಷಣೆ ಮಾಡಬೇಕೋ ಆ ರಕ್ಷಕ ಸಮುದಾಯವೇ ನಮ್ಮನ್ನು ಅವರು ಶೂಟ್‌ಡೌನ್ ಮಾಡುವುದು ಇದ್ದರೆ ನಾವೆಲ್ಲಿ ಹೋಗಬೇಕು ? This is where we are placed i.e., Karnataka and our issue has been placed. ಏಕೆಂದರೆ ಎಲ್ಲಾ ರಿಪೋರ್ಟ್‌ಗಳನ್ನು ಇವತ್ತು ನಾವು ನೋಡಿದರೆ ಸುಪ್ರೀಂಕೋರ್ಟ್ ಅಥವಾ ಆ ಕಮಿಟಿಯವರು ಕೊಟ್ಟಂತಹ ಎಲ್ಲಾ ವರದಿಗಳು ಎಲ್ಲಾ ಪಾಯಿಂಟ್‌ಗಳು ನಮಗೆ ವಿರುದ್ಧವಾಗಿವೆ. ಯಾವುದೂ ನಮ್ಮ ಪರವಾಗಿಲ್ಲ. ಏಕೆಂದರೆ When there is a total blessing to take a particular view, it is a directed report. That technical committee report is not an unbiased report, but it is a report directed and directly monitored by the people at the highest level. That is why on every count , it is against us. ನಮಗೆ ಯಾವುದೂ ಕೂಡ ಯಾವುದೇ ರೀತಿಯಾದ ಫೇವರಬಲ್ ರಿಪೋರ್ಟ್ ಇಲ್ಲ. ಒಂದು ವಿಚಾರವನ್ನು ನಾನು ಇವತ್ತು ತಮ್ಮ ಗಮನಕ್ಕೆ ತರಲು ಅಪೇಕ್ಷೆಪಡುತ್ತೇನೆ. ಏಕೆಂದರೆ ಇವತ್ತು ತೆಲುಗು ಗಂಗಾ ಯೋಜನೆ ಇದೆ. ನಾವು ಇವತ್ತು ಆಂಧ್ರಪ್ರದೇಶವನ್ನು we had put on the defence, because Telugu Ganga is not an approved project.

ಅದು ಸ್ಕೀಮ್ 'ಬಿ ' ಯಲ್ಲಿ ಬರಬಹುದು. ಅದು ಸ್ಕೀಮ್ (ಎ)ಯಲ್ಲಿ ಬರಲಿಕ್ಕೆ ಸಾಧ್ಯವೇ ಇಲ್ಲ. ಇವತ್ತು ತೆಲುಗು ಗಂಗಾ ಯೋಜನೆಯ ಬಗ್ಗೆನಮ್ಮ ರಾಜ್ಯಸರ್ಕಾರ ಕೂಡ ಯಾವುದೇ ಒಂದು ಸದ್ದು ಮಾಡಿಲ್ಲ. ತೆಲುಗು ಗಂಗಾ ಯೋಜನೆಯನ್ನು ಸಾರಾಸಗಟು ಮಾಡಿಬಿಟ್ಟದ್ದಾರೆ. ಏಕೆಂದರೆ, ಆಗಿನ ಪ್ರಧಾನಿ ನಮ್ಮ ಮುಖ್ಯಮಂತ್ರಿಯವರು 1983-84ರಲ್ಲಿ ಆಗಿನ ಮುಖ್ಯ ಮಂತ್ರಿಯವರು ಮದ್ರಾಸ್‌ಗೆ ಹೋಗಿ ಅಲ್ಲೆಲ್ಲಾ ಒಪ್ಪಿಕೊಂಡು, ನಾನು ಇಲ್ಲಿ ವಿರೋಧಪಕ್ಷದ ನಾಯಕನಾಗಿದ್ದೆ. ಅದೇ ಸಂದರ್ಭದಲ್ಲಿ ಈವೊಂದು ವಿಚಾರವನ್ನು ಎತ್ತಿದ್ದೇನೆ. ಅವಾಗ ಸ್ವಲ್ಪ ಗಡಿಬಿಡಿಯಾಯಿತು ಸ್ವಲ್ಪ ಕಾಗದಪತ್ರಗಳೆಲ್ಲಾ

ಆಯಿತು. ಆಮೇಲೆ ನಾವು We prevented it.ಆಗ ಒಂದು ದಾರಿಗೆ ಬಂದರು 1989ರಲ್ಲಿ ನಮ್ಮ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳು ಅವರ ಮಂತ್ರಿಮಂಡಲದಲ್ಲಿ ನಾನು ಕಾನೂನು ಮಂತ್ರಿಯಾಗಿದ್ದೆ ಆಗ ತಿರುಪತಿಯಲ್ಲಿ ಮೂರು ರಾಜ್ಯಗಳು ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ನಾವೆಲ್ಲ ಸೇರಿದ್ದೆವು. ಅಲ್ಲಿ ಮೀಟಿಂಗ್ ಆದಮೇಲೆ ಇಷ್ಯೂಸ್ ಫ್ರೇಮ್ ಮಾಡಬೇಕು ಯಾವರೀತಿಯಲ್ಲಿ ನಮ್ಮ ಸ್ಕೀಮ್(ಬಿ)ಯನ್ನು ಇಂಪ್ಲಿಮೆಂಟ್ ಮಾಡುವುದು, ಸ್ಕೀಮ್(ಎ)ಅನ್ನು ಬದಲಾವಣೆ ಮಾಡತಕ್ಕದ್ದು ಆಲಮಟ್ಟಿಯನ್ನು ನಿಲ್ಲಿಸತಕ್ಕದ್ದು ಅಲ್ಲಿ ಯಾವ ಪ್ರಸ್ತಾಪವೂ ಬರಲಿಲ್ಲ. ಯಾವ ಪ್ರಸ್ತಾಪವನ್ನು ಯಾರೂ ಎತ್ತಲಿಲ್ಲ. It was not in dispute at all.1990ರಲ್ಲಿ ಮೈಸೂರಿನಲ್ಲಿ ಸೇರಿದ್ದೇವೆ. ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದರು. ನಾನು ಕಾನೂನು ಮಂತ್ರಿಯಾಗಿದ್ದೆ. ಆ ಸಭೆಯಲ್ಲಿ ಏನಾಯಿತು ಎಂಬುದನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಕ್ರಿ.ಶ.2000ದ ಇಸವಿಯವರೆಗೆ ಕಾಯುವ ಬದಲು, ಕೃಷ್ಣಾ ಜಲ ವಿವಾದದ ನ್ಯಾಯಾಧಿಕರಣದ ವರದಿಯ ಪ್ರಕಾರ ಕೃಷ್ಣಾ ನದಿಯಲ್ಲಿ ಹರಿಯುವ ಸರಾಸರಿ ಪ್ರಮಾಣದ 2393ಟಿಎಂಸಿ ನೀರನ್ನು ಈಗಲೇ ಮೂರು ಕೊಳ್ಳದ ರಾಜ್ಯಗಳಿಗೆ ವಿತರಣೆ ಮಾಡುವುದು This is a decision. It is consensus arrived at. It is not a proposal from the Karnataka Government. There is a commitment from the Andhra pradesh Government.

ವಿತರಣೆ ಮಾಡಬೇಕು. ಸ್ಕೀಮ್ ಎ ಬಿ ಯಲ್ಲಿ ಒಟ್ಟು ನೀರು ಏನು ಬರುತ್ತದೆ, ಅದನ್ನು 2000ದ ಇಸವಿಯವರೆಗೆ ಕಾಯುವುದಿಲ್ಲ ಈಗಲೇ ವಿತರಣೆ ಮಾಡಬೇಕು. This is the consensus decision. ಬಚಾವತ್ ತೀರ್ಪಿನ ಪ್ರಕಾರ ಸ್ಕೀಮ್ 'ಬಿ' ಅಡಿಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೂ ಹೆಚ್ಚಳ ನೀರು ವಿತರಣೆಯಾಗುವುದಲ್ಲದೆ ಈಗಾಗಲೇ ವಿತರಣೆಯಾಗಿರುವ ನೀರಿನ ಹಂಚಿಕೆಯ ಪ್ರಮಾಣವು ಶಾಶ್ವತವಾಗ ಬಾರದೆಂದು ಕ್ರಿ. ಶ. 2000ದ ಇಸವಿಯಲ್ಲಿ ಪರಿಶೀಲನೆಗೆ ಬರುವ ಅಂಶವಾಗಬಾರದೆಂದು ಪರಿಗಣಿಸಿದಲ್ಲಿ ಆಂಧ್ರಪ್ರದೇಶ ರಾಜ್ಯಕ್ಕೆ ತೆಲುಗು ಗಂಗಾ ಯೋಜನೆಯಡಿಯಲ್ಲಿ 29 ಟಿಎಂಸಿ ನೀರನ್ನು ಬಳಸಲಿಕ್ಕೆ ಮಾತ್ರ ಪರವಾನಗಿ ನೀಡುವುದು. ಇವತ್ತು ಶಾಶ್ವತವಾಗಿ ದಾನ ಮಾಡಿದ್ದಾರೆ ಕರ್ನಾಟಕದವರು. ನೀವು ಅಧಿಕಾರಕ್ಕೆ ಬಂದಮೇಲೆ ದೊಡ್ಡದಾನ ಎಂದರೆ 29 ಟಿ.ಎಂ.ಸಿ. ನೀರನ್ನು ಆಂಧ್ರಪ್ರದೇಶಕ್ಕೆ ತೆಲುಗು ಗಂಗಾ ಯೋಜನೆ ಮೂಲಕ ದಾನ ಮಾಡಿದ್ದಾರೆ. ಯಾರ ಅಪ್ಪನ ಆಸ್ತಿ ದಾನ ಮಾಡಲಿಕ್ಕೆ? ರಾಜ್ಯದ ಜನರ ಒಂದು ನೀರಿನ ಹಕ್ಕನ್ನೇ ಹೀಗೆ ದಾನ ಮಾಡುವುದು ಏಕೆ ? ದೆಹಲಿಯಲ್ಲಿ ನಿಮ್ಮ ಅಧಿಕಾರ ಶಾಶ್ವತವಾಗಿ ಉಳಿಯಬೇಕು at any cost. ಅದು ಉಳಿಯಲಿಲ್ಲ. ಏಕೆಂದರೆ ತಾಯಿ ಭುವನೇಶ್ವರಿ ನಿಮ್ಮನ್ನು ಶಪಿಸಿದರು. ಅದು ಉಳಿಯಲಿಲ್ಲ.

4.10 ಪಿ.ಎಂ

Sri H.N. NANJE GOWDA :- The capacity of the canal can carry in a water year around 300 TMCFT

ಶ್ರೀ ಎಂ.ವೀರಪ್ಪ ಮೊಯ್ಲಿ :- 300ಟಿ ಎಂ ಸಿ ನೀರಿನಿಂದ ಸುಮಾರು 8ಲಕ್ಷ ಎಕರೆಯಲ್ಲಿ ನೀರಾವರಿಯಾಗುತ್ತದೆ. I am not giving details. ಜಾಸ್ತಿ ಸಮಯ ಹಿಡಿಯುತ್ತದೆ. ಆಮೇಲೆ

ಕ್ರಿಸ್ತಶಕ ಎರಡು ಸಾವಿರ ಇಸವಿಯ ನಂತರ ನೀರಿನ ವಿತರಣೆಯಾಗುವುದನ್ನು ಪರಿಶೀಲಿಸುವ ಮೊದಲು, ಈಗಾಗಲೇ ವಿತರಣೆಯಾಗುವ ಆಂಧ್ರಪ್ರದೇಶಕ್ಕೆ 800 ಟಿಎಂಸಿ ಕರ್ನಾಟಕಕ್ಕೆ 700 ಟಿಎಂಸಿ ಮತ್ತು ಮಹಾರಾಷ್ಟ್ರಕ್ಕೆ 560 ಟಿಎಂಸಿ ನೀರನ್ನು ವಿತರಣೆಯನ್ನು ದೃಢೀಕರಿಸುವುದು. ಈ ವಿತರಣೆ ಸ್ಕೀಮ್ ಎ ನಲ್ಲಿ ಬಂದಿತ್ತು. ಅದನ್ನು ದೃಢೀಕರಿಸಿದೆ ಎಂದರೆ It cannot be re-opened.

ಈಗಿನ ಆ ಒಂದು ಸಂಧಿಗ್ಧತೆ ಅಪಾಯವನ್ನು ತಪ್ಪಿಸತಕ್ಕಂಥಾದ್ದು I myself wrote these resolutions in my hand writing and got the signatures of all the three chief ministers.

ನಿಮಗೆ ಇನ್ನೇನು ಬೇಕು? ಈ ಪ್ರಸ್ತಾವನೆಯನ್ನು ಒಪ್ಪಿದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರವು ಮತ್ತು ಆಂಧ್ರಪ್ರದೇಶವು ಯೋಜಿಸಿರುವ ತೆಲುಗು ಗಂಗಾ ಯೋಜನೆಗೆ 29 ಟಿ.ಎಂ.ಸಿ. ನೀರನ್ನು ಬಳಸುವ ಪ್ರಸ್ತಾವನೆಯನ್ನು ಕ್ರಿಸ್ತಶಕ ಎರಡು ಸಾವಿರ ಇಸವಿಯಲ್ಲಿ ವಿತರಣೆಯಾಗುವ ಹೆಚ್ಚಳ ನೀರಿನ ಪಾಲಿನಲ್ಲಿ ಪೂರ್ವಭಾವಿಯಾಗಿ ಈ ಹಕ್ಕನ್ನು ಆಂಧ್ರಪ್ರದೇಶವು ಕ್ಲೈಮ್ ಮಾಡಲು ಸಾಧ್ಯವಿಲ್ಲವೆಂಬ ಷರತ್ತಿನ ಮೇಲೆ ಪರಿಶೀಲಿಸಬಹುದು. ಕಿಸ್ತಶಕ ಎರಡು ಸಾವಿರ ಇಸವಿಯ ನಂತರ 2060 ಟಿಎಂಸಿ ನೀರಿಗಿಂತ ಹೆಚ್ಚಳ ನೀರಿನ ಪರಿಮಾಣವನ್ನು ಈ ಮೂರು ರಾಜ್ಯಗಳೂ ಹಂಚಿಕೊಳ್ಳುವುದು.

ಈ ಕೃಷ್ಣಾ ನದಿಯ ಹೆಚ್ಚಳ ನೀರಿನ ವಿತರಣೆಯನ್ನು ಮೂರು ರಾಜ್ಯಗಳು ಹಂಚಿಕೊಳ್ಳುವ ಸಮಸ್ಯೆಯನ್ನು ಒಂದೇಬಾರಿಗೆ ಕೊಂಡು, ತೆಗೆದುಕೊಳ್ಳುವ ಆಧಾರದ ಮೇಲೆ ನಿರ್ಣಯಿಸಿತು. ಇದು ನಿರ್ಣಯ. ಅದಕ್ಕೆ ನಾವು ಮಹಾಬಲೇಶ್ವರದಲ್ಲಿ ಪುನಃ 22-5-93ರಂದು ನಾನು ಮುಖ್ಯ ಮಂತ್ರಿಯಾಗಿದ್ದಾಗ ಅಲ್ಲಿ ಸಭೆ ಸೇರಿದೆವು. ಆದರೆ, ನಾವು ಅದನ್ನು ಚರ್ಚೆ ಮಾಡಿದ ಮೇಲೆ ಶ್ರೀಶೈಲದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳೋಣವೆಂದು ನಿರ್ಧರಿಸಿದೆವು. ಅಲ್ಲಿಗೆ ನಮ್ಮ ಗೌರ್ನಮೆಂಟ್ ಹೋಯಿತು. ಅಧ್ಯಕ್ಷರೇ, ಈಗ ಏನಾಯಿತು?ಈ ನಿರ್ಣಯದ ಬಗ್ಗೆ ಒಂದು ಪತ್ರ ಉಳಿದ ಎರಡು ಮುಖ್ಯಮಂತ್ರಿಗಳದ್ದು. ಈ ನಿರ್ಣಯದ ಬಗ್ಗೆ ಒಂದು ಪತ್ರ ಕೇಂದ್ರ ಸರ್ಕಾರದ್ದು, ಈ ನಿರ್ಣಯದ ಬಗ್ಗೆ ಒಂದು ಸುದ್ದಿ ಒಂದು ಸ್ವರ ಆಗಿನ ಪ್ರಧಾನಿಗಳು, ಹಿಂದಿನ ಮುಖ್ಯಮಂತ್ರಿಗಳು, ಈಗಿನ ಮುಖ್ಯಮಂತ್ರಿಗಳು ಈಗಿನ ಸರ್ಕಾರ ಒಂದು ಸ್ವರ ಎತ್ತಿದ್ದಾರೆಯೇ? ಏನಾದರೂ ನೀವು ಕೇಳಿದ್ದೀರಾ? I have not read in the newspapers. Mr.Nanje Gowda, correct me. Perhaps, you could have produced the same proceedings and gone to the Supreme court with a Writ petition to implement as a principle of promissory estoppel. As a promissory estoppel, you could have gone to the Supreme Court.

ನಾನು ನೋಡಿದ್ದೇನೆ ಅದನ್ನೆಲ್ಲಾ ಓದುವುದಕ್ಕೆ ಸಮಯ ಇಲ್ಲ. ನಿಮ್ಮ ರಿಟ್ ಪಿಟಿಷನ್, ನೀವು ಕೊಟ್ಟಂಥ ಕೌಂಟರ್ ನೀವು ಕೊಟ್ಟಂಥ ಅಫಿಡವಿಟ್ ನೋಡಿದ್ದೇನೆ ಆದರೆ ಈ ನಿರ್ಣಯದ ಬಗ್ಗೆ ಒಂದು ಶಬ್ದ ಇಲ್ಲ. ಈ ಇಷ್ಯೂಸ್ ಬಗ್ಗೆ ಕಾನ್ಸೆನ್ಸಿಗೆ ಬಂದಿದ್ದು ಏನು ನಿಮಗೆ ಕಿವಿ ಕೇಳುವುದಿಲ್ಲವೇ? ಕಣ್ಣು ಕಾಣುವುದಿಲ್ಲವೇ? ನೀವು ಎಂತಹ ಸರ್ಕಾರ ನಡೆಸುತ್ತಿದ್ದೀರಿ? ದಯಮಾಡಿ ಇವತ್ತು ಹೇಳಬೇಕಾಗುತ್ತದೆ. ಯಾವ ಒಂದು ಬೇಸಿಕ್ ಇಷ್ಯೂ ಮೇಲೆ, ಎಲಿಮೆಂಟರಿ ಪ್ರಶ್ನೆ ಮೇಲೆ ಯಾವ ಮೂರು ರಾಜ್ಯಗಳು ಒಪ್ಪಿಕೊಂಡಿದ್ದವು, ಆ ಶ್ರೀಶೈಲ ಮೀಟಿಂಗ್ ನೀವು ಏಕೆ ಮಾಡಲಿಲ್ಲ?

What prevented you from convening the meeting at srishailam? ಏಕೆಂದರೆ,

ಸರ್ಕಾರಗಳು ಅದು ಯಾವಾಗಲೂ ಯಾರೇ ಮುಖ್ಯಮಂತ್ರಿಯಾಗಿರಲಿ, ಯಾವುದೇ ಸರ್ಕಾರವಾಗಲೀ, It is a continuing government that commitment continues.

ಎಂತಹ ಒಂದು treachery ಎಂಬುದು ಈ ರಾಜ್ಯದ ಜನರಿಗೆ ಗೊತ್ತಾಗಲಿ Blood boils, when we see all these things. I culled out all these documents. I am not telling that I would like to make it as political issue. That is a different matter.

ಆದರೆ, ಇವತ್ತು ಏನು ನಡೆದಿದೆ, ನಿಮಗೆ ಏನು ಪ್ರತಿಭಟನೆ ಶಕ್ತಿ ಕುಂದಿ ಹೋಗಿದೆಯೇ?

ಕರ್ನಾಟಕದ ಜನಕ್ಕೆ ಯಾವುದೇ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡುವ ಶಕ್ತಿ ಇಲ್ಲವೆಂದು ತಿಳಿದುಕೊಂಡಿದ್ದೀರಾ? Whether we have become so passive, incapable of fighting for our justice?

ಇವತ್ತು ನಾವು ಎಲ್ಲಿದ್ದೇವೆ. ಇದನ್ನು ನಿಮ್ಮ ಅಧಿಕಾರಿಗಳು, ಗಮನಕ್ಕೆ ತರಲಿಲ್ಲವೇ ಅಥವಾ ನೀವು ಇದರ ಬಗ್ಗೆ ಲಕ್ಷ್ಯಕೊಡಲಿಲ್ಲವೇ? ಇವತ್ತು ಮಹಾರಾಷ್ಟ್ರ 28 ವರ್ಷಗಳ ಕಾಲ ಅಂದರೆ ಬಚಾವತ್ ಅವಾರ್ಡ್ ಆದಮೇಲೆ ಮಹಾರಾಷ್ಟ್ರ ಮತ್ತು ಕರ್ನಾಟಕದ ಮಧ್ಯೆ ವಿವಾದವೇ ಇರಲಿಲ್ಲ we were so cordial. ಎಲ್ಲಿ ಮಾತನಾಡುವುದಕ್ಕೆ ಹೋದರೂ ಕೂಡ they were with us. ಮಹಾಬಲೇಶ್ವರದಲ್ಲಿ ತಿರುಪತಿಯಲ್ಲಿ ಮತ್ತು ಮೈಸೂರಿನಲ್ಲಿ ಚರ್ಚೆಯಾದಾಗಲೂ ಕೂಡ, we were anxious. ಏಕೆ 1997ರಲ್ಲಿ ಮಹಾರಾಷ್ಟ್ರದ ಚೀಫ್ ಇಂಜಿನಿಯರ್ ಅಫಿಡವಿಟ್ ಫೈಲ್ ಮಾಡಿದರು. ಕರ್ನಾಟಕಕ್ಕೆ ಇವತ್ತು ಅವರ ಪಾಲಿನ ನೀರಿನ ಹಕ್ಕನ್ನು ಸ್ಕೀಮ್ - ಎ ಪ್ರಕಾರ ಉಪಯೋಗ ಮಾಡತಕ್ಕಂಥ ಸಂಪೂರ್ಣ ಹಕ್ಕು ಅಧಿಕಾರ ಇದೆ. ಆಲಮಟ್ಟಿ ಡ್ಯಾಮಿನ ವಿಚಾರದಲ್ಲಾಗಲೀ, ಯಾವುದೇ ವಿಚಾರದಲ್ಲಾಗಲಿ ಕರ್ನಾಟಕಕ್ಕೆ ಸಾರ್ವಭೌಮ ಅಧಿಕಾರ ಇದೆ, ಅವರು ನಿರ್ವಂಚನೆಯಿಂದ ಉಪಯೋಗ ಮಾಡಬಹುದು ಎಂಬ ಅಪಿಡವಿಟ್‌ನ್ನು ಸುಪ್ರೀಂಕೋರ್ಟಿಗೆ ಕೊಟ್ಟಿದ್ದರು. They have changed their stand. what a poor lobby? The total failure of your maintaining minimum relations with the neighbouring state governments, makes everybody your enemy.

ಅದಕ್ಕೆ ನಾನು ಹೇಳಿದೆ, ಎಲ್ಲಾ ಕಡೆ ಎ.ಕೆ.47ನಿಂದ ನಮ್ಮ ಮೇಲ ಪ್ರಯೋಗವಾಗುತ್ತದೆ, ಮದ್ರಾಸಿನಿಂದ ಮತ್ತೊಂದುಕಡೆ ಆಂಧ್ರಪ್ರದೇಶದಿಂದ ಮತ್ತೊಂದು ಕಡೆ On the top of the hill, government of India, ಎಲ್ಲಾ ಕಡೆಯಿಂದಲೂ ಇವತ್ತು ಕರ್ನಾಟಕ ಒಂದು ರೀತಿಯ ಅನಾಥ ಶಿಶು ಆಗತಕ್ಕ ಪರಿಸ್ಥಿತಿಯಾಗಿದೆ. ನಾನು ಅದಕ್ಕೇ ಹೇಳಿದೆ. 21ನೇ ಶತಮಾನ ದಾಟುವಾಗ ಕರ್ನಾಟಕ ಅತ್ಯಂತ ದುರ್ಬಲ ಮತ್ತು ಅನಾಥ ಶಿಶು. ಈ ದೌರ್ಬಲ್ಯಕ್ಕೆ ನೀವು ಇವತ್ತು ಕರ್ನಾಟಕವನ್ನು ತಂದಿಟ್ಟಿದ್ದೀರಿ. ಆದ್ದರಿಂದ ಇಂತಹ ಪರಿಸ್ಥಿತಿಯಿಂದ ಪಾರಾಗತಕ್ಕ ಪ್ರಶ್ನೆ ಇದೆ. ಏಕೆಂದರೆ, ಸುಪ್ರೀಂಕೋರ್ಟಿನಲ್ಲಿ ಒಪ್ಪಿದರು We were very happy. ಸ್ಟೇ ವೆಕೇಟ್ ಮಾಡಿದರು. ಗೇಟ್ ಹಾಕಿ What kind of gate ? ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ನಂಜೇಗೌಡರು ಇದ್ದರೋ ಇಲ್ಲವೋ ಗೊತ್ತಿಲ್ಲ you are allowed, or permitted to put up only skeleton gate.

ಅಂದರೆ ನೀರು ನಿಲ್ಲಲಿಕ್ಕೆ ಆಗುತ್ತದೆಯೇ? Can you preseve the water?

ಯಾರು ನಿಮಗೆ ಬ್ರೀಫ್ ಮಾಡುತ್ತಾರೆಯೋ ನನಗಂತೂ ಅರ್ಥವಾಗುವುದಿಲ್ಲ ಇವತ್ತು ನೀರು ನಿಲ್ಲಬೇಕಾದರೆ, ಈವರ್ಷ ಮುಗಿಸಬೇಕು. We have already passed that stage. ಜೂನ್ ಅಂತ್ಯದೊಳಗೆ ನೀರು ನಿಲ್ಲಿಸಬೇಕು. ದಯಮಾಡಿ ಇನ್ನು ಭರವಸೆ ಕೊಡಬೇಡಿ. Don 't give false hopes. It is a water year. ನಾವು ಎರಡು ಸಾವಿರ ಇಸವಿಯೊಳಗೆ ನೀರು ಉಪಯೋಗ ಮಾಡ ಬೇಕಾದರೆ, ಜೂನ್ 1999 ರಲ್ಲಿ ನೀವು ನೀರನ್ನು ನಿಲ್ಲಿಸಬೇಕು. You have Failed. At least admit your failures. of course, the Chief minister has has said 'I admit my failure'.

ಆಗುವುದಿಲ್ಲ ನಾವು ರಿಟ್ ಹೋಗುತ್ತೇವೆಂದು ಹೇಳಿದ್ದಾರೆ. ನೇರವಾಗಿ ಹೇಳಿದ್ದಾರೆ. ರಿಟ್ ಹೋಗತಕ್ಕಂಥ ಹೇಳಿಕೆಗೆ ಕೊನೇಪಕ್ಷ ಯಾವುದಾದರೂ ಲೀಗಲ್ ಅಡ್ವೈಸ್ ತೆಗೆದುಕೊಂಡಿದ್ದೀರಾ?

Was there any legal advice? Was there any professional advice? to that extnet. ನೀವು ಆಲೋಚನೆ ಮಾಡಿ, ಇದರಲ್ಲಿ ಬಹಳ ಸೂಕ್ಷ್ಮತೆ ಇದೆ The Supreme court will readily grant Stay. Scheme - B will be deferred to that day.

ಸ್ಕೀಮ್ - ಬಿ ಆಗುವುದಿಲ್ಲ ಸ್ಕೀಮ್ (ಎ) ಕೂಡ ಸಿಗುವುದಿಲ್ಲ ಕರ್ನಾಟಕವನ್ನು ಮತ್ತಷ್ಟು ಒಂದು ರೀತಿಯ ಅತ್ಯಂತ ದುರ್ಬಲ ಪರಿಸ್ಥಿತಿಗೆ Karnataka will be driven to the most vulnerable situation. ಸ್ಕೀಮ್ (ಎ) ಕೂಡ ಕೈಗೆ ದಕ್ಕುವುದಿಲ್ಲ. ಸ್ಕೀಮ್ - ಬಿ ಕೂಡ ಕೈಗೆ ದಕ್ಕುವುದಿಲ್ಲ. ಯಾರೋ ಹತ್ತಿರ ಬಂದು ಕಿವಿಗೆ ಹೇಳುತ್ತಾರೆಂದ ಕೂಡಲೇ ನೀವು ಪ್ರೆಸ್ ಕಾನ್‌ಫರೆನ್ಸ್ ಕರೆದು ಹೇಳಿಬಿಡುವುದು Regarding Water dispute. ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಇದ್ದರು. He was a highly professional administrator, ಕಾವೇರಿ ಬಗ್ಗೆ ಅಥವಾ ಕೃಷ್ಣಾ ಬಗ್ಗೆ ಯಾರಾದರೂ ಅವರನ್ನು ಕೇಳಿದರೆ, ಕೂಡಲೇ ಅವರು ಮಾನ್ಯ ಮೊಯ್ಲಿಯವರನ್ನು ಕೇಳಿ ಎಂದು ಹೇಳುತ್ತಿದ್ದರು.

He will never speak. he never spoke even a word about it. He instructed in the cabinet to everybody. 'Please don' t speak. Let Mr. Moily Speak."

ಆದ್ದರಿಂದ ಇವತ್ತು ಬಹಳ ಹಗುರವಾಗಿ ಯಾರು ಬೇಕಾದರೂ ಹೇಳಿಕೆಯನ್ನು ಕೊಡತಕ್ಕಂಥಾದ್ದು ಬರೀ ನಿಮ್ಮನ್ನೇ ಏಕೆ ಸಿಂಗಲ್ ಔಟ್ ಮಾಡುವುದು, ಎಲ್ಲರೂ ಅದೇ ತರಹ. ಮುಖ್ಯಮಂತ್ರಿಗಳೂ ಕೂಡ ನೀವು ಕೊಟ್ಟಂಥ ಅಥವಾ ಉಪಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಗಳು ಕೂಡ ನಿಮ್ಮ ಹೇಳಿಕೆಗಳಿಗಿಂತ ಕಡಿಮೆ ಇಲ್ಲ. ಮಂತ್ರಿಗಳಾಗಿ ಅವರು ಹೇಳುವಾಗ ನಾನು ಇರಿಗೇಷನ್ ಮಂತ್ರಿಯಾಗಿ ನಾನೇಕೆ ಸುಮ್ಮನಿರಬೇಕು ಎಂಬ ಹುರುಪಿನಲ್ಲಿ ಹೇಳಿಕೆ ಕೊಟ್ಟಿರಬಹುದು That must have happened. ಆದರೆ ಸಬ್ಜೆಕ್ಟ್‌ನಲ್ಲಿ ಒಂದು ಗ್ರಿಪ್‌ಬೇಕಲ್ಲಾ

ಇವತ್ತು ಅಂಥ ಪರಿಸ್ಥಿತಿಗೆ ನೀವು ಬಂದಿದ್ದೀರಿ. ನಾನು ಯಾರ ರಾಜೀನಾಮೆಯನ್ನು ಕೇಳುವುದಿಲ್ಲ. ಏಕೆಂದರೆ ಜನರೇ ರಾಜೀನಾಮೆಯನ್ನು ಕೇಳುತ್ತಾರೆ. ಜನರಿಗೆ ನೀವು ರಾಜೀನಾಮೆಯನ್ನು ಕೊಡುತ್ತೀರಿ. ಆದರೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, ಒಂದು ಪಕ್ಷವೇನಾದರೂ ನನ್ನಿಂದ ರಾಜ್ಯದ ಹಿತಾಸಕ್ತಿಗೆ ಧಕ್ಕೆ ಉಂಟಾದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಫೆಬ್ರವರಿ 17, 1997ರಂದು ವಿಧಾನ ಸಭೆಯಲ್ಲಿ ಪಟೇಲರು ಹೇಳಿದ್ದಾರೆ. ಅವರು ಆ ರೀತಿ ಹೇಳಿರುವುದು

ನಿಜ. He has failed to-day to utilise the water.He has failed in the cauvery front. He has failed here.

ಅವರು ಇನ್ನು ಉಳಿದಿರುವುದು ಬಿ ಯೋಜನೆ ಮಾತ್ರ ಎಂದು ಹೇಳಿದರು. ಎ ಯೋಜನೆಯೇ ಒಂದು ರೀತಿ ಗೋಜಲಾಗಿದೆ, ತಾವು ಮಾಡಿದಂಥ ಗೋಜಲನ್ನು ಯಾರು ತೊಳೆಯುತ್ತಾರೋ ಆ ಪರಮಾತ್ಮನಿಗೇ ಗೊತ್ತು. ಆ ಪರಿಸ್ಥಿತಿ ಬಂದಿದೆ. ಯಾಕೆಂದರೆ Nothing is available for your counter-argument to-day. Nothing is available for your justification.

ಇವತ್ತು ಏನಿದೆ? ತಾವು ಮರ್ಯಾದೆಯಿಂದ ರಾಜೀನಾಮೆ ಕೊಡುವುದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಕಾವೇರಿ ನೀರನ್ನು ಉಳಿಸಲು ತಮ್ಮಿಂದ ಆಗಲಿಲ್ಲ. ಕೃಷ್ಣ ನೀರು ಉಳಿಸಲು ಆಗಲಿಲ್ಲ ಕೊನೆಯಪಕ್ಷ ಒಂದು ಸ್ವಲ್ಪ ಮರ್ಯಾದೆಯನ್ನು ಉಳಿಸಿಕೊಂಡು ನಾನು ಹೋಗುತ್ತೇನೆ ಎಂಬ ಮಾನಸಿಕವಾದ ಸೂಕ್ಷ್ಮತೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಇದ್ದರೆ I think at least let him keep up this promise, assurance which he has held out in this house.

ಇಷ್ಟಾದರೂ ಮಾಡಿ. ಏಕೆಂದರೆ ಎಲ್ಲರೂ ಸಾಕಷ್ಟು ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ.

'Patel Government going all out to complete dam."

'With hardly two years left for Karnataka to utilise the share of krishna water as per the Bachawat award karnataka Government seems to be straining all its energy to complete the Almatti dam of the Upper Krishna project, the mainstay for the state to protect its share. The State may not be in a position to mobilise Rs 5,000 crores to Rs. 6,000 crores needed in the next year, but government will have to tighten its belt and if necessary direct funds from other sectors, irrigation take the dam to a safe stage."

ಇವತ್ತು ತಮ್ಮ ಕಾರ್ಯಕ್ರಮಗಳಲ್ಲಿ ಹೇಳಿಕೆಗಳಲ್ಲಿದ್ದಂಥ ಬಿಗಿ ಇಲ್ಲ. ಇವತ್ತು ತಮ್ಮ ಹೇಳಿಕೆಗಳು ಇದೆ 'Completed by 1999 if the present tempo was maintained." what happened to your present tempo? what came on the way?

ಯಾಕೆ ಮೇನ್‌ಟೆನ್ ಮಾಡಲಿಲ್ಲ? ಲೀಗಲ್ ಹರ್ಡ್‌ಲ್ ಅನ್ನು ಸುಮ್ಮನೆ ತರಬೇಡಿ. ಅದು ನೆಪಮಾತ್ರ. ಲೀಗಲ್ ಹರ್ಡಲ್ ಅನ್ನು ತಂದಿದ್ದರೂ ಸಹ ನೀವೇ ತಂದು ಕೊಂಡಿದ್ದೀರಿ. ನಿಮ್ಮ ತಲೆಯನ್ನು ಆ ನೇಣುಗಂಬಕ್ಕೆ ನೀವೇ ಹಾಕಿಕೊಂಡಿದ್ದೀರಿ. ಈ ಫಂಡ್ಸ್‌ನ ಬಗ್ಗೆ ತಾವೇ ಹೇಳಿದ್ದೀರಿ. ಮಾನ್ಯ ಸಿದ್ಧರಾಮಯ್ಯನವರು ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ಭರವಸೆಯನ್ನು ಕೊಟ್ಟಿದ್ದೀರಿ. ನಾನು ನಾಗೇಗೌಡರ ರಾಜೀನಾಮೆಯನ್ನು ಕೇಳುವುದಿಲ್ಲ ಏಕೆಂದರೆ ಅವರು ವಿಧಾನಸೌಧದಲ್ಲಿ ಇಂಥ ಹೇಳಿಕೆಗಳನ್ನು ಕೊಟ್ಟಿಲ್ಲ, ಎಲ್ಲಾ ಹೇಳಿಕೆಗಳನ್ನು ಹೊರಗಡೆ ಕೊಟ್ಟಿದ್ದಾರೆ. ನಾನು ಇಂಥ ಕೆಲಸ ಮಾಡದಿದ್ದರೆ ರಾಜೀನಾಮೆ ಕೊಡುತ್ತೇನೆಂಬ ಭರವಸೆಯನ್ನು ಮಾನ್ಯ ನಾಗೇಗೌಡರು ಇಲ್ಲಿ ಹೇಳಲಿಲ್ಲ. ಮುಖ್ಯಮಂತ್ರಿ ಯವರು ಮಾತ್ರ 1997ರಲ್ಲಿ ರಾಜೀನಾಮೆ ಕೊಡುತ್ತೇನೆಂದು ಇಲ್ಲಿ ಹೇಳಿದ್ದರು.

ಆದ್ದರಿಂದ ಈ ಸದನದ ಪಾವಿತ್ರತೆ ಮತ್ತು ಮುಖ್ಯಮಂತ್ರಿ ಸ್ಥಾನದ ಪಾವಿತ್ರತೆಯನ್ನು ಉಳಿಸಿಕೊಳ್ಳಬೇಕಾದರೆ ಮಾನ್ಯ ಜೆ.ಹೆಚ್.ಪಟೇಲ್ has no other option but to straighta-way submit his resignation, even without entering the present session of

the Assembly.

ಇದನ್ನು ಅವರು ಮಾಡಬೇಕಾಗುತ್ತದೆ. ಉತ್ತರ ಕರ್ನಾಟಕದ ನೀರಾವರಿ ಯೋಜನೆಗೆ ಎರಡು ವರ್ಷದಲ್ಲಿ ಐದು ಸಾವಿರಕೋಟಿ ವೆಚ್ಚಮಾಡುವುದಾಗಿ ಹೇಳಿಕೆ ಮಾಡಿದ್ದಾರೆ. ಹೇಳಿಕೆಗಳಂತು ಬಹಳ ಚೆನ್ನಾಗಿದೆ. ಆದರೆ ಎಷ್ಟು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ನಾವು ಹೇಳಿದ್ದೇವೆ. ಆದ್ದರಿಂದ ಕರ್ನಾಟಕ ರಾಜ್ಯದ ಹಿತಾಸಕ್ತಿಯನ್ನು ಅದು ಕಾವೇರಿ ವಿಚಾರದಲ್ಲಿ ಇರಬಹುದು ಕೃಷ್ಣಾದ ವಿಚಾರದಲ್ಲಿ ಇರಬಹುದು ಬಲಿಕೊಟ್ಟಂಥ ತಮ್ಮ ಸರ್ಕಾರ ಕಡೆಯ ಪಕ್ಷ ಸಿ.ಬಿ.ಐ. ಪ್ರೋಬ್‌ಗೆ ನಮ್ಮ ವೈಜನಾಥಪಾಟೀಲ್ ಏನು ವರದಿಯನ್ನು ಕೊಟ್ಟರು ಅವರು ಆ ರೀತಿ ವರದಿಯನ್ನು ವೈಜನಾಥ್ ಪಾಟೀಲ್‌ರವರು ಕೊಟ್ಟಾಗ ತಾವು ಬಹಳ ಹೀನಾಯಮಾನವಾಗಿ ಅವರಿಗೆ ಹಿಂಸೆ ಕೊಟ್ಟಿರಿ, ಆದರೆ ಇವತ್ತು ಸಿ.ಎ.ಜಿ . ರವರು ಅ ವರದಿಯು ನೂರಕ್ಕೆ ನೂರು ಪಾಲು ಮಾತ್ರವಲ್ಲ ನೂರಕ್ಕೆ ಸಾವಿರ ಪಾಲು ಸತ್ಯವೆಂದು ಹೇಳಿದ್ದಾರೆ. ಆದ್ದರಿಂದ ಮುಖ್ಯ ಮಂತ್ರಿ ಪದವಿಯನ್ನು ಮಾನ್ಯ ವೈಜನಾಥಪಾಟೀಲ್ ರವರಿಗೆ ಕೊಡಬೇಕಾಗುತ್ತದೆ. ಉಳಿದಿರುವ ಒಂದು ತಿಂಗಳ ಮಟ್ಟಿಗಾದರು ಅವರು ಮುಖ್ಯಮಂತ್ರಿ ಯಾಗುತ್ತಾರೆ. ಏಕೆಂದರೆ You must appreciate him.

ಕೃಷ್ಣ ನದಿ ನೀರಿನ ಬಗ್ಗೆ ಸರಿಯಾದ ಎಚ್ಚರಿಕೆಯನ್ನು ಸರಿಯಾದ ಘಳಿಗೆಯಲ್ಲಿ ಕೊಟ್ಟವರು ಮಾನ್ಯ ವೈಜನಾಥಪಾಟೀಲರು. ಆದ್ದರಿಂದ I think this cannot be vacant. Sri Vaijyanath Patil is highly suitable to occupy the seat because, at least,

ಆ ಕೃಷ್ಣ ನದಿ ನೀರಿನ ಮುತುವರ್ಜಿಯನ್ನು ಯಾರೇ ಬರಲಿ ನಿರ್ಭಯವಾಗಿ ಪಕ್ಷಾತೀತವಾಗಿ ಹೆದರದೆ ಅಂಜದೆ ಅಳುಕದೆ ಸತ್ಯವನ್ನೇ ಎತ್ತಿಹಿಡಿಯಬೇಕೆಂದು ಏನು ವರದಿ ಕೊಟ್ಟಿದ್ದಾರೆ ಅದು ಸಿ ಎ. ಜಿ. ವರದಿಯಿಂದ ನೂರಕ್ಕೆ ನೂರು ಪಾಲು ಸತ್ಯವೆಂದು ಬಂದಿದೆ.

ಆದ್ದರಿಂದ ಇದರ ಬಗ್ಗೆ ಸಿ.ಬಿ.ಐ ವಿಚಾರಣೆ ಆಗಬೇಕು. ಮತ್ತು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಕೊಟ್ಟಂಥ ಮಾತನ್ನು ಉಳಿಸಿಕೊಳ್ಳಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಪಾಲಿನ ಸಂರಕ್ಷಣೆಗೆ ಎರಡು ಸಾವಿರ ಇಸವಿಯ ನಂತರವೂ ಕಾನೂನು ಸಮರ ಎಂದು ಹೇಳುತ್ತಿದ್ದಾರೆ. ಈ ಸದನ ಮುಗಿದ ನಂತರ ಯಾವ ಸರ್ಕಾರ ಉಳಿಯುತ್ತದೆ, ಏನಾಗುತ್ತದೆ ಎಂಬ ಪ್ರಶ್ನೆ ಅತ್ಯಂತ ಗಾಢವಾಗಿದೆ. ಮುಂದಿನ ಭವಿಷ್ಯ ಏನಾಗುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ಎರಡು ಸಾವಿರ ವರ್ಷಕ್ಕೆ ಅಂದರೆ ಹೆಚ್ಚು ಕಮ್ಮಿ ಇನ್ನು ಒಂಬತ್ತು ತಿಂಗಳು ಉಳಿದಿದೆ. ಈ ಸಮಯದಲ್ಲಿ ಇವರಿಗೆ ಇರತಕ್ಕ ಖರ್ಚು ಮಾಡತಕ್ಕ ವ್ಯವಸ್ಥೆಯಲ್ಲಿ ಅಷ್ಟು ಹಣವನ್ನು ಖರ್ಚುಮಾಡಲು ಸರ್ಕಾರಕ್ಕೆ ಶಕ್ತಿ ಇದೆಯೇ?ಇವರು ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಹಾಕಿ ಎರಡು ಸಾವಿರ ವರ್ಷದಲ್ಲಿ ನಾವು ನೀರನ್ನು ಪೂರ್ಣವಾಗಿ ಬಳಸಿಕೊಳ್ಳಲು ಆಗಲಿಲ್ಲ. ಆದ್ದರಿಂದ ಮತ್ತೆ ಕಾಲಾವಕಾಶ ಕೊಡಬೇಕೆಂದು ಕೇಳುವುದು ಇವರ ಒಟ್ಟಾರೆ ಅಭಿಪ್ರಾಯ. ಅದನ್ನು ಸರ್ವೋಚ್ಚ ನ್ಯಾಯಾಯಲಯ ತಿರಸ್ಕಾರ ಮಾಡಿದರೆ ಕರ್ನಾಟಕ ಸರ್ಕಾರದ ನೀತಿ ಏನು?ಎರಡು ಸಾವಿರ ವರ್ಷದ ನಂತರ ನ್ಯಾಯಾಂಗ, ಕಾನೂನು ಸಮರ ಮಾಡುತ್ತದೆ ಎಂದು ತಾವು ಹೇಳುತ್ತೀರಿ. ಎರಡು ಸಾವಿರ ವರ್ಷದಲ್ಲಿ ಈ ಯೋಜನೆಯನ್ನು ನಮ್ಮ ಕೈಯಲ್ಲಿ ಮುಗಿಸಲು ಆಗುವುದಿಲ್ಲವೆಂದು ತೀರ್ಮಾನಕ್ಕೆ ತಾವು ಬಂದಿದ್ದೀರಿ. ಆ ರೀತಿ ತೀರ್ಮಾನಕ್ಕೆ ಬಂದಿರುವುದರಿಂದಲೇ

ತಾವು ಮುಂದೆ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸುತ್ತೇವೆಂದು ಹೇಳುತ್ತೀರಿ. ತಮ್ಮ ಮನವಿಯನ್ನು ಸಲ್ಲಿಸತಕ್ಕ ಸರ್ಕಾರ ಯಾವುದು? ಆ ತೀರ್ಪಿನಲ್ಲಿ ತಮ್ಮ ವಿರುದ್ಧವಾದರೆ ತಮ್ಮ ನಿಲುವು ಏನು? ಕಾವೇರಿ, ಕೃಷ್ಣದ ಬಗ್ಗೆ ಯಾವ್ಯಾವ ಸರ್ಕಾರಗಳು ಏನೇನು ಮಾಡಿವೆ ಏನೇನು ಆಗಿದೆ ಎಂಬ ಬಗ್ಗೆ ಈ ಸದನದಲ್ಲಿ ಶ್ವೇತಪತ್ರವನ್ನು ತಾವು ಮಂಡಿಸಬೇಕು. ಇದರ ಬಗ್ಗೆ ಯಾವ್ಯಾವ ಮುಖ್ಯಮಂತ್ರಿಗಳು ಏನೇನು ಹೇಳಿಕೆಗಳನ್ನು ಕೊಟ್ಟಿದ್ದಾರೆ, ಯಾವ್ಯಾವ ಸಂದರ್ಭದಲ್ಲಿ ನ್ಯಾಯಾಲಯಗಳಲ್ಲಿ ಏನೇನು ಪ್ರಮಾಣಪತ್ರವನ್ನು ನಾವು ಸಲ್ಲಿಸಿದ್ದೇವೆ ಇವೆಲ್ಲದರ ಬಗ್ಗೆ ಸದನದಲ್ಲಿ ಶ್ವೇತಪತ್ರವನ್ನು ಮಂಡಿಸಿ. ಆಗ ಸಮಗ್ರವಾಗಿ ರಾಜ್ಯದ ಜನರಿಗೆ ಅರ್ಥವಾಗುತ್ತದೆ. ಮಾನ್ಯ ನಾಗೇಗೌಡರು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು. ಇದಕ್ಕೆ ಕಾಲಾವಕಾಶ ತೆಗೆದುಕೊಳ್ಳದೆ ಒಂಭತ್ತನೆ ತಾರೀಖಿನಂದು ಸದನ ಮುಗಿಯುತ್ತದೆ. ಅಷ್ಟರೊಳಗೆ ಯಾವ್ಯಾವ ಸರ್ಕಾರಗಳು ಕಾವೇರಿ ಕೃಷ್ಣದ ಬಗ್ಗೆ ಏನೇನು ಕ್ರಮತೆಗೆದುಕೊಂಡಿವೆ, ಯಾವ್ಯಾವ ಪ್ರಧಾನ ಮಂತ್ರಿಗಳು, ಕೇಂದ್ರ ಸರ್ಕಾರ ನಮಗೆ ಏನೇನು ಭರವಸೆಗಳನ್ನು ಕೊಟ್ಟರು, ಸದನದಲ್ಲಿ ಆದಂಥ ನಿರ್ಣಯಗಳೇನು ಇವೆಲ್ಲದರ ಬಗ್ಗೆ ಬೆಳಕು ಚೆಲ್ಲತಕ್ಕಂಥ ಶ್ವೇತ ಪತ್ರವನ್ನು ಈ ಸದನದಲ್ಲಿ ಮಂಡಿಸಬೇಕು. ನಾನು ತೆಲುಗುಗಂಗಾದ ಬಗ್ಗೆ ಮೊದಲಿನಿಂದಲೂ ವಿರೋಧ ಮಾಡುತ್ತಿದ್ದೇನೆ. ಅದರಿಂದ ನಮಗೆ ಅನ್ಯಾಯವಾಗಿದೆ. ಅವತ್ತಿನ ಮುಖ್ಯಮಂತ್ರಿಗಳು ತೆಲುಗು ಗಂಗಾ ಸಮಾರಂಭದಲ್ಲಿ ಹೋಗಿ ಕುಳಿತಿದ್ದರು. ಅವತ್ತಿನ ಆಂಧ್ರದ ಮುಖ್ಯಮಂತ್ರಿಯಾಗಿದ್ದಂಥ ಶ್ರೀ ಮಾನ್ ಎನ್.ಟಿ.ರಾಮರಾವ್‌ರವರ ಬೆಂಬಲವನ್ನು ಪಡೆಯುವುದಕ್ಕೋಸ್ಕರ ಅವರು ಒಂದು ಕಡೆ ಕುಳಿತಿದ್ದರು.

ಕರುಣಾನಿಧಿಯವರ ಬೆಂಬಲ ಕೇಳುವವರು ಕೆಲವರು, ಎನ್‌ಟಿ ರಾಮರಾವ್ ಬೆಂಬಲ ಕೇಳಿದವರು ಕೆಲವರು, ನರಸಿಂಹರಾಯರಿಗೆ ಬೆಂಬಲ ಕೊಡುವುದಕ್ಕೆ ಕೆಲವರು. ಹೀಗೆ ಇಂಥ ಅನೇಕ ಜನರಿಗೆ ಬೆಂಬಲ ಕೊಡಲು ಹೋಗಿ ಕರ್ನಾಟಕದ ಕತೆಯು ಕಣ್ಣೀರಿನ ಕತೆಯಾಗಿದೆ. ಹೀಗೆ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಸಮಗ್ರವಾದ ಒಂದು ಶ್ವೇತಪತ್ರವನ್ನು ಸರಕಾರದವರು ಹೊರಡಿಸ ಬೇಕು. ಇವತ್ತು ನೀವು ಬಚಾವತ್ ವರದಿಗೆ ಬದ್ಧರಲ್ಲ. ಬಚಾವತ್ ತೀರ್ಪು ನಮಗೆ ಬೇಕಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಇಲ್ಲದೆ ಹೋದರೆ ಇವತ್ತಿನ ಪರಿಸ್ಥಿತಿಯಲ್ಲಿ ಸರ್ವೋಚ್ಚನ್ಯಾಯಾಲಯ ದಲ್ಲಿ ಅವರು ತೆಗೆದುಕೊಂಡಿರತಕ್ಕಂಥ ನಿರ್ಧಾರಗಳು ಇದುವರೆಗೆ ಅವರು ಕೊಟ್ಟಿರತಕ್ಕಂಥ ತೀರ್ಪುಗಳು, ಮುಂತಾಗಿ ನೋಡಿದರೆ ನಮ್ಮ ಪರವಾಗಿ ತೀರ್ಪುಗಳು ಬರುತ್ತವೆ ಎಂಬ ನಂಬಿಕೆ ನನಗಂತೂ ಇಲ್ಲ. ಎರಡು ವರ್ಷಗಳೊಳಗಾಗಿ ಈ ಯೋಜನೆಗಳನ್ನು ಮುಗಿಸತಕ್ಕಂಥ ಶಕ್ತಿಯು ನಿಮ್ಮ ಸರಕಾರಕ್ಕೆ ಇಲ್ಲ. ಜನರಿಗೆ ಮೋಸಮಾಡಲು ಹೋಗತಕ್ಕಂಥ ಒಂದು ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡುತ್ತಿದ್ದೀರಿ. ಇದನ್ನು ಮುಗಿಸಲು ಸರಕಾರದಲ್ಲಿ ಯಾವ ಒಂದು ಶಕ್ತಿ ಸಾಮರ್ಥ್ಯವು ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಇಲ್ಲವಾದಲ್ಲಿ ಬಚಾವತ್ ಅವಾರ್ಡ್‌ಗೆ ನಾವು ಬದ್ಧರಲ್ಲ ಎಂಬ ಮಾತನ್ನು ಹೇಳಬೇಕೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

+ **ಶ್ರೀ ಕೆ.ಎನ್.ನಾಗೇಗೌಡ** (ಬೃಹತ್ ನೀರಾವರಿ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ವಿರೋಧಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಮತ್ತಿತರ ಸ್ನೇಹಿತರು ತಂದಿರತಕ್ಕಂಥ ನಿಲುವಳಿ ಸೂಚನೆಯು ರಾಜ್ಯದ ಹಿತದೃಷ್ಟಿಯಿಂದ ಬಹಳ ಮುಖ್ಯವಾಗಿರುವುದರಿಂದ ನಾನು ಯಾವುದೇ ರೀತಿಯ ಟೆಕ್ನಿಕಲ್ ಅಬ್‌ಜೆಕ್ಷನ್‌ನ್ನು ತೆಗೆಯಲಿಲ್ಲ. ತಾವುಗಳು ನಿಲುವಳಿ ಸೂಚನೆಗೆ ಪ್ರಿಲಿಮಿನರಿ

ಸಬ್‌ಮಿಷನ್‌ಗೆ ಅವಕಾಶವನ್ನು ಮಾಡಿಕೊಟ್ಟು ಅದರಿಂದ ಉತ್ತಮವಾದಂಥ ಸಲಹೆಗಳು ಬಂದು ಅನುಕೂಲವಾಗಲಿ ಎಂದು ಅವರ ಅನಿಸಿಕೆಗಳನ್ನು ಗಮನಿಸಿದ್ದೇನೆ. ಅವರುಗಳು ಬಹಳಷ್ಟು ಸುದೀರ್ಘವಾಗಿ ಕೃಷ್ಣಜೊತೆಗೆ ಕಾವೇರಿಯನ್ನೂ ಸೇರಿಸಿ, ಕಾವೇರಿ ಜೊತೆಗೆ ಮೈಸೂರು ಮಹಾ ರಾಜರನ್ನೂ ಸೇರಿಸಿ, ವ್ಯಾಖ್ಯಾನ ಮಾಡಿದ್ದಾರೆ ಎಂಬ ಬಗ್ಗೆ ನನ್ನ ಯಾವ ತಕರಾರೂ ಇಲ್ಲ. ಮಾನ್ಯ ಸದಸ್ಯರಾದ ಬಸವನಗೌಡರು ತಮ್ಮ ಭಾಷಣದಲ್ಲಿ ಈ ವಿವಾದದಲ್ಲಿ ಯಾರ್‍ಯಾರು ಎಷ್ಟೆಷ್ಟು ಪಾಲು ಎನ್ನತಕ್ಕಂಥಾದ್ದನ್ನು ಒಬ್ಬ ರೈತರ ಮಗನಾಗಿ, ಆ ಭಾಗದ ಸದಸ್ಯರಾಗಿ ಸೂಕ್ಷ್ಮವಾಗಿ ಒಂದೇ ವಾಕ್ಯದಲ್ಲಿ ಹೇಳಿದ್ದಾರೆ. ವಿಷಯದ ಮಹತ್ವವನ್ನರಿತು ಅವರುಗಳು ಹೇಳಿದ ಎಲ್ಲಾ ಮಾತುಗಳನ್ನು ಚಕಾರವೆತ್ತದೆ ನಾನು ಕೇಳಿಕೊಂಡಿದ್ದೇನೆ. ಆದರೆ ಸರಕಾರದ ಪರವಾಗಿ ವಾಸ್ತವಾಂಶಗಳನ್ನು ಈ ಸದನಕ್ಕೆ ತಿಳಿಸತಕ್ಕಂಥ ಜವಾಬ್ದಾರಿಯ ಕೂಡ ನನ್ನ ಮೇಲಿದೆ. ಈ ಯೋಜನೆಗೆ ಸರಕಾರವು ದುಡ್ಡು ಖರ್ಚು ಮಾಡಿದೆ ಕೆಲಸವನ್ನು ಮಾತ್ರ ಮಾಡಿಲ್ಲ ಎಂಬ ಮಾತನ್ನು ಹತ್ತಾರು ಸಾರಿ ಹೇಳಿಕೊಂಡು ಬಂದಿದ್ದಾರೆ. ನಾನು ಮಾನ್ಯ ಖರ್ಗೆಯವರಿಗೆ, ನಂಜೋಗೌಡರಿಗೆ, ಜಯಚಂದ್ರರವರಿಗೆ ಕೃತಜ್ಞನಾಗಿದ್ದೇನೆ. ಅವರುಗಳು ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ನೀರಿನ ವಿಚಾರದಲ್ಲಿ ರಾಜಕೀಯ ಮಾಡಬೇಡಿ, ಅದು ರಾಜ್ಯದ ರೈತರ ಹಿತವನ್ನು ಕಾಪಾಡತಕ್ಕಂಥದ್ದು, ರಾಜ್ಯದ ಕಲ್ಯಾಣ ಮತ್ತು ಆರ್ಥಿಕ ಪ್ರಗತಿಯನ್ನು ಮಾಡತಕ್ಕಂಥದ್ದು , ಮುಂತಾಗಿ ಹೇಳುತ್ತಾ ಎಲ್ಲರೂ ಅದೇ ಮಾತುಗಳನ್ನು ಆಡಿದರು. ಹೀಗೆ ಮಾತನಾಡುತ್ತಾ ಎಲ್ಲರೂ ರಾಜಕೀಯವನ್ನೇ ಮಾಡವುದನ್ನು ಬಿಟ್ಟಿಲ್ಲ. ನಾನು 1972ರಿಂದ ನೋಡಿಕೊಂಡು ಬಂದಿದ್ದೇನೆ. ನಾನು ನೀರಾವರಿ ಪ್ರದೇಶದಲ್ಲಿ ಹುಟ್ಟಿ, ನೀರಾವರಿಯಲ್ಲಿ ಇಂಜಿನಿಯರಿಂಗ್ ಓದಿ, ಅಲ್ಲಿಯೇ ರಾಜಕಾರಣವನ್ನು ಮಾಡಿಕೊಂಡು ಬಂದುದರಿಂದ ನಾನು ನೋಡಿದ್ದೇನೆ. ಮಾನ್ಯ ಖರ್ಗೆಯವರು ಈ ವಿಚಾರದಲ್ಲಿ ಬಹಳ ವರ್ಷಗಳಿಂದ ಯಾವದೇ ನಿಯಮಗಳ ಅಡಿಯಲ್ಲಿ ಭಾಷಣ ಮಾಡುತ್ತಾ ಬಂದಿದ್ದಾರೆ. ನಾವು ಅವರಿಗೆ ನಾವು ಮಾಡಿದ ಕೆಲಸಕಾರ್ಯಗಳನ್ನು ತಾವುಗಳು ನೋಡಬೇಕು, ತಾವುಗಳು ಆ ಪ್ರದೇಶದವರು. ತಾವುಗಳು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ, 1972ರಿಂದಲೂ ತಮ್ಮನ್ನು ನಾನು ಸ್ನೇಹಿತನಾಗಿ ಕಂಡಿದ್ದೇನೆ, ನಮ್ಮ ಮಾನ್ಯ ಮುಖ್ಯಮಂತ್ರಿಯವರು ಒಂದು ತೀರ್ಮಾನವನ್ನು ಮಾಡಿದರು. ಹೀಗೆ ಮಾನ್ಯ ಮುಖ್ಯಮಂತ್ರಿಯವರ ತೀರ್ಮಾನವನ್ನು ನಮ್ಮ ಸಭಾಧ್ಯಕ್ಷರು ಒಪ್ಪಿದರು. I dont know whether Mr.Moily or somebody told about ground reality.

ಅವರು ಗ್ರೌಂಡ್ ರಿಯಾಲಿಟಿಯನ್ನು ನೋಡಬೇಕೆಂದು ಹೇಳಿದರು. ಅದನ್ನು ಪರಿಶೀಲಿಸಲು ತಾವುಗಳು ಬನ್ನಿ ಎಂದು ಕೇಳಿಕೊಂಡೆವು. ಮಾನ್ಯ ಸಭಾಧ್ಯಕ್ಷರು ಅವರನ್ನು ಕರೆದು ಇದು ಬಹಳ ಸೂಕ್ಷ್ಮ ವಿಚಾರ, ಸುಪ್ರೀಂಕೋರ್ಟನಲ್ಲಿ ವಿಚಾರವಿದೆ, ಅನೇಕ ಲೀಗಲ್, ಟೆಕ್ನಿಕಲ್ ವಿಚಾರಗಳು ಇನ್‌ವಾಲ್ವ್ ಆಗಿದೆ, ಆಕ್ಟ್ ಅಮೆಂಡ್ ಆಗಿದೆ, ಕೇಂದ್ರ ಸರಕಾರದವರು ಸರ್ಟನ್ ಪವರ್ಸ್ ತೆಗೆದುಕೊಂಡಿದ್ದಾರೆ, ಈ ಎಲ್ಲಾ ಹಿನ್ನೆಲೆಯೊಳಗೆ ನಾವು ಕುಳಿತು ಒಳಗಡೆ ಮಾತನಾಡೋಣ ಎಂದು ಸಜೆಸ್ಟ್ ಮಾಡಿದರು. ಆದರೆ ಮಾನ್ಯ ವಿರೋಧ ಪಕ್ಷ ನಾಯಕರು ನಮ್ಮದು ಬೇಜವಾಬ್ದಾರಿ ಸರಕಾರ, ಬೇಜವಾಬ್ದಾರಿ ಹೇಳಿಕೆ, ಬೇಜವಾಬ್ದಾರಿ ಮುಖ್ಯಮಂತ್ರಿಗಳು ಎಂದು ಪದಗಳನ್ನು ಬಳಸುವಾಗ ಏನು ಹೇಳಬೇಕು? ನಾವು ತಮಗೆ ಆಹ್ವಾನವನ್ನು ಕೊಟ್ಟಾಗ ಬಂದು ನೋಡಿದ್ದರೆ ಆಲಮಟ್ಟಿಯಲ್ಲಿ ಎಷ್ಟು ಕೆಲಸವಾಗಿದೆ, ನಾರಾಯಣಪುರ ರೈಟ್‌ಬ್ಯಾಂಕ್‌ನಲ್ಲಿ ಎಷ್ಟು ಕೆಲಸವಾಗಿದೆ ಎಂಬುದನ್ನು

ನೋಡಬೇಕಾಗಿತ್ತು. ಅವರ ಜಿಲ್ಲೆಯೊಳಗೆ ನಾಲ್ಕು ಮೀಡಿಯಂ ಇರಿಗೇಷನ್ ಇದ್ದಾವೆ. ಅವರೂ ಕೂಡ ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ಅವರ ಸರಕಾರದ ನಂತರ ಮಾನ್ಯ ದೇವೇಗೌಡರು ಬಂದ ಮೇಲೆ, ಅದರ ನಂತರ ಇಲ್ಲಿಯವರೆಗೆ ಎಷ್ಟು ಕೆಲಸವಾಗಿದೆ ಎಂಬುದನ್ನು ನೋಡೋಣ. ಬೆಣ್ಣೆತೊರ, ಲೋವರ್‌ಮುಲ್ಲಾ, ಅಮರ್‌ಜಾ, ಚುಳಕಿ, ಮಸ್ಕಿನಾಲಾ, ಮುಂತಾಗಿ ಎಷ್ಟು ನಡೆದಿದೆ ಎಂಬುದನ್ನು ನೋಡೋಣ. ಯಾವ ಯೋಜನೆಯ ಕೆಲಸವು ಯಾವಾಗ ಪ್ರಾರಂಭವಾಯಿತು ಮತ್ತು ಎಷ್ಟು ಪ್ರೋಗ್ರೆಸ್ ಆಗಿದೆ, ಎಷ್ಟು ಹಣವನ್ನು ಖರ್ಚು ಮಾಡಿದ್ದಾಗಿದೆ ಎಂಬಿತ್ಯಾದಿ ವಿವರಗಳನ್ನು ಸ್ವತಃ ನೋಡೋಣ ಎಂದು ಹೇಳಿದ್ದೇನೆ. ಆದರೆ ನೀವು ಹಣವನ್ನು ಖರ್ಚುಮಾಡಿದ್ದೀರಿ ಪೊಟೆನ್‌ಷಿಯಲ್ ಕ್ರಿಯೋಟ್ ಮಾಡಿಲ್ಲ, ಎಂದು ಹೇಳುತ್ತೀರಿ. ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿದ್ದಕ್ಕೆ ಫಿಸಿಕಲ್ ಪ್ರೋಗ್ರೆಸ್ ಎಷ್ಟು ಎಂಬುದನ್ನು ನೋಡಿ ಎಂದರೂ ತಾವುಗಳು ಬಂದಿಲ್ಲ. ತಾವುಗಳು ಬಂದಿದ್ದಲ್ಲಿ ಈ ಮಾತುಗಳನ್ನು ಆಡುತ್ತಿರಲಿಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಾಗಾದರೆ ನಾನು ಪ್ರಾಜೆಕ್ಟನ್ನು ನೋಡಿಲ್ಲ ಎಂದು ಅರ್ಥವೇ? ನೀವು ಮಾತನಾಡುವಾಗ ಪ್ರಾಜೆಕ್ಟ ಬಗ್ಗೆ ಹೇಳಿದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಇವರು ಹೋಗುವುದಕ್ಕಿಂತ ಮೊದಲು ಆ ರೈಟಬ್ಯಾಂಕ್ ಕ್ಯಾನಲ್‌ಗೆ ನಾನು ಸ್ವತಃ ಹೋಗಿ ನೋಡಿಕೊಂಡು ಬಂದು ರಿಪೋರ್ಟ್ಸ್ ತರಿಸಿ ನೋಡಿಕೊಂಡು ಬಂದು ಈ ಸದನದಲ್ಲಿ ನಾನು ಮಾತನಾಡಿದ್ದೇನೆ. ಇವರು ಎನ್‌ಟ್ರಸ್ಟ್‌ಮೆಂಟ್ ಹೇಗೆ ಮಾಡಿದರು, ಯಾವ ರೀತಿಯಾಗಿ ಕ್ಲೈಮ್ಸ್‌ಕೊಟ್ಟಿದ್ದಾರೆ, ಎಲ್ಲೆಲ್ಲಿ ಕಲ್ಲುಗಳಿವೆ, ಲೀಡ್ ಹೇಗೆ ಕೊಟ್ಟರು?ಲಿಫ್ಟ್ ಹೇಗೆ ಕೊಟ್ಟರು, ಸಾಫ್ಟ್ ಅನ್ನು ಹಾರ್ಡ ಹೇಗೆ ಮಾಡಿದರು ಮುಂತಾಗಿ ಎಲ್ಲಾ ವಿಷಯಗಳನ್ನೂ ಕೂಲಂಕುಷವಾಗಿ ಪ್ರಸ್ತಾಪ ಮಾಡಿಯೇ ನಾನು ಸಿಬಿಐ ಎನ್‌ಕ್ವಾಯರಿ ಮಾಡಿ ಎಂದು ಹೇಳಿದ್ದು. ಆದ್ದರಿಂದ ನಾನು ಪುನಃ ನಿಮ್ಮ ಜೊತೆಯಲ್ಲಿ ಬರಬೇಕೆಂದು ಹೇಳಿದ್ದೀರಿ. ನೀವು ಜಿಲ್ಲಾ ಮಟ್ಟದಲ್ಲಿ ರಿವ್ಯುಗೆ ಬಂದಾಗ ಐದು ನಿಮಿಷ ರಿವ್ಯು ಮಾಡುವುದಿಲ್ಲ. ಆದ್ದರಿಂದ ನಾನು ನಿಮ್ಮ ಜೊತೆಗೆ ಬಂದು ಒಂದು ದಿನ, ಎರಡು ದಿನಗಳ ಕಾಲ ಗೆಸ್ಟ್‌ಹೌಸ್‌ನಲ್ಲಿ ಕುಳಿತುಕೊಳ್ಳಲು ಆಗುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ :- ಇವರು ನೋಡಿದ್ದು ಒಂದು ವರದಿ, ನಾನು ಹೇಳಿದರೆ ಇವರು ಒಪ್ಪುವುದಿಲ್ಲ. ಅದಕ್ಕೆ ಇಬ್ಬರೂ ಮಾಡಬೇಕೆಂದು ಸ್ಪೀಕರ್ ಹೇಳಿದರು.

After Estimates Committee's report, the House has discussed it actually. Finally the House has agreed that on the direction of the Speaker. Let the leader of the Opposition and the chief minister make joint inspection. The House has passed this resolution. Why you have not accepted it ?

ನಾವು ಪಾವಿತ್ಯ್ರತೆ ಉಳಿಸಿಲ್ಲ ಎಂದು ಹೇಳುತ್ತೀರಲ್ಲ. ನೀವು ಪಾವಿತ್ರ್ಯತೆಯನ್ನು ಉಳಿಸಿದ್ದೀರಾ? ಮಾನ್ಯ ಅಧ್ಯಕ್ಷರು ಹೇಳಿದ ಮಾತಿಗೆ ಬೆಲೆಕೊಟ್ಟು ನೀವು ಬಂದಿದ್ದರೆ ಎಲ್ಲಾ ವಿಷಯಗಳು ತಮಗೆ ಅರಿವಾಗುತ್ತಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾವು ನಿಮ್ಮೊಂದಿಗೆ ಬರುವುದರಲ್ಲಿ ಅರ್ಥವಿಲ್ಲ. ನಾವು ನೋಡಿದ್ದೇವೆ. ಇದನ್ನು ಎನ್‌ಕ್ವಾಯರಿ ಮಾಡಿಸಿ ಎಂದು ಹೇಳಿದ್ದೇವೆ. ನೀವು ಎನ್‌ಕ್ವಾಯರಿ ಮಾಡುವುದಿಲ್ಲ. ಆದರೆ ತಮ್ಮ ಜೊತೆ ಬನ್ನಿ ಅಂದರೆ ಹೇಗೆ? The records are there and

records will speak. CAG report is there. Estimate committee report is there. what more you want ?

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಅಧ್ಯಕ್ಷರೇ, ಬೇಕಾದಷ್ಟು ವಿಚಾರಗಳನ್ನು ಮಾನ್ಯ ಖರ್ಗೆಯವರು, ವೀರಪ್ಪ ಮೊಯಿಲಿಯವರು, ನಂಜೇಗೌಡ ಮತ್ತಿತರು ಹೇಳಿದ್ದಾರೆ. ನಾನು ನನ್ನ ಮಾತುಗಳನ್ನು ಸದನದಲ್ಲಿ ಹೇಳಬೇಕಾಗುತ್ತದೆ. ನನ್ನ ಮಾತುಗಳನ್ನು ಮುಗಿಸಿದ ಮೇಲೆ ಕ್ಲಾರಿಫಿಕೇಷನ್ ಕೇಳಲು ತಾವು ಅವಕಾಶ ಕೊಟ್ಟರೆ ನನ್ನ ಅಭ್ಯಂತರವಿಲ್ಲ. ಆದರೆ ತಾವುಗಳು ಆರೋಪಗಳನ್ನು ಮಾಡಿದಾಗ ಈ ಸದನದಲ್ಲಿ ಮುಖ್ಯಮಂತ್ರಿಯವರು ಸ್ಟೇಟ್‌ಮೆಂಟ್ ಮಾಡಿದ್ದರು. ಆ ಸ್ಟೇಟ್‌ಮೆಂಟಿಗೆ ಅರ್ಥವಿಲ್ಲ, ಜನರು ನಿಮ್ಮ ತಪ್ಪಿಗೆ ನೇಣು ಹಾಕುತ್ತಾರೆ ಎಂದೆಲ್ಲಾ ಹೇಳಿದ್ದೀರಿ. ಹಾಗೆಂದರೆ ನೀವೇನು ನಮ್ಮ ಭವಿಷ್ಯವನ್ನು ಬರೆದಿದ್ದೀರಾ? ಇವರು ಹೀಗೆಲ್ಲಾ ಹೇಳುವಾಗ ನಾವು ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. ನಾವು ಕೂಡ ಹೇಳಬೇಕಾಗುತ್ತದೆ. ಯಾರು ಕೃಷ್ಣ ಕಾವೇರಿ ಯೋಜನೆಗಳ ಬಗ್ಗೆ ಅನ್ಯಾಯ ಮಾಡಿದ್ದಾರೆಂಬುದನ್ನು ಚರ್ಚೆ ಮಾಡೋಣ, ನಾವು ಕೂಡ ಬಹಳ ವರ್ಷಗಳಿಂದ ನೋಡಿಕೊಂಡು ಬಂದಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ಕೆಟ್ಟ ಕೆಲಸಗಳಲ್ಲಿ ನಾವು ಭಾಗಿ ಆಗಲು ಬರುತ್ತದೆಯೇ? We don't want to become a party to such things.

ಶ್ರೀ ಕೆ.ಎನ್. ನಾಗೇಗೌಡ :- ಮಾನ್ಯ ಸದಸ್ಯರುಗಳು ಮಾತನಾಡುವಾಗ ನಾನೇನು ಮಾತನಾಡಿದೆನೆ? ಮಾನ್ಯ ಮೊಯಿಲಿಯವರು ಯಾವ ಯಾವ ಪದಗಳನ್ನು ಬಳಕೆ ಮಾಡಿದ್ದಾರೆ ಎಂಬುದನ್ನು ನಾನು ಬರೆದುಕೊಂಡಿದ್ದೇನೆ. ತಮ್ಮ ಅನಿಸಿಕೆಗಳನ್ನು ಹೇಳಲು ನಾನು ಅಭ್ಯಂತರ ಮಾಡಿಲ್ಲ. ತಲೆಯನ್ನು ನೇಣುಕಂಭಕ್ಕೆ ಹಾಕಬೇಕು. Public trial of the persons who have cheated ಆಗಬೇಕೆಂದು ಹೇಳಿದ್ದಾರೆ.

ಇದು 1976ರಲ್ಲಿ ಅವಾರ್ಡ್ ಆಗಿದ್ದು, 1976ರಿಂದ ಯಾವ ಯಾವ ಸರಕಾರ ಜನರಿಗೆ ಎಷ್ಟೆಷ್ಟು ಚೀಟ್ ಮಾಡಿದೆ ಎಂಬ ಇತ್ಯಾದಿ ವಿಚಾರಗಳ ಬಗ್ಗೆ ಸಾರ್ವಜನಿಕರ ಎದುರು ಚರ್ಚೆಮಾಡಲು ನಾವುಗಳು ತಯಾರಾಗಿದ್ದೇವೆ.We are ready for the public trial.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಪಬ್ಲಿಕ್ ಟ್ರಾಯಲ್‌ಗೆ ನೀವು ತಯಾರಾಗಿದ್ದರೆ ಸಿಬಿಐ ವಿಚಾರಣೆಗೆ ಯಾಕೆ ತಯಾರಾಗಿಲ್ಲ ಎಂಬುದನ್ನು ಹೇಳಬಹುದಲ್ಲವೇ?

4.40 ಪಿ.ಎಂ.

ಶ್ರೀ ಕೆ. ಎನ್.ನಾಗೇಗೌಡ :- ಪಬ್ಲಿಕ್ ಟ್ರಯಲ್‌ಗೆ ರೆಡಿ ಇದ್ದೇವೆ ಎಂದು ಹೇಳಿದ್ದೇವಲ್ಲಾ ಆಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಿಮಗೆ ಧೈರ್ಯ ಇದ್ದರೆ ಈ ಸಿಎಜಿ ರಿಪೋರ್ಟ್ ಮೇಲೆ You refer to CBI and I will congraatulate you, not only this matter but also including v.c.canal.

ಶ್ರೀ ಕೆ.ಎನ್.ನಾಗೇಗೌಡ :- ಸಿಎಜಿ ರಿಪೋರ್ಟ ಎಂದು ಹೇಳುತ್ತಾರೆ, ಇವತ್ತು ಆ ಕೆಲಸ

ಮಾಡಬೇಕಾಗಿದ್ದರೆ We have saved more than 250 crores.

ಏನು ದೇವೇಗೌಡರು ಕೆಲಸ ಕೊಟ್ಟರೋ ಇವತ್ತು ಆ ಕೆಲಸ ಮಾಡಬೇಕಾಗಿದ್ದರೆ ಒಂದು ಸಾವಿರ ಕೋಟಿ ರೂಪಾಯಿ ಬೇಕಾಗಬಹುದು.ಆ ಒಂದು ಸಾವಿರ ಕೋಟಿಯಲ್ಲಿ 250ಕೋಟಿ ರೂಪಾಯಿ ಸರ್ಕಾರಕ್ಕೆ ಜನರಿಗೋಸ್ಕರ ಉಳಿಸಿದ್ದೇವೆ ಎನ್ನುವ ಅಕೌಂಟನ್ನು ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಆ ಪ್ರೋಸೆಸ್ ಅಡಾಪ್ಟ್ ಮಾಡದೇ ಇವನ್ನೆಲ್ಲಾ ಶುರು ಮಾಡಿದ ಮೇಲೆ ಇಲ್ಲಿ ಟೆಂಡರ್‌ಅನ್ನು ಪ್ರೋಸೆಸ್ ಮಾಡುವುದಕ್ಕೆ ಹೋಗಿ ನಾವು ಯುಕೆಪಿ ಯಲ್ಲಿ ಎಷ್ಟು ನಷ್ಟವಾಗಿದೆ ಎಂದು ನಮಗೆ ಗೊತ್ತಿದೆ. ಎಷ್ಟು ಟೈಂ ವೇಸ್ಟ್ ಮಾಡಿಕೊಂಡಿದ್ದೇವೆ, ಇವರ ಟೀಕೆಗಳಿಗೆ ಮಾತುಗಳಿಗೆ ಒಪ್ಪಿ ನಾವು ಆಯಿತು ಡೈರೆಕ್ಟ್ ಎಂಟ್ರುಸ್ಟ್‌ಮೆಂಟ್ ಬೇಡ, ಟೆಂಡರ್ ಕರೆಯೋಣ ಎಂದು ಹೋಗಿ ಎಷ್ಟು ಸ್ಲೋ ಆಗಿದೆ ಎನ್ನುವುದೂ ನಮಗೆ ಗೊತ್ತಿದೆ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಸೂಕ್ಷ್ಮವಾಗಿ ಪ್ರಧಾನವಾಗಿ ಒಂದೆರಡು ಮೂರು ವಿಚಾರಗಳನ್ನು ಹೇಳುತ್ತೇನೆ. ಧೈರ್ಯದ ಬಗ್ಗೆ ಸಿಬಿಐ ರಿಪೋರ್ಟ್‌ಬಗ್ಗೆ ಏನೂ ಇಲ್ಲ. ಜನರು ಒಪ್ಪಿದ್ದಾರೆ. ಆ ಪ್ರದೇಶಕ್ಕೆ ಹೋಗಿ ಕೇಳಿದರೆ ನಾರಾಯಣಪುರ ಕೆನಾಲ್‌ನಲ್ಲಿ ಯಾವ ರೀತಿ ಕೆಲಸವಾಗಿದೆ, ಯಾವ ರೀತಿ ಪ್ರೋಗ್ರೆಸ್ ನಡೆದಿದೆ ಎನ್ನುವುದಕ್ಕೆ ಜನರನ್ನು ಕೇಳಬೇಕು. ನಮ್ಮ ಮೊಯಿಲಿಯವರು ಹೇಳಿದಂತೆ ಗ್ರೌಂಡ್ ರಿಯಾಲಿಟಿ ನೋಡಿದರೆ ಅವರು ನಿಜವಾಗಿ ಅಪ್ರಿಷಿಯೇಟ್ ಮಾಡುತ್ತಾರೆ. ಗ್ರೌಂಡ್ ರಿಯಾಲಿಟಿ ನೋಡಿಲ್ಲ. ಅವರ ಜಿಲ್ಲೇಯದೇ ಆದರೂ ಅವರು ಗ್ರೌಂಡ್ ರಿಯಾಲಿಟಿ ನೋಡಲಿಲ್ಲ. ಅದೇ ಬಂದಿರುವುದು ನಮಗೆ ಸಮಸ್ಯೆ ಇಲ್ಲಿ. 32 ಸಾವಿರ ಎಕರೆ ನೀವು ಪೊಟೆನ್ಷಿಯಲ್ ಕ್ರಿಯೇಟ್ ಮಾಡಲಿಲ್ಲ ಎನ್ನುವ ಮಾತನ್ನು ಹೇಳಿದರು. ಗ್ರೌಂಡ್ ರಿಯಾಲಿಟಿ ನೋಡಿದ್ದರೆ ಅವರಿಗೆ ಯಾವ ಯಾವ ಪ್ರಾಜೆಕ್ಟ್ ಎಂದು ಹೇಳಿ ಅರ್ಥವಾಗುತ್ತದೆ. ಅವರು ಹೇಳಿದರು,ಪದೇ ಪದೇ ಹೇಳಿಕೆ ನೀಡಿ ಇವತ್ತು ಕೋರ್ಟಿಗೆ ಹೋಗಿದ್ದಾರೆ ಎಂದರು. ಈ ಸದನದಲ್ಲೇ ಚರ್ಚೆಯಾಗಿದೆ. ಆಂಧ್ರದಲ್ಲಿ ಅವರು ಯಾವಾಗ ಕೋರ್ಟಿಗೆ ಹೋಗಿದ್ದು? ಸ್ಟೇಟ್‌ಮೆಂಟ್ ಕೊಟ್ಟ ಮೇಲೆ ಹೋದರೇ? ಸ್ಟೇಟ್‌ಮೆಂಟ್ ಕೊಟ್ಟಮೇಲೆ ಹೋಗಲಿಲ್ಲ. ನಾವು 173ಕ್ಕೆ ಡಿಸೈಡ್ ಮಾಡಿ 173ನ್ನು ನಾವು ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿ ಪ್ಲಾನ್‌ಮಾಡಿ ಮೊಯಿಲಿಯವರು ಹೇಳಿದಂತೆ 91ರಲ್ಲಿ ಪ್ಲಾನಿಂಗ್‌ಕಮೀಷನ್ ಪ್ರತಿಯೊಬ್ಬರೂ ಸಹಾ ಅಪ್ರೂವಲ್ ಕೊಟ್ಟು No objection to this project. ಎಂದು ಹೇಳಿದ್ದಾರೆ. 1991ರಲ್ಲಿ ಪ್ಲಾನಿಂಗ್ ಕಮೀಷನ್ ಅಪ್ರೂವಲ್ ಆಗಿದೆ ಎಂದು ತಾವು ಏನು ಹೇಳಿದಿರಿ, ಈ ಸದನದಲ್ಲಿ ಕೇಳಿದರು ಸಿಡಬ್ಲ್ಯೂ ಅಪ್ರೂವಲ್ ಆಗಿದೆಯಾ ಎಂದು. ಯೂನಿಯನ್ ಗೌರ್ನಮೆಂಟ್ ಅಪ್ರೂವಲ್ ಆಗಿದೆಯಾ ಯಾವ ಅಪ್ರೂವಲ್ ಮೇಲೆ ತಾವು ಪ್ರಾರಂಭ ಮಾಡಿದಿರಿ ಎಂದು ಹೇಳಿದಾಗ ನಾವು ಕೋರ್ಟುಗಳಿಗೆ, ಸಿಡಬ್ಲ್ಯೂಸಿಗೆ ಸದನಕ್ಕೆ ಬಹಳ ಸ್ಪಷ್ಟವಾಗಿ ನಾನು 1991ರಲ್ಲಿ there is no objection to invest money upto 524 including certain gates.

ಎನ್ನುವ ಮಾತನ್ನು ನಾವು ಹೇಳಿದ್ದೇವೆ. ಆದರೆ ಇವತ್ತಿನ ದಿವಸ ಅವರು ಕೋರ್ಟಿಗೆ ಹೋಗಿರುವುದೇ ವಿನಾ ನಮ್ಮ ಹೇಳಿಕೆಗಳಿಂದ ಅಲ್ಲ ಅವರು ಕೋರ್ಟಿಗೆ ಹೋಗಿರುವುದು. ಇದನ್ನೇ ನಾನು ರಾಜಕೀಯ ಎಂದು ಹೇಳುವುದು. ಅಲ್ಲಿ ಈ ಸದನಕ್ಕೆ ಗೊತ್ತಾದ ತಕ್ಷಣವೇ ನಮ್ಮ ನಾರಿಮನ್‌ರವರು ಹೈದರಾಬಾದ್‌ಗೆ ಹೋಗಿ ಆಂಧ್ರ ಹೈಕೋರ್ಟ್‌ಗೆ ಜ್ಯುರಿಸ್‌ಡಿಕ್ಷನ್ ಇಲ್ಲ ಎಂದು ಹೇಳಿ ಆ ಕೇಸನ್ನು ಡಿಸ್‌ಮಿಸ್‌ಮಾಡಿ ಆವತ್ತು ನಾವು ಆಂಧ್ರ ಹೈಕೋರ್ಟಿನಲ್ಲಿ ಕೇಸನ್ನು ಗೆದ್ದೆವು. ಅದಕ್ಕೆ ಇವರು

ಕಂಗ್ರ್ಯಾಚುಲೇಷನ್ ಹೇಳಲಿಲ್ಲ . ಆಂಧ್ರದ ಹೈಕೋರ್ಟಿನಲ್ಲಿ ಕೇಸ್ ಗೆದ್ದಾಗ ಒಂದು ಒಳ್ಳೆಯ ಮಾತನಾಡಲಿಲ್ಲ. ಸುಪ್ರೀಂ ಕೋರ್ಟಿಗೆ ಹೋಯಿತು. ಮಾನ್ಯ ಮೊಯಿಲಿಯವರು ಹೇಳಿದರು, ಮಹಾಬಲೇಶ್ವರದಲ್ಲಿ ಮೀಟಿಂಗ್ ಮಾಡಿದೆವು. ಶ್ರೀಶೈಲದಲ್ಲಿ ಮೀಟಿಂಗ್ ಆಗಿಲ್ಲ. ಮಹಾಬಲೇಶ್ವರ ಮತ್ತು ತಿರುಪತಿಯಲ್ಲಿ ಮೀಟಿಂಗ್ ಆಗಿದೆ. ನಮ್ಮ ಕಛೇರಿಯಿಂದ ತರಿಸಿ ನೋಡಿದರೆ ಅಲ್ಲಿ ಪ್ರೋಸೀಡಿಂಗ್ಸ್ ಮಾತ್ರ ಎಕ್ಸ್‌ಚೇಂಜ್ ಮಾಡಿಕೊಳ್ಳುವುದಕ್ಕೆ ಅಷ್ಟೇ ಕನ್‌ಕ್ಲೂಡ್ ಆಗಿರುವುದು. ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲ, ನೀವು ಫ್ಯಾಕ್ಸ್ ಇಟ್ಟುಕೊಂಡಿದ್ದೀರಿ. No decision was taken. I hope you will agree,

Sri M.VEERAPPA MOILY :- Don't distort that. That will not help the interest of Karnataka. ಬೇಕಾದರೆ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿರುವ ನೋಟ್ಸನ್ನು ನಾನು ನಿಮಗೆ ಕೋಡುತ್ತೇನೆ. ನಿಮ್ಮ ಡಿಪಾರ್ಟಮೆಂಟ್‌ನವರು ಬೆಳಗಾದರೆ ನಿಮ್ಮ ಮುಖಕ್ಕೆ ನೇರವಾಗಿ ನೋಟ್ಸ್ ಕೊಡುವುದು ಇದ್ದರೆ I think you must hold them responsible. I have the notes. I have a note which has been circulated to us by the Department. Don't distort it. Don't defend the case of Andhra Pradesh.

(Interruptions)

Sri K.N.NAGE GOWDA :- I have to go by my office. "In the meeting of Mahablaeshwara held in 1993, it was only agreed to exhange the date on utilisation. Meet again at Sreesailam"

ಎನ್ನುವುದು ಅಲ್ಲಿ ಆಗಿರುವುದು ನಮಗೆ ಅದು ಗೊತ್ತು. ಶ್ರೀಶೈಲಂ ಆದ ಮೇಲೆ ಇನ್ನೊಂದು ಮೀಟಿಂಗ್ ಆಗಿಲ್ಲ.

Sri M.VEERAPPA MOILY :- Alright you order an enquilry, I have the full notes, from your own Irrigation Department on whatever I have said. You hold an enquiry. Particularly on irrigation, to speak a word I read hundred pages. I don't speak on irrigation. Whatever I said,

ತೆಲುಗುಗಂಗಾ ಪ್ರೋಸೀಡಿಂಗ್ಸ್ ಏನು ಇದೆ, this is culled out from these proceedings which is circulated by the Irrigation Department, Government of Karnataka.

ದಯಮಾಡಿ ಇದನ್ನು ಹೇಳುವುದು ಇದ್ದರೆ ಹೇಳಿ. But this will amount to defending the Andhra Pradesh State, Please don't do that. You should defend the interest of Karnataka.

Sri.K.N. NAGEGOWDA :- I have to believe my Secretary.

(Interruptions)

Sri M.VEERAPPA MOILY :- You Sack that Secretary.

(Interruption)

ಶ್ರೀ ಕೆ.ಎಸ್.ನಾಗೇಗೌಡ :- ನನಗೆ ಗೊತ್ತಿರುವ ಹಾಗೆ ಸುಪ್ರೀಂ ಕೋರ್ಟ್...

Sri. M.VEERAPPA MOILY :-This is where we have faulted.

ಪ್ರತಿಯೊಬ್ಬರೂ ಕೂಡ ಇರಿಗೇಷನ್ ಬಗ್ಗೆ ಗಂಧಗಾಳಿ ಇಲ್ಲದೆ, interest of the Karnataka ಗೊತ್ತಿಲ್ಲದೇ ಇರುವ ಕಾರ್ಯದರ್ಶಿಗಳನ್ನು ದಿನಾ ಬೆಳಿಗ್ಗೆಯಾದರೆ ನೇಮಕ ಮಾಡುವುದು ಇದ್ದರೆ How do you run the Government ? That is why don't find fault with you. This is how they are briefing you.

ಶ್ರೀ ಕೆ. ಎನ್.ನಾಗೇಗೌಡ :- ನನಗೆ ಪೂರ್ತಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು. Exactly I Know it.ನಾನು ಇದರ ಬಗ್ಗೆ ಕೇಳಿದ್ದೇನೆ. ಹೋದ ಸಾರಿ ಸಬ್ಜೆಕ್ಟ್ ಕೂಡ ಅವರು ಎತ್ತಿದ್ದರು. ಆ ಸಬ್ಜೆಕ್ಟ್ ಬಂದಾಗ ನಾವು ಚರ್ಚೆ ಮಾಡಿದ್ದೇವೆ. ಡ್ಯಾಟಾ ಎಕ್ಸ್‌ಛೇಂಜ್ ಮಾಡಿಕೊಳ್ಳುವುದಕ್ಕೆ ಯುಟಿಲೈಜೇಷನ್ ಬಗ್ಗೆ ಮಾತ್ರ ಆಗಿದೆ. ಮತ್ತೆ ಫರ್ದರ್ ಮೀಟಿಂಗ್ ಮಾಡೋಣ ಎಂದಾಯಿತು. ಅಲ್ಲಿಯವರೆಗೂ ಈ ಮೀಟಿಂಗ್ ಆಗಿಲ್ಲ. Then Chandrababu Naidu has come into picture and different version has come.ಆಮೇಲೆ ಒರಿಜಿನಲ್ ಸೂಟ್ ಹೈದರಾಬಾದ್ ಕೋರ್ಟಿಗೆ ಹೋಯಿತು. ಸುಪ್ರೀಂ ಕೋರ್ಟಿಗೆ ನಾವು ಓ.ಎಸ್-(1)ನ್ನು ಬಿ.ಸ್ಕೀಮ್‌ಗೆ ಹಾಕಿದೆವು. ನಾವು ಓ.ಎಸ್-(1)ಹಾಕಿದಮೇಲೆ ಆಂಧ್ರದವರು ಓ.ಎಸ್-(2)ನ್ನು ಹಾಕಿದರು. ಅವೆರಡೂ ಕೂಡ ಹಿಯರ್ ಮಾಡಿಕೊಂಡು ಬಂದು ನಮಗೆ ಸ್ಕೆಲಿಟನ್ ವರ್ಕ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟರು. ಸ್ಕೆಲಿಟನ್ ವರ್ಕ್ ಮಾಡಿಕೊಂಡರೆ ನೀರನ್ನು ನಿಲ್ಲಿಸುವುದಕ್ಕಾಗುತ್ತದೆಯೇ ಎಂದು ನಮ್ಮ ಮೊಯಿಲಿಯವರು ಕೇಳಿದರು. ನಾನು ಕೇಳುತ್ತೇನೆ, ಸ್ಕೆಲಿಟನ್ ವರ್ಕ್ ಮಾಡದೆಯೇ ಪ್ಲೇಟ್ ಹಾಕುವುದಕ್ಕಾಗುತ್ತದೆಯೇ?ಸ್ಕೆಲಿಟನ್ ವರ್ಕ್ ಮಾಡದೆಯೂ ಪ್ಲೇಟ್ ಹಾಕುವುದಕ್ಕಾಗುವುದಿಲ್ಲ ಇವತ್ತು 26 ಸ್ಕೆಲಿಟನ್ ವರ್ಕಗಳಲ್ಲಿ except hoistingಬಾಕಿ ನಾವು ಎಲ್ಲಾ ಕೆಲಸಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಮಾಡಿದ್ದೇವೆ. ನಾವು ಜೂನ್ ಜುಲೈನಲ್ಲಿ ನೀರನ್ನು ಸ್ಟೋರ್ ಮಾಡಬೇಕು ಎಂದು ನಮ್ಮ ಇಂಟೆನ್‌ಷನ್ ಇತ್ತು. ಇದನ್ನು ಸುಪ್ರೀಂ ಕೋರ್ಟಿಗೆ ತಿಳಿಸಿದ್ದೇವೆ. ಆ ಹಿನ್ನೆಲೆಯೊಳಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕದ್ದು ಏನೆಂದರೆ ಜೂನ್ ಜುಲೈ, ಮಾನ್ಸೂನ್ ಒಳಗಡೆ ನಾವು ನೀರನ್ನು ಸ್ಟೋರ್‌ಮಾಡಬೇಕಾಗಿರುವುದರಿಂದ ಸ್ಕಿನ್‌ಪ್ಲೇಟ್ ಹಾಕುವುದಕ್ಕೆ ಸುಪ್ರೀಂಕೋರ್ಟ್ ಅವಕಾಶ ಕೊಡಬೇಕು. ಇಲ್ಲದೇ ಹೋದರೆ ಮಾನ್ಸೂನ್ ಹೋಗುತ್ತದೆ ಎನ್ನತಕ್ಕ ಮಾತನ್ನು ನಾವು ಹೇಳಿದ್ದೇವೆ. ಒಂದು ಸ್ಟೇಜ್‌ನಲ್ಲಿ ಎಕ್ಸ್‌ಪರ್ಟ್‌ಕಮಿಟಿ ಬಂದದ್ದು ಖರ್ಗೆಯವರು ಹೇಳಿದ್ದು ಇವೆಲ್ಲವೂ ಸತ್ಯವಾಗಿದ್ದಾವೆ. ಇವು ಪ್ರತಿಯೊಂದು ಹಂತದಲ್ಲೂ ಚರ್ಚೆಯಾಗಿವೆ. ನಾವು ಅದರ ಬಗ್ಗೆ ಹೇಳಿದ್ದೇವೆ. ಅವರೇ ಒಂದು ಮಾತನ್ನು ಹೇಳಿದರು, That expert committee or high-level expert committee is unconstitutional.ಎಂದರು. ಅದು ಅನ್ ಕಾನ್ಸ್‌ಸ್ಟಿಟ್ಯೂಷನ್ ಆದ ಮೇಲೆ court will recognise it as unconstitutional. ಎಂದು ಮಾಡುತ್ತಾರೆ. ನಾವು ಹೇಳಿದ್ದೇವೆ, ನಮ್ಮ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಬೇಕಾದಷ್ಟು ಸಾರಿ ಈ ಸದನದಲ್ಲಿ ಹೇಳಿದ್ದೇವೆ. ಆ ನಾಲ್ಕು ಮುಖ್ಯಮಂತ್ರಿಗಳು ಮಾಡಿರತಕ್ಕಂಥ ಯಾವುದೇ ಆ ಸಮಿತಿಯ ವರದಿಗೆ ರಾಜ್ಯ ಸರ್ಕಾರ ಮನ್ನಣೆ ಕೊಡುವುದಿಲ್ಲ ಎನ್ನುವ ಮಾತನ್ನು ಹತ್ತಾರು ಸಾರಿ ಹೇಳಿದ್ದೇವೆ. ಇವತ್ತು ಅದೇ ಮಾತನ್ನು ಅವರೂ ಹೇಳಿದ್ದಾರೆ. It is un-constitutional committeeಎಂದು ಹೇಳಿ. There is no Government order at all: When there is no Government recognition, when it is unconstitutional. Why should we recognise that report.

ಎನ್ನುವುದು ನಮ್ಮ ಮುಂದಿದೆ. ಇದನ್ನು ನಾವು ಆಗಲೇ ಹತ್ತಾರು ಸಾರಿ ಸರ್ಕಾರದಲ್ಲಿ ಕ್ಲಾರಿಫೈ ಮಾಡಿದ್ದೇವೆ. ಮತ್ತು ಸುಪ್ರೀಂ ಕೋರ್ಟಿನಲ್ಲಿ ಸ್ಕೆಲಿಟನ್ ವರ್ಕನ್ನು ನೀವು ಮಾಡಿ ಎಂದು ಕೊಟ್ಟಮೇಲೆ Yes, that is also I said, yes, it is a victory. 524 is also a victory.

ಅದರ ಸರ್ಕೀಟ್ ವರ್ಕ್ ಮಾಡಿ ಎಂದರೆ ನೀವು ಸ್ಕಿನ್ ಪ್ಲೇಟ್ ಹಾಕಬೇಕಾದರೆ ಸ್ಕೆಲಿಟನ್ ವರ್ಕ್ ಮಾಡಬೇಕು. Hoisting work ಆಗಬೇಕು. ಅದಾದ ಮೇಲೆ ಎಲ್ಲಾ ಹಾರಿಜಾಂಟಲ್ ರಾಡ್ಸ್‌ಗಳು ಇವೆ. ಹೆವಿ ವರ್ಕ್ ಇದೆ. 524 ಎಂದರೆ 26ಗೇಟುಗಳಿಗೂ ಹೆವಿ ವೇಟ್ ಇರತಕ್ಕಂಥದ್ದು ಇದೆ. ಆ ಹಿನ್ನೆಲೆಯಲ್ಲಿ ನಾವು ಇವತ್ತು ಮಾಡಿದ್ದೇವೆ. ಆ ಇಂಟೆನ್‌ಷನ್ ನಿಂದ ನಾವು ಇವತ್ತಿನ ದಿವಸ ಸುಪ್ರೀಂ ಕೋರ್ಟಿನಲ್ಲಿ ಒಎಸ್-1 ಒಎಸ್-2ಕೂಡ ಕಾನ್ಸ್‌ಟಿಟ್ಯೂಷನಲ್ ಬೆಂಚ್‌ಗೆ ರೆಫರ್ ಆಗಿರುವ ಪ್ರಯುಕ್ತ ಆ ಬೆಂಚ್ ಮುಂದೆ ಇದೆ. ಬಹುಶಃ ಈಗಾಗಲೇ ನಮ್ಮ ಲಾಯರ್ಸ್ ಎಲ್ಲಾ ಪ್ರಯತ್ನ ಮಾಡುತ್ತಾರೆ. ಅವರಿಗೆ ಗೊತ್ತಿರುವ ಹಾಗೆ Nariman is not a small lawyer. He is one of the leading lawyers in the whole world. He is the best lawyer. ಎಂದು ಅವರಿಗೆ ಗೊತ್ತಿದೆ. ಅವರಿಗೆ ಚೆನ್ನಾಗಿ ಅನುಭವ ಇದೆ. ಅವರು ನೋಡಿದ್ದಾರೆ ಯಾವ ರೀತಿಯಾದ ಲಾಯರ್ ಎಂದು. ಅವರಿಗೆ ಯಾವ ರೀತಿಯಾದ ರೆಪ್ಯುಟೇಷನ್ ಇದೆ ಎಂಬುದು ಅವರಿಗೂ ಗೊತ್ತಿದೆ.How much he knows about the inter-state water dispute. ಎಂಬುದು ಎಲ್ಲರಿಗೂ ಗೊತ್ತಿದೆ. He is one of the best advocates.ಅಂಥವರನ್ನು ಇಟ್ಟುಕೊಂಡು ನಾವು ಕೆಲಸ ಮಾಡಿದ್ದೇವೆ. ಇಷ್ಟು ಮಾಡಿದರೂ ಅಪ್ರೀಷಿಯೇಷನ್ ಇಲ್ಲವಲ್ಲ ಎಂದು ಬೇಸರವಾಗಿರುವುದು. ಇನ್ನು ಬೇರೆ ಅಲ್ಲ. ಹೊಸದಾಗಿ ಹುಟ್ಟಿರುವುದು ಯಾವುದೂ ಅಲ್ಲ. ಅವರು ಕೋರ್ಟಿಗೆ ಹೋದರೆ ಆ ಕೋರ್ಟಿನಲ್ಲೂ ಗೆದ್ದಿದ್ದೇವೆ ಸುಪ್ರೀಂಕೋರ್ಟಿಗೆ ಹೋಗಿದ್ದಾರೆ, ಅಲ್ಲೂ ಕೂಡ ಸ್ಕೆಲಿಟನ್ ವರ್ಕ್ ಎಲ್ಲಾ ಮಾಡಿದ್ದೇವೆ. ಈಗ ಓ.ಎಸ್-1ಮತ್ತು ಓ.ಎಸ್-2 ಕೂಡ ಕಾನ್ಸ್‌ಟಿಟ್ಯೂಷನಲ್ ಬೆಂಚ್‌ಗೆ ರೆಫರ್ ಆಗಿರುವುದು ಜುಲೈ 19ನೇ ತಾರೀಖು. ಬರುವ ತಿಂಗಳು 19ನೇ ತಾರೀಖು. ಕೇಸ್ ಹಿಯರಿಂಗ್ ಪೋಸ್ಟೆಡ್ ಆಗಬಹುದು ಎಂದು ನಮ್ಮ ಮುಂದೆ ಬಂದಿರುವ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟಿನಲ್ಲಿ ನಾವು ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಎರಡು ಸಾವಿರ ವರ್ಷಕ್ಕೆ 31ಮೇ2000ವರ್ಷದೊಳಗೆ ನಮ್ಮೆಲ್ಲಾ ಪ್ರಾಜೆಕ್ಟ್‌ಗಳನ್ನು ನಾವು ಮುಗಿಸಿಕೊಳ್ಳಬೇಕು. ಆ ಹಿನ್ನೆಲೆಯಲ್ಲಿ ನಾವು ಮುಗಿಸುತ್ತೇವೆನ್ನುವ ಮಾತನ್ನು ಅನೇಕ ಸಾರಿ ಹೇಳಿದರು. ಇಲ್ಲಿಯವರೆಗೆ ನಾನು ಆನ್-ಗೋಯಿಂಗ್ ಪ್ರಾಜೆಕ್ಟನಲ್ಲಿ ಸುಮಾರು 734ಟಿಎಂಸಿ ಯಲ್ಲಿ 5ಟಿಎಂಸಿ ಹೋದರೆ ಇನ್ನು 729ರಲ್ಲಿ ಕಂಪ್ಲೀಟೆಡ್ ಪ್ರಾಜೆಕ್ಟ್ 223 ಟಿಎಂಸಿ.

ಆನ್‌ಗೋಯಿಂಗ್ ಪ್ರಾಜೆಕ್ಟ್ 488 ಟೋಟಲ್ 711ಟಿಎಂಸಿಗೆ ನಾವು ಈಗಾಗಲೇ ಆಲ್‌ಮೋಸ್ಟ್ ಆಲ್ ಕಮಿಟೆಡ್ ಆಗಿದ್ದೇವೆ. ಆನ್ ಗೋಯಿಂಗ್ ಪ್ರಾಜೆಕ್ಟ್ ಮಾಡಿಕೊಂಡಿದ್ದೇವೆ. ಇನ್ನು ಉಳಿದು ಕೊಂಡಿರತಕ್ಕ 21ಟಿಎಂಸಿಗೆ ಮಾತ್ರ ಕೆಲಸ ಆಗಬೇಕು. ಆ 21ಟಿಎಂಸಿನಲ್ಲಿ ದೂದ್‌ಗಂಗಾಕ್ಕೆ 4 ಟಿಎಂಸಿ, ರಾಮಟಾಳ್‌ಗೆ 4.5 ಟಿಎಂಸಿ, ಭೀಮಾ ಲಿಫ್ಟ್‌ಗೆ 6 ಟಿಎಂಸಿ, ಮೈನರ್ ಇರಿಗೇಷನ್‌ಗೆ 7 ಟಿಎಂಸಿ, 21 ಟಿಎಂಸಿಗೆ ಮಾತ್ರ ನಾವು ಪ್ರಾಜೆಕ್ಟ್ ಮಾಡಬೇಕಾಗಿತ್ತು. ಅವೆಲ್ಲವೂ ಕೂಡ ಟೆಕ್ನಿಕಲ್ ಕಮಿಟಿ ಮುಂದೆ ಇರತಕ್ಕ ಹಿನ್ನೆಲೆ ಒಳಗೆ ಇನ್ನು ಒಂದು, ಒಂದೂವರೆ ತಿಂಗಳು, ಎರಡು ತಿಂಗಳಲ್ಲಿ ಈ 21ಟಿಎಂಸಿಗೆ ಸಹ ನಾವು ಪ್ರಾಜೆಕ್ಟ್‌ನ್ನು ಮಾಡುತ್ತೇವೆ. ಈಗಾಗಲೇ ಮಾನ್ಯ ನಂಜೇಗೌಡರು

ಮಾತನಾಡುತ್ತಾ ಒಂದು ಮಾತು ಹೇಳಿದರು. ನಾನೂ ಸಹ ನಾಗಾರ್ಜುನ-ಶ್ರೀಶೈಲಂನಲ್ಲಿ ಕೆಲಸ ಮಾಡುವಾಗ ಹೋಗಿದ್ದೆ ಎಂದು ಹೇಳಿದರು. ಯಾವುದೇ ಪ್ರಾಜೆಕ್ಟ್ ಅದನ್ನು ಆನ್‌ಗೋಯಿಂಗ್ ಪ್ರಾಜೆಕ್ಟ್ ಎಂದು ತೆಗೆದುಕೊಂಡರೆ ಅಲ್ಲಿ ಕಮಿಟೆಡ್ ಇರಿಗೇಷನ್ ಯುಟಿಲೈಸೇಷನ್ ಎನ್ನುವ ಪಾಯಿಂಟ್ ಬರುತ್ತದೆ. ಆ ಕಮಿಟೆಡ್ ಯುಟಿಲೈಸೇಷನ್ ಆಗಿರುವುದರಿಂದ ನಾವು ಈಗಾಗಲೇ 712ಟಿಎಂಸಿಗೆ ಕಮಿಟೆಡ್ ಆಗಿದ್ದೇವೆ. ಇನ್ನು ಉಳಿದಿರತಕ್ಕ 21 ಟಿ.ಎಂ.ಸಿ ಗೆ ಮಾತ್ರ ನಾವು ಕಮಿಟ್ ಮಾಡಿಕೊಳ್ಳಬೇಕಾಗಿದೆ ಮತ್ತು ನೀವು ಎರಡು ಮೂರು ವಿಚಾರವನ್ನು ಹೇಳಿದಿರಿ.

ಶ್ರೀ ಎಚ್ ಎನ್. ನಂಜೇಗೌಡ :- ನಾನು ಮೂರು ವಿಚಾರವನ್ನು ಕೇಳಿದೆ. ಮೊದಲನೆಯದು ಈಗ ಕ್ರಸ್ಟ್‌ಗೇಟ್ ಪ್ಲೇಟ್ಸ್ ನಾವು ಹಾಕದೇ ಹೋದರೆ 45ಟಿಎಂಸಿಎಫ್‌ಟಿ ನೀರನ್ನು ಸ್ಟೋರ್ ಮಾಡುವುದಕ್ಕೆ ಆಗುವುದಿಲ್ಲ. ಟ್ರಿಬ್ಯೂನಲ್ ಅವಾರ್ಡ್ ಪ್ರಕಾರ ಕೂಡ ನಾನು154ಟಿಎಂಸಿಎಫ್‌ಟಿ ಯಷ್ಟು ನೀರನ್ನು ಸ್ಟೋರ್ ಮಾಡುವುದಕ್ಕೆ ಅವಕಾಶವಿದೆ. ಸ್ಟೇಟಸ್ಕೋ ಆರ್ಡರ್‌ನ್ನೂ ಸುಪ್ರೀಂಕೋರ್ಟ್ ಕೊಟ್ಟಿರುವುದರಿಂದ that order is contraty to the decision of the Tribunal.

ಇದನ್ನು ಅವರ ಗಮನಕ್ಕೆ ಏಕೆ ತರಲಿಲ್ಲ? How do you wriggle out of this?

ಇದೊಂದು ವಿಚಾರ ಕೇಳಿದೆ. ಎರಡನೆಯದು ನಾನು ಕೇಳಿದ್ದು ಈಗ ನಮಗೆ ಇರುವ ನೀರಿನಲ್ಲಿ 550 ಟಿಎಂಸಿಎಫ್‌ಟಿ ಉಪಯೋಗ ಆಗಿದೆ. ಇನ್ನು 179ಟಿಎಂಸಿಎಫ್‌ಟಿ ಉಪಯೋಗ ಆಗಬೇಕು. 6ಟಿಎಂಸಿ ನೀರನ್ನು ಹರಿನಾಲಾ ಮತ್ತು ಮಾರ್ಕಂಡೇಯಕ್ಕೆ ಅಲಾಟ್ ಮಾಡಿಕೊಂಡಿದ್ದಾರೆ. 120 ಟಿಎಂಸಿಎಫ್‌ಟಿಗೆ ಕಮಿಟೆಡ್ ಆಗಿರುವುದನ್ನಾದರೂ 31ನೇ ಮೇ 2000 ಇಸವಿಯೊಳಗೆ ಅಂದರೆ ಇನ್ನು10ತಿಂಗಳೊಳಗೆ ಅದನ್ನು ಉಪಯೋಗಿಸಿಕೊಳ್ಳಬೇಕಲ್ಲ. ನಾವು ರಿವ್ಯೂ ಕುಳಿತಾಗ ಕಮಿಟೆಡ್ ಎಂದು ಆಗಬೇಕಲ್ಲಾ. ಅದೂ ಕೃಷ್ಣವಾಟರ್ ಟ್ರಿಬ್ಯೂನಲ್‌ನ ಗೈಡ್‌ಲೈನ್ಸ್‌ನಲ್ಲಿಯೇ ಆಗಬೇಕಾಗುತ್ತದೆ. ಆಂಧ್ರದವರು ನಾಗಾರ್ಜುನಸಾಗರದಲ್ಲಿ ಏನು ಮಾಡಿದರು? ಫೀಲ್ಡ್ ಕೆನಾಲ್ ಆಗಿದ್ದಿಲ್ಲ, ಡಿಸ್ಟ್ರಿಬ್ಯೂಟರಿಸ್ ಆಗಿತ್ತು. ಆದರೂ ಅದನ್ನು ಅವರು ಕಮಿಟೆಡ್ ಎಂದು ತೆಗೆದುಕೊಂಡರು. ಪ್ರಿಸರ್ವ್ ಮಾಡಲೇಬೇಕು. ಪ್ರಿಸರ್ವ್ ಮಾಡಬೇಕು ಮತ್ತು ಮೇನ್ ಕೆನಾಲೂ ಆಗಿರಬೇಕು. ಆಗ ಅದನ್ನು ಕಮಿಟೆಡ್ ಎಂದು ಅನ್ನಿಸುತ್ತಾರೆ. ಟ್ರಿಬ್ಯೂನಲ್‌ನಲ್ಲಿ ಆಗಿರತಕ್ಕದ್ದು, ಆ ಗೈಡ್ ಲೈನ್ಸ್ ಪ್ರಕಾರ ನಾವು ಕಮಿಟ್ ಮಾಡಿಕೊಳ್ಳಬೇಕು. ಮೂರನೆಯ ವಿಚಾರ ನಾನೇನು ಕೇಳಿದೆ ಎಂದರೆ ನಾವೀಗ ಸರ್‌ಪ್ಲಸ್ ವಾಟರ್ ಹಂಚಿಕೆ ಮಾಡಿಕೊಳ್ಳಬೇಕು. (ಬಿ) ಸ್ಕೀಮ್‌ದು. ಹಂಚಿಕೆ ಮಾಡಿಬಿಟ್ಟಿದ್ದಾರೆ. ನಮಗೆ 50 ಪರ್ಸೆಂಟ್ ಅವರಿಗೆ 25.25 ಪರ್ಸೆಂಟ್ ಎಂದು ಹಂಚಿಕೆ ಮಾಡಿದ್ದಾರೆ. ಆದರೆ ಒಂದು ವಿಚಾರ ಏನು ಮಾಡಿದರು? 2000 ಇಸವಿ ಆದ ಮೇಲೆ ಅದನ್ನು ಅಸೆಸ್ ಮಾಡಿ ಪಾಲು ಮಾಡಿಕೊಳ್ಳುವುದು ಈಗ ಅಸೆಸ್ ಮಾಡಿ ಎನ್ನುವ ಒಂದು ಪದ ಇರುವುದರಿಂದ ಏನಾಗುತ್ತದೆ ಸರ್‌ಪ್ಲಸ್ ವಾಟರ್ ಇದ್ದರೆ ನಾವು ಹಂಚಿಕೊಳ್ಳುವುದು ಎಲ್ಲಾ ಆಂಧ್ರದವರೇ ಅಪ್ರೋಪ್ರಿಯೇಟ್ ಮಾಡಿಕೊಂಡರೆ ತೆಲುಗು ಗಂಗಾ ಇಂತಹ ಯೋಜನೆಯೊಳಗೆ ಔಟಸೈಡ್ ಬಚಾವತ್ ಟ್ರಿಬ್ಯೂನಲ್ ಅವಾರ್ಡ್ ತೆಗೆದುಕೊಂಡರೆ ನೀವು ಏನು ಹಂಚಿಕೊಳ್ಳುತ್ತೀರಿ? ಸ್ಕಿಂ 'ಬಿ' ನಲ್ಲಿ ನಿಮಗೆ ಏನು ಸಿಗುತ್ತದೆ? ನೀವು ಏಕೆ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದೀರಿ? ತೆಲುಗು ಗಂಗಾ ಮತ್ತಿತರ ವಿಚಾರಗಳಲ್ಲಿ ಏಕೆ ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ? ಅದೂ ತೆಲುಗು ಗಂಗಾ ಯೋಜನೆಯಲ್ಲಿ ಅವರು 300 ಟಿಎಂಸಿಎಫ್‌ಟಿ ನೀರಿನ ಕೆಪ್ಯಾಸಿಟಿ ಮಾಡಿಕೊಂಡು 11,100 ಕ್ಯೂಸೆಕ್ಸ್ ನೀರು ಕೆಪಾಸಿಟಿಯ ನಾಲಾ ಇವತ್ತು ಮಾಡಿಕೊಂಡಿದ್ದಾರೆ. ಎಲ್ಲಾ ನೀರನ್ನೂ

ಅವರು ತೆಗೆದುಕೊಳ್ಳಬಹುದು. ನಾನು ಇನ್ನೊಂದು ವಿಚಾರ ಕೇಳಿದೆ. ಜಾಯಿಂಟ್ ಮಾನಿಟರಿಂಗ್ ಕಮಿಟಿ. ಇದು ಆಲ್ಮಟ್ಟಿಗೆ ಏಕೆ ಈ ಮಾತು ಬಂತು ? ಜಾಯಿಂಟ್ ಮಾನಿಟರಿಂಗ್ ಕಮಿಟಿ ಇದ್ದರೆ ಮಹಾರಾಷ್ಟ್ರ ಪ್ರಾಜೆಕ್ಟ್‌ಗೂ ಆಗಬೇಕು, ಆಲಮಟ್ಟಿಗೂ ಆಗಬೇಕು. ನಾಗಾರ್ಜುನ ಸಾಗರಕ್ಕೂ ಆಗಬೇಕು, ಶ್ರೀಶೈಲಂಗೂ ಆಗಬೇಕು. ಅವರನ್ನು ಮಾನಿಟರಿಂಗ್ ಮಾಡುವುದಕ್ಕೆ ಜಾಯಿಂಟ್ ಮಾನಿಟರಿಂಗ್ ಕಮಿಟಿ ಇಲ್ಲ. ಕರ್ನಾಟಕಕ್ಕೆ ಇದೆಯಲ್ಲಾ ಇದೇನು ಅಯ್ಯಪ್ಪನ ಚಾವಡಿಯೇ ಎಂದು ಅದೊಂದು ಮಾತು ಕೇಳಿದೆ. ಇದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ? ಈ ಪರಿಸ್ಥಿತಿಗೆ ನೀವೇಕೆ ಸಿಕ್ಕಿ ಹಾಕಿಕೊಳ್ಳುತ್ತೀರಿ? ಇದಕ್ಕೆ ಪಾಯಿಂಟೆಡ್ ಆಗಿ ಉತ್ತರ ಹೇಳಿ ಬಿಡಿ.

ಶ್ರೀ ಕೆ.ಎನ್. ನಾಗೇಗೌಡ :- ನಾವು ಹೋಲ್ ಪ್ರಾಜೆಕ್ಟ್‌ಗೆ ಏಕೆ, ಹೋಲ್ ಬೇಸಿನಗೇ ಮಾನಿಟರಿಂಗ್ ಕಮಿಟಿ ಮಾಡಿ ಎಂದು ಕೇಳಿದ್ದೇವೆ. ಸಿಡಬ್ಲ್ಯುಸಿ ಮೀಟಿಂಗ್ ಆದಾಗ ಆಂಧ್ರದವರು ಮಹಾರಾಷ್ಟ್ರದವರು ಬಂದಾಗ ನಾವು ಎಂದೂ ಕೂಡ ಮಾನಿಟರಿಂಗ್ ಕಮಿಟಿ ಆಲ್ಮಟ್ಟಿಗೆ ಮಾತ್ರ ಎಂದು ಹೇಳಿಲ್ಲ. ಎಂಟೈರ್ ಬೇಸಿನ್‌ಗೆ ಮಾನಿಟರಿಂಗ್ ಕಮಿಟಿ ಆಗಬೇಕು ಎಂದು ಹೇಳಿ ಸ್ಪೆಸಿಫಿಕ್ ಆಗಿ 519ನಿಂದ 524ರವರೆಗೆ ಏನು ನೀರಿನ ಸ್ಟೋರೇಜ್ ಇದೆ ಅಷ್ಟನ್ನು ಪವರ್‌ಗೆ ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದಾಗ ಅದರಲ್ಲಿ 519ಕ್ಕಿಂತ ಕೆಳಗೆ ಇರಿಗೇಷನ್ ಮತ್ತು 519ರಿಂದ524ರವರೆಗೆ ಪವರ್ ಎಂದಾಗ ಅದಕ್ಕೆ ಸ್ಪೆಸಿಫಿಕ್ ಮಾನಿಟರಿಂಗ್ ಕೇಳಿದರು. ನಾವು ಇಡೀ ಬೇಸಿನ್‌ಗೆ ಮಾನಿಟರಿಂಗ್ ಕೇಳಿದ್ದೇವೆ ಎನ್ನುವ ಮಾತನ್ನು ಮಾನ್ಯ ನಂಜೇಗೌಡರಿಗೆ ತಿಳಿಸಬಯಸುತ್ತೇನೆ. ಇದೊಂದು. ಎರಡನೆಯದು (ಬಿ)ಸ್ಕೀಮ್ ಬಗ್ಗೆ ತೆಲುಗು ಗಂಗಾ ಯೋಜನೆಯಲ್ಲಿ 300 ಟಿಎಂಸಿಎಫ್‌ಟಿ ಉಪಯೋಗಿಸಿಕೊಳ್ಳುತ್ತಾರೆ. (ಬಿ)ಸ್ಕೀಮ್‌ನಲ್ಲಿ 2060ಟಿಎಂಸಿ ಹೋದರೆ ಇನ್ನು ಉಳಿದಿರತಕ್ಕದ್ದರಲ್ಲಿ 50 ಪರ್ಸೆಟ್ ಹಾಗೂ 25 25 ಪರ್ಸೆಂಟ್ ಉಪಯೋಗಿಸಿಕೊಳ್ಳುವುದಕ್ಕೆ ನೀರು ಎಲ್ಲಿದೆ ಎನ್ನತಕ್ಕ ಮಾತನ್ನು ಮಾನ್ಯ ನಂಜೇಗೌಡರು ಹೇಳಿದ್ದಾರೆ. ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಮಹಾಬಲೇಶ್ವರ ಮೀಟಿಂಗ್‌ನಲ್ಲಿ ಅವರೇನು ಯುಟಿಲೈಸೇಷನ್ ಅನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳಬೇಕು ಎನ್ನುವ ಡಾಟಾ ಇತ್ತು. ಆ ಹಿನ್ನೆಲೆಯೊಳಗಡೆ ಒ ಎಸ್ (1) ಮತ್ತು ಒ ಎಸ್ (2)ನಲ್ಲಿ ಹಿಯರ್ ಮಾಡುವಾಗಲೇ ಸುಪ್ರೀಂ ಕೋರ್ಟ್ ಡೈರೆಕ್ಷನ್ ಕೊಟ್ಟಿತ್ತು. ಮಹಾರಾಷ್ಟ್ರ ಆಂಧ್ರ ಮತ್ತು ಕರ್ನಾಟಕ ಮೂರು ರಾಜ್ಯದವರೂ ಸಹ ಯಾವ್ಯಾವ ಪ್ರಾಜೆಕ್ಟ್‌ನಲ್ಲಿ ಎಷ್ಟೆಷ್ಟು ಯುಟಲೈಸೇಷನ್ ಮಾಡಿಕೊಂಡಿದ್ದೀರಿ ಎನ್ನತಕ್ಕ ಇನ್‌ಫರ್ಮೇಷನ್ ಅನ್ನು ಎಕ್ಸ್‌ಚೇಂಜ್ ಮಾಡಿಕೊಳ್ಳಬೇಕು ಎಂದು ಹೇಳಿ ಸುಪ್ರೀಂ ಕೋರ್ಟ್ ಡೈರೆಕ್ಷನ್ ಕೊಟ್ಟಿದ್ದಾರೆ. ಆ ಡೈರೆಕ್ಷನ್ ಹಿನ್ನೆಲೆಯೊಳಗಡೆ ಕರ್ನಾಟಕದವರು 712 ಟಿಎಂಸಿಗೆ, ಅಂದರೆ ಇದರಲ್ಲಿ ಆನ್ ಗೋಯಿಂಗ್ ಪ್ರಾಜೆಕ್ಟ್ಸ್ 488 ಪೂರ್ಣಗೊಂಡ ಪ್ರಾಜೆಕ್ಟ್ಸ್ 233. ಟೋಟಲ್ 712ಟಿಎಂಸಿ. ಈ 712ಟಿಎಂಸಿನಲ್ಲಿ 21ಟಿಎಂಸಿ ಬಿಟ್ಟು ಉಳಿದಿದ್ದು ಎಲ್ಲಾ ಆನ್ ಗೋಯಿಂಗ್ ಪ್ರಾಜೆಕ್ಟ್ಸನ ವಿವರವನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಆಂಧ್ರದವರು ತೆಲುಗು ಗಂಗಾಯೋಜನೆ ಎಷ್ಟು? ಬೇರೆ ಬೇರೆ ಯೋಜನೆ ಎಷ್ಟು, ನಾಗಾರ್ಜುನ ಎಷ್ಟು? ಶ್ರೀಶೈಲಂ ಎಷ್ಟು? ಯಾವ್ಯಾವ ಪ್ರಾಜೆಕ್ಟನಲ್ಲಿ ಎಷ್ಟೆಷ್ಟು ಮಾಡಿದ್ದಾರೆಂಬ ವಿವರವನ್ನು ನಮಗೆ ಕೊಟ್ಟಿದ್ದಾರೆ. ಮಹಾರಾಷ್ಟ್ರದವರು ಕೂಡ ಉಪಯೋಗಿಸಿಕೊಂಡಿಲ್ಲ. ಅವರೂ ಕೂಡ 400 ಚಿಲ್ಲರೆ ಉಪಯೋಗಿಸಿಕೊಂಡಿರತಕ್ಕದ್ದು. ಅವರು ಕೂಡ ಉಪಯೋಗಿಸಿಕೊಂಡ ನೀರಿನ ವಿವರ ಕೊಟ್ಟಿದ್ದಾರೆ. ಈ ಎಕ್ಸ್‌ಚೇಂಜ್ ಆದ ಮೇಲೆ ಯಾವ್ಯಾವುದರಲ್ಲಿ ಸರ್‌ಪ್ಲಸ್ ವಾಟರ್ ಎಂದರೆ ಏನು?ರಿಮೇನಿಂಗ್

ವಾಟರ್ ಎಂದರೇನು?ಎಕ್ಸಸ್ ವಾಟರ್ ಎನ್ನುವ ಬಗ್ಗೆ ಹೇಳುತ್ತೇವೆ. ಇದು ಸರ್‌ಪ್ಲಸ್ ವಾಟರ್ ಅಲ್ಲ. 2060 ಟಿಎಂಸಿ ಮುಗಿದ ನಂತರ ಉಳಿಯತಕ್ಕದ್ದು ರಿಮೇನಿಂಗ್ ವಾಟರ್. ಈ ರಿಮೇನಿಂಗ್ ವಾಟರ್ ಎನ್ನತಕ್ಕ ಪದದ ಮೇಲೆಯೇ ಬಿ ಸ್ಕೀಮಿಗೆ ಇಂಪ್ಲಿಮೆಂಟ್ ಮಾಡಬೇಕು. ಕಾವೇರಿಗೆ ಯಾವ ರೀತಿ 6(ಎ)ಅಮೆಂಡ್‌ಮೆಂಟ್ ಆಯಿತು ಇಂಟರ್‌ಸ್ಟೇಟ್ ವಾಟರ್ ಡಿಸ್ಪ್ಯೂಟ್ ಅಮೆಂಡ್‌ಮೆಂಟ್ ಆದಮೇಲೆ ಭಾರತ ಸರ್ಕಾರಕ್ಕೆ ಪವರ್ ಇರುವುದರಿಂದ ಕಾವೇರಿಗೆ ಅಥಾರಿಟಿ ಯಾವ ರೀತಿ ಮಾಡಿದ್ದಾರೆ. ಅದೇ ರೀತಿ ಕೃಷ್ಣಾಗೂ ಅಥಾರಿಟಿ ಮಾಡಬೇಕು ಎಂದು ಹೇಳಿ ನಾವು ಈಗಾಗಲೇ ಸರ್ಕಾರದ ವತಿಯಿಂದ ಸಿಡಬ್ಲ್ಯುಸಿ ಕೊಟ್ಟಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ಓ.ಎಸ್-1 ಹಾಕಿರತಕ್ಕದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಂದರೆ (ಬಿ) ಸ್ಕೀಮ್ ಅನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಈಗಾಗಲೇ ಸುಪ್ರೀಂ ಕೋರ್ಟಿನ ಮುಂದೆ ಕೇಸ್ ಇದೆ. ಮತ್ತೆ ಎಕ್ಸ್‌ಚೇಂಜ್ ಮಾಡಿಕೊಳ್ಳುವುದ್ಕಕ್ಕೂ ಸಹ ಈಗಾಗಲೇ ಸುಪ್ರೀಂ ಕೋರ್ಟ್ ಡೈರ್‌ಕ್ಷನ್ ಕೊಟ್ಟಿದೆ. ಡಾಟಾವನ್ನು ಎಕ್ಸ್‌ಚೇಂಜ್ ಮಾಡಿಕೊಂಡಿದ್ದೇವೆ. ಮತ್ತು ಮಾನಿಟರಿಂಗ್ ಕಮಿಟಿಯನ್ನು ಇಡೀ ಬೇಸಿನ್‌ಗೇ ಮಾಡಿಕೊಳ್ಳಬೇಕು ಎಂದು ಹೇಳಿದ್ದೇವೆ. ನಾವು ಎಷ್ಟು ನೀರನ್ನು ಉಪಯೋಗಿಸಿಕೊಂಡಿದ್ದೇವೆ ಎನ್ನುವ ಮಾತು. 214 ಟಿಎಂಸಿ ಮಾತ್ರ ಉಳಿದಿದೆ. ಬಾಕಿಯದಕ್ಕೆ ನಾವು ಈಗಾಗಲೇ ತಮಗೆ ಹೇಳಿದ ಹಾಗೆ ಆನ್ ಗೋಯಿಂಗ್ ಪ್ರಾಜೆಕ್ಟ್ಸ್ ಬಗ್ಗೆ ವಿವರವಾಗಿ ಹೇಳಿದರೆ ಬಹಳ ಸಮಯ ಆಗುತ್ತದೆ. ಹಿಪ್ಪರಗಿ, ಯುಕೆಪಿ, ಘಟಪ್ರಭ, ಮಲಪ್ರಭ, ಬೆಣ್ಣೆತೊರೆ, ಲೋಯರ್ ಮುಲ್ಲಾ, ಅಮರ್ಜಾ ಹಿರೇಹಳ್ಳ, ಮಸಕಿನಾಳ, ಮತ್ತು ಫೀಡಲ್ ಕೆನಾಲ್. ಇದರಲ್ಲಿ ಹಿಪ್ಪರಗಿ ವಿಚಾರ ಹೇಳುವುದಾದರೆ ಡ್ಯಾಮ್ ವರ್ಕ್ಸ್ ಈಗಾಗಲೇ ಕಂಪ್ಲೀಟ್ ಮಾಡಿದ್ದೇವೆ, ಇದನ್ನು ಕಮಿಟೆಡ್ ಎಂದು ಪ್ರೂವ್ ಮಾಡುವುದಕ್ಕೆ Canal has to be tackled.

ಯುಕೆಪಿ ಸ್ಟೇಜ್-1ರಲ್ಲಿ ಪೂರ್ಣವಾಗಿದೆ. ಸ್ಟೇಜ್-2 ಆನ್ ಗೋಯಿಂಗ್ ಇದೆ. ಮೂರನೆಯದು ಅಂಡರ್ ಪ್ರೋಗ್ರೆಸ್ ಇದೆ. ಇಂಡಿ ಬ್ರಾಂಚ್ ಕೆನಾಲ್ ಕಂಪ್ಲೀಟ್ ಮಾಡಿದ್ದೇವೆ. 65ರಿಂದ 100-150 ಕಿಲೋ ಮೀಟರ್‌ವರೆಗೆ ಈಗಾಗಲೇ ಆನ್ ಪ್ರೋಗ್ರೆಸ್ ಇದೆ. 150ರಿಂದ ಮೇನ್ ಕೆನಾಲ್ 170 ರವರೆಗೆ ಸರ್ವೆ ಮತ್ತು ಪ್ರೋಗ್ರೆಸ್‌ನಲ್ಲಿದೆ. ಹಾಗೆಯೇ ಜೇವರ್ಗಿ ಬ್ರಾಂಚ್‌ನಲ್ಲಿ 0-70 ಅಂಡರ್ ಪ್ರೋಗ್ರೆಸ್‌ನಲ್ಲಿದೆ. 75 ಪರ್ಸೆಂಟ್ ಈಗಾಗಲೇ ಕಂಪ್ಲೀಟ್ ಆಗಿದೆ. 70-86 ಸರ್ವೆ ಮತ್ತು ಇತರ ಹಂತದಲ್ಲಿದೆ. ಏತಕ್ಕೆ ಈ ಪಾಯಿಂಟ್ ಹೇಳುತ್ತಿದ್ದೇನೆ ಎಂದರೆ ನಾವು 712 ಕಮಿಟ್ ಆಗಿರುವುದಕ್ಕೆ ನೀವು ಹೇಳಿದ ಹಾಗೆ ಡಿಸ್ಟ್ರಿಬ್ಯೂಟರಿ ಆಸ್ಪೆಕ್ಟ್ ಬಿಟ್ಟು ಈ ಮೇನ್ ಕೆನಾಲ್ ಅಥವಾ ಆಲ್ ಸಿಡಿ ವರ್ಕ್ಸ್‌ಗಳು, ಡಿಸ್ಟ್ರಿಬ್ಯೂಟರಿ ವರ್ಕ್ಸ್‌ಗಳು. ಈಗಾಗಲೇ ನಾರಾಯಣಪುರ ಮುಗಿದಿದೆ. ಇನ್ನು ಉಳಿದಿರತಕ್ಕದ್ದು ಆಲ್ಮಟ್ಟಿ ಒಂದೇ. ಸ್ಟೋರಿಂಗ್ ಪಾಯಿಂಟ್‌ನಲ್ಲಿ ಉಳಿದಿರತಕ್ಕದ್ದು. ಮಾರ್ಕಂಡೇಯ ಈಗಾಗಲೇ ಪ್ರಾರಂಭ ಮಾಡಲಾಗಿದೆ. ಹರಿನಾಲಾ ಕೆಲಸ ಶುರು ಮಾಡಿದ್ದೇವೆ. ಇನ್ನು ಉಳಿದಿರತಕ್ಕದ್ದು ಹಿಪ್ಪರಗಿ ವಿಚಾರ. ಡ್ಯಾಮಂ ವರ್ಕ್ ಈಗಾಗಲೇ ಮುಗಿದಿದೆ, ಕೆನಾಲ್ ವರ್ಕ್ ಮಾಡಬೇಕು. ಅದೇ ರೀತಿ ನಾರಾಯಣಪುರದಲ್ಲಿ ಬಲದಂಡೆಯ ಕೆಲಸ ಸುಮಾರು 10-80ರವರೆಗೆ The Progress is there upto 70. we have completed in all respects. Upto 70 we have completed.

71-90 ಸ್ವಲ್ಪ ಅಲ್ಲಿ ಇಲ್ಲಿ ಕೆಲಸಗಳು ಆಗಬೇಕಾಗಿದೆ. 71-90 Still work is there.

ಡಿಸ್ಟ್ರಿಬ್ಯೂಟರಿ ವಿಚಾರದಲ್ಲಿ ಸಹ ನಾವು ಕ್ರಮ ತೆಗೆದುಕೊಂಡಿದ್ದೇವೆ. ಘಟಪ್ರಭದಲ್ಲಿ ಡ್ಯಾಮ್ ಕಟ್ಟಿ ಬಹಳ ವರ್ಷ ಆಗಿತ್ತು. ತಮಗೂ ಗೊತ್ತಿದೆ. ಮಲಪ್ರಭ, ಘಟಪ್ರಭ ಇವರು ಉಪಯೋಗಿಸಿ

ಕೊಳ್ಳಬೇಕೆಂದು ಮಾಡಿ ಕೆನಾಲ್ ವರ್ಕೇ ಮಾಡಿರಲಿಲ್ಲ. ನಾವು 0-54 ಕಿ.ಮೀ.ವರೆಗೆ ಘಟಪ್ರಭ ಕಂಪ್ಲೀಟ್ ಮಾಡಿದ್ದೇವೆ. 55-95 ಅಂಡರ್ ಪ್ರೋಗ್ರೆಸ್ ಇದೆ. 96-120 Yet to be finalised.

ಇನ್ನು 1-122 ಅಲೈನ್‌ಮೆಂಟ್ ಸರ್ವೆನಲ್ಲಿದೆ. ಮಲಪ್ರಭ 0-129 ಈಗಾಗಲೇ ಕಂಪ್ಲೀಟ್ ಮಾಡಿದ್ದೇವೆ. ಮಲಪ್ರಭ ಡ್ಯಾಮ್ ಕಟ್ಟಿರುವ ವಿಚಾರ ತಮಗೂ ಗೊತ್ತಿದೆ. ಶ್ರೀ ಬಾಳೆಕುಂದ್ರಿಯವರು ಮಲಪ್ರಭ ಡ್ಯಾಮ್ ಕಟ್ಟಿರುವುದು ಬಿಟ್ಟರೆ ಹತ್ತು ಎಕರೆಗೂ ನೀರು ಕೊಟ್ಟಿರಲಿಲ್ಲ. 0-129 ನಾವು ಈಗ ಕಂಪ್ಲೀಟ್ ಮಾಡಿ 129ರಿಂದ 168 it is under progress.

ಅದೇ ರೀತಿ ಬಲದಂಡೆ ಕೆನಾಲ್ಸ್ ಕೂಡ 0-120 ಕಂಪ್ಲೀಟ್ ಮಾಡಿದ್ದೇವೆ. 110-138 ಅಂಡರ್ ಪ್ರೋಗ್ರೆಸ್ ಇದೆ. ಮಾನ್ಯ ಖರ್ಗೆ ಅವರಿಗೇ ಗೊತ್ತಿರುವ ಹಾಗೆ 6 ಪ್ರಾಜೆಕ್ಟ್‌ನಲ್ಲಿ ಬೆಣ್ಣೆತೊರ ಲೋಯರ್ ಮುಲ್ಲಾ, ಅಮರ್ಜಾ, ಮಸಕಿ, ಮಂಚಿನಬೆಲೆ, ವಾಟೆ ಹೊಳೆ. ಐದು ಪ್ರಾಜೆಕ್ಟಿಗೆ ಇವರು ಪ್ರೈಮರಿ ಎಜುಕೇಷನ್ ಮಿನಿಸ್ಟರ್ ಆಗಿದ್ದರು. 1973-74ರಲ್ಲಿ ದೇವರಾಜು ಅರಸ್ ಅವರು ಮಾನ್ಯ ಮುಖ್ಯಮಂತ್ರಿ ಆಗಿದ್ದಾಗ ಇವರು ಮಿನಿಸ್ಟರ್ ಆಗಿದ್ದರು. ಬರಗಾಲಕ್ಕೋಸ್ಕರ ಪರಿಹಾರ ಕೊಡಬೇಕೆಂದು ಹೇಳಿ 1974-75 ರಲ್ಲಿ ಪೂಜೆ ಮಾಡಿದರು. ಮಾನ್ಯ ದೇವೇಗೌಡರು ಬರುವವರೆಗೆ ಅಂದರೆ 1994-95ರ ವರೆಗೆ ಎಷ್ಟು ಕೆಲಸ ಆಗಿತ್ತು ಎಂದು ಅವರೇ ಹೇಳಲಿ. what progress they have done.?

ವೀರೇಂದ್ರ ಪಾಟೀಲರು ಅಮರ್ಜಾಗೆ 1969ರಲ್ಲಿ ಪೂಜೆ ಮಾಡಿದ್ದು. ಅಲ್ಲಿ ಹೋದರೆ ಜನ ಮಾತನಾಡುತ್ತಾರೆ. 1969ರಲ್ಲಿ ಪೂಜೆ ಆಗಿದೆ. ನೀವೂ ಸಹ ಗುಲ್ಬರ್ಗಾ ಜಿಲ್ಲೆಯವರು. ನಾವು ಈಗ ಅಮರ್ಜಾ ಬಗ್ಗೆ ಕೆಲಸ ಮಾಡಿ ಗೇಟ್ ಹಾಕುತ್ತಿದ್ದೇವೆ.

ಲೋಯರ್ ಮುಲ್ಲಾಮರಿ ಪ್ರಾಜೆಕ್ಟ್ ಮಾನ್ಯ ಹಿರಿಯ ಸದಸ್ಯರಾದ ವೈಜನಾಥ ಪಾಟೀಲ್‌ರವರ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು, ಸದರಿ ಯೋಜನೆಯನ್ನು ಬಹುಶಃ ಬರುವ ಒಂದೂವರೆ, ಎರಡು ತಿಂಗಳೊಳಗಾಗಿ ಪೂರ್ತಿಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಚಿಂಚೋಳಿಯಲ್ಲಿರುವ ಬೆಣ್ಣೆತೊರೆ ಯೋಜನೆಯನ್ನು ಮಾಡುತ್ತೇವೆಂದು ಇವರು (ಕಾಂಗ್ರೆಸ್) ಬಹಳ ವರ್ಷಗಳಿಂದ ಭಾಷಣ ಮಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು, ಮೊನ್ನೆ ದಿವಸ ಬೆಣ್ಣೆತೊರೆ ಯೋಜನೆಯ ಸ್ಥಳಕ್ಕೆ ಭೇಟಿ ಕೊಟ್ಟು ನೋಡಿಕೊಂಡು ಬಂದಿರುವುದರಿಂದ ಅವರು ತಮ್ಮ ಆತ್ಮ ಮುಟ್ಟಿಕೊಂಡು ಪ್ರಾಮಾಣಿಕವಾಗಿ ಹೇಳಲಿ leaving politics aside, how much of progress we have shown this year, in all these projects.

ಇವರೇ ನಾಲ್ಕೈದು ಸಲ ಮಂತ್ರಿಗಳಾಗಿದ್ದರೂ ಕೂಡ ಅಲ್ಲಿ ಯಾವುದೇ ಕೆಲಸ ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಗೋಪುರ ಕಟ್ಟಿಸಿದ ಬಳಿಕ ಕಳಸವನ್ನು ನಾನು ಕೂಡಿಸಿದ್ದೇನೆಂದರೆ ಏನರ್ಥ? ಅದನ್ನು ಮಾಡಲೇಬೇಕು.

ಶ್ರೀ ಕೆ.ಎನ್. ನಾಗೇಗೌಡ : ನೀವ್ಯಾಕೆ ಮಾಡಲಿಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಕೇಳುತ್ತಿದ್ದೇನೆ: ನಾರಾಯಣಪುರ ಅಣೆಕಟ್ಟನ್ನು ನೀವು ನಿರ್ಮಿಸಿದಿರಾ? ಮೂರು ಲಕ್ಷ ಎಕರೆ ಪ್ರದೇಶಕ್ಕೆ ನೀರು ಸೌಲಭ್ಯವನ್ನು ನೀವು ಒದಗಿಸಿದ್ದೀರಾ?

SRI K.N. NAGE GOWDA :- Then I have to say, your party and you

don't have any moral right to ask that question. you had failed in your duty. you are mainly responsible. All the 24 years-more than 13-14 years you have ruled, you were there as Ministers.

ಕೊನೆಯ ಮೂರು ವರ್ಷಗಳಿರುವಾಗ ನಮ್ಮ ಹೆಗಲ ಮೇಲೆ ಭಾರವನ್ನು ಹಾಕಿಕೊಂಡೆವು. ಅವರು ಹೇಳಿದಂತೆ, ಮಾನ್ಯ ವೀರಪ್ಪ ಮೊಯಿಲಿಯವರೇ ಕೃಷ್ಣ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಿದ್ದು ನಿಜ. That credit goes to him.

1994ರ ಮೇ ತಿಂಗಳಿನಲ್ಲಿ ಕೃಷ್ಣ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಿದ ನಂತರ, ದೇವೇಗೌಡರು ಮುಖ್ಯಮಂತ್ರಿಗಳಾದಾಗ ಅದಕ್ಕೆ ಕ್ರೆಡಿಬಿಲಿಟಿ ಬರುವಂತೆ ದುಡ್ಡು ವಸೂಲು ಮಾಡಿದರು. ತದನಂತರ, ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ದುಡ್ಡನ್ನು ವಸೂಲಿ ಮಾಡಿದವರು ನಾವು. ನೀವು ಒಂದು ನಯಾ ಪೈಸೆಯಷ್ಟು ದುಡ್ಡನ್ನೂ ಕೂಡ ವಸೂಲು ಮಾಡಿರಲಿಲ್ಲ. ಆ ಕ್ರಿಯೇಷನ್ that credit goes to Mr. Moily and the credit for collection goes to Sri. Devegowda and Mr. J.H. Patel

The reality-whatevery may be the politics, whatever may be the internal difference, the reality is,

ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸಿದ ಸರ್ಕಾರ ಜನತಾದಳ ಸರ್ಕಾರವೇ ವಿನಾ ನೀವಲ್ಲ. ಇದನ್ನು ನೀವು ಮಾಡಿದ್ದೀರೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.ನನ್ನ ಬಳಿ ಆ ಕುರಿತ ಅಂಕಿ-ಸಂಖ್ಯೆ ಇದ್ದು, ಒದಗಿಸಿಕೊಡುತ್ತೇನೆ. Mr. Moily is an expert in finance. He is a really very intelligent leader in our State; there is no dispute about that.

ಕಳೆದ ಸಲ ಒಂದು ಅಂಶವನ್ನು ಪ್ರಸ್ತಾಪಿಸಿದರು. ಏನೆಂದರೆ, ನೀವು ಕೃಷ್ಣ ಭಾಗ್ಯ ಜಲ ನಿಗಮವನ್ನು ಸ್ಥಾಪಿಸಿರುವುದು ಸಬ್‌ಸ್ಟಿಟ್ಯೂಟ್ ಮಾಡುವುದಕ್ಕಲ್ಲ, ಬದಲಿಗೆ ಬಜೆಟರಿ ಸಪೋರ್ಟ್ ಮಾಡಿಕೊಂಡು ಹೋಗಬೇಕೆಂದರು. I am always keen on his arguments.

ಆ ರೀತಿ ಹೇಳಿದ್ದಾರಲ್ಲಾ, ಹೇಗೆ? ಎಂದು ನಾನು ಫೈನಾನ್ಸಿಯಲ್ ಎಕ್ಸ್‌ಪರ್ಟ್ಸ್ ಹತ್ತಿರ ಕೇಳಿದೆ. Generally, for any organisation, under the Companies Act, this has been registered.

ಸಾಲ ತೆಗೆದುಕೊಳ್ಳಬೇಕಾದರೆ ಸಪೋರ್ಟಿಂಗ್ 1 : 4 ಇರಬೇಕು. ಹಾಗಿದ್ದರೆ ಮಾತ್ರ ಅದಕ್ಕೆ credibility, Viability and the financial thrust and interest line, ಎಲ್ಲಾ ಇರುತ್ತದೆ.

1 : 4 ರೇಷಿಯೋವನ್ನು ಕ್ರಾಸ್ ಮಾಡಿದರೆ ನಿಗಮ, ಕಂಪನಿ ಮುಂತಾದ ಸಂಸ್ಥೆಯನ್ನು ಏನು ಸ್ಥಾಪಿಸಿರುತ್ತೇವೆ, ಅದು ಬಹಳ ತಪ್ಪಾಗುತ್ತದೆ. Financially it is very bad, ಎಂದು ಆಗುತ್ತದೆ. ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಸಾಲವಾಗಿ ತೆಗೆದುಕೊಳ್ಳುವುದಾದರೆ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಸ್ಟೇಟ್ ಬಜೆಟಿಗೆ ಕೊಟ್ಟಿದ್ದೇವೆ. Approximately, may be Rs. 1,100 or 2000 1 : 4 ಬಂದರೆ ಬ್ಯಾಡ್. ಅವರು ಹೇಳಿದಂತೆ ಅದು ಸಬ್‌ಸ್ಟಿಟ್ಯೂಟ್ ಆಗುತ್ತದೆ. 1 : 2 ರೇಷಿಯೋ ಇದ್ದರೆ ಸಬ್‌ಸ್ಟಿಟ್ಯೂಟ್ ಆಗುವುದಿಲ್ಲ. I personally request Mr. Moily to examine again. If it is wrong, let him advice me. ಕೃಷ್ಣ ಭಾಗ್ಯ ಜಲ ನಿಗಮದಲ್ಲಿ 1 : 2 ರೇಷಿಯೋ ಮಾಡಿದ್ದೇವೆ. ಒಂದು ಸಾವಿರ ಕೋಟಿ

ರೂಪಾಯಿಗಳನ್ನು ಸರ್ಕಾರ ಹಾಕಿದ್ದರೆ, ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಸಾಲ ಎತ್ತಿದ್ದೇವೆ. ಅದು ಮಿತಿಯೊಳಗಡೆ ಇದೆ. It has not crossed the limit. ಎನ್ನತಕ್ಕ ಮಾತನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ರಾಯಚೂರಿನಲ್ಲಿರುವ ಮಸ್ಕಿನಾಲಾ ಯೋಜನೆ ಬಗ್ಗೆ ಹೇಳುವುದಾದರೆ, ಆ ಕ್ಷೇತ್ರದ ಶಾಸಕರು ಈಗ ಸದನದಲ್ಲಿಲ್ಲ. ಸುಮಾರು ಇಪ್ಪತ್ತು ವರ್ಷಗಳಷ್ಟು ಹಿಂದೆಯೇ ಆ ಯೋಜನೆ ಪ್ರಾರಂಭಿಸಲು ಗುದ್ದಲಿ ಪೂಜೆ ಮಾಡಿ ಹಾಗೆಯೇ ನೀವು (ಕಾಂಗ್ರೆಸ್) ಬಿಟ್ಟಿದ್ದಿರಿ. ಈಗ ನಾವು ಸದರಿ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಮಾನ್ಯ ದೇವೇಗೌಡರು ಯೋಜನೆಯ ಸ್ಥಳಕ್ಕೆ ಬಸ್ಸಿನಲ್ಲಿ ಪ್ರವಾಸ ಹೋಗಿ ಭೇಟಿ ಕೊಟ್ಟು ಅಲ್ಲಿನ ಗುತ್ತಿಗೆದಾರರ ಬಳಿ ನೆಗೋಷಿಯೇಟ್ ಮಾಡಿ ಇದನ್ನು ಮಾಡಬಾರದೆಂದು ಟೆಕ್ನಿಕಲ್ ಅಡ್ವೈಸ್ ಮಾಡಿ ಕೆಳಗಡೆ ಹಾಕಿದ್ದರು. ನಂತರ, 1995ರಲ್ಲಿ ಮಸ್ಕಿನಾಲಾ ಯೋಜನೆ ಪ್ರಾರಂಭವಾಗಿ 1997ರಲ್ಲಿ ಪೂರ್ತಿಗೊಳಿಸಿದೆವು. ಅದೇ ರೀತಿ ಬೀದರ್‌ನಲ್ಲಿರುವ ಚುಳಕಿನಾಲಾ ಯೋಜನೆಗೆ 1969ರಲ್ಲಿ ಈ ಪುಣ್ಯಾತ್ಮರೇ ಹೋಗಿ ಪೂಜೆ ಮಾಡಿದ್ದರು. ನಾವು ಆ ಯೋಜನೆಯನ್ನು ಪೂರ್ತಿಗೊಳಿಸಿದ ಬಳಿಕ ಅಲ್ಲಿನ ಕ್ಷೇತ್ರದ ಬಿ.ಜೆ.ಪಿ. ಶಾಸಕರಾದ ಚವಾಣ್‌ರವರ ಅಧ್ಯಕ್ಷತೆಯಲ್ಲಿ ಸಮಾರಂಭ ಏರ್ಪಡಿಸಿ ನೀರಿನ ಸೌಲಭ್ಯ ಒದಗಿಸಿ ಕೊಟ್ಟಿದ್ದೇವೆ. ಸುಮಾರು ಇಪ್ಪತ್ತು ವರ್ಷಗಳಿಂದ ಪೂರ್ತಿಗೊಳ್ಳದೆ ಹಾಗೇ ನೆನೆಗುದಿಗೆ ಬಿದ್ದಿದ್ದ ಮಸ್ಕಿನಾಲಾ ಯೋಜನೆ ಇರಲಿ, ಚುಳಕಿನಾಲಾ ಯೋಜನೆ ಇರಲಿ, ಅಥವಾ ಲೋಯರ್ ಮುಲ್ಲಾಮರಿ ಯೋಜನೆ ಇರಲಿ, ಸುಭಾಷ್ ಗುತ್ತೇದಾರ್ ಅವರ ಕ್ಷೇತ್ರದಲ್ಲಿರುವ ಅಮರ್ಜಾ ಯೋಜನೆಗಳನ್ನೆಲ್ಲಾ ನೋಡಿಕೊಂಡು ಬರಬೇಕು. ಗ್ರೌಂಡ್ ರಿಯಾಲಿಟಿ ನೋಡಿದರೆ ಎಷ್ಟೆಷ್ಟು ಕೆಲಸವಾಗಿದೆಯೆಂದು ಗೊತ್ತಾಗುತ್ತದೆಂದು ಅದನ್ನೇ ನಾವು ಹೇಳುವುದು. ಇನ್ನು ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಗಳ ಕುರಿತು ಹೇಳುವುದಾದರೆ ಬದಾಮಿ ಕ್ಷೇತ್ರದ ಶಾಸಕರಾದ ಬಿ.ಬಿ.ಚಿಮ್ಮನಕಟ್ಟಿಯವರು ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ಈ ಹಿಂದೆ ನೀರಾವರಿ ಮಂತ್ರಿಗಳಾಗಿದ್ದಂಥವರು. Let him touch his honesty and integrity and say, ಬಹಳ ತೂಕದ ಮನುಷ್ಯರು, ನನಗೆ ಬಹಳ ವರ್ಷಗಳಿಂದ ಪರಿಚಯವಿದೆ. ಬದಾಮಿ ಕ್ಷೇತ್ರಕ್ಕೆ ನಾವು ನೀರು ಕೊಟ್ಟಿಲ್ಲವೇ? ಬೇಕಿದ್ದರೆ ಅವರನ್ನು ಕೇಳಿ. ನಾವು ಕೆಲಸ ಮಾಡಿಲ್ಲವೆಂದು ಅವರು ಹೇಳಲಿ, ಅವರು ದಿವಂಗತ ದೇವರಾಜ ಅರಸುರವರ ಕಾಲದಲ್ಲಿ ನೀರಾವರಿ ಮಂತ್ರಿಗಳಾಗಿದ್ದವರು. ಅವರ ಕ್ಷೇತ್ರಕ್ಕೆ ಮಲಪ್ರಭಾ, ಘಟಪ್ರಭಾ ಅಥವಾ ಒಂದೂ ಏತ ನೀರಾವರಿ ಯೋಜನೆಯ ಕಾರ್ಯ ಮಾಡಿರಲಿಲ್ಲ. ನೀರಿನ ಸೌಲಭ್ಯ ಒದಗಿಸಲು ಟನಲ್ ಮಾಡಿರಲಿಲ್ಲ, ಲೈನ್ ಅಲೈನ್‌ಮೆಂಟ್ ಮಾಡಿರಲಿಲ್ಲ. ಆದರೆ, ಅಣೆಕಟ್ಟು ಕಟ್ಟಿ ಇಪ್ಪತ್ತು ವರ್ಷಗಳಿಂದ ನೀರನ್ನು ಹಾಗೆಯೇ ಇಟ್ಟುಕೊಂಡಿದ್ದರು, ಉಪಯೋಗಿಸಿ ಕೊಂಡಿರಲಿಲ್ಲ. ಈಗ ನಾವು ಈ ಎಲ್ಲಾ ಯೋಜನೆಗಳನ್ನು ಕೈಗೊಂಡು ನೀರು ಒದಗಿಸುವ ವ್ಯವಸ್ಥೆ ಮಾಡಿದ್ದೇವೆ. ಕ್ಷೇತ್ರದ ಜನರಿಗೆ ನೀರು ಸೌಲಭ್ಯ ಒದಗಿಸಲು ಕ್ರಮ ಕೈಗೊಂಡ ನಮ್ಮ ಸರ್ಕಾರದ ಯೋಜನೆ ಬಗ್ಗೆ ಮುಕ್ತಕಂಠದಿಂದ ಗೋಕಾಕ್ ಕ್ಷೇತ್ರದ ಶಾಸಕರು, ಬದಾಮಿ ಕ್ಷೇತ್ರದ ಶಾಸಕರಾದ ಬಿ.ಬಿ. ಚಿಮ್ಮನ ಕಟ್ಟಿಯವರು, ಎಸ್.ಜಿ. ಪಾಟೀಲ್‌ರವರು, ಜೆ.ಟಿ. ಪಾಟೀಲ್‌ರವರು ಮತ್ತು ಬಸವರಾಜ ಪಾಟೀಲ್‌ರವರು ಪೂರ್ತಿಗೊಂಡ ಯೋಜನೆಯ ಸ್ಥಳದಲ್ಲಿ ನಿಂತುಕೊಂಡು ಜನತಾ ದಳ ಸರ್ಕಾರ ಇಂತಿಂಥ ಕೆಲಸ ಮಾಡಿದೆಯೆಂದು ಹೇಳಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ, ಇದನ್ನು ನಾವು ಹೇಳಿದ್ದಲ್ಲ, ನಿಮ್ಮ ಪಕ್ಷದ ಶಾಸಕರುಗಳೇ ಆ ರೀತಿ ಹೇಳಿದ್ದಾರೆ. ರಾಜಕೀಯ ಏನೇ ಇದ್ದರೂ ಜನತಾ ದಳ ಸರ್ಕಾರ ಕೆಲಸ ಮಾಡಿದೆಯೆಂದು ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಪುನರ್ವಸತಿ ಕಾರ್ಯದ ಕುರಿತು ತಮಗೆ ಹೇಳುವುದಾದರೆ, ಬಾಗಲಕೋಟೆ ನವ ಬಾಗಲಕೋಟೆ ಆಗಬೇಕೆಂದು

ಅಲ್ಲಿ ಸುಮಾರು ಮೂರು ವರ್ಷಗಳಿಂದ ಮುಷ್ಕರ ಹೂಡಲಾಗಿತ್ತು. ಕಾರಣವೇನೆಂದರೆ, ಆಲಮಟ್ಟಿ ಅಣೆಕಟ್ಟು ನಿರ್ಮಾಣದಿಂದ ಹಿನ್ನೀರಿನಲ್ಲಿ ಎಪ್ಪತ್ತು ಸಾವಿರ ಮನೆಗಳು ಮುಳುಗಿ ಹೋಗುತ್ತವೆ, ಕೂಡಲ ಸಂಗಮವೂ ಮುಳುಗಿ ಹೋಗುತ್ತದೆ ಜೊತೆಗೆ 154 ಹಳ್ಳಿಗಳೂ ಸಹ ಮುಳುಗಿ ಹೋಗುತ್ತವೆ. ಬಸವನಗೌಡರು ಸದನದಲ್ಲಿ ಇದ್ದಾರೆಂದೆನಿಸುತ್ತದೆ. ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಿ ಹೋಗುವ 154 ಹಳ್ಳಿಗಳಿಗೆ ರೇಟ್ ನಿಗದಿಪಡಿಸದಿದ್ದುದರಿಂದ ಸುಮಾರು ಮೂರು ವರ್ಷಗಳಿಂದ ಮುಷ್ಕರವಿತ್ತು. ಆದರೆ, ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾದ ನಂತರ ಬಾಗಲಕೋಟೆ, ಜಮಖಂಡಿ ಮುಂತಾದ ಎಲ್ಲ ಕಡೆಗಳಲ್ಲೂ ಪ್ರವಾಸ ಮಾಡಿ ಸಂತ್ರಸ್ತರನ್ನು ಕರೆಸಿ ಒಂದು ಎಕರೆಗೆ ಒಂದು ಲಕ್ಷ ರೂಪಾಯಿಯಂತೆ ದರ ನಿಗದಿಪಡಿಸಿ ಸುಮಾರು ನಾಲ್ಕು ನೂರು ಕೋಟಿ ರೂಪಾಯಿಗಳಷ್ಟು ಪರಿಹಾರ ಕೊಟ್ಟಿದ್ದೇವೆ. ಸ್ಥಳಕ್ಕೆ ಭೇಟಿ ಕೊಟ್ಟು ವೀಕ್ಷಿಸಿದರೆ ಯಾವ್ಯಾವ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂಬುದು ಗೊತ್ತಾಗುತ್ತದೆ. ಬಿಜಾಪುರದ ಬಾಗಲಕೋಟೆ ನವನಗರಕ್ಕೆ ಹೋದರೆ ಅಲ್ಲಿ ಕಳೆದ 10-12 ವರ್ಷಗಳಿಂದಲೂ ನಿವೇಶನದ ಹಂಚಿಕೆಯಾಗಿರಲಿಲ್ಲ. ಬಾಗಲಕೋಟೆಯ ಪುನರ್ವಸತಿ ಕಾರ್ಯದ ಬಗ್ಗೆ ಇವರು ತೆಗೆದುಕೊಂಡ ನಿರ್ಧಾರಗಳನ್ನು ನೆನೆಸಿಕೊಂಡರೆ ರೋಸಿ ಹೋಗುತ್ತದೆ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾದಾಗ ಎಸ್.ಎಂ. ಕೃಷ್ಣ ಅವರನ್ನು ನೀರಾವರಿ ಮಂತ್ರಿಗಳನ್ನಾಗಿ ಮಾಡಿದ್ದರು.

ಅಣೆಕಟ್ಟಿನ ಹಿನ್ನೀರಿನಲ್ಲಿ ಬಿ.ಎಸ್. ಪಾಟೀಲ್ (ಮನಗೂಳಿ)ರವರ ಕ್ಷೇತ್ರದ ಪ್ರದೇಶಗಳೂ ಮುಳುಗಡೆಯಾದಾಗ, ಕೃಷ್ಣಾ ಅವರನ್ನು ಆ ಕ್ಷೇತ್ರದ ಜನರು ಕಂಡು ತಮಗೆ ಪರಿಹಾರದ ಹಣ ಕೊಡಬೇಕೆಂದು ಕೇಳಿದರು. ಮುಳುಗಡೆಯಲ್ಲಿ ತಮ್ಮ ಮನೆ, ಮಠ, ಆಸ್ತಿಗಳನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ಪರಿಹಾರ ಕೊಡಬೇಕೆಂದು ಸುಮಾರು ಹತ್ತು ವರ್ಷಗಳಿಂದ ಕೇಳುತ್ತಿದ್ದರೂ ಕೊಡದೆ, ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದು ತಮಗೆ ಪರಿಹಾರದ ಹಣ ನೀಡಿದೆ ಎಂಬ ಮಾತನ್ನು ಅವರೇ ಹೇಳಿದಾಗ, ಆ ಕ್ಷೇತ್ರದ ಜೆ.ಟಿ.ಪಾಟೀಲ್ ಹಾಗೂ ಬಸವನಗೌಡರು, ಇಬ್ಬರೂ ಶಾಸಕರುಗಳು ಮುಖ್ಯಮಂತ್ರಿ ಬಳಿಗೆ ಬಂದು ದೊಡ್ಡ ಹಾರ ಹಾಕಿ ತಮ್ಮ ಸಂತೋಷ ವ್ಯಕ್ತಪಡಿಸಿದರಲ್ಲದೆ, ಸದನದಲ್ಲಿಯೂ ಅವರು ಮುಖ್ಯ ಮಂತ್ರಿಗಳನ್ನು ಅಭಿನಂದಿಸಿದರು. ಆದರೆ, ಅವರ ಪಕ್ಷದ ನಾಯಕರು ಹೇಳುವುದೇನೆಂದರೆ, ಅಲ್ಲಿ ಕೆಲಸವಾಗಿಲ್ಲ, ನೀರು ಪೋಲಾಯಿತು, ನಮ್ಮ ರಾಜ್ಯಕ್ಕೆ, ರಾಜ್ಯದ ಜನತೆಗೆ ದ್ರೋಹ ಬಗೆದಿದ್ದಾರೆಂದರು. ಈ ರಾಜ್ಯಕ್ಕೆ, ರಾಜ್ಯದ ಜನತೆಗೆ ದ್ರೋಹ ಮಾಡಿದವರು ನೀವಾಗಿದ್ದೀರಿ. ನಿಮ್ಮ ಅಧಿಕಾರದ ಅವಧಿಯಲ್ಲಿಯೇ ಇದನ್ನು ಮಾಡಿಕೊಂಡು ಬಂದಿದ್ದರೆ ಇಷ್ಟು ಭಾರ ಇವೊತ್ತು ನಮ್ಮ ಮೇಲೆ ಬೀಳುತ್ತಿರಲಿಲ್ಲ. ಈ ಭಾರವನ್ನೆಲ್ಲಾ ತೆಗೆದುಕೊಂಡು ಬಂದು ನಮ್ಮ ಮೇಲೆ ಹಾಕಿ ಕೊನೆಯ ಮೂರು ವರ್ಷಗಳಿರುವಾಗ ಚುನಾವಣೆ ಬರುತ್ತದೆಂದು ರಾಜಕೀಯ ಕ್ಕೋಸ್ಕರ ಭಾಷಣ ಮಾಡುತ್ತೀರಾ? ಚುನಾವಣೆ ಬರುತ್ತದೆಂದು ನೀವು ಭಾಷಣ ಮಾಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಅದಕ್ಕೋಸ್ಕರ ಗ್ರೌಂಡ್ ರಿಯಾಲಿಟಿ ಎನ್ನುವ ಮಾತನ್ನು ಏನು ಹೇಳಿದರು, ಬೆಳಗಾಂಗೆ ಹೋಗಲಿ, ಹುಬ್ಬಳ್ಳಿ, ಗುಲ್ಬರ್ಗ, ರಾಯಚೂರಿಗೆ ಹೋಗಲಿ, ಆ ಬಗ್ಗೆ ಬಹಳ ಆಸಕ್ತಿಯಿಂದ ಭಾಷಣ ಮಾಡುತ್ತಾರೆ. ಅಲ್ಲಿನ ನಾಲೆ ನೂರು ಸಲ ಒಡೆದು ಹೋದಾಗ ಅಲ್ಲಿಗೆ ಹೋಗಿ ತನಿಖೆ ಮಾಡಬೇಕೆಂದು ಎಲ್ಲಾ ನಾಯಕರೂ ಹೇಳಿದರು. ನಿಮ್ಮ ಸರ್ಕಾರದ ಅವಧಿಯಲ್ಲಿ ಒಂದು ದಿವಸ ನೀರುನಿಲ್ಲಿಸಿ ಕೆಲಸ ತೆಗೆದುಕೊಳ್ಳುವುದಕ್ಕಾಗಲಿಲ್ಲವೇ? ಈಗ ಕಾಂಗ್ರೆಸ್‌ನವರು ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದಾರೆ.

ಅವರು ನೀರಾವರಿ ಸಚಿವರಾಗಿದ್ದಾಗ ರಾಜ್ಯದಲ್ಲಿ ಪ್ರವಾಸ ಮಾಡಲಿಲ್ಲ. ಅವರು ಎಷ್ಟು ಸಲ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆಂದು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ. ಬದಲಿಗೆ ವೋಟ್‌ಗೋಸ್ಕರ ಪ್ರವಾಸ ಮಾಡುವುದಲ್ಲ! ನೀವು ಉಪ ಮುಖ್ಯಮಂತ್ರಿಗಳನ್ನು ನೀರಾವರಿ ಮಂತ್ರಿಗಳನ್ನಾಗಿ ಮಾಡಿದಿರಲ್ಲಾ. ಆಗ ಅವರು ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಸಲ ಭೇಟಿ ಕೊಟ್ಟು ವೀಕ್ಷಿಸಿದ್ದಾರೆಂಬ ಅಂಕಿ-ಅಂಶವನ್ನು ವೀರಪ್ಪ ಮೊಯಿಲಿಯವರು ತರಿಸಿ ನೋಡಲಿ. ಎಷ್ಟೆಷ್ಟು ಪ್ರಾಜೆಕ್ಟ್‌ಗಳಿಗೆ ಭೇಟಿ ಕೊಟ್ಟು ಇನ್ಸ್‌ಪೆಕ್ಷನ್ ಮಾಡಿದ್ದಾರೆಂಬುದರ ಬಗ್ಗೆ ನೋಡಲಿ. ಇನ್ಸ್‌ಪೆಕ್ಷನ್ ನೋಟ್ ಇರುವುದರಿಂದ ಎಲ್ಲೆಲ್ಲಿ ಪ್ರೋಗ್ರೆಸ್ ಆಗಿದೆಯೆಂಬುದು ಗೊತ್ತಾಗುತ್ತದೆ. ಶೇಕಡ ನೂರರಷ್ಟು ಪ್ರಾಮಾಣಿಕವಾಗಿ ಮಾಡಿದ್ದೇವೆಂದು ಹೇಳುವಂತಹವರು ನಾವ್ಯಾರೂ ಕೂಡ ಅಲ್ಲ. ನಮ್ಮ ಸಿಸ್ಟಂ ಅಲ್ಲಿ ಆ ರೀತಿ ಇದೆ. ನೀವು ಬಿಟ್ಟ ಸಿಸ್ಟಂ ಅನ್ನೇ ನಾವು ಅಲ್ಲಿ ಮಾಡಬೇಕು. ನಾವು ಬಿಡುವ ಸಿಸ್ಟಂ ಅನ್ನೇ ಮತ್ತೊಬ್ಬರು ಬಂದು ಮಾಡಬೇಕು. ಎಲ್ಲಿಂದ ಟ್ರಾನ್ಸ್‌ಫರ್ ಶುರುವಾಗುತ್ತದೋ ಅಲ್ಲಿಂದಲೇ ಅದು ಶುರುವಾಗುತ್ತದೆ. ಯಾರು ಏನೂ ಮಾಡುವುದಕ್ಕಾಗುವುದಿಲ್ಲ, ಏಕೆಂದರೆ, ಸಿಸ್ಟಂ ಆ ರೀತಿ ಇದೆ. ಎಷ್ಟೇ ಬಿಗಿ ಮಾಡುವುದಕ್ಕೆ ಹೋದರೂ ಕೂಡ ಸಿಸ್ಟಂನಿಂದ ನಾವು ದೂರ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ, ಪ್ರೋಗ್ರೆಸ್ ಆಗಿಲ್ಲವೆಂದು ಏಕೆ ಹೇಳುತ್ತಿದ್ದೀರಿ? ಉದಾಹರಣೆಗೆ, ಇಂಡಿ ಬ್ರಾಂಚ್ ಮತ್ತು ಜೇವರ್ಗಿ ಬ್ರಾಂಚ್‌ಗಳನ್ನು ನೋಡಿಕೊಂಡು ಬಂದರೆ ಅಲ್ಲಿನ ಪ್ರಗತಿ ಏನಾಗಿದೆಯೆಂದು ಗೊತ್ತಾಗುತ್ತದೆ. ಬಂಗಾರಪ್ಪನವರು, he is not here, I do not want to mention his name.

ತುಂಗಾ ಮೇಲ್ದಂಡೆಯ ಏತ ನೀರಾವರಿ ಯೋಜನೆಗೆ ಮೂರು ಸಲ ಶಂಕುಸ್ಥಾಪನೆ ಮಾಡಿದರು. Not even a single administrative approval!

ನಾನು ಅದನ್ನು ಹೇಳುವುದಕ್ಕಾಗುತ್ತದೆಯೇ ?ಹೇಳಬಾರದು. ಹೇಳಿದರೆ ಮನಸ್ಸಿಗೆ ನೋವಾಗುತ್ತದೆ. But there is no other way.

5.10 ಪಿ.ಎಂ

ಇವರು ಮಾಡಿದ್ದ ಗುದ್ದಲಿ ಪೂಜೆಗಳು ಇದೊಂದೇ ಅಲ್ಲ ಬಹಳ ಇದೆ. ಅದರಲ್ಲಿ ಮಾನ್ಯ ವೀರಪ್ಪ ಮೊಯ್ಲಿರವರ ಇಂಟಿಗ್ರಿಟಿ ನನಗೆ ಗೊತ್ತಿದೆ. ಅವರಿಗೆ ಸ್ಟೇಟ್‌ಕಮಿಟ್‌ಮೆಂಟ್ ಇದೆ. ಅವರು ಯಾವಾಗಲೂ ಲಿಗ್ಯಾಲಿಟಿ ಬಗ್ಗೆ ಯೋಚನೆ ಮಾಡಿಯೇ ಮುಂದೆ ಹೋಗುತ್ತಾರೆ. ಕಾವೇರಿ ವಿಚಾರದಲ್ಲಿ ನಾವು ನೋಡಿದ್ದೇವೆ. ಕಾವೇರಿ ಪ್ರಾಧಿಕಾರವಾಯಿತಲ್ಲಾ, ಕಾವೇರಿ ವಿಚಾರದಲ್ಲಿ ಹೋರಾಟ ಮಾಡಿದವರಲ್ಲಿ ಮಾನ್ಯ ನಂಜೇಗೌಡರು ಇಲ್ಲಿ ಕುಳಿತಿದ್ದಾರೆ. ಕಾವೇರಿ ಪ್ರಾಧಿಕಾರ ಮಾಡಿದಾಗ ತಾವೆಲ್ಲರೂ ದೆಹಲಿಯಲ್ಲಿ ಒಪ್ಪಿಕೊಂಡು ಬಂದಿರಲಿಲ್ಲವೇ? ಆ ಸಭೆಯಲ್ಲಿ ವಾಟಾಳ್‌ರವರು ಮಾತ್ರ ಇರಲಿಲ್ಲ, ಪುಟ್ಟಣ್ಣಯ್ಯನವರು ಇದ್ದರು. ಕಾಂಗ್ರೆಸ್ ಪಕ್ಷದವರು ಪ್ರಾಧಿಕಾರವನ್ನು ಒಪ್ಪಿಕೊಂಡಿರಲಿಲ್ಲವೇ ಮಾನ್ಯ ನಂಜೇಗೌಡರೆ ಹೇಳಿ. ಇವರೆಲ್ಲರೂ ಆ ಏಳು ಅಂಶಗಳನ್ನು ಒಪ್ಪಿಕೊಂಡು ಬಂದಿದ್ದರು. ಪ್ರಧಾನ ಮಂತ್ರಿಗಳು, ಜಾರ್ಜ್‌ಫರ್ನಾಂಡೀಸ್, ಜೆ.ಹಚ್. ಪಟೇಲರು, ಯಶವಂತಸಿನ್ಹ. ಇವರೆಲ್ಲರ ಹತ್ತಿರ ಸುಮಾರು ಏಳು ಗಂಟೆಗಳ ಕಾಲ ಕುಳಿತು ಮಾತನಾಡಿ, ನಮ್ಮ ಮಾನ್ಯ ಎಸ್. ಎಂ. ಕೃಷ್ಣರವರು ಇನ್ನೂ Still I remember what he said in that meeting. "ಮಾನ್ಯ ಪಟೇಲರೇ ಏಳು ಅಂಶಗಳನ್ನು ಅಪ್ರೂವ್ ಮಾಡಿಕೊಂಡು ಬಂದುಬಿಟ್ಟರೆ that will be history in Karnataka ಎಂದು ಹೇಳಿದರು."ಹೊರಗಡೆ ಭಾಷಣ ಮಾಡುವಾಗ ರಾಜಕೀಯ ಮಾಡಬಾರದೆಂದು ಹೇಳುತ್ತಾರೆ.

ಅಲ್ಲಿ ಎಲ್ಲವನ್ನು ಒಪ್ಪಿಕೊಂಡು ಬಂದು ಇವರು ಹೇಳಿದ ಮೇಲೆ ನಾವು ಪ್ರಧಾನ ಮಂತ್ರಿಗಳ ಮನೆಗೆ ಹೋಗಿದ್ದು. ಇವರು ಹೇಳದೆಯೇ ನಾವು ಪ್ರಧಾನ ಮಂತ್ರಿಗಳ ಮನೆಗೆ ಹೋಗಿಯೇ ಇಲ್ಲ. Cauvery Authority, never in the history of Indian river disputes...

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ನಾಗೇಗೌಡರೆ, ತಾವು ಏನು ಕಾವೇರಿ ಪ್ರಾಧಿಕಾರವನ್ನು ಒಪ್ಪಿಕೊಂಡು, ತಮಿಳುನಾಡು ಕೇಳಿದ್ದನ್ನೆಲ್ಲಾ ಕೊಟ್ಟು ಬಂದಿರಲ್ಲಾ ಅದರಿಂದ ನಮಗೇನು ಲಾಭ ವಿದೆ ಹೇಳುತ್ತೀರಾ?

ಶ್ರೀ ಕೆ.ಎನ್. ನಾಗೇಗೌಡ : ತಮಗೆ ಇದರಿಂದ ಏನು ಲಾಭವಾಗಿದೆಯೆಂದು ಇವತ್ತು ಕೇಳುತ್ತಿರುವವರು ಆ ಸಭೆಯಲ್ಲಿ ಏಕೆ ಏನು ಮಾತನಾಡಲಿಲ್ಲ?

ಶ್ರೀ ಡಿ. ಆರ್. ಪಾಟೀಲ್ : ಈಗ ಹೇಳಿ, ತಿಳಿದಿಲ್ಲದವರಿಗೆ ಈಗ ಹೇಳಿ. ಆ ಸಭೆಯಲ್ಲಿ ಇಲ್ಲದವರಿಗೆ ಈಗ ಹೇಳಿ.

ಶ್ರೀ ಕೆ.ಎನ್. ನಾಗೇಗೌಡ : ಈಗ ಹೇಳುವುದು ಬೇರೆ ವಿಚಾರ. ಅಲ್ಲಿ ಒಪ್ಪಿಕೊಂಡು ಬಂದಾದಮೇಲೆ ಮೈಸೂರು, ಮಂಡ್ಯಗಳಲ್ಲಿ ಮುಷ್ಕರಗಳು ಆಯಿತು. ವಾಟಾಳ್ ಒಬ್ಬರೇ ಇವತ್ತಿನವರೆಗೆ ಇದರ ಬಗ್ಗೆ ಹೇಳಿರುವವರು. ನಮಗೆ ಅದರ ಬಗ್ಗೆ ನೋಟೀಸ್ ಕಳುಹಿಸಿ. ನಮ್ಮ ಜಯಚಂದ್ರರವರು ಕಾವೇರಿಗೆ ಅನ್ಯಾಯ ಮಾಡಿದಿರಿ, ಕೃಷ್ಣಗೆ ಅನ್ಯಾಯ ಮಾಡಿದಿರಿ ಎಂದು ಹೇಳುತ್ತಾರೆ, ಕಾವೇರಿಗೆ, ಕೃಷ್ಣಗೆ ಯಾರ್ಯಾರು ಅನ್ಯಾಯಮಾಡಿದರು ಎಂಬುದು ತಮಗೆ ಗೊತ್ತಿಲ್ಲವೆ? ಪ್ರಾಧಿಕಾರವನ್ನು ಮಾಡಿ, ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿದ್ದು ನೀರು ಇದ್ದರೆ ಕೊಡುತ್ತೇವೆ, ನೀರು ಇಲ್ಲದಿದ್ದರೆ ಇಲ್ಲವೆಂದು ಹೇಳಿ, ಈ ವಿಚಾರವನ್ನು ಕೋರ್ಟ್‌ನಿಂದ ಹೊರಕ್ಕೆ ತಂದು ಪೊಲಿಟಿಕಲ್ ಫ್ರೇಮ್ ಮಾಡಿಕೊಂಡು, ಪೊಲಿಟಿಕಲ್ ಲೀಡರ್‌ನ್ನು ಇಟ್ಟುಕೊಂಡು ಮಾತುಕತೆ ಮಾಡುವಂಥ ಫೋರಂನ್ನು ಕ್ರಿಯೇಟ್ ಮಾಡಲಿಲ್ಲವೆ?

ಶ್ರೀ ಡಿ.ಆರ್. ಪಾಟೀಲ್ : ಪ್ರಾಧಿಕಾರ ಆಗಿರುವುದು 205ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡುವ ಬಗ್ಗೆ ಮಾನೀಟರ್ ಮಾಡಲು.ಅದಕ್ಕಾಗಿ ಪ್ರಾಧಿಕಾರ ತಾವು ಒಪ್ಪಿಕೊಂಡು ಬಂದಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ : ಮಾತನಾಡಲು ಬೇಕಾದಷ್ಟು ವಿಚಾರಗಳಿದೆ. ಮಹಾರಾಷ್ಟ್ರದ ವಿಚಾರ ಬಹಳ ಪ್ರಾಮುಖ್ಯವಾಗಿರತಕ್ಕದ್ದು. ಈ ವಿಚಾರದಲ್ಲಿ ಮಾನ್ಯ ಖರ್ಗೆಯವರು ಹೇಳಿದ್ದು ಸರಿ ಇದೆ. ಮೊದಲು ಅವರು ಅಫಿಡೆವಿಟ್ ಹಾಕಿರತಕ್ಕದ್ದು. ಅಲ್ಲಿ ಕೇಸ್ ಡಿಸ್‌ಮಿಸ್ ಮಾಡಿ, ಯಾವುದನ್ನು ತೆಗೆದುಕೊಳ್ಳಬಾರದು ಎನ್ನತಕ್ಕದ್ದನ್ನು ಸಪೋರ್ಟಿಂಗ್ ಕರ್ನಾಟಕ ಮಾಡಿರತಕ್ಕದ್ದರ ಬಗ್ಗೆ ಅವರು ಹೇಳಿರುವ ಮಾತು ಸರಿಯಾಗಿದೆ. ಅನಂತರ ಸಿ. ಡಬ್ಲ್ಯೂ.ಸಿ.ನಲ್ಲಿ ಒಂದು ಸಭೆಯಾಯಿತು. ಅದಕ್ಕೆ ಕಾರಣ ನನಗೆ ಗೊತ್ತಿಲ್ಲ. ಆ ಸಭೆಯಲ್ಲಿ ಮಹಾರಾಷ್ಟ್ರದ ಎಲ್ಲಾ ಅಧಿಕಾರಿಗಳು ಅಬ್ಜೆಕ್ಷನ್ ತೆಗೆದು 524ಮೀಟರ್‌ವರೆಗೆ ಡ್ಯಾಂಹೋದರೆ ನಮ್ಮ ಬ್ಯಾಕ್ ವಾಟರ್‌ನಿಂದ ಹಿಪ್ಪರಗಿಯಿಂದ ಸಾಂಗ್ಲಿಯವರೆಗೆ ತೊಂದರೆಯಾಗುತ್ತದೆ ಎಂದು ಹೇಳಿದರು

SRI D.R.PATIL : Tell me the date of the CWC..

SRI K.N. NAGE GOWDA : When I am making it on the floor of the

House. You have to believe me..

"Inter-State Meeting - Central Water Commission- regarding submersion of Maharashtra territory due to Hippargi Barrage and Almatti Reservoir in Karnataka was held in New Delhi on 23.2.99. In the meeting, it was discussed among other things, Criteria for deciding the end of backwaters and the modalities of taking across the river canal was decided. The state of Maharashtra and Karnataka have constituted an official team to represent the respective States for deciding the location of cross-section of river canal and to determine the co-efficiency in the term agreed to undertake joint survey for cross section of two reaches namely..."

They have agreed to have the joint survey.

ಆಲಮಟ್ಟಿಯಿಂದ ಹಿಪ್ಪರಗಿಯವರೆಗೆ, ಮತ್ತೊಂದು ಹಿಪ್ಪರಗಿಯಿಂದ ಸಾಂಗ್ಲಿಯವರೆಗೆ ಜಾಯಿಂಟ್ ಸರ್ವೆಮಾಡಲು ಒಪ್ಪಿಕೊಳ್ಳಲಾಗಿದೆ. Finally 14 cross-sections in the reaches of Almatti-Hippargi and 17 cross-sections from Hippargi to Sanngali, were agreed by both the States to be carried out. So far ten cross-sections and 12 cross-sections have been completed on the joint survey.

ಈ ತಿಂಗಳಿನಲ್ಲಿ ಬಹುಶಃ ಜಾಯಿಂಟ್ ಸರ್ವೆ ಮುಗಿಯುತ್ತದೆ. ಸಿ.ಡಬ್ಲ್ಯು.ಸಿ. ನವರು ಇದನ್ನು ಮಾಡುವಾಗ ಮೀನ್ ವೈಲ್ ಅವರು ಕೋರ್ಟ್‌ಗೆ ಹೋಗಿದ್ದಾರೆ. ನಾವು ಹೇಳುವುದು ಏನೆಂದರೆ, ಮಹಾರಾಷ್ಟ್ರ ಮತ್ತು ಕರ್ನಾಟಕ all along the way, since inception, to this point we were together.

ಈ ಸ್ಟೇಜ್‌ನಲ್ಲಿ ಜಾಯಿಂಟ್ ಸರ್ವೆಗೆ ಸಿ. ಡಬ್ಲ್ಯು.ಸಿ. ಹೇಳಿದೆ, ಸರ್ವೆ ಮಾಡಿ ಇಲ್ಲಿ ಏನಾದರೂ ಮುಳುಗಡೆಯಾದರೆ ಆ ಪ್ರದೇಶಕ್ಕೆ ಪರಿಹಾರ ಕೊಡುತ್ತೇವೆ. ನಮಗೆ ಗೊತ್ತಿರುವ ಹಾಗೆ ಅಲ್ಲಿ ಮುಳುಗಡೆಯಾಗುವುದಿಲ್ಲ, ಅವರ ಪ್ರಾಜೆಕ್ಟ್‌ನಲ್ಲೇ ಬ್ಯಾಕ್ ವಾಟರ್‌ನಿಂದ ಮುಳುಗಡೆಯಾಗಿರತಕ್ಕದ್ದು. ನಮ್ಮ ಪ್ರಾಜೆಕ್ಟ್‌ನಿಂದ ಅವರ ಪ್ರಾಜೆಕ್ಟ್‌ಗೆ 12ಕಿ.ಮೀ. ಇದೆ. ಮಹಾರಾಷ್ಟ್ರದ ಪ್ರಾಜೆಕ್ಟ್‌ಗಳು 12ಕಿಲೋಮೀಟರ್‌ನಲ್ಲೇ ಸಬ್‌ಮರ್ಜ್ ಆಗಿದೆ. ಇದು ಅದು ಎರಡು ಜಾಯಿನ್ ಆಗುತ್ತದೆ. ಆದ್ದರಿಂದ ತಾಂತ್ರಿಕವಾಗಿ ಜಾಯಿಂಟ್ ಸರ್ವೆ ಮಾಡಲಿ, ಆ ರೀತಿ ಸರ್ವೆ ಮಾಡಿದಾಗ ಎಲ್ಲಿ ಮುಳುಗಡೆಯಾಗಿದೆ, ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತದೆ, ಯಾರಿಗೆ ಪರಿಹಾರ ಕೊಡಬೇಕು ಎಂಬ ಬಗ್ಗೆ ತೀರ್ಮಾನ ತೆಗೆದುಕೊಂಡು ಸರ್ವೆಮಾಡುತ್ತಿದ್ದಾರೆ. ಈಗಾಗಲೆ 85 ಪರ್‌ಸೆಂಟ್ ಸರ್ವೆ ಕೆಲಸ ಮುಗಿದಿದೆ. ಇದರಲ್ಲಿ ಮಹಾರಾಷ್ಟ್ರದವರು ಮತ್ತೆ ನಾವು ಇಬ್ಬರೂ ಇದ್ದೇವೆ. ಈ ತಿಂಗಳ ಕೊನೆಯಲ್ಲಿ ಈ ಕೆಲಸ ಮುಗಿಯುತ್ತದೆ. ನಮ್ಮ ಅಧಿಕಾರಿಗಳಿಂದ ಬಂದಿರುವ ಮಾಹಿತಿಯ ಪ್ರಕಾರ ಅವರ ಭಾಗದಲ್ಲಿ ಯಾವುದೇ ಕಾರಣಕ್ಕೆ ಹೆಚ್ಚು ಹಳ್ಳಿಗಳು ಮುಳುಗಡೆಯಾಗುವುದಿಲ್ಲ. ಮುಳುಗಳಡೆಯಾಗತಕ್ಕದನ್ನು ಬಿಟ್ಟರೆ ಅಲ್ಲಿ ಪುನಃ ಆ ರಿವರ್‌ನಲ್ಲಿ ಫ್ರಿಕ್ಷನ್ ಕೋಎಫಿಷಿಯೆಂಟ್‌ನ್ನು ಸಹ ಕಂಡು ಹಿಡಿಯಬೇಕು. ಆ ಪ್ಲೋವನ್ನು ಕಂಡು ಹಿಡಿಯದಿದ್ದರೆ ಎಷ್ಟು ವಾಲ್ಯೂಮ್ ಎಂಬುದನ್ನು ಕಂಡು ಹಿಡಿಯಲು ಆಗುವುದಿಲ್ಲ. ಈ ಹೈಡ್ರಾಲಜಿಯೆಲ್ಲಾ ಇದರಲ್ಲಿ ಸೇರಿರುವುದರಿಂದ ಜಾಯಿಂಟ್ ಸರ್ವೆ ಮಾಡುತ್ತಿದ್ದೇವೆ. ಮೀನ್‌ವೈಲ್ ನಾವು ಮತ್ತು ಮಹಾರಾಷ್ಟ್ರದವರು ಚೆನ್ನಾಗಿರುವುದರಿಂದ, ಇಷ್ಟು ವರ್ಷಗಳ ಕಾಲ ಅವರು ನಮ್ಮಲ್ಲಿದ್ದ ಪ್ರಯುಕ್ತ ನಮಗೂ ಅವರಿಗೂ ಭಿನ್ನಾಭಿಪ್ರಾಯ ಬರಬಾರದು ಎಂಬ ಹಿನ್ನೆಲೆಯಿಂದ ಅವರಲ್ಲಿ

ನಾವು ಈಗಾಗಲೇ ಕೇಳಿಕೊಂಡಿದ್ದೇವೆ. ಮಾನ್ಯ ಖರ್ಗೆಯವರು ಇದರ ಬಗ್ಗೆ ಕರಸ್‌ಪಾಂಡೆನ್ಸ್ ಕೇಳಿದರು.

27.7.1998 ರಲ್ಲಿ letter of the Irrigation Secretary. to the Irrigation Secretary of the Government of Maharashtra. On 27.10.98 Irrigation Secretary of Government of Maharashtra addressed a letter to Irrigation Secretarty of our state. on 20.11.98 our Chief Secretary wrote to Maharashtra chief Secretary on 22.2.99 Central water commission forwarding the proceedings of the meeting that has taken place at Delhi. On 23.2.99 that was replied. Again, Chief Secretary of Maharashtra. Again they have written to our chief secretary on 9-3-99. Again on 10-3-99 Karnataka Irrigation Secretary Written to Secretary, Maharashtra. The latest letter is on 1.4.99 from chief Secretary Karnataka to Chief Secretary. Maharashtra. Again on 1-4-99 chief engineer UK P and Almatti went to Maharashtra and discussed. On 15-4-99 chief secretary Karnataka has written to chief Secretary Maharashtra for an agreement.

ಆ ಅಗ್ರಿಮೆಂಟ್‌ಗೆ ಅವರು ಸಹಿ ಹಾಕಿಲ್ಲ ಆದರೆ ಸರ್ವೆ ಮಾಡಿಸಲು ಅವರು ಒಪ್ಪಿಕೊಂಡಿದ್ದಾರೆ.

ಜಾಯಿಂಟ್ ಸರ್ವೆ ಆಗುತ್ತಿದೆ 3.5.1999ರಲ್ಲಿ chief Secretary to chief Secretary of both states have corresponded.

ಕಾಗದವನ್ನು ಬರೆದಿದ್ದೇವೆ. ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ನಮ್ಮ ಮುಖ್ಯಮಂತ್ರಿಯವರಿಂದ ಕಾಗದವನ್ನು ಬರೆಸಿ, ಅವತ್ತು ಏನು ಓರಲ್ ಡಿಸ್‌ಕಷನ್ ನಡೆದಿದೆ, ಇದನ್ನು ಕೋರ್ಟ್ ಹೊರಗಡೆಯೇ ಕುಳಿತುಕೊಂಡು ಮಾತನಾಡಿ, ತಾವು ಇದರ ಬಗ್ಗೆ ಕೋರ್ಟ್‌ಗೆ ಹೋಗತಕ್ಕ ಅವಶ್ಯಕತೆ ಇಲ್ಲ, ಈ ಜಾಯಿಂಟ್ ಸರ್ವೆ ವರದಿಯ ಆಧಾರದ ಮೇಲೆ ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು ಮಾತುಕತೆ ಮಾಡಿ ನಮ್ಮ ಸಮಸ್ಯೆ ಪರಿಹಾರ ಮಾಡಿಕೊಳ್ಳೋಣ ನಮ್ಮ ಕ್ವಾಂಟಮ್ ಮತ್ತು ಶೇರಿನ ಬಗ್ಗೆ ಅವರಿಂದ ಯಾವುದೇ ತಕಾರರು ಇಲ್ಲ. 524 ಮೀಟರ್ ಡ್ಯಾಂ ಹೋದರೆ ನಮ್ಮ ಭಾಗದ ಹಳ್ಳಿಗಳು ಮುಳುಗಡೆಯಾಗುತ್ತದೆ ಎಂಬುದು ಮಹಾರಾಷ್ಟ್ರದವರ ತಕರಾರು. ಆ ಭಾಗದ ಹಳ್ಳಿಗಳು ಮುಳುಗಡೆಯಾಗುವುದಿಲ್ಲವೆಂದು ನಾವು, ಮುಳುಗಡೆಯಾಗುತ್ತದೆಂದು ಅವರು. ಸಿ.ಡಬ್ಲ್ಯೂ.ಸಿ.ರವರು ಇದರ ಬಗ್ಗೆ ಜಾಯಿಂಟ್ ಸರ್ವೆ ಮಾಡಲು ಹೇಳಿದ ಮೇಲೆ ಸಮಿತಿ ಮಾಡಿದ್ದೇವೆ, ಆ ಜಾಯಿಂಟ್ ಸರ್ವೆ ವರದಿ ಬಂದಮೇಲೆ ನಾವು ಮಹಾರಾಷ್ಟ್ರದವರನ್ನು ಕನ್‌ವಿನ್ಸ್ ಮಾಡಿದರೆ Outside the Court ಹೇಳಿದರೆ ಬಹುಶಃ ಅವರು ಸುಪ್ರೀಮ್ ಕೋರ್ಟ್‌ಗೆ ಹೋಗಿ ಹೇಳುತ್ತಾರೆ ಎಂಬ ಹಿನ್ನೆಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದಾರೆ. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಮಾತುಕತೆ ಮುಗಿದುಹೋಗಿತ್ತು ನಾನು ಅಲ್ಲಿ ಇದ್ದಾಗ ಮುಖ್ಯಮಂತ್ರಿಗಳು ದೂರವಾಣಿಯಲ್ಲಿ ರಾಣೆಯವರ ಹತ್ತಿರ ಮಾತನಾಡಿದ್ದಾರೆ. ಅನಂತರ ನಮ್ಮ ಮುಖ್ಯ ಕಾರ್ಯದರ್ಶಿಯವರು ಮತ್ತು ಅವರ ಮುಖ್ಯಕಾರ್ಯದರ್ಶಿಯವರು ಮಾತನಾಡಿದ್ದಾರೆ. ಇನ್ನು ಸ್ವಲ್ಪ ದಿವಸದಲ್ಲಿ ಇಬ್ಬರು ಮುಖ್ಯಮಂತ್ರಿಗಳು ಮಾತನಾಡಿ, ಆ ಜಾಯಿಂಟ್ ಸರ್ವೆ ವರದಿ ಬಂದ ಮೇಲೆ ಜುಲೈ 19ರಂದು ನಮ್ಮ ಕೇಸ್ ಇರುವುದು ಇಷ್ಟರಲ್ಲಿ ಇಬ್ಬರು ಮುಖ್ಯಮಂತ್ರಿಗಳು ಮಾತನಾಡಬೇಕು ಎಂಬ ಹಿನ್ನೆಲೆಯಲ್ಲಿ

ಅವರಿಗೆ ಪತ್ರವನ್ನು ಈಗಾಗಲೇ ಬರೆದಿದ್ದೇವೆ.

ಅವರು ಮಾತನಾಡಲು ಒಪ್ಪುತ್ತಾರೆಂದು ವಿಶ್ವಾಸ ನಮಗೆ ಇದೆ. ಕರ್ನಾಟಕದ ಹಕ್ಕು ಮತ್ತು ಅಲೋಕೇಷನ್‌ಗೆ ಬಗ್ಗೆ ಅವರಿಂದ ಯಾವುದೇ ತಕರಾರು ಇಲ್ಲ. ಮುಳುಗಡೆಯಾಗುವ ವಿಚಾರದಲ್ಲಿ ಮಾತ್ರ ತಕರಾರು ಇದೆ. ನಾವು ಇವತ್ತು ಕೆಲಸ ಮಾಡಿದ್ದೇವೆ. ಯಾವುದೂ ನಿಂತಿಲ್ಲ. ಆಲಮಟ್ಟಿ ಎಡದಂಡೆ ಕೆಲಸವಾಗುತ್ತಿದೆ, ಬಲದಂಡೆಯ ಕೆಲಸವಾಗುತ್ತಿದೆ, ಆ ಭಾಗದಿಂದ ಬರತಕ್ಕ ಶಾಸಕರು ಇಲ್ಲಿ ಕುಳಿತಿದ್ದಾರೆ. ಅವರು ಅದನ್ನು ನೋಡಿದ್ದಾರೆ. ಮುಳುವಾಡ ಏತ ನೀರಾವರಿ ಭೂಮಿಯ ಸಮಸ್ಯೆಯಾಗಿತ್ತು. ಸ್ವಾಮಿಗಳು ಸತ್ಯಾಗ್ರಹ ಮಾಡಿಕೊಂಡು ಬಹುಶಃ ಆರೇಳು ವರ್ಷದಿಂದ ತಕರಾರು ಇತ್ತು. ಅವರ ಪಕ್ಷದ ಕ್ಷೇತ್ರವೇ ಬಿ.ಎಸ್. ಪಾಟೀಲರ ಕ್ಷೇತ್ರವೇ ಮಾನ್ಯ ದೇವೇಗೌಡರು ಹೋಗಿ ಸ್ವಾಮಿಗಳನ್ನು ಕರೆದು ಮಾತನಾಡಿ ಆ ಕೆಲಸವನ್ನು ಪ್ರಾರಂಭ ಮಾಡಿದರು. Almost all, 524 ಒಳಗಡೆ ಸಬ್‌ಮರ್ಜ್ ಆಗಬಾರದು ಎಂದು ಬಹಳ ವೇಗವಾಗಿ ಕೆಲಸ ಮಾಡಿದ್ದೇವೆ. ಮುಖ್ಯಮಂತ್ರಿಗಳು ಭೇಟಿ ಮಾಡಿದ್ದಾರೆ.

ಬಹಳಷ್ಟು ಹಣ ಖರ್ಚು ಮಾಡಿ ಹೆಡ್‌ವರ್ಕ್ಸ್ ಮುಗಿಸಿ 524 ಲೆವೆಲ್‌ಗೆ ನೀರು ಬರುವುದರೊಳಗೆ ಅದನ್ನು ಮೇಲೆ ತೆಗೆಯಬೇಕು ಎನ್ನುವಂತಹ ಉದ್ದೇಶ ಇಟ್ಟುಕೊಂಡು ಬಹಳ ವೇಗವಾಗಿ ಕೆಲಸ ನಡೆಯುತ್ತಿದೆ. ಆದರೆ ಕೆನಾಲ್ ಕೆಲಸ ನಡೆಯುತ್ತಿಲ್ಲ. ನಮ್ಮ ಸರ್ಕಾರದ ಇನ್‌ಟೆನ್ಷನ್ ಏನೆಂದರೆ ಫಸ್ಟ್ ನಾವು ನೀರು ಸ್ಟೋರೇಜ್ ಮಾಡಿಕೊಳ್ಳಬೇಕು ನಂತರ ಕೆನಾಲ್ ಆಗಬೇಕು ಎಂಬುದೇ ಆಗಿದೆ ಕೆನಾಲ್ ಆಗುವಾಗ ಅದು ಎಲ್ಲಾ ರೀತಿಯಿಂದಲೂ ಪೂರ್ಣವಾಗಬೇಕು, ನಂತರ ಡಿಸ್ಟ್ರಿಬ್ಯೂಟರಿ ವರ್ಕ್ ಆಗಬೇಕು. ಅದಾದ ನಂತರ ಫೀಲ್ಡ್ ಕೆನಾಲ್ ಆಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಈರೀತಿ ಒಂದು ಮೆಥೆಡಿಕಲ್ ಆಗಿ ನಾವು ಕೆಲಸಗಳನ್ನು ಮಾಡಬೇಕೆ ವಿನಃ ಮೊದಲು ಫೀಲ್ಡ್ ಕೆನಾಲ್ ಮಾಡಿ ಆಮೇಲೆ ಡ್ಯಾಮ್ ಮಾಡುವುದಕ್ಕೆ ಹೋಗುತಕ್ಕಂಥದ್ದಲ್ಲ. ಹಿಪ್ಪರಗಿ ಬ್ಯಾರೇಜ್‌ನಲ್ಲೂ ಕೂಡ ಈಗಾಗಲೇ ಹೆಡ್ ವರ್ಕ್ಸ್ ಎಲ್ಲಾ ಮುಗಿದಿದೆ. 524 ಲೆವೆಲ್‌ಗೆ ಮುಗಿಯುವ ಹೊತ್ತಿಗೆ ನಾವು ಕೆನಾಲ್ ಮಾಡಬೇಕಾಗಿದೆ. ಇನ್ನು ಆ ಭಾಗದ ಬಿಜಾಪುರ ಜಿಲ್ಲೆಯಲ್ಲಿ ಉಳಿದಿರತಕ್ಕಂತಹ 3-4 ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಎಲ್ಲಾ ಕಡೆಗಳಲ್ಲಿ ಹೆಡ್ ವರ್ಕ್ಸ್‌ಗೆ ನಾವು ಪ್ರಾಮುಖ್ಯತೆ ಕೊಟ್ಟು ಅವುಗಳನ್ನು ಮುಗಿಸುತ್ತಿದ್ದೇವೆ. ಜುಲೈ 19ರಂದು ಸಂವಿಧಾನ ಪೀಠಕ್ಕೆ ಕೇಸ್ ರೆಫರ್ ಆಗಿದೆ. ಆ ದಿನ ರಾಜ್ಯದ ನಿಲುವಿಗೆ ಜಯ ದೊರೆಯುತ್ತದೆ ಎಂದು ನಾವು ಎಕ್ಸ್‌ಪೆಕ್ಟ್ ಮಾಡಿದ್ದೇವೆ, ನಮ್ಮ ಲಾಯರ್‌ಗಳೆಲ್ಲರೂ ಕೂಡ ಆ ಬಗ್ಗೆ ಬಹಳ ವಿಶ್ವಾಸದಿಂದ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಹಿನ್ನೆಲೆಯಲ್ಲಿ ಆ ಮಾತುಗಳನ್ನು ಹೇಳಿದ್ದರು. ಟೈಮ್ ಎಕ್ಸ್‌ಟೆನ್‌ಷನ್‌ಗೆ ಕೇಳುತ್ತೇವೆ ಎಂದು ಅವರು ಹೇಳಿಲ್ಲ. ಅವಧಿ ಮುಗಿಯಲು ಇನ್ನೂ ಬಹಳ ಸಮಯ ಇದೆ. ನಾನು ಬೆಳಿಗ್ಗೆ ಸಹಾ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ನಾನು ಟೈಮ್ ಕೇಳುತ್ತೇನೆಂದು ಹೇಳಲಿಲ್ಲವೆಂದು ಅವರು ಹೇಳಿದರು. ಈಹಂತದಲ್ಲಿ ಟೈಮ್ ಎಕ್ಸ್‌ಟೆನ್ಷನ್ ಕೇಳತಕ್ಕದ್ದು ಪ್ರಿಮೆಚ್ಯೂರ್ ಆಗುತ್ತದೆ. ನಮಗೆ ಇನ್ನೂ ಹತ್ತು ತಿಂಗಳ ಸಮಯ ಇದೆ. ಜುಲೈನಲ್ಲಿ ಕೇಸ್ ಇರುವುದರಿಂದ ಗೇಟು ಅಳವಡಿಕೆಗೆ ನಮಗೆ ಡಿಲೇ ಆದರೆ ಸುಪ್ರೀಂಕೋರ್ಟ್ ನಮಗೆ ಜಸ್ಟೀಸ್ ಕೊಡುತ್ತದೆ ಎಂಬ ನಂಬಿಕೆ ನಮಗಿದೆ. ನಾವು ಅದಕ್ಕೆ 2-3 ಅಫೀಲ್‌ಗಳನ್ನು ಮಾಡಿದ್ದೇವೆ. ಈ ಬಾರಿ ಮಾನ್‌ಸೂನ್‌ನಲ್ಲಿ ಅಂದರೆ ಜುಲೈ ತಿಂಗಳಲ್ಲಿ ನಾವು ನೀರನ್ನು ಹಿಡಿದಿಟ್ಟುಕೊಳ್ಳಲೇಬೇಕು. ಅದಕ್ಕಾಗಿ ಗೇಟು ಕೂರಿಸಲು ಅನುಮತಿ

ಕೊಡಬೇಕೆಂದು ಕೇಳಿದ್ದೇವೆ. ಇನ್ನು ಮಾನ್ಯ ಸಿದ್ಧರಾಮಯ್ಯನವರು ಹಾಗೂ ನಾನು ಕೆಲವೊಂದು ಹೇಳಿಕೆಗಳನ್ನು ಕೊಟ್ಟೆ ಎಂದು ಪ್ರಸ್ತಾವ ಮಾಡುತ್ತಿದ್ದೀರಿ. ಅವುಗಳ ಬಗ್ಗೆ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪು ನೀಡಿದೆ. ನೀವು ಇಲ್ಲಿ ಪ್ರಸ್ತಾಪಿಸಿದ ಅಂಶಗಳನ್ನೇ ಉಲ್ಲೇಖಿಸಿ ಆಂಧ್ರಪ್ರದೇಶದವರು ನಮ್ಮಿಬ್ಬರ ಮೇಲೆ ಕೇಸ್ ಹಾಕಿದ್ದರು. ನಮ್ಮಿಬ್ಬರ ಹೇಳಿಕೆಗಳು ನ್ಯಾಯಾಂಗ ನಿಂದನೆಯಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿ ರಿಟ್ ಅರ್ಜಿಗಳನ್ನು ವಜಾ ಮಾಡಿದೆ. ನಾವು ನೀಡಿದ ಆ ಹೇಳಿಕೆ ಬೇಜವಾಬ್ದಾರಿತನದ್ದಲ್ಲ. ಯೋಜನೆಯ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ರಾಜ್ಯದ ಹಿತದೃಷ್ಟಿಯಿಂದ ನೀಡಿದ್ದಂತಹ ಹೇಳಿಕೆಗಳಿಗೆ ಆಂಧ್ರಪ್ರದೇಶದವರೇನು ಅಬ್ಜೆಕ್ಷನ್ಸ್‌ಗಳನ್ನು ತೆಗೆದಿದ್ದರು, ಅದಕ್ಕೆ ಸಂಬಂಧಪಟ್ಟಂತಹ ಕಂಟೆಂಪ್ಟ್ ರಿಟ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿ, ಇದರಲ್ಲಿ ಕಂಟೆಂಪ್ಟ್ ವಿಚಾರ ಬರುವುದಿಲ್ಲ, ಇದು ಪ್ರೊಗ್ರೆಸೀವ್ ಮ್ಯಾಟರ್ ಎಂದು ಹೇಳಿದೆ. ಇದು ಮಾನ್ಯ ಖರ್ಗೆಯವರಿಗೂ ಕೂಡ ಗೊತ್ತಿದೆ. ಮಾನ್ಯ ಖರ್ಗೆಯವರು ಈ ವಿಚಾರದಲ್ಲಿ ಮಾಡಿದ ಆಪಾದನೆಗಳಿಗೆ ಸುಪ್ರೀಂ ಕೋರ್ಟ ಜಡ್ಜ್‌ಮೆಂಟೇ ತಕ್ಕ ಉತ್ತರವಾಗಿದೆ. ಒಟ್ಟಾರೆ ನಾವು ಐದು ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕೆಂಬ ಹಿನ್ನೆಲೆಯೊಳಗೆ ಒಂದು ಬಾರಿ ಸಂಪೂರ್ಣ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿದ್ದೇವೆ. ಕ್ರಿಟಿಕಲ್ ವರ್ಕ್ಸ್ ಯಾವುದು, ನಾನ್ ಕ್ರಿಟಿಕಲ್ ವರ್ಕ್ಸ್ ಯಾವುದು ಎಂದು ನಾವು ವರ್ಗೀಕರಿಸುತ್ತಿದ್ದೇವೆ. ಕ್ರಿಟಿಕಲ್ ವರ್ಕ್ ಅಂದರೆ ಎರಡು ಸಾವಿರದ ವರ್ಷದೊಳಗೆ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಮಾಡುವಂತಹ ಕೆನಾಲ್ ವರ್ಕ್ಸ್, ಡ್ಯಾಮ್ ವರ್ಕ್ಸ್, ಹೆಡ್ ವರ್ಕ್ಸ್‌ಗಳು. ರಸ್ತೆಗಳು, ಗೆಸ್ಟ್ ಹೌಸ್ ನಿರ್ಮಾಣ ಮುಂತಾದ ಕೆಲಸಗಳನ್ನು ಸದ್ಯಕ್ಕೆ ಯಾವುದೂ ಮಾಡಬಾರದೆಂದಿದ್ದೇವೆ. ನಾನ್ ಕ್ರಿಟಿಕಲ್ ವರ್ಕ್ಸ್‌ಗಳನ್ನು ಎರಡು ಸಾವಿರದ ನಂತರ ಮಾಡಬೇಕು. ಕ್ರಿಟಿಕಲ್ ವರ್ಕ್ಸ್ ಅನ್ನು ಎರಡು ಸಾವಿರ ಇಸವಿಯೊಳಗಾಗಿ ಮಾಡಬೇಕೆಂದು ನಾವೂ ತೀರ್ಮಾನಿಸಿ ಅವುಗಳನ್ನು ಐಡೆಂಟಿಫೈ ಮಾಡಿದ್ದೇವೆ. ಅದಕ್ಕೆ ದುಡ್ಡು ಎಷ್ಟು ಬೇಕೆಂಬುದನ್ನೂ ಕೂಡ ಅಂದಾಜಿಸಿ ಅದಕ್ಕಾಗಿ ಒಂದು ಹೊಸ ನಿಗಮವೊಂದನ್ನು ಕೂಡ ನಾವು ಸ್ಥಾಪಿಸಿದ್ದೇವೆ. ಇದು ನಾವು ಮಾಡಿರುವ ಎರಡನೇ ನಿಗಮ. ಮಾನ್ಯ ಮೊಯ್ಲಿಯವರು ಆಗಲೇ ಮಾತನಾಡುತ್ತಾ ನಮ್ಮ ಕಂಪನಿಯ ಕ್ರೆಡಿಬಿಲಿಟಿ ಬಗ್ಗೆ ಪ್ರಶ್ನಿಸಿದರು. ಮಾನ್ಯ ಮೊಯ್ಲಿಯವರ question of crediblityಗೆ ನಮ್ಮ ಉತ್ತರ ಏನೆಂದರೆ, ನಮ್ಮ ಸರ್ಕಾರಕ್ಕೆ ಕ್ರೆಡಿಬಲಿಟಿ ಇದೆ. ನಮ್ಮ ನೀರಾವರಿ ನಿಗಮಗಳಿಗೆ ಕ್ರೆಡಿಬಲಿಟಿ ಇದೆ ಎಂಬುದಕ್ಕೆ ಉತ್ತರ ಏನೆಂದರೆ, ನಾವು ಎರಡನೇ ನಿಗಮವನ್ನು ಮಾಡಿರುವುದು. ಹೋದ ಸಾರಿ ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಈ ಬಗ್ಗೆ ಪ್ರಕಟಿಸಿದ್ದರು. ಕೃಷ್ಣಾ ಮೇಲ್ದಂಡೆ ಯೋಜನೆ ಹೊರತುಪಡಿಸಿ ಇತರ ಯೋಜನೆಗಳಲ್ಲಿ ಒಟ್ಟು ಏಳು ಪ್ರಾಜೆಕ್ಟ್‌ಗಳನ್ನು ಇದರಡಿ ತೆಗೆದುಕೊಳ್ಳುತ್ತಿದ್ದೇವೆ. ಘಂಡೋರಿ ನಾಲಾ ಹಿಪ್ಪರಗಿಯಲ್ಲಿ ಉಳಿದಿರತಕ್ಕಂತಹ ಕೆಲಸಗಳು, ತುಂಗಾ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್, ತುಂಗಾ ಮೇಲ್ದಂಡೆ ಯೋಜನೆ, ಭೀಮಾ ನದಿ ಕೊಳ್ಳದಲ್ಲಿರತಕ್ಕಂಥ ಕೆಲಸಗಳು ಇತ್ಯಾದಿ ಒಟ್ಟು ಏಳು ಪ್ರಾಜೆಕ್ಟ್‌ಗಳನ್ನು ಕಾರ್ಯಗತಗೊಳಿಸುವುದಕ್ಕೋಸ್ಕರ 600 ಕೋಟಿ ರೂ. ನಿಗಮದ ಮೂಲಕ ಸಂಗ್ರಹಿಸುವುದಾಗಿ ನಾವು ಹೇಳಿದ್ದೆವು. ನಾನು ಮೊಯ್ಲಿಯವರಿಗೆ ಒಂದು ಮಾತು ಹೇಳಬಯಸುತ್ತೇನೆ. 400 ಕೋಟಿ ರೂ.ಗಳನ್ನು ಸಂಗ್ರಹಿಸುವ ಗುರಿಯನ್ನಿಟ್ಟುಕೊಂಡು ಕರ್ನಾಟಕ ನೀರಾವರಿ ನಿಗಮದ ಮೂಲಕ ಒಂದು ತಿಂಗಳೊಳಗಾಗಿ ನಾವು 263 ಕೋಟಿ ರೂ.ಗಳನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾದೆವು. ನಿಮಗೆ ಕ್ರೆಡಿಬಲಿಟಿ ಇಲ್ಲವೆಂದು

ಅವರು ಹೇಳಿದ್ದರು. ಆದರೆ ನೀರಾವರಿ ನಿಗಮದ ಮೂಲಕ ನಾವು ಹಣ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದರಿಂದ ನಮ್ಮ ಕ್ರೆಡಿಬಲಿಟಿ ಪ್ರೂವ್ ಆದಂತಾಗಿದೆ ಎಂದು ನಾನು ಹೇಳಬಯಸುತ್ತೇನೆ. ಮಾನ್ಯ ಮೊಯ್ಲಿಯವರು ಮಾಡಿದ ಹಾಗೆಯೇ ನಮ್ಮ ಮಾನ್ಯ ಪಟೇಲರ ಸರ್ಕಾರ ನಿಗಮ ಮಾಡಿ ಹಣ ಸಂಗ್ರಹಿಸಿದೆ. ಕೃಷ್ಣಾ ಬೇಸಿನ್‌ನಲ್ಲಿರತಕ್ಕದ್ದನ್ನು ಬಿಟ್ಟು ಇತರ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಈ ನಿಗಮವನ್ನು ನಾವು ಮಾಡಿದ್ದೇವೆ. 31ನೇ ಮೇ 2000 ವರ್ಷದೊಳಗೆ ಎಲ್ಲಾ ಕೆಲಸಗಳನ್ನೂ ಕೂಡ ನಾವು ಕಂಪ್ಲೀಟ್ ಮಾಡುತ್ತೇವೆ ಎಂಬ ವಿಶ್ವಾಸ ನಮಗೆ ಸಂಪೂರ್ಣವಾಗಿ ಇವತ್ತಿಗೂ ಕೂಡ ಇದೆ. 21 ಟಿಎಂಸಿ ನೀರನ್ನು ಹೊರತು ಪಡಿಸಿ ಬಾಕಿ ನೀರನ್ನೆಲ್ಲಾ ಉಪಯೋಗಿಸಿಕೊಳ್ಳಲು ನಾವು ಈಗಾಗಲೇ ಕಮಿಟಮೆಂಟ್ ಮಾಡಿದ್ದೇವೆ. ಅದನ್ನೇ ಮಾನ್ಯ ನಂಜೇಗೌಡರು ಹೇಳಿದ್ದು. ಕಮಿಟೆಡ್ ಯುಟಿಲೈಸೇಷನ್ ಬಗ್ಗೆ ಹೇಳುವುದಾದರೆ 729 ಟಿಎಂಸಿ ಗಳಲ್ಲಿ 708 ಟಿಎಂಸಿ ಗಳಷ್ಟು ನೀರನ್ನು ಉಪಯೋಗಿಸಿಕೊಳ್ಳಲು ನಾವು ಸಿದ್ಧರಿದ್ದೇವೆ. 21 ಟಿಎಂಸಿ ನೀರಿನಲ್ಲಿ ದೂದ್‌ಗಂಗಾ ಯೋಜನೆ ಸೇರಿದೆ. ಈ ದಿಸೆಯಲ್ಲಿ ಮಹಾರಾಷ್ಟ್ರ ಮತ್ತು ನಮ್ಮ ರಾಜ್ಯದ ನಡುವೆ ಒಪ್ಪಂದವೊಂದಕ್ಕೋಸ್ಕರ ಬಹಳ ದಿವಸಗಳಿಂದ ಹೋರಾಟ ನಡೆಯುತ್ತಿದೆ. ಅಗ್ರಿಮೆಂಟ್ ಆದರೆ ಮೇಜರ್ ಪೋರ್ಷನ್ ಅಲ್ಲೇ ಹೋಗುತ್ತದೆ. ಈ ಸರ್ಕಾರ ಯಾವ ಕೆಲಸವನ್ನೂ ನಿಲ್ಲಿಸಿಲ್ಲ. ನಮ್ಮ ಸರ್ಕಾರ ಮಾಡಿರುವ ಕೆಲಸಗಳೇ ಇಂದು ಮಾತನಾಡುತ್ತಿವೆ. ಜಮಖಂಡಿ, ಬಾಗಲಕೋಟೆಗೆ ಹೋದರೆ ಅಲ್ಲಿರುವ 154 ಹಳ್ಳಿಗಳು ನಮ್ಮ ಕೆಲಸಗಳ ಬಗ್ಗೆ ಮಾತನಾಡುತ್ತವೆ. ಡ್ಯಾಮ್ ಹತ್ತಿರ ಹೋದರೆ ಜನಗಳು ನಮ್ಮ ಕೆಲಸದ ಬಗ್ಗೆ ಮಾತನಾಡುತ್ತಾರೆ. ಎರಡು ಸಾವಿರ ಇಸವಿಯೊಳಗಾಗಿ ಈ ಯೋಜನೆಗಳನ್ನು ಮುಗಿಸುತ್ತೇವೆ ಎಂದು ನಾವು 1994ರಲ್ಲಿ ಏನು ಮಾತು ಕೊಟ್ಟಿದ್ದೇವೋ ಅದನ್ನು ನಾವು ಉಳಿಸಿಕೊಳ್ಳುತ್ತೇವೆ. ಕೃಷ್ಣಾ ನದಿಯ ಕಣ್ಣೀರನ್ನು ಉಪಯೋಗಿಸಿಕೊಳ್ಳುವವರು ನಾವಲ್ಲ, ನಾವೇನಿದ್ದರೂ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. 700ಕ್ಕಿಂತ ಹೆಚ್ಚು ಟಿಎಂಸಿ ಯುಟಿಲೈಸೇಷನ್ ಮಾಡಿಕೊಳ್ಳುವುದಕ್ಕೆ ನಾವು ಪ್ಲಾನ್ ಮಾಡಿದ್ದೇವೆ. ನಾವು ಯಾವುದೇ ಬೇಜವಾಬ್ದಾರಿಯ ಹೇಳಿಕೆಗಳನ್ನು ನೀಡಿಲ್ಲ. ನಾವು ಕಾಂಗ್ರೆಸ್ ಪಕ್ಷಕ್ಕಿಂತ ಹೆಚ್ಚು ಜವಾಬ್ದಾರಿಯುತರಾಗಿ ನಡೆದುಕೊಂಡಿದ್ದೇವೆ. ನಮ್ಮ ಸರ್ಕಾರ ರಾಜ್ಯದ ಹಿತವನ್ನು, ರೈತರ ಹಿತವನ್ನು ಕಾಪಾಡಿದೆ. ನಾವು ಯಾರಿಗೂ ಮೋಸ ಮಾಡಿಲ್ಲ. ಅವರು ಮೋಸ ಮಾಡಿದ್ದರಿಂದಲೇ ಅವರನ್ನು ಮನೆಗೆ ಕಳುಹಿಸಿದರು ಎಂಬ ಮಾತನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ ನಾನು ಪ್ರಸ್ತಾಪ ಮಾಡಿದ್ದೇ ಬೇರೆ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದೇ ಬೇರೆ. ಮಾನ್ಯ ಮಂತ್ರಿಗಳು ನೀರಾವರಿ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಹೇಳಿದಂತಿತ್ತು. ನಾನು ಹಿಂದಿನ ಕಥೆಯನ್ನೆಲ್ಲಾ ಹೇಳಬೇಕೆಂದರೆ, 20-25 ವರ್ಷಗಳಿಂದ ಇತ್ತೀಚಿನವರೆಗೂ ಮಾನ್ಯ ನಾಗೇಗೌಡರು ಕಾಂಗ್ರೆಸ್‌ನಲ್ಲೇ ಇದ್ದರು. ನ್ಯೂ ಕನ್‌ವರ್ಟ್ಸ್ ಇರುತ್ತಾರಲ್ಲಾ ಅವರು ಬಹಳ ಡೇಂಜರಸ್ ಇರುತ್ತಾರೆ. ಹಿಂದಿನ ಎಲ್ಲಾ ವಿಷಯಗಳೂ ಗೊತ್ತಿದ್ದರೆ ಬಹುಶಃ ಮಾನ್ಯ ನಾಗೇಗೌಡರು ಈ ರೀತಿ ಮಾತನಾಡುತ್ತಿರಲಿಲ್ಲ. ನಾನೇನೂ ಆಗ ಮುಖ್ಯಮಂತ್ರಿಯಾಗಿರಲಿಲ್ಲ, ನೀರಾವರಿ ಮಂತ್ರಿಯಾಗಿರಲಿಲ್ಲ, ಆರ್ಥಿಕ ಸಚಿವನಾಗಿರಲಿಲ್ಲ. ಒಂದು ವೇಳೆ ನಾನು ಈ ಪದವಿಗಳಲ್ಲಿ ಇದ್ದೂ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್

ಮುಗಿಸದೇ ಹೋಗಿದ್ದರೆ ಮಾನ್ಯ ನಾಗೇಗೌಡರು ನನಗೆ ಆ ಮಾತು ಹೇಳಬಹುದಾಗಿತ್ತು. ಮಾನ್ಯ ನಾಗೇಗೌಡರು ಪಶುಸಂಗೋಪನಾ ಮಂತ್ರಿಯಾಗಿ ಹಿಂದೆ ಇದ್ದರು. ಆಗೇನು ಅವರು ವಿ.ಸಿ. ನಾಲೆ ಆಧುನೀಕರಣ ಮಾಡಿದರೇನು? ಈಗ ಅವರು ನೀರಾವರಿ ಮಂತ್ರಿಗಳಾಗಿದ್ದಾರೆ, ಅವರ ಬಳಿ ಅಧಿಕಾರ ಇದೆ, ಆದ್ದರಿಂದಲೇ ತರಾತುರಿಯಲ್ಲಿ 150-160 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವಿ.ಸಿ. ನಾಲೆ ಆಧುನೀಕರಣ ಮಾಡಿದ್ದಾರೆ. ಮಾನ್ಯನಾಗೇಗೌಡರಿಗೆ ನೀರಾವರಿ ಸಚಿವ ಖಾತೆ ಸಿಕ್ಕಿದ್ದರಿಂದಲೇ ಅವರು ಈ ಕೆಲಸ ಮಾಡಲು ಸಾಧ್ಯವಾಯಿತು. ಆದ್ದರಿಂದ ಮಾನ್ಯ ನಾಗೇಗೌಡರು ಹಗುರವಾಗಿ ಮಾತನಾಡಬಾರದು. ಮಾನ್ಯ ನಾಗೇಗೌಡರು ನಾಲ್ಕು ವರ್ಷಗಳಿಂದ ಅಧಿಕಾರದಲ್ಲಿದ್ದಾರೆ. ಅವರೇನು ಮಾಡಿದ್ದಾರೆ? ನಾವು ಹಿಂದೆ ಅಧಿಕಾರದಲ್ಲಿದ್ದಾಗ ಮಾನ್ಯ ದೇವರಾಜ್ ಅರಸ್‌ರವರು ನಾನ್‌ಪ್ಲಾನ್‌ನಲ್ಲಿ ಹೇಮಾವತಿ, ಹಾರಂಗಿ, ಕಬಿನಿ ಜಲಾಶಯಗಳ ಕೆಲಸಗಳನ್ನು ಮಾಡಿ ಮುಗಿಸಿದರು. ಪ್ಲಾನ್ ಸ್ಕೀಮ್‌ನಲ್ಲಿ ಯುಕೆಪಿ ಇದ್ದುದ್ದರಿಂದ ಅದನ್ನು ನಿಧಾನ ಮಾಡಿದರು ಎಂಬುದನ್ನು ಮಾನ್ಯ ನಾಗೇಗೌಡರು ಸ್ವಲ್ಪ ತಿಳಿದುಕೊಳ್ಳಬೇಕು. ಅದನ್ನು ಬಿಟ್ಟು ಸುಮ್ಮನೆ ಮಾತು ಬರುತ್ತದೆ ಎಂದು ಮಾತನಾಡುವುದಲ್ಲ. ಮಾತು ಬಂಧವನು ಬರಗಾಲದಲ್ಲಿ ಬದುಕಿದನಂತೆ ಎನ್ನುವಂತೆ ಸುಮ್ಮನೆ ಹೇಳಿಕೊಂಡು ಹೋಗಬೇಡಿ. ಮಾನ್ಯ ನಾಗೇಗೌಡರಿಗೆ ನಿಜಸ್ಥಿತಿ ಏನೆಂಬುದು ಗೊತ್ತಿದೆ. ಆ ನಾನ್ ಪ್ಲಾನ್ ಪ್ರಾಜೆಕ್ಟ್‌ಗಳೆಲ್ಲವೂ ಕೂಡ ದಕ್ಷಿಣ ಕರ್ನಾಟಕದಲ್ಲಿ ಇದ್ದವು. ಅವುಗಳಿಗೆ ಆದ್ಯತೆ ನೀಡಿ ಅಂದಿನ ಸರ್ಕಾರ ಮುಗಿಸಿತು. ಕಾವೇರಿ ಒಪ್ಪಂದ ಮುಗಿದು ಹೋಗುತ್ತದೆ ನಂತರ ನಾವು ತೊಂದರೆಗೆ ಈಡಾಗುತ್ತೇವೆ ಎಂಬ ದೃಷ್ಟಿಯಿಂದ ಉದಾರ ಮನಸ್ಸಿನಿಂದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ದೇವರಾಜ್ ಅರಸ್‌ರವರು ಆ ಯೋಜನೆಗಳನ್ನು ಮುಗಿಸಿದ್ದರು. ಇಡೀ ಕರ್ನಾಟಕದ ಜನತೆ ಅವರು ಮಾಡಿದಂತಹ ಕೆಲಸಗಳಿಗೆ ಸಂಪೂರ್ಣವಾದಂತಹ ಬೆಂಬಲವನ್ನು ಕೊಟ್ಟರು. ಇದರಿಂದಾಗಿ ಆ ಯೋಜನೆಗಳನ್ನು ಪೂರ್ತಿಗೊಳಿಸ ಲಾಯಿತು. ಆ ಯೋಜನೆಗಳನ್ನು ಮುಗಿಸಿ ಯಾರು ನಿಮಗೆ ಸಹಾಯ ಮಾಡಿದರೋ ಅವರನ್ನೇ ಇವತ್ತು ಮಾನ್ಯ ನಾಗೇಗೌಡರು ನೀವೇನು ಮಾಡಿದಿರಿ ಎಂದು ಕೇಳುತ್ತಿದ್ದಾರೆ. ಅಂಕಿ ಅಂಶಗಳನ್ನು ಕೊಡಬೇಕೆಂದರೆ ಅವೂ ಕೂಡ ನನ್ನ ಹತ್ತಿರ ಇವೆ. ಮಾನ್ಯ ನಾಗೇಗೌಡರ ಸರ್ಕಾರ ಒದಗಿಸಿದಂತಹ ಅಂಕಿ ಅಂಶಗಳೇ ನನ್ನ ಬಳಿ ಇವೆ. ಆ ಅಂಕಿ ಅಂಶಗಳಲ್ಲಿ ಸ್ಟೇಟ್‌ಮೆಂಟ್ ನಂ. 3ನ್ನು ಮಾನ್ಯ ಮಂತ್ರಿಗಳು ದಯಮಾಡಿ ಸರಿಯಾಗಿ ನೋಡಿಕೊಳ್ಳಬೇಕು. ಇದರಿಂದಾಗಿ ಅವರು ಪದೇ ಪದೇ ಹಾರಾಡಿ ಮಾತನಾಡುವುದು ಸ್ವಲ್ಪ ಕಡಿಮೆಯಾಗಬಹುದು.

Statement No. 3 - "Planwise, financial and potential progress under Major and Medium Irrigation."

ಪ್ಲಾನ್‌ನಲ್ಲಿ 1951-56ರವರೆಗಿನ ಅವಧಿಯಲ್ಲಿ ಕ್ಯುಮುಲೇಟಿವ್ ಆಗಿ 2 ಲಕ್ಷ 63 ಸಾವಿರ ಹೆಕ್ಟೇರಗಳಷ್ಟು ಪೋಟೆನಷಿಯಾಲಿಟಿ ಕ್ರಿಯೇಟ್ ಮಾಡಲಾಗಿದೆ. ಮಾನ್ಯ ನಾಗೇಗೌಡರು ಇದಕ್ಕೇನು ಹೇಳುತ್ತಾರೆ? ಕಾಂಗ್ರೆಸ್ ಪಕ್ಷದವರು ಏನೂ ಮಾಡಲಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದರಲ್ಲಾ, ಅದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ....

ಶ್ರೀ ಕೆ.ಎನ್. ನಾಗೇಗೌಡ :- ಟೆಕ್ನಿಕಲ್ಲಾಗಿ ಪೊಟೆನಷಿಯಾಲಿಟಿ ಕ್ರಿಯೇಟ್ ಆಗುವುದು ಬೇರೆ ರೀತಿ. ಡ್ಯಾಮ್ ಕಟ್ಟದೇನೇ ಪೊಟೆನ್‌ಷಿಯಾಲಿಟಿ ಆಗುತ್ತದೆಯೇ? ಈಗ ಎಲ್ಲಾ ಪ್ರಾಜೆಕ್ಟ್‌ಗಳೂ ಅಂತಿಮ ಹಂತದಲ್ಲಿವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ಕೊಟ್ಟ ಪುಸ್ತಕದಲ್ಲಿರುವ ಅಂಕಿ ಅಂಶಗಳನ್ನೇ ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ :- ಅದು ನಿಜ. ಆಲಮಟ್ಟಿ ಡ್ಯಾಮ್ ಆದರೆ ಇನ್ನೂ ಎಕ್ಸ್‌ಟ್ರಾ ಆರೂವರೆ ಲಕ್ಷ ಹೆಕ್ಟೇರ್‌ಗಳಷ್ಟು ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಪುಸ್ತಕದಲ್ಲಿರುವ ಅಂಕಿ ಅಂಶಗಳನ್ನು ನೀವು ಸ್ವಲ್ಪ ಸರಿಯಾಗಿ ಓದಿ ನೋಡಿ. ನೀವು ತರಾತುರಿಯಲ್ಲಿ ನೋಡಿದಂತೆ ಕಾಣುತ್ತದೆ. ಸ್ವಲ್ಪ ಅರ್ಥವಾಗುವಂತೆ ಓದಿ.

ಶ್ರೀ ಕೆ.ಎಸ್. ನಾಗೇಗೌಡ :- ನಾನು ಸರಿಯಾಗಿಯೇ ಓದಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಇಂಜಿನಿಯರ್ ಇದ್ದೀರಿ, ನನಗೆ ಗೊತ್ತು. ಹೇಗೆ ತಿರುಚಿ ಮುರುಚಿ ಹೇಳಬೇಕು ಅದೂ ನಿಮಗೆ ಗೊತ್ತು. ಟೆಕ್ನಿಕಲ್ ಪಾಯಿಂಟ್ ಗೊತ್ತು. ಅದು ನಮಗೆ ಗೊತ್ತಿಲ್ಲ. ನೀವು ಹಾರ್ಡ್‌ಗೆ ಸಾಫ್ಟ್ ಮಾಡಬಹುದು, ಸಾಫ್ಟ್‌ಗೆ ಹಾರ್ಡ್ ಮಾಡಬಹುದು. ಲಿಫ್ಟ್‌ಗೆ ಲೀಡ್ ಕೊಡಬಹುದು. ಅದು ಕೊಡುವುದಕ್ಕೆ ನಮಗೆ ಬರುವುದಿಲ್ಲ. 1995-96ರ ವರೆಗೆ ರಿ ಆರ್ಗನೈಸೇಷನ್‌ಗಿಂತ ಮೊದಲು 2.63 ಲಕ್ಷ ಎಕರೆ ನೀರಾವರಿ ಈ ರಾಜ್ಯದಲ್ಲಿತ್ತು. ಇವತ್ತು ಎಷ್ಟು ಇದೆ? 60.58 ಸಾವಿರ ಹೆಕ್ಟೇರ್. ಕಾಂಗ್ರೆಸ್‌ನವರು ಏನೂ ಮಾಡಿಲ್ಲ ಎಂದರೆ ಇದೆಲ್ಲಾ ನಿಮ್ಮದೆಯಾ? ಸುಮಾರು 14 ಲಕ್ಷ ಎಕರೆ ಅವತ್ತು ಕಾಂಗ್ರೆಸ್ ಸರ್ಕಾರ ಇದ್ದಾಗ ಆಗಿತ್ತು. 16.58 ಹೆಕ್ಟೇರ್ಸ್ ಎಂದು ಏಕೆ ಹೇಳಿದೆ ಎಂದರೆ, ಲಕ್ಷದಲ್ಲಿ ಹೇಳಬೇಕಾದರೆ ಸುಮಾರು 40 ಲಕ್ಷದ ಹತ್ತಿರವಾಗುತ್ತದೆ. ಇವತ್ತು ನೀವೆಲ್ಲರೂ ಮಾತನಾಡುತ್ತೀರಿ, ನನಗೆ ಬಹಳ ಆಶ್ಚರ್ಯವಾಗುತ್ತದೆ. ಅನೇಕ ಸಾರಿ ನಾನ್ ಕಾಂಗ್ರೆಸ್ ಲೆಜಿಸ್ಲೇಟರ್ಸ್ ಜನತಾದಳದವರು, ಬಿಜೆಪಿಯವರು ಎಲ್ಲರೂ ಕಾಂಗ್ರೆಸ್‌ನವರು 50 ವರ್ಷದಿಂದ ಏನು ಮಾಡಿದ್ದು ಎಂದು ಹೇಳುವುದು; ಇವೆಲ್ಲಾ ಮಾಡಿದ್ದಲ್ಲವಾ? ಹೇಮಾವತಿ, ಹಾರಂಗಿ ಮತ್ತು ಕಬಿನಿ ಇವರೇ ಮಾಡಿದ್ದಾ? ನಾರಾಯಣಪುರ ಡ್ಯಾಮ್ ನಾವು ಶ್ರೀಮಾನ್ ಚಿಮ್ಮನಕಟ್ಟಿಯವರು ಮೈನರ್ ಇರ್ರಿಗೇಷನ್ ಮಿನಿಸ್ಟರ್ ಇದ್ದಾಗ ಹೋಗಿ ಇನಾಗ್ಯುರೇಟ್ ಮಾಡಿ ಪ್ರಥಮಬಾರಿಗೆ ನೀರು ಬಿಟ್ಟಿದ್ದು. ಸುಮಾರು 10,000 ಎಕರೆ ನೀರಾವರಿ ಮೊದಲನೇ ಸಲ ಗುಂಡೂರಾವ್‌ರವರ ಕಾಲದಲ್ಲಿ ಪ್ರಾರಂಭವಾಯಿತು. ಅವರು ಇನಾಗ್ಯುರೇಟ್ ಮಾಡಿದ ಕಲ್ಲು ಕಿತ್ತು ಹಾಕಿ ಇನ್ನೊಬ್ಬರು ಹಂಚಿಕೊಂಡರು. ಅವರು ಇನಾಗ್ಯುರೇಟ್ ಮಾಡಿದ ಕಲ್ಲೂ ಸಹಿತ ಇಲ್ಲ.

ಶ್ರೀ ಕೆ.ಎಸ್. ನಾಗೇಗೌಡ : ಹಾಗಾದರೆ ವೀರೇಂದ್ರ ಪಾಟೀಲರು ಫೌಂಡೇಷನ್ ಹಾಕಿ ಹೇಮಾವತಿ ಮಾಡಿದರು. ಗುಂಡೂರಾವ್‌ರವರು, ಶ್ರೀಕಂಠಯ್ಯನವರು ಮತ್ತು ದೇವೇಗೌಡರು ನೀರು ಬಿಟ್ಟರು. ನೀರು ಬಿಟ್ಟವರ ಲೆಕ್ಕವಾ? ನಾನು ಮಾಡಿದ್ದು ಲೆಕ್ಕ ಇಲ್ಲವಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಡ್ಯಾಮ್ ಆಗ ಕಂಪ್ಲೀಟ್ ಆಗಿರಲಿಲ್ಲ. 1981ರಲ್ಲಿ ನಾರಾಯಣಪುರ ಡ್ಯಾಂ ಕಂಪ್ಲೀಟ್ ಆಯಿತು. ಯಾರದ್ದಾದರೂ ಕಲ್ಲು ತೆಗೆಯುವುದು ಇವರದ್ದು ಹಾಕಿಕೊಳ್ಳುವುದು, ನಾನು ಮಾಡಿದೆ ಎಂದು ಹೇಳುವುದು. ತಮಗೆ ಗೊತ್ತಿದೆ ಗುಲ್ಬರ್ಗದ ಮಿನಿ ವಿಧಾನ ಸೌಧ ಐದು ಕೋಟಿ ರೂಪಾಯಿಯದ್ದು. ಅದು 1981ರಿಂದ ಲಿಂಗರಿಂಗ್ ಇದ್ದು ನಾವು ಎಷ್ಟೋ ಪ್ರಯತ್ನ ಪಟ್ಟೆವು. ಅದು ಇನ್‌ಕಂಪ್ಲೀಟ್ ಆಗಿತ್ತು. ಆ ನಂತರ ದೇವೇಗೌಡರು ಇವರು ಹೋಗಿ ಕಲ್ಲು ಹಾಕಿಸಿಕೊಂಡರು.

ಆಗ ತಾವು ಇದ್ದಿರೋ ಏನೋ ನಾನು ಅದನ್ನು ಹೇಳುವುದಿಲ್ಲ. ಹೀಗೆ ಮಾಡುವುದು, ಪುನಃ ಕಾಂಗ್ರೆಸ್‌ನವರು ಏನು ಮಾಡಿದ್ದಾರೆ ಎಂದು ಹೇಳುವುದು. ಅದಕ್ಕಾಗಿ ನಾನು ಹೇಳುತ್ತೇನೆ. ಇಂತಹ ಅನೇಕ ವಿಷಯಗಳಿವೆ, ಇವರು ನನ್ನ ಜೊತೆ ಬಂದು ಗ್ರೌಂಡ್ ರಿಯಾಲಿಟಿ ನೋಡಿರುವುದಿಲ್ಲ ಎಂದರು. ನಾನು ಆಗಲೇ ಹೇಳಿದೆ, ಗ್ರೌಂಡ್ ರಿಯಾಲಿಟಿ ನೋಡುವುದಕ್ಕೆ ನಿಮ್ಮ ಜೊತೆಯಲ್ಲಿ ಬರುತ್ತೇನೆ, ಆದರೆ, ಇವತ್ತು ಅಪ್ಪರ್ ಕೃಷ್ಣಪ್ರಾಜೆಕ್ಟ್‌ನಲ್ಲಿ ನಡೆದಂತಹ ಅವ್ಯವಹಾರ ನಿಲ್ಲಿಸುವುದಕ್ಕೆ ನೀವು ಸಿಬಿಐ ಎನ್‌ಕ್ವೈರಿ ಮಾಡಿ. ಎನ್‌ಕ್ವೈರಿ ಆರ್ಡರ್ ಮಾಡಿ ನಿಮ್ಮ ಜೊತೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಓಡಾಡುತ್ತೇನೆ ಎಂದು ಹೇಳಿದೆ. ಆದರೆ ನಿಮಗೆ ಬಿಟ್ಟು ನಾವು ಓಡಾಡಿದೆವು. ನಾನು ಸ್ವತಃ ಲಿಂಗಸಗೂರು ಮತ್ತು ರಾಯಚೂರು ರೈಟ್ ಬ್ಯಾಂಕ್ ಕೆನಾಲ್‌ಗೆ ಹೋಗಿದ್ದೇನೆ. ಅವರು ಹೇಳಿದ ಹಾಗೆ ಬೆಣ್ಣೆತೊರೆ, ಲೋಯರ್ ಮುಲ್ಲಾಮಾರಿ, ಗಂಡೋರಿ ನಾಲ ಇವೆಲ್ಲಾ ಪ್ರಾಜೆಕ್ಟ್ ಮಾಡುತ್ತಿದ್ದೇವೆ ಎಂದು ಹೇಳಿದರೆ ಇದು ಏನು ನಮಗೆ ಹೊಸದಲ್ಲ. ಇವರಿಂದ ಏನೂ ಕಲಿಯಬೇಕಾಗಿಲ್ಲ. ಆದರೆ ಇವರ ಜೊತೆಯಲ್ಲಿ ಏಕೆ ಹೋಗಲಿಲ್ಲ ಎಂದರೆ, ಇವರು ಡಿಸ್ಟ್ರಿಕ್ಟ್‌ಗೆ ಬಂದಾಗ ರಿವ್ಯೂ ಮಾಡುವ ಐದು ನಿಮಿಷದ ಪುರುಸೊತ್ತು ಇರುವುದಿಲ್ಲ. ಐದು ನಿಮಿಷ ಬಂದು ಮುಖ್ಯ ಮಂತ್ರಿಗಳು ಟೇಬಲ್ ಟಚ್ ಮಾಡಿ ಹೋಗುತ್ತಾರೆ. ಇಂತಹವರ ಜೊತೆ ಹೋಗಿ ನಾವು ಮೂರು-ನಾಲ್ಕು ದಿವಸ ಕಳೆದು ಕೊಳ್ಳಬೇಕಾಗುತ್ತದೆ. ಸಿಬಿಐ ಎನ್‌ಕ್ವೈರಿ ಮಾಡಿ ಎಂದರೆ ಒಪ್ಪಲಿಲ್ಲ. ಏಕೆ ಮಾಡಲಿಲ್ಲ? ಏಕೆ ಒಪ್ಪಲಿಲ್ಲವೆಂದು ಕೇಳುತ್ತೇನೆ. ಆದರೆ ದುಡ್ಡು ಖರ್ಚು ಮಾಡಿದ್ದಾರೆ. ದುಡ್ಡು ಖರ್ಚು ಮಾಡಿದ ಹಾಗೆ ಕೆಲಸ ಎಲ್ಲಿ ಆಗಿದೆ ಎನ್ನತಕ್ಕಂಥದ್ದೆ ನಮ್ಮ ವಾದ. ನೀವು ಬರೀ ಅದಕ್ಕೆ ತಕ್ಕಂತೆ ಕೆಲಸವಾಗಿದೆ ಎಂದಿದ್ದಕ್ಕೆ ನಾನು ಇವತ್ತು ಈ ಮಾತನ್ನು ಕೇಳಿದೆ. ಇಂಡಿ ಶಾಖಾ ಕಾಲುವೆ, ಜೇವರ್ಗಿ ಶಾಖಾ ಕಾಲುವೆ ಇವೆಲ್ಲಾ ಇದೆ. ಇಲ್ಲಿ ಸುಮಾರು ಟಾರ್ಗೆಟ್ ಏನಿದೆ, ಅಚೀವ್‌ಮೆಂಟ್ಸ್ ಏನಿದೆ ಎಂಬುದನ್ನು ತಾವೇ ನೋಡಿ. ಇದರಲ್ಲಿ ಏನಾದರೂ ಒಂದು ಎಕರೆ ಆದರೂ ಅಚೀವ್‌ಮೆಂಟ್ ಮಾಡಿದ್ದರೆ ಟಾರ್ಗೆಟ್ ಪ್ರಕಾರ ನೀವು ಹೇಳಿದ್ದು ನಾನು ಕೇಳುತ್ತೇನೆ. ಈ ಪುಸ್ತಕ ಕೊಡುತ್ತೇನೆ, ತಾವು ಓದಿ ಅವರಿಗೆ ಏನು ಹೇಳುತ್ತೀರಿ, ಇದು ಸರಿಯಲ್ಲವೆಂದು ಹೇಳುತ್ತೀರಿ, ಇಲ್ಲ ನಾನೇ ಸರಿ ಇಲ್ಲವೆಂದು ಹೇಳಿದರೆ ನಾನು ಒಪ್ಪಿಕೊಂಡು ಕುಳಿತುಕೊಳ್ಳುತ್ತೇನೆ. ಇದು ಅವರು ಕೊಟ್ಟ ಪುಸ್ತಕ, ಈ ವರ್ಷದ ಟಾರ್ಗೆಟ್. ಜೂನ್‌ವರೆಗೆ ಎಷ್ಟು ಮಾಡಬೇಕೆಂದು ಅದರಲ್ಲಿ ಇದೆ. ಒಂದು ಟಾರ್ಗೆಟ್ ಅಚೀವ್‌ಮೆಂಟ್ ಅದರ ಪ್ರಕಾರ ಆಗಿಲ್ಲ. ಆದರೆ ಒಂದು ಕಡೆ ಈ ಕೆಲಸ ಮುಗಿದ ಮೇಲೆ ಕೃಷ್ಣ ಬೇಸಿನ್ ಪ್ರಾಜೆಕ್ಟ್‌ನಲ್ಲಿ ನೀವು ಕೆಲಸ ತೆಗೆದುಕೊಂಡಿದ್ದೀರಿ. ಆ ಕೆಲಸ ತ್ವರಿತಗತಿಯಲ್ಲಿ ಆಗ ಬೇಕೆಂದು ಶ್ರೀಮಾನ್ ವೀರಪ್ಪ ಮೊಯಿಲಿಯವರು ಇದಕ್ಕೆ ಒಂದು ನಿಗಮವನ್ನು ಮಾಡಿದರು. ಮೇನಲ್ಲಿ ನಿಗಮ ಆಯಿತು, ನವೆಂಬರ್‌ನಲ್ಲಿ ಸರ್ಕಾರ ಹೋಯಿತು. ಮೂರು-ನಾಲ್ಕು ತಿಂಗಳಲ್ಲಿ ಕೋಟ್ಯಾಂತರ ರೂಪಾಯಿ ಕಲೆಕ್ಟ್ ಮಾಡುವುದಕ್ಕಾಗುತ್ತಾ? ಅದಕ್ಕೆ ನಾವೂ ಮಾಡಿದ್ದೇವೆ, ನೀವೂ ಮಾಡಿದ್ದೀರಿ, ನೀವು ಅಲ್ಲ ಯಾರಿದ್ದರೂ ಮಾಡುತ್ತಿದ್ದರು. ನಾವು ಬಂದರೂ ಮಾಡುತ್ತಿದ್ದೆವು. Don't take that credit.

ಯಾರು ಪ್ರಯತ್ನಪಟ್ಟರೂ ಅದಕ್ಕೆ ಏನೆಂದರೆ 600 ಕೋಟಿ ರೂಪಾಯಿ ಟಾರ್ಗೆಟ್ ಏನು ಮಾಡಿ ಇಟ್ಟಿತ್ತು, ಆ ಆರು ನೂರು ಕೋಟಿ ರೂಪಾಯಿ ಮಾರ್ಚ್‌ವರೆಗೆ ಕಲೆಕ್ಟ್ ಮಾಡುವುದು ಇತ್ತು. ಅಲ್ಲಿಯವರೆಗೆ ನೀವು ಮಾಡಲಿಲ್ಲ. ಯಾವಾಗ ಈ ಸಭೆಯಲ್ಲಿ ಇದು ಬಂದಿತು ಆಗ ಪ್ರಾರಂಭ ಮಾಡಿದಿರಿ; ಹೊರತಾಗಿ ಅದಕ್ಕಿಂತ ಮುಂದೆ ಯಾರೂ ಮಾಡಲಿಲ್ಲ. ಅದಕ್ಕೆ ಇವತ್ತು ಇಲ್ಲದೇ

ಇರುವುದನ್ನೆಲ್ಲಾ ಹೇಳಿ ಜನರನ್ನು ದಿಕ್ಕು ತಪ್ಪಿಸತಕ್ಕಂಥದ್ದು ಸದನದ ಮುಖಾಂತರ ಏನೋ ನಾವು ದೊಡ್ಡ ಅಚೀವ್‌ಮೆಂಟ್ ಮಾಡಿದ್ದೇವೆ ಎನ್ನತಕ್ಕಂಥದ್ದನ್ನು ತಾವು ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಸೇಡಂ ಕಾಗ್ನದಲ್ಲಿ ಸೆಕೆಂಡ್ ಸ್ಟೇಜ್‌ನಲ್ಲಿ, ಗೋದಾವರಿಯಲ್ಲಿ ಏನು ಮಾಡಿದ್ದಾರೆ ಎಂಬುದರ ಬಗ್ಗೆ ತಾವೇ ಹೇಳಿ. ಒಂದು ಪೈಸೆಯಾದರೂ ಖರ್ಚು ಮಾಡಿದ್ದೀರಾ? ದೊಡ್ಡ ದೊಡ್ಡ ಮಾತು ಹೇಳಿ ನಮಗೆ ಎಚ್ಚಿಸುತ್ತೀರಿ. ನಾನು ಏಕೆ ಉತ್ತರ ಕೊಡಲಿಲ್ಲವೆಂದರೆ, ಈ ಸರ್ಕಾರ ಅನೇಕ ಪ್ರಾಜೆಕ್ಟ್‌ಗಳನ್ನು ಮಾಡಿದೆ; ಆದರೆ ಯಾವ ಪ್ರಾಜೆಕ್ಟ್ ಬೇಗ ಪ್ರಾರಂಭವಾಗಿದೆ ಅದನ್ನೇ ಹೇಳುತ್ತಿದ್ದೀರಿ. ಅದು ಸರ್ವೇಸಾಮಾನ್ಯವಾಗಿ ತೆಗೆದುಕೊಳ್ಳಲೇಬೇಕು. ನಮಗೆ ನೀರಾವರಿ ಪ್ರಾಜೆಕ್ಟ್ ಬೇರೆ ಇಲ್ಲವೇ ಇಲ್ಲ. ಕೃಷ್ಣ ಬೇಸಿನ್‌ನಲ್ಲಿ ಇರತಕ್ಕಂಥದ್ದನ್ನು 2,000 ಇಸವಿಯಲ್ಲಿ ಕಂಪ್ಲೀಟ್ ಮಾಡಬೇಕಾಗಿದೆ. ನಾವೆಲ್ಲರೂ ಕೂಡಿ ಹಣ ಸಂಗ್ರಹಣೆ ಮಾಡಿ ಮಾಡಲೇ ಬೇಕಾದದ್ದು ನಮ್ಮ ಕರ್ತವ್ಯ. ಅದು ಏನು ಮೆಹರ್ಬಾನಿ ಅಲ್ಲ. ಅದಕ್ಕೆ ಒಂದು ಶಹಭಾಸ್‌ಗಿರಿ ಮಾಡಿದ್ದಾರೆ. ಬರಗಾಲದಲ್ಲಿ ಹಣ ಇಲ್ಲದೆ ಇದ್ದರೂ ಕೂಡ ಜನರಿಗೆ ಕೆಲಸ ಕೊಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಪ್ರಾರಂಭ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಆ ಕಡೆ ಜನರಿಗೆ ನೀವು ತಡೆಯಿರಿ ಎಂದು ಸಮಾಧಾನ ಹೇಳಿ ಈ ಕೆಲಸ ಮಾಡಿದ್ದಾರೆ. ಆದರೆ ಈ ಐದು ವರ್ಷದಲ್ಲಿ ಮಾಡಬೇಕಾದಂತಹ ಕೆಲಸ ಇತ್ತು. ನೀವು ಹಿಂದೆ ಏಕೆ ಮಾಡಲಿಲ್ಲವೆಂದರೆ, ಹಿಂದೆ ಅನೇಕ ಕಾರಣಗಳಿವೆ. ಅದಕ್ಕಾಗಿ ಈ ಒಂದು ಸಮಸ್ಯೆಗಳು ಅವರು ಅರ್ಥ ಮಾಡಿಕೊಳ್ಳಬೇಕಾಗಿತ್ತು. ಸುಮ್ಮನೆ ಹಿಂದಿನವರ ಮೇಲೆ ಏನಾದರೂ ಹಾಕಿ ಮೂರೂವರೆ ವರ್ಷದಲ್ಲಿ ನಾಲ್ಕು ವರ್ಷದಲ್ಲಿ ಇದನ್ನು ಮಾಡಿದ್ದೇವೆಂದು ಹೇಳುವುದು ಬೆನ್ನು ಚಪ್ಪರಿಸುವುದು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ. ಎರಡನೆಯದಾಗಿ ಅವರೇ ಒಪ್ಪಿಕೊಂಡಿದ್ದಾರೆ. ಮುಖ್ಯ ಮಂತ್ರಿಗಳ ಕಮಿಟಿ ಏನಾಗಿತ್ತು, ಅದು ಸರಿಯಲ್ಲ. ಅನ್ ಕಾನ್‌ಸ್ಟಿಟ್ಯೂಷನಲ್ ಎಂದು ಲಾಮಿನಿಸ್ಟರ್ ಹೇಳಿದ ಮೇಲೆ ನೀವು ಯಾವ ಕಾರಣಕ್ಕಾಗಿ ಮಾಡಿದಿರಿ. ಎಲ್ಲಿ ಅವಶ್ಯಕತೆ ಇತ್ತು, ಎಂದರೆ, ನೀವು ಪೊಲಿಟಿಕಲ್ ಪ್ರೆಷರ್ ಇದ್ದರೆ ಅದಕ್ಕೆ ಈಲ್ಡ್ ಆಗಿ ಮಾಡಿದಿರಿ ಎಂದು ಆಯಿತು. ಅದಕ್ಕೆ ಏನೂ ಉತ್ತರ ಇಲ್ಲ. ಅದನ್ನು ಒಪ್ಪಿಕೊಂಡಿಲ್ಲವೆಂದು ಹೇಳಿದರು. ಒಪ್ಪಿಕೊಂಡಿಲ್ಲ ಸರಿ. ಮಾಡಿ ಎಂದು ಯಾರು ಹೇಳಿದರು, ಯಾವ ಕಾನೂನಿನಲ್ಲಿ ಮಾಡಿ ಎಂದು ಇತ್ತು, ಅವರ ಅವಶ್ಯಕತೆ ಏನಿತ್ತು, ಅವರ ಮಧ್ಯಸ್ತಿಕೆ ಏಕೆ ಬೇಕಾಗಿತ್ತು, ಅದಕ್ಕೆ ಏನೂ ಉತ್ತರ ಇಲ್ಲ. ಅಂದರೆ ಬ್ಲಂಡರ್ಸ್ ಕಮಿಟ್ ಮಾಡುವುದು, ಆಮೇಲೆ ಅದಕ್ಕೆ ನಾವು ಸುಧಾರಣೆ ಮಾಡಿದ್ದೇವೆಂದು ಹೇಳುವುದು. ಸ್ಟೇಟ್‌ಮೆಂಟ್ ಕೊಡುವುದು ಕಂಟೆಂಪ್ಟ್ ಕೇಸ್ ಹಾಕಿದ್ದೇವೆ ಅದರಲ್ಲಿ ನಾವು ಗೆದ್ದಿದ್ದೇವೆಂದು ಹೇಳುವುದು. ಅನೇಕ ಜನ ಮರ್ಡರ್ ಮಾಡಿ ಕೂಡ ಅಕ್ವಿಟ್ ಆಗುತ್ತಾರೆ. ಹಾಗೆ ಹೇಳಿದ ತಕ್ಷಣ ಮರ್ಡರ್ ಮಾಡಿಲ್ಲವೆಂದು ಅಲ್ಲ. ಅನೇಕ ಸಾರಿ ತಪ್ಪು ಮಾಡಿದರೂ ಕೂಡ ಕೆಲವು ಸಲ ಅದು ಸಾಕ್ಷಿ ಇಲ್ಲದೆ ಇದ್ದ ಕಾರಣ ಪ್ರೂಫ್ ಇಲ್ಲದೆ ಇದ್ದ ಕಾರಣ ಅದು ಆಗಿರಬಹುದು. ಆತ್ಮ ಸಾಕ್ಷಿಯಾಗಿ ಹೇಳಿಕೊಳ್ಳಿ, ನಿಮ್ಮ ಹೇಳಿಕೆಯಿಂದ ನಿಮ್ಮ ನಡವಳಿಕೆಯಿಂದ ತೊಂದರೆಯಾಗಿದೆ ಇಲ್ಲ ಎನ್ನುವುದು ನೀವು ಹೇಳಿ. ನಾವು ಆಲಮಟ್ಟಿ ರೈಸ್ ಮಾಡಿ, ಆಲಮಟ್ಟಿ ಎತ್ತರವನ್ನು ಅದರ ಬಗ್ಗೆ ಯೋಜನೆ ಬಗ್ಗೆ ಮಾತ್ರ ನಾವು ಇವತ್ತು ಇಲ್ಲಿ ಚರ್ಚೆ ತೆಗೆದುಕೊಂಡಿದ್ದೇವೆ. ಉಳಿದ ವಿಷಯ ಪ್ರಸ್ತಾಪ ಮಾಡುವುದಿಲ್ಲ. ಉಳಿದ ವಿಷಯ ಆ ಮೇಲೆ ಚರ್ಚೆ ಮಾಡೋಣ. ಇರಿಗೇಷನ್ ಡಿಮ್ಯಾಂಡ್ ಬಂದಾಗ ಇವತ್ತು ನಾವು ಕೇಳತಕ್ಕಂಥದ್ದು ಇಷ್ಟೆ. ನಮಗೆ ಚೌಕಟ್ಟು ಹಾಕಿ ಎಂದು ಅವರು ಹೇಳಿದ್ದಾರೆ.

ಚೌಕಟ್ಟು ಹಾಕಿಕೊಂಡು ಕೂತಿದ್ದೇವೆ. ಆದರೆ ಅದಕ್ಕೆ ಪಟ್ಟೆ ಇಲ್ಲ, ಬಾಗಿಲು ಮುಚ್ಚುವ ಹಾಗಿಲ್ಲ, ಶೆಟರ್ ಇಲ್ಲ, ನೀರು ಎಲ್ಲಿ ನಿಲ್ಲುತ್ತವೆ. ನೀವು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೀರಿ, ಏನು ಪ್ರಯತ್ನ ಮಾಡಿದ್ದೀರಿ, ಒಂದು ದಿವನಸವೂ ಆದರೆ ಬಗ್ಗೆ ಚರ್ಚೆ ಇಲ್ಲ. ನಿಮ್ಮ ವರ್ಕ್ ಸ್ಪಾಟ್‌ಗೆ ನಿಮ್ಮ ಜೊತೆಯಲ್ಲಿ ಬರದೇ ಇರಬಹುದು, ನಾನು ಸ್ವತಃ ಹೋಗಿ ಅನೇಕ ಕಡೆ ನೋಡಿಕೊಂಡು ಬಂದಿದ್ದೇನೆ. ಪತ್ರಿಕಾ ಹೇಳಿಕೆ ಕೊಟ್ಟಿದ್ದೇನೆ. ಸ್ವತಃ ಹೋಗಿ ಅಲ್ಲಿನ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಅನೇಕ ಶಾಸಕರಿಗೂ ಗೊತ್ತಿದೆ, ಮಹಾರಾಷ್ಟ್ರ ಮುಖ್ಯ ಮಂತ್ರಿಗಳು-ಭೇಟಿಯಾಗುವುದಕ್ಕಿಂತ ಮುಂಚೆ ನೀವು ಈ ಆಲಮಟ್ಟಿ ವಿಷಯವನ್ನು ಕರೆದು ಏಕೆ ಮಾತನಾಡಲಿಲ್ಲ?

5.40 ಪಿ.ಎಂ.

ಮಾನಿಟರಿಂಗ್ ಕಮಿಟಿ ಆಗಬೇಕು ಎಂದು ಹೇಳಿ ಒಂದು ಮಾಡಿಫೈಡ್ ಅಫಿಡವಿಟ್‌ನ್ನು ನೀವು ಏಕೆ ಕೊಟ್ಟಿರಿ? ಇದು ಏಕೆ ಬೇಕಾಗಿತ್ತು? ಇಂಥ ಅನಾವಶ್ಯಕ ಮಾನಿಟರಿಂಗ್ ಕಮಿಟಿಯನ್ನು ನೀವು ಅಕ್ಸೆಪ್ಟ್ ಮಾಡಿಕೊಂಡಿರಿ. ಈ ರೀತಿ ಮಾಡಿ ನೀವೇ ಸಮಸ್ಯೆಯನ್ನು ಕ್ರಿಯೇಟ್ ಮಾಡಿದಿರಿ. ಈ ರೀತಿ ಸಮಸ್ಯೆ ನೀವೇ ಮಾಡಿಕೊಡು ಅದಕ್ಕಾಗಿ ನಾವು ಈ ರೀತಿ ಮಾಡಿದ್ದೇವೆ, ಆ ರೀತಿ ಮಾಡಿದ್ದೇವೆ ಎಂದು ಹೇಳಿಕೊಂಡೇ ಬಂದಿದ್ದೀರಿ ಹೊರತು ಏತಕ್ಕಾಗಿ ಕೆಲಸ ನಿಂತಿದೆ ಎಂಬ ಬಗ್ಗೆ ಹೇಳಲೇ ಇಲ್ಲ. ಈ ಕಾರ್ಯಕ್ಕೆ ಸಂಬಂಧಪಟ್ಟಂತೆ ಸ್ಕಿನ್ ಪ್ಲೇಟನ್ನು ಹಾಕಬಾರದು ಎಂದು ಏತಕ್ಕಾಗಿ ಹೇಳಿದ್ದಾರೆ, ಶೆಟರ್ಸ್ ಕೂಡಿಸಬಾರದು ಎಂದು ಏತಕ್ಕಾಗಿ ಹೇಳಿದ್ದಾರೆ ಎನ್ನುವ ಬಗ್ಗೆ ಅವರು ಏನನ್ನೂ ಹೇಳಲೇ ಇಲ್ಲ. ಅದನ್ನು ಬಿಟ್ಟು ಇಡೀ ದೇಶದ ಬಗ್ಗೆ ಮಾತನ್ನಾಡಿದರು. ಅದೇ ರೀತಿ ಘಟಪ್ರಭ, ಮಲಪ್ರಭ, ಹಿಪ್ಪರಗಿ, ಮುಲ್ಲಾಮಾರಿ, ಅಮೆರ್‌ಜಾ, ಅಪ್ಪರ್‌ಮುಲಾ, ಹೀಗೆ ಎಲ್ಲದರ ಬಗ್ಗೆಯೂ ಹೇಳಿದಿರಿ. ಆದರೆ ಆಲಮಟ್ಟಿ ಬಗ್ಗೆ ಹೇಳಲೇ ಇಲ್ಲ. ಆದರೆ ಆಲಮಟ್ಟಿ ಬಗ್ಗೆ ಇಶ್ಯೂ ರೈಸ್ ಮಾಡಿದ್ದು ನಾವು. 2000 ಇಸವಿಯೊಳಗಾಗಿ 173 ಟಿ.ಎಂ.ಸಿ. ನೀರನ್ನು ನಿಮಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲವಲ್ಲಾ, ಇದಕ್ಕೆ ನಿಮ್ಮ ಉತ್ತರವೇನು ಎಂದು ನಾವು ಪದೇ ಪದೇ ಕೇಳುತ್ತಲೇ ಬಂದಿದ್ದೇವೆ. ಇದಕ್ಕೆ ಉತ್ತರವನ್ನು ಹೇಳದೇ ನಾವು ಇಷ್ಟು ದುಡ್ಡು ಖರ್ಚು ಮಾಡಿದ್ದೇವೆ, ನಿಗಮವನ್ನು ಮಾಡಿದ್ದೇವೆ, ಎಂದೆಲ್ಲಾ ಹೇಳುತ್ತಿದ್ದೀರಿ, ಅದನ್ನೆಲ್ಲವನ್ನು ಕೇಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ನಮ್ಮ ಪ್ರಶ್ನೆ ನೇರವಾಗಿದೆ, ಏನೆಂದರೆ 2000 ಇಸವಿಯೊಳಗಾಗಿ 173 ಟಿ.ಎಂ.ಸಿ. ನೀರನ್ನು ಆಲಮಟ್ಟಿ ಡ್ಯಾಂನಿಂದ, ನಾರಾಯಣಪುರ ಡ್ಯಾಂನಿಂದ ಏನು ಉಪಯೋಗ ಮಾಡಿಕೊಳ್ಳಬೇಕೋ ಅದು ಸಾಧ್ಯವಾಗುತ್ತಿಲ್ಲವಲ್ಲಾ ಅದರ ಬಗ್ಗೆ ನೀವು ಹೇಳಬೇಕು. ಈಗಾಗಲೇ ನೀವು ಕೊಟ್ಟಿರುವ ಹೇಳಿಕೆಯಿಂದ ಇದು ವ್ಯಕ್ತವಾಗುತ್ತಿದೆಯಾದ ಕಾರಣ ಇದರ ಬಗ್ಗ ಸ್ಪಷ್ಟವಾಗಿ ನೀವು ಹೇಳಬೇಕು. ಇದರ ಬಗ್ಗೆ ಕಂಟೆಪ್ಟ್‌ನಲ್ಲಿ ಸುಪ್ರೀಂ ಕೋರ್ಟ್ ವಜಾಮಾಡಿದೆ, ಹೈಕೋರ್ಟಿನಲ್ಲಿ ವಜಾ ಮಾಡಲಾಗಿದೆ ಎಂದು ಏನು ಹೇಳಲಾಗಿದೆ ಅದರ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಏಕೆಂದರೆ ಅಲ್ಲಿ ಲೀಗಲಿ ವಜಾ ಮಾಡಿದ್ದಾರೆ, ಆದರೆ morally you are responsible to this House and to the people to execute that work and to complete it.

ಆದರೆ ಅದು ಅಪೂರ್ಣವಾದರೆ ಆ ಬಗ್ಗೆ ಸಂಪೂರ್ಣವಾಗಿ ಜವಾಬ್ದಾರಿಯನ್ನು ನೀವೇ ಹೊತ್ತುಕೊಳ್ಳಬೇಕಾಗುತ್ತದೆ. ಇಂದು ಅಲ್ಲಿ ಕೆಲಸ ನಿಧಾನವಾಗಿದೆ. ಇದರ ಬಗ್ಗೆ ಕೇಳಿದರೆ ಕೆಲಸ ಎಂಟ್ರುಸ್ಟ್ ಮಾಡುತ್ತಿದ್ದೆವು, ಆದರೆ ನೀವೆಲ್ಲಾ ಗಲಾಟೆ ಮಾಡಿದ್ದರಿಂದ ಅದನ್ನು ನಿಲ್ಲಿಸಿಬಿಟ್ಟೆವು ಎಂದು

ನಮಗೆ ನೀವು ಹೇಳುತ್ತಿದ್ದೀರಿ. ಈ ಕಾರಣಕ್ಕಾಗಿಯೇ ಕೆಲಸ ನಿಧಾನವಾಯಿತು ಎಂದು ಹೇಳುತ್ತಿದ್ದೀರಿ. ನಾವು ಕೆಲಸವನ್ನು ನಿಲ್ಲಿಸಿ ಎಂದು ಹೇಳಿದ್ದೇವೆಯೇ? ಕಂಟ್ರ್ಯಾಕ್ಟರ್‌ಗಳಿಗೆ ನ್ಯಾಯವಾಗಿ ಏನು ಹಣವನ್ನು ಬಿಡುಗಡೆ ಮಾಡಬೇಕೋ ಅದನ್ನು ಬಿಡುಗಡೆ ಮಾಡಬೇಡಿ ಎಂದು ಹೇಳಿದ್ದೇವೆಯೇ ಅಥವಾ ಎಲ್ಲಿ ಹಣ ಬಿಡುಗಡೆ ಮಾಡಬೇಕೋ ಅಲ್ಲಿಗೆ ಹಣ ಬಿಡುಗಡೆ ಮಾಡಬೇಡಿ ಎಂದು ಹೇಳಿದ್ದೇವೆಯೇ? ನಾವು ಹೇಳಿದ್ದೇನೆಂದರೆ ಒಂದು ರೂಪಾಯಿ ಖರ್ಚು ಮಾಡುವ ಕಡೆ ಎರಡು ರೂಪಾಯಿ ಖರ್ಚಾಗುವ ಹಾಗೆ ಶೇಕಡ 100ರಷ್ಟು, ಶೇಕಡ 200ರಷ್ಟು ಕ್ಲೈಮ್ ಮಾಡಿ ಹಣವನ್ನು ಕೊಡಿಸತಕ್ಕಂಥದ್ದರ ಬಗ್ಗೆ ಹೇಳುತ್ತಾ ಇಲ್ಲಿ ಅವ್ಯವಹಾರ ಆಗುತ್ತಿದೆ ಮತ್ತು ಕೆಲವು ಎಕ್ಸೆಸ್ ಪೇಮೆಂಟ್ ಕೂಡ ಆಗತಕ್ಕಂಥದ್ದು ಇದೆ. ಇಂಥದ್ದನ್ನು ಮಾಡಬೇಡಿ ಎಂದು ಹೇಳುತ್ತಿದ್ದೇವೆ. ಇದರ ಬಗ್ಗೆ ಈಗಾಗಲೇ ಅಂದಾಜುಗಳ ಸಮಿತಿ ಕೂಡ ಹೇಳಿದೆ. ಸಿ.ಎ.ಜಿ ವರದಿಯಲ್ಲೂ ಕೂಡ ಹೇಳಲಾಗಿದೆ. ಜನರೂ ಕೂಡ ಹೇಳಿದ್ದಾರೆ ಮತ್ತು ಇನ್ನಿತರ ಎಲ್ಲರೂ ಕೂಡ ಹೇಳುತ್ತಾರೆ. ಇಷ್ಟೊಂದು ಎವಿಡೆನ್ಸ್ ಇದ್ದರೂ ಕೂಡ ಬಹಳ ಧೈರ್ಯವಾಗಿ ಅವೆಲ್ಲವನ್ನೂ ಎದುರಿಸುತ್ತಿರುವ ನಿಮ್ಮ ಧೈರ್ಯಕ್ಕೆ ನಿಜವಾಗಿಯೂ ಮೆಚ್ಚಲೇಬೇಕಾಗಿದೆ. ಸಿ.ಎ.ಜಿ. ವರದಿಯಲ್ಲೂ ಬಂದರೂ ಕೂಡ ನೀವು ಧೈರ್ಯವಾಗಿ ಹಿಂದಿನ ಮುಖ್ಯಮಂತ್ರಿಗಳನ್ನು ಡಿಫೆಂಡ್ ಮಾಡುತ್ತಿದ್ದೀರಿ ಅದೇ ರೀತಿ ಈಗಿನ ಮುಖ್ಯಮಂತ್ರಿಗಳು ಏನು ಕೆಲಸ ಮಾಡಿದ್ದಾರೆ ಎಂದು ಹೇಳುತ್ತಿದ್ದೀರಿ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ವೀರಪ್ಪಮೊಯ್ಲಿಯವರು ಈಗಾಗಲೇ ಸಿ.ಎ.ಜಿ. ವರದಿ ಬಗ್ಗೆ ಹೇಳಿದ್ದಾರೆ. ಸಿ.ಎ.ಜಿ. ವರದಿಗೆ ಇಲ್ಲಿಯವರೆವಿಗೂ ಸರ್ಕಾರ ರಿಪ್ಲೈ ಮಾಡಿಲ್ಲ. ಆ ರಿಪೋರ್ಟ್‌ನ್ನು ಪ್ರಿಲಿಮನರಿ ಅಬ್ಜೆಕ್ಷನ್ಸ್ ಎಂದು ಅಬ್ಸರ್‌ವೇಷನ್ ಹಾಕಿದ ಮೇಲೆ ಫೈನಾನ್ಸ್ ಸೆಕ್ರೆಟರಿಯವರು ಇದರ ಬಗ್ಗೆ ಎಲ್ಲೆಲ್ಲಿ ಟೆಕ್ನಿಕಲ್ ಪ್ರಾಬ್ಲಮ್ಸ್‌ಗಳಿವೆ ಎಂಬ ಬಗ್ಗೆ ತಿಳಿದುಕೊಳ್ಳಲು ಉಮೇಶ್‌ರಾವ್ ನೇತೃತ್ವದಲ್ಲಿ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಅವರಿಂದ ರಿಪೋರ್ಟ್‌ನ್ನು ತರಿಸಿಕೊಂಡಿದ್ದೇವೆ. ಅಡಿಶನಲ್ ಚೀಫ್ ಸೆಕ್ರೆಟರಿ ಮುತ್ತಣ್ಣನವರು ಇದರ ಬಗ್ಗೆ ವರದಿಯನ್ನು ತರಿಸಿಕೊಂಡಿರತಕ್ಕಂಥದ್ದು ಇದೆ. ನಿಜವಾಗಿ ಎಷ್ಟು ಕೆಲಸ ನಡೆದಿದೆ ಅದಕ್ಕೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಇದರ ಬಗ್ಗೆ ಅಬ್ಸರ್‌ವೇಷನ್ ಏನು ಮಾಡಲಾಗಿದೆ ಅದಕ್ಕೆ ರಿಪ್ಲೈ ಮಾಡುವುದಕ್ಕೆ ಈಗ ಫೈನಾನ್ಸ್ ಕಮಿಷನರ್ ಮತ್ತು ಕೆ.ಬಿ. ಜೈನ್‌ನವರು ಕುಳಿತುಕೊಂಡು ನೆಗೋಷಿಯೇಟ್ ಮಾಡಿ ಅವರಿಗೆ ರಿಪ್ಲೈ ಮಾಡಬೇಕಾಗಿದೆ. ಅವರು ರಿಪ್ಲೈ ಮಾಡಿಯಾದ ಮೇಲೆ ಆ ಅಬ್ಸರವೇಷನ್ ರೈಟ್ ಅಥವಾ ರಾಂಗ್ ಎಂಬುದು ಗೊತ್ತಾಗುತ್ತದೆಯೇ ವಿನಃ ಅಲ್ಲಿಯವರೆವಿಗೆ you cannot take that as final.

Sri MALLIKARJUNA KHARGE : I must appreciate. This is placed on the Table of the House and it is final report. ಯಾವ ವರದಿಗಳು ಅಥೆಂಟಿಕೇಟ್ ಆಗಿ ಈ ಸದನದ ಮುಂದೆ ಮಂಡಿಸಲಾಗುತ್ತದೆಯೋ ಆ ವರದಿಗಳು ಸದನದ ಸ್ವತ್ತಾಗುತ್ತದೆ. ಆ ರೀತಿಯಲ್ಲಿ ಸಿ.ಎ.ಜಿ. ವರದಿಯಲ್ಲಿ ವಿಷಯ ಬಂದಿದ್ದರೂ ಕೂಡ ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದರೆ ನಾವು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ನೀವು ಇದರ ಬಗ್ಗೆ ತಿರುಚಿ-ಮುರುಚಿ ಏನೇನೋ ಹೇಳುವುದಕ್ಕೆ ಹೋಗಬೇಡಿ. ಆ ರೀತಿಯಲ್ಲಿ ನೀವು ಒಂದು ಸುಳ್ಳನ್ನು ಹೇಳಿದರೆ ಮುಂದೆ ಅದನ್ನು ಮುಚ್ಚಲು ಹತ್ತು ಸುಳ್ಳು ಹೇಳಬೇಕಾಗುತ್ತದೆ. ಆದ್ದರಿಂದ ನೀವು ಎಷ್ಟು ಹೇಳಬೇಕೋ ಅಷ್ಟನ್ನು

ಮಾತ್ರ ಹೇಳಿ. ನೀವೇನೂ ಬಹಳ ದಿವಸ ಇರುವುದಿಲ್ಲ. ಸೆಪ್ಟೆಂಬರ್‌ವರೆಗೆ ಇರುತ್ತೀರಷ್ಟೆ.

ಶ್ರೀ ಕೆ.ಎನ್. ನಾಗೇಗೌಡ : ಈಗೇನು ಅಬ್ಜರ್‌ವೇಷನ್ಸ್ ಇದೆ ಅದರ ಬಗ್ಗೆ ಫೈನಾನ್ಸ್ ಕಮಿಷನರ್ ರಿಪ್ಲೈ ಮಾಡಿದ ಮೇಲೆ ಮತ್ತೆ ವರದಿ ಸದನಕ್ಕೆ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಿ.ಎ.ಜಿ. ರಿಪೋರ್ಟ್‌ನಲ್ಲಿ ಬಂದಿರುವ ಅಂಶವನ್ನು ಮೊಯ್ಲಿಯವರು ಈಗಾಗಲೇ ಹೇಳಿದ್ದಾರೆ. ನಾನು ಅದನ್ನೇ ಪದೇ ಪದೇ ಹೇಳುವುದಕ್ಕೆ ಹೋಗುವುದಿಲ್ಲ. ನಾಗೇಗೌಡರೆ, ನೀವು ಟೂ ಮಚ್ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗುತ್ತಿದ್ದೀರಿ. ಏಕೆಂದರೆ ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆಯುತ್ತಿದೆ.

SRI K.N. NAGE GOWDA : Hundred percent it is a fact. The Government has not replied to the observations raised by the CAG.

SRI KAGODU THIMMAPPA : You are bound to do it.

ಶ್ರೀ ಕೆ.ಎನ್. ನಾಗೇಗೌಡ : ನಾವು ಈಗ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೆ, ಅಲ್ಲಿ ಕೆಲಸಗಳು ನಿಧಾನವಾಗಲು ಅವರು ಕಾರಣ, ಇವರು ಕಾರಣ ಎಂದು ಸದನದ ಮುಖಾಂತರ ಹೇಳುತ್ತಾ ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸ ಆಗಬಾರದು. ನೀವು ನ್ಯಾಯವಾಗಿ ಎಂಟ್ರಸ್ಟ್ ಮಾಡಬೇಕಾಗಿತ್ತು. ಅದನ್ನು ಬಿಟ್ಟು ರಾತ್ರೋರಾತ್ರಿ ಸಾವಿರಾರು ಜನರಿಗೆ ಕಂಟ್ರ್ಯಾಕ್ಟ್ ಕೊಡುವುದಕ್ಕೆ ಏನಾದರೂ ಹೇಳಲಾಗಿತ್ತೇ? ಕೋಟ್ಯಾಂತರ ರೂ.ಗಳನ್ನು ಆ ರೀತಿ ಅಲೋಕೇಷನ್ ಮಾಡುವುದಕ್ಕೆ ಹೇಳಲಾಗಿತ್ತೇ? ಇನ್ನೂ ಏನೇನನ್ನು ಅಲ್ಲಿ ಮಾಡಲಾಗಿದೆ ಎಂಬ ಬಗ್ಗೆ ಸಿ.ಬಿ.ಐ ಎನ್‌ಕ್ವೈರಿ ಮಾಡಿದರೆ ಎಲ್ಲವೂ ಹೊರಗೆ ಬರುತ್ತದೆ. ನಾವು ಇದರ ಬಗ್ಗೆ ಹತ್ತಾರು ಬಾರಿ ಮಾತನಾಡಿದರೂ ಕೂಡ ಅದಕ್ಕೆ ಬೆಲೆಯೇ ಇಲ್ಲವಾಗಿದೆ. ಇನ್ನೂ ಸಾಕಷ್ಟು ವಿಷಯಗಳು ಇದರಲ್ಲಿದೆ; ಆದರೆ ಅವೆಲ್ಲವನ್ನೂ ಇಲ್ಲಿ ಹೇಳುವುದಿಲ್ಲ. ಇವೊತ್ತು ಆಲಮಟ್ಟಿ ವಿಚಾರವನ್ನು ಏನು ರೈಸ್ ಮಾಡಿದ್ದೇವೋ ಅದಕ್ಕೆ ತೃಪ್ತಿಕರವಾದ ಉತ್ತರವಂತೂ ಬರಲಿಲ್ಲ. ಆದರೂ ಕೂಡ ಇದರ ಬಗ್ಗೆ ಕೆಲವು ಸದಸ್ಯರು ಕ್ಲಾರಿಫಿಕೇಶನ್ ಕೇಳುವವರಿದ್ದಾರೆ. ಅವರೆಲ್ಲರೂ ಕ್ಲಾರಿಫಿಕೇಷನ್ ಕೇಳಿದ ಮೇಲೆ ಕೊನೆಯದಾಗಿ ನಾನು ಮತ್ತೊಮ್ಮೆ ಮಾತನಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ :- ಮಾನ್ಯ ಉಪಾಧ್ಯಕ್ಷರೆ, ಸಿ.ಎ.ಜಿ. ರಿಪೋರ್ಟ್ ಏನಿದೆ ಅದು ಪ್ರಾಜೆಕ್ಟ್ ಬಗ್ಗೆ ಇರತಕ್ಕಂಥ ರಿವ್ಯೂ ರಿಪೋರ್ಟ್ ಆಗಿದೆ. ಈ ರಿವ್ಯೂ ರಿಪೋರ್ಟ್‌ನ್ನು ಮಾಡುವ ಮೊದಲು ಸರ್ಕಾರಕ್ಕೆ ಕ್ಲಾರಿಫಿಕೇಷನ್‌ಗಳನ್ನೆಲ್ಲಾ ಕೇಳಿರುತ್ತಾರೆ. ನನಗೆ ಈ ವಿಚಾರವೆಲ್ಲಾ ಗೊತ್ತಿದೆ. ಏಕೆಂದರೆ ನಾನೂ ಕೂಡ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಅಧ್ಯಕ್ಷನಾಗಿ, ಹಣಕಾಸು ಮಂತ್ರಿಯಾಗಿ ಕಾರ್ಯ ನಿರ್ವಹಿಸಿರುವುದರಿಂದ ನನಗೆ ಆ ವಿಚಾರ ಗೊತ್ತಿದೆ. ನನಗೆ ನಾಗೇಗೌಡರ ಬಗ್ಗೆ ಕನ್‌ಫ್ಯೂಷನ್ ಆಗಿದೆ. ಏಕೆಂದರೆ ಇವರು ಬ್ಯಾರಿಸ್ಟರೋ ಅಥವಾ ಇಂಜಿನಿಯರೋ ಎಂದು ಕನ್‌ಫ್ಯೂಷನ್ ಆಗಿದೆ. ನಾಗೇಗೌಡರೆ ಬ್ಯಾರಿಸ್ಟರ್ ತರಹ ಮಾತನಾಡಿ. ನಾಗೇಗೌಡರು ನೀವು ದೊಡ್ಡ ತ್ಯಾಗಮಯಿ. ಏಕೆಂದರೆ ಆ ತ್ಯಾಗಬುದ್ಧಿ ಅವರಲ್ಲಿದೆ. ಹಿಂದೆ ನಮ್ಮನ್ನು ಡಿಫೆಂಡ್ ಮಾಡುವುದಕ್ಕೆ ಹೋಗಿ ಬಲಿಪಶುವಾದರು. ನಾನು ಅವರನ್ನು ಅಪ್ರೀಷಿಯೇಟ್ ಮಾಡುತ್ತೇನೆ. ಆ ರೀತಿಯ honesty, integrity, to defend the cause, to defend the leader, to defend the Government, I think nobody

is parallel to you. ಇವುಗಳಿಗೆಲ್ಲಾ ಸಂಬಂಧಪಟ್ಟ ಹಾಗೆ ನಾನು ಯಾವಾಗಲೋ ಅವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದೇನೆ. ಏಕೆಂದರೆ ಅವರ ಬಗ್ಗೆ ನನಗೆ ಗೊತ್ತಿದೆ. ನಾನು ಮೆಚ್ಚಿದಂಥ ಶಾಸಕರುಗಳಲ್ಲಿ ನಮ್ಮ ನಾಗೇಗೌಡರು ಮಂತ್ರಿಗಳಾಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ಮೆಚ್ಚಿದಂಥ ಶಾಸಕರುಗಳಲ್ಲಿ ನಾಗೇಗೌಡರು ಮಂತ್ರಿಗಳಾಗಿರುವುದು ನಿಮಗೆ ಅಭಿಮಾನವಾಗಿದೆ. ಆದಕಾರಣ ಅಪ್ರೀಷಿಯೇಟ್ ಮಾಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ :- ನನಗೆ ಆ ವಿಚಾರದಲ್ಲಿ ಸಂತೋಷವಾಗಿದೆ. ನನಗೆ ಅವರ ಬಗ್ಗೆ ಬಹಳ ಅಭಿಮಾನವಿದೆ.

ಶ್ರೀ ಕೆ.ಎನ್. ನಾಗೇಗೌಡ :- ಖರ್ಗೆಯವರೆ, ಎಲ್ಲಿ ರಿಯಾಲಿಟಿ ಇರುತ್ತದೆ ಅದರ ಬಗ್ಗೆ ನೀವು ಅಪ್ರೀಷಿಯೇಟ್ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾವು ಅಪ್ರೀಷಿಯೇಟ್ ಮಾಡುವುದಿಲ್ಲವೆಂದು ಹೇಳಲಿಲ್ಲ. ಈಗಲೂ ನೀವು ಡಿಫೆಂಡ್ ಮಾಡಿಕೊಳ್ಳುವುದಕ್ಕೇ ಹೋಗುತ್ತಿದ್ದೀರಲ್ಲಾ ಆದುದರಿಂದ ಆದರ ಬಗ್ಗೆ ಹೇಳಿದೆ.

ಶ್ರೀ ಕೆ.ಎನ್. ನಾಗೇಗೌಡ :- ಖರ್ಗೆಯವರೆ ವಿ.ಸಿ. ಕ್ಯಾನಲ್ ಬಗ್ಗೆ ನೀವು ಹೇಳಿದ್ದೀರಿ. ನಾನು ಹೇಳುವುದೇನೆಂದರೆ he should appreciate like you. wherever the point is there, wherever the reality is there, wherever honesty is there, for every politician certainly after certain age, he has to appreciate that.

SRI M. VEERAPPA MOILY : I am appreciating.

SRI K.N. NAGE GOWDA : But he is not appreciating.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ವಿ.ಸಿ. ಕೆನಾಲ್ ಬಗ್ಗೆ ಏನು ಕೆಲಸವನ್ನು ಮಾಡಲಾಗಿದೆ ಅದರ ಬಗ್ಗೆ ಅಪ್ರೀಷಿಯೇಟ್ ಮಾಡುತ್ತೇನೆ. ಆದರೆ ವಿ.ಸಿ. ಕೆನಾಲ್ ಕೆಲಸದಲ್ಲಿ ಒಂದು ರೂಪಾಯಿ ಖರ್ಚು ಮಾಡಬೇಕಾದ ಕಡೆ ಎರಡು ರೂ.ಗಳನ್ನು ಖರ್ಚು ಮಾಡಲಾಗಿದೆ. ಆದರೆ ಬಗ್ಗೆ ಅಪ್ರೀಷಿಯೇಟ್ ಮಾಡುವುದಿಲ್ಲ. ರಾತ್ರೋರಾತ್ರಿ ನೂರಾರು ಜನರಿಗೆ ಪೀಸ್ ವರ್ಕ್‌ಗಳನ್ನು ಏನು ಎಂಟ್ರಸ್ಟ್ ಮಾಡಲಾಗಿದೆಯೋ ಅದನ್ನು ನಾನು ಅಪ್ರೀಷಿಯೇಟ್ ಮಾಡುವುದಿಲ್ಲ. ಇದಕ್ಕೆಲ್ಲಾ ಎನ್‌ಕ್ವೈರಿ ಆಗಬೇಕೆಂದು ಹೇಳಿದೆನೇ ಹೊರತು ವರ್ಕ್ಸ್ ಬಗ್ಗೆ ಅಪ್ರೀಷಿಯೇಟ್ ಮಾಡುತ್ತೇನೆ. ಏಕೆಂದರೆ ಒಬ್ಬ ಮಂತ್ರಿಯಾಗಿ ಕೊಟ್ಟಿಗಟ್ಟಲೆ ಹಣವನ್ನು ಅವರ ಜಿಲ್ಲೆಗೆ ಖರ್ಚು ಮಾಡಬೇಕೆಂದರೆ ಅದೇನು ಸಾಮಾನ್ಯ ಮಾತಾಗುತ್ತದೆಯೇ?

ಶ್ರೀ ಕೆ.ಎಸ್. ನಾಗೇಗೌಡ :- ಮಾನ್ಯ ಖರ್ಗೆಯವರೆ, ನೀವುಗಳೆಲ್ಲಾ ರಾಜಕೀಯ ಪ್ರವಾಸವನ್ನು ಮಾಡಿಕೊಂಡು ಬಂದಮೇಲೆ ನಿಮ್ಮ ಪಕ್ಷದ ಅಧ್ಯಕ್ಷರಾದ ಎಸ್.ಎಂ. ಕೃಷ್ಣರವರು ವಿ.ಸಿ. ಕೆನಾಲ್ ಬಗ್ಗೆ ತಿಳಿಸಲು ಮಂಡ್ಯದಲ್ಲಿ ಪ್ರೆಸ್ ಕಾನ್‌ಫರೆನ್ಸ್ ಮಾಡಿ ಅಲ್ಲಿ ಏನು ಹೇಳಿದ್ದಾರೆಂದರೆ "Zero to 34 Kms., work, never in the history of Mandya and Karnataka. *I am giving* all appreciation to Mr. Nage Gowda as an Ex-Irrigation Minister."

ಎಂದು ಹೇಳಿದರು. He is your party President. you cannot separate. You

are the Leader of the Opposition and he is your party President. why don't you appreicate your President?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ವಸ್ತು ಒಳ್ಳೆಯದಿದೆ ಆದರೆ ಬಹಳ ದುಬಾರಿ ಎಂದು ಹೇಳಿದ ಹಾಗೆ ಹೇಳಿದ್ದಾರಷ್ಟೆ.

ಶ್ರೀ ಎಂ. ವೀರಪ್ಪಮೊಯ್ಲಿ : ನಾನು ಸ್ಪಷ್ಟವಾಗಿ ನಾಗೇಗೌಡರ ಬಗ್ಗೆ ಹೇಳುತ್ತೇನೆ. ಅವರು ಎಲ್ಲಿದ್ದರೂ ಕೂಡ he is loyal to that.

ಅಷ್ಟರಮಟ್ಟಿಗೆ ಮಾತ್ರ ನಾನು ಒಪ್ಪಿಕೊಳ್ಳುತ್ತೇನೆ. ಎಕ್ಸ್‌ಟ್ರಾ ಲಾಯಲ್ಟಿ ನಾಗೇಗೌಡರಿಗೆ ಸಲ್ಲಲೇಬೇಕು. ಏಕೆಂದರೆ ತುಂಬಾ ಡೈನಾಮಿಕ್ ಪರ್ಸನ್ ಅವರಾಗಿದ್ದಾರೆ. ಆದರೆ ಎಸ್.ಎಂ. ಕೃಷ್ಣರವರು ಪತ್ರಿಕೆಗಳಲ್ಲಿ ವಿ.ಸಿ. ಕೆನಾಲ್ ಬಗ್ಗೆ ಹೇಳಿರುವುದುನ್ನು ನಾನು ನೋಡಿಲ್ಲ. ನಾನು ಅದನ್ನು ನೋಡಿದ ಮೇಲೆ ಎಕ್ಸ್‌ಟ್ರಾ ಲಾಯಲ್ಟಿ ಬಗ್ಗೆ ಸರ್ಟಿಫಿಕೇಟನ್ನು ನಾಗೇಗೌಡರಿಗೆ ಕೊಡುತ್ತೇನೆ. ಅಲ್ಲಿಯವರೆಗೆ ರಿಸರ್ವ್ ಮಾಡಿಕೊಂಡಿರುತ್ತೇನೆ. ಇನ್ನು ಈಗ ಸಿ.ಎ.ಜಿ. ರಿಪೋರ್ಟ್ ಬಗ್ಗೆ ಏನು ಹೇಳಲಾಗಿದೆಯೋ ಅದರ ಬಗ್ಗೆ ಸ್ಪಷ್ಟಪಡಿಸಬೇಕು. ನನಗೆ ಗೊತ್ತಿದೆ, ಇದು ರಿವ್ಯೂ,

ಆ ರಿವ್ಯೂ ಮಾಡುವ ಮೊದಲು ಈ ಕ್ಲಾಸಸ್ ಪ್ಯಾರಾಗ್ರಾಫ್, ಪ್ಯಾರಾಗ್ರಾಫ್ ಸೇರಿಸುವ ಮೊದಲು ಸರ್ಕಾರದಿಂದ ಎಲ್ಲಾ ಕ್ಲಾರಿಫಿಕೇಷನ್ ಕೇಳಿರುತ್ತಾರೆ. ಎಲ್ಲಾ ಕ್ಲಾರಿಫಿಕೇಷನ್ ಸೇರಿದ ಮೇಲೆ they (C&AG) formulate paragraphs. This is the laid down procedure. ಇನ್ನು ಮುಂದೆ ಸ್ಟೆಪ್ ಯಾವುದು ಎಂದರೆ Estimates Commitee, and PAC, they will take these paragraphs for a review.

ರಿವ್ಯೂ ಆದಮೇಲೆ ಅವರು ಸರ್ಕಾರದಿಂದ ಮತ್ತೆ ಕೇಳುತ್ತಾರೆ, ಪುನಃ ಒಂದು ಅಪಾರ್ಚುನಿಟಿ ಕೊಡುತ್ತಾರೆ. ಆದರ ಮೇಲೆ PAC or the Estimates Commitee formulate their report. Then the question remains about the action taken on the recommendation. ಅಷ್ಟೆ ರೆಕಮೆಂಡೇಷನ್ ಮಾತ್ರ. ರಿವ್ಯೂ ಮಾಡಿದಂತಹ ಸಿ.ಎ.ಜಿ. ಫೈಂಡಿಂಗ್ಸ್ ಇದು. It is not suggestion. It is a finding from the CAG. what is the finding that the CAG is alredy written, ಅದಕ್ಕೆ ನಾನು ಸಿಬಿ.ಐ ಎನ್‌ಕ್ವೈರಿ ಕೇಳಿದ್ದೇವೆ. ಈಗ ಮಾನ್ಯ ನಾಗೇಗೌಡರು ಎಲ್ಲಾ ಸರಿ. ಆದರೆ ಕೆಲವು ಸಾರಿ ಎಲ್ಲಿಂದ ಬಂದಿದ್ದೇವೆ ಎನ್ನುವುದನ್ನು ಮರೆತು ಬಿಡುತ್ತೀರಿ. ಆ ಕಾಲಕ್ಕೆ ಸರಿಯಾಗಿ ಮಾಡುತ್ತೀರಿ. ಏಕೆಂದರೆ ನೀವು ಸನ್ಯಾಸಿ ಅಲ್ಲ, ಸನ್ಯಾಸಿಯ ಮೂಲ ಕೇಳಬಾರದು. ನಿಮ್ಮ ಮೂಲ ಎಲ್ಲಿ ಎಂದರೆ ನೀವು ಕಾಂಗ್ರೆಸ್ ಪಕ್ಷದಿಂದ ಬಂದಿದ್ದೀರಿ. ನೀವು ಸ್ವಲ್ಪ ಕಾಂಗ್ರೆಸ್‌ನವರು ಏನು ಮಾಡಿದ್ದರು ಎಂದು ವಿಚಾರಿಸಿ ಆ ಮೇಲೆ ಜನತಾ ದಳದವರು ಏನು ಮಾಡಿದ್ದರು ಎಂದು ಹೇಳಿದರೆ ನಾವು ನಿಮಗೆ ಸರ್ಟಿಫಿಕೇಟ್ ಕೊಡಬಹುದು. ಇದರಲ್ಲಿ ಸ್ಟೇಟ್‌ಮೆಂಟ್ ನಂಬರ್ ಮೂರು ಇವರು ಹೇಳಿದರು. ಸ್ಟೇಟ್‌ಮೆಂಟ್ ನಂಬರ್ ನಾಲ್ಕು ಅದನ್ನು ಓದಿ, ಲೇಟೆಸ್ಟ್ ಇರಿಗೇಷನ್ ರಿಪೋರ್ಟ್. ಈಗ ತಾವು ನೋಡಿ, ಕಾಂಗ್ರೆಸ್ 1980ರಿಂದ 85ರವರೆಗೆ ಏನು ಮಾಡಿತ್ತು. ಅದು ಸುಮಾರು 10 ಹೆಕ್ಟೇರ್ ಇದ್ದಿದ್ದು, 11 ಚಿಲ್ಲರೆ ಹೆಕ್ಟೇರ್‌ಗೆ ಎಂದರೆ ಒಂದು ಲಕ್ಷ ಹೆಕ್ಟೇರ್‌ಗೆ ಹೋಯಿತು. 1985-90ರಲ್ಲಿ ನೋಡಿ ನಿಮ್ಮ ಲೆಕ್ಕ, ನೀವು 1983-84ರದು ಬಿಡಿ. ಏಕೆಂದರೆ It is a spillover item. 1984-85ರಲ್ಲಿ 1165 ಹೆಕ್ಟೇರ್ ಇದ್ದರೆ ಆಗ ನಾವು ಅಧಿಕಾರ

ಬಿಟ್ಟಾಗ, ತಾವು ಅಧಿಕಾರ ಬಿಟ್ಟಾಗ ಎಷ್ಟಕ್ಕೆ ಬಂತು ಎಂದರೆ 1301 ಹೆಕ್ಟೇರ್‌ಗೆ ಬಂದಿದೆ.

ಎಂದರೆ 1227 ರಿಂದ ಬಂದಿದ್ದು ಎಷ್ಟು ಎಂದರೆ 1291 ಕ್ಕೆ. ಎಂದರೆ ಎಷ್ಟಾಯಿತು ? ಹಾರ್‍ಡ್ಲಿ 60ಸಾವಿರ ಮಾತ್ರ. ನಿಮ್ಮ ಜನತಾ ದಳ ಸರ್ಕಾರ ಅಧಿಕಾರದಲ್ಲಿ ಇದ್ದಾಗ 1983-84 ರಿಂದ1988-89 ರವರೆಗೆ ನಿಮ್ಮ ಕಾಂಟ್ರಿಬ್ಯೂಷನ್ ಅಷ್ಟು. ನೀವು ಅಧಿಕಾರ ಬಿಟ್ಟಾಗ 1995-96 ನೇ ಸಾಲಿನದು ಬಿಡಿ. 1577 ಇದ್ದರೆ ನೀವು 1997-98 ಕ್ಕೆ ಕೇವಲ 1658 ಮಾಡಿದ್ದೀರಿ. ಎಂದರೆ ಎಷ್ಟಾಯಿತು? 28 ಮಾತ್ರ ಜಾಸ್ತಿಯಾಯಿತು. ನಾನು ಈಗಾಗಲೇ ವರದಿ ಕೊಟ್ಟಿದ್ದೇನೆ. ನಿಮ್ಮ ವರದಿನೇ ಅದು, ಪುಸ್ತಕಗಳಲ್ಲಿ ಇದೆ. ಒಟ್ಟು ಮೇಜರ್ ಇರಿಗೇಷನ್, ಮೀಡಿಯಂ ಇರಿಗೇಷನ್, ಮೈನರ್ ಇರಿಗೇಷನ್, ಲಿಫ್ಟ್ ಇರಿಗೇಷನ್ ಎಲ್ಲಾ ಸೇರಿ ಈ ನಾಲ್ಕು ವರ್ಷಗಳಲ್ಲಿ ಅಡಿಷನ್ ಮಾಡಿರುವುದು ಎಷ್ಟು ಎಂದರೆ 31 ಸಾವಿರ ಮಾತ್ರ. ಆದರೆ ಕಾಂಗ್ರೆಸ್ ಎಷ್ಟು ಮಾಡಿದೆ ಎಂದು ನಿಮಗೆ ಗೊತ್ತಿದೆ. ಇಲ್ಲಿ ನೋಡಿ ನಾವು ಸುಮಾರು 1989 ರಿಂದ 1994-95 ರವರೆಗೆ ಮೂರು ಲಕ್ಷ ಹೆಕ್ಟೇರ್ ನಾವು ಇರಿಗೇಷನ್ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿದ್ದೇವೆ. it is on record. ಇದು ನಿಮ್ಮದೇ ರಿಪೋರ್ಟ್. ಕ್ಯಾಲುಕಲೇಟರ್ ತೆಗೆದುಕೊಂಡು ಬನ್ನಿ. ಕಂಪ್ಯೂಟರ್‌ನಲ್ಲಿ ಬೇಕಾದರೆ ಹಾಕಿ, ವೆರಿಫೈ ಮಾಡಿ ಅದನ್ನು ಹೇಳಿ. ಏಕೆಂದರೆ ಕಾಂಗ್ರೆಸ್‌ನವರು ಏನೂ ಮಾಡಿಲ್ಲ ಎಂದು ಎಲ್ಲಾ ಭಾಷಣ ಮಾಡುವುದು ಬಹಳ ಸುಲಭ. ಆದರೆ ಕಾಂಕ್ರೀಟ್ ಆಗಿ ಏನು ಮಾಡಿದ್ದಾರೆ ಎಂದು ತಾವು ನೋಡಬಹುದು. ಇನ್ನೊಂದು ತಾವು ಮಸ್ಕಿ ನಾಲಾದ ಬಗ್ಗೆ ಏನು ಮಾಡಿದ್ದೇವೆ ಎಂದು ಬಹಳ ಚೆನ್ನಾಗಿ ಹೇಳಿದ್ದೀರಿ. 1994-95 ರಲ್ಲಿ ನಾವು ಮಸ್ಕಿ ನಾಲಾಕ್ಕೆ ಕೊಟ್ಟ ಹಣ ಎಂಟು ಕೋಟಿ ರೂಪಾಯಿ. ಇವರು ಇಷ್ಟೆಲ್ಲಾ ಭಾಷಣ ಮಾಡಿದರಲ್ಲಾ, ಇವರು ಮಸ್ಕಿ ನಾಲಾಕ್ಕೆ 1997-98 ರಲ್ಲಿ 5 ಕೋಟಿ 20 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಭದ್ರಾಗೆ 1994-95 ರಲ್ಲಿ ನಾವು ಕೊಟ್ಟಿದ್ದು 91/2 ಕೋಟಿ ರೂಪಾಯಿ. ಆದರೆ ಇವರು ಕೊಟ್ಟಿದ್ದು ಆರು ಕೋಟಿ ರೂಪಾಯಿ. ಎಲ್ಲಾ ಲೆಕ್ಕ ಇದೆ. ನಾವು ಅಪ್ಪರ್ ತುಂಗಾಗೆ 4 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಇವರು 10 ಕೋಟಿ ರೂಪಾಯಿ ಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಖರ್ಚಾಗಿದೆ ನೋಡಿ. ಹಿಪ್ಪರಿಗಿಗೆ 1994-95 ರಲ್ಲಿ ನಾವು ಕೊಟ್ಟಿದ್ದು ನಾಲ್ಕು ಕೋಟಿ ರೂಪಾಯಿ. ಆದರೆ ಇವರು ಕೊಟ್ಟಿದ್ದು 3 ಕೋಟಿ 45 ಲಕ್ಷ ರೂಪಾಯಿ. ಹಿರೇಹಳ್ಳಕ್ಕೆ ನಾವು ಕೊಟ್ಟಿದ್ದು, 10 ಕೋಟಿ ರೂಪಾಯಿ ಆದರೆ ಇವರು ಕೊಟ್ಟಿದ್ದು ಆರು ಕೋಟಿ ರೂಪಾಯಿ. ಅದಕ್ಕೆ ಜಾಸ್ತಿ ಖರ್ಚು ಮಾಡುತ್ತಾರೆಂದು ಹೇಳುತ್ತಾರೆ. Let us give the credit to them.

ಆದುದರಿಂದ ಇದೆಲ್ಲಾ ಹಳೇ ಪಟ್ಟಿ, ನಾನು ಅದನ್ನು ಎಕ್ಸ್‌ಟ್ರಾಕ್ಟ್ ಮಾಡಿ ತಂದಿದ್ದು. ನನಗೆ ಗೊತ್ತಿತ್ತು, ಏಕೆಂದರೆ ನೀವು ನಮ್ಮ ಜೊತೆಯಲ್ಲಿ ಕೆಲಸ ಮಾಡಿದ್ದರಿಂದ ನೀವು ಇದೇ ರೀತಿ ಉತ್ತರ ಕೊಡುತ್ತೀರಿ ಎಂದು ಗೊತ್ತಿತ್ತು. ಮಾನ್ಯ ನಾಗೇಗೌಡರು ಎಲ್ಲೇ ಇರಲಿ ಅವರು ನನ್ನ ಆತ್ಮೀಯರು ಎಂದು ಯಾವಾಗಲೂ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ : ತಾವು 1997-98 ನೇ ಸಾಲಿನದ್ದು ಹೇಳಲಿಲ್ಲ.

ಶ್ರೀ ಎಂ.ವೀರಪ್ಪಮೊಯಿಲಿ : ಅದನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮಗೆ ಬೇಕಾದ್ದು ನೀವು ಹೇಳಿದಿರಿ, ನಮಗೆ ಬೇಕಾದ್ದು ನಾವು ಹೇಳುತ್ತೇವೆ.

ಶ್ರೀ ಎಂ.ವೀರಪ್ಪಮೊಯಿಲಿ : ನಿಮ್ಮಲ್ಲಿ ಎಷ್ಟು ಕಳಕಳಿ ಇದೆ ಎನ್ನುವುದಕ್ಕೆ ಇಷ್ಟೆ ಸಾಕ್ಷಿ. ಕೃಷ್ಣಾ ಜಲ ಭಾಗ್ಯ ನಿಗಮಕ್ಕೆ 1994-95 ನೇ ಸಾಲಿನಲ್ಲಿ ನಾನು ಎಷ್ಟು ಹಣ ಕೊಟ್ಟೆನೋ ಅದರಲ್ಲಿ 146 ಕೋಟಿ ರೂಪಾಯಿಗಳಷ್ಟು ಹಣವನ್ನು 1995-96 ರಲ್ಲಿ ಕಡಿಮೆ ಮಾಡಿದ್ದೀರಿ. ಇದೇ ನೀರಾವರಿ ಆಣೆ ಮಾಡಿ ಹೇಳಿದ್ದು. ನಿಮಗೆ ಕಳಕಳಿ ಇದೆ, ಅದಕ್ಕೆ ಬಹಳ ಕಳಕಳಿಯಿಂದ ಕಡಿಮೆ ಮಾಡಿದ್ದೀರಿ. ಕೃಷ್ಣಾ ಜಲಾನಯನ ಯೋಜನೆಗೆ I have got the extract. Difference of grants from 1994-95 to 1995-96 is minus Rs.146 crores.

ಇದು ನಿಮಗೆ ಇರತಕ್ಕಂಥ ಕಳಕಳಿ. ಈ ಕಳಕಳಿ ಮುಂದುವರೆದುಕೊಂಡು ಇವತ್ತಿನವರೆಗೂ ಬಂದಿದೆ, ನಿರಾತಂಕವಾಗಿ ಆ ಕಳಕಳಿಯ ಲಾವಾರಸ ಹರಿದು ಬಂದಿದೆ. ಕೃಷ್ಣಾ ಜಲ ಭಾಗ್ಯ ನಿಗಮದಲ್ಲಿ ನೀವು ಎಷ್ಟು ಹಣ ಕೊಟ್ಟಿದ್ದೀರಿ, ನಾವು ಎಷ್ಟು ಕೊಟ್ಟಿದ್ದೇವೆ ಎಂಬುದನ್ನು ನೋಡೋಣ. 1983-84 ರಿಂದ 1987-88 ರವರೆಗೆ ನಿಮ್ಮ ಪೀರಿಯಡ್ ತಾನೇ ? ಕೃಷ್ಣಾ ಜಲಾನಯನಕ್ಕೆ ಎಷ್ಟು ಹಣ ಕೊಡುತ್ತಿದ್ದೀರಿ ಎಂದರೆ ವರ್ಷಕ್ಕೆ 43 ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದೀರಿ. ಅದರ ಬಗ್ಗೆ ಬಹಳ ಕಳಕಳಿ ಇದ್ದವರು. ನಿಜವಾಗಿಯೂ ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ಇರುವಾಗಲೇ 1981-82 ನೇ ಸಾಲಿನಲ್ಲಿ 44 ಕೋಟಿ 78 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೆ ನೀವು 1987-88 ರಲ್ಲಿ 43 ಕೋಟಿ ರೂಪಾಯಿ ಕೊಟ್ಟಿದ್ದೀರಿ. with the escalation ಇದು ನಿಮ್ಮ ಪ್ರೋಗ್ರೆಸ್ಸ ? ಇದು ನಿಮ್ಮ ಕಳಕಳಿಯಾ ಕೃಷ್ಣಾ ಜಲನಯನಕ್ಕೆ ? ಬಹಳ ಭಾಷಣ ಮಾಡಿದಿರಲ್ಲಾ. ನಂತರ ಪುನಃ ನಾವು ಎಷ್ಟೆಷ್ಟು ಹಣ ಕೊಟ್ಟಿದ್ದೇವೆ ಎಂಬುದು ನಿಮಗೆ ಗೊತ್ತಿದೆಯಾ ? 1988-89 ರಲ್ಲಿ 50 ಕೋಟಿ ರೂಪಾಯಿ, 1989-90 ರಲ್ಲಿ 64 ಕೋಟಿ ರೂಪಾಯಿ ಕೊಟ್ಟಿದ್ದರೆ 54 ಕೋಟಿ ರೂಪಾಯಿ 1990-91 ರಲ್ಲಿ 97 ಕೋಟಿ 62 ಲಕ್ಷ ರೂಪಾಯಿಯನ್ನು 1991-92ರಲ್ಲಿ ಕೊಟ್ಟಿದ್ದೇವೆ. 1992-93ರಲ್ಲಿ ನನ್ನ ಪಿರಿಯಡ್ ಬಂತು. ಆಗ 127 ಕೋಟಿ 56 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, 1993-94 ರಲ್ಲೂ ಕೂಡ ನನ್ನ ಪಿರಿಯಡ್‌ನಲ್ಲೆ 240.90 ಕೋಟಿ ರೂಪಾಯಿ ಕೃಷ್ಣಾ ಜಲ ಭಾಗ್ಯ ನಿಗಮಕ್ಕೆ ಕೊಟ್ಟಿದ್ದೇವೆ. ನಂತರ 1994-95 ರಲ್ಲೂ 251.56 ಕೋಟಿ ರೂಪಾಯಿ ನನ್ನ ಪಿರಿಯಡ್‌ನಲ್ಲಿ ಕೊಟ್ಟಿದ್ದೇವೆ. ಆದರೆ ನೀವು 1995-96 ರಲ್ಲಿ 388 ಕೋಟಿ ರೂಪಾಯಿ ನಂತರ 214 ಕೋಟಿ ರೂಪಾಯಿ 543 ಕೋಟಿ ರೂಪಾಯಿ ಈ ರೀತಿ ಕೊಟ್ಟಿದ್ದೀರಿ. ಇದು ನಿಮ್ಮದೇ ರಿಪೋರ್ಟ್.

ಶ್ರೀ ಕೆ.ಎನ್.ನಾಗೇಗೌಡ : 1995-96ನೇ ಸಾಲಿಗೆ 388 ಕೋಟಿ ರೂಪಾಯಿ 1996-97ರಲ್ಲೆ 714 ಕೋಟಿ ರೂಪಾಯಿ 1997-98ರಲ್ಲೆ 785 ಕೋಟಿ ರೂಪಾಯಿ 1998-99 ನೇ ಸಾಲಿನಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಎಂ.ವೀರಪ್ಪಮೊಯಿಲಿ : ಇಷ್ಟು ಆಯಿತಲ್ಲಾ, ಈಗ ನಿಮ್ಮ ಲೆಕ್ಕ ಏನು ? 1997-98 ರಲ್ಲಿ ಕೃಷ್ಣಾ ಜಲಭಾಗ್ಯ ನಿಗಮ ನಿಯಮಿತ ನಿಮ್ಮ ವರದಿ ಪೇಜ್ ನಂಬರ್ 10 ಅದರಲ್ಲಿ ನಿಗಮದ ಈಕ್ವಿಟಿ ಶೇರ್ ಏನಿದೆ ಒಟ್ಟು ಖರ್ಚು ಮಾಡಿದ್ದು 738.92 ಕೋಟಿ ರೂಪಾಯಿ ಎಂದರೆ from their own resources. ಕರ್ನಾಟಕ ಸರ್ಕಾರ 46.68 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ನಾವು ಬಜೆಟರಿ ಸಪೋರ್ಟ್ 1994-95 ರಲ್ಲಿ 251 ಕೋಟಿ 56 ಲಕ್ಷ ರೂಪಾಯಿಗಳನ್ನು ಕೊಟ್ಟರೆ ನೀವು 46.68 ಕೋಟಿ ರೂಪಾಯಿಗಳ ಬಜೆಟರಿ ಸಪೋರ್ಟ್ ಕೊಟ್ಟಿದ್ದೀರಿ.

ಶ್ರೀ ಕೆ.ಎನ್.ನಾಗೇಗೌಡ : ನಾವು ಸಾವಿರ ಕೋಟಿ ರೂಪಾಯಿಗಳ ಬಜೆಟರಿ ಸಪೋರ್ಟ್ ಕೊಟ್ಟಿದ್ದೇವೆ.

ಶ್ರೀ ಎಂ.ವೀರಪ್ಪಮೊಯಿಲಿ : ತಾವು ಎಲ್ಲಿ ಕೊಟ್ಟಿದ್ದೀರಿ ? This is your report. page No.10. ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತದ 4 ನೇ ವಾರ್ಷಿಕ ವರದಿ 1997-98 ರಲ್ಲಿ ಇದೆ. can you say this is not a correct report ?

ಈ ರಿಪೋರ್ಟ್ ನೀವೇ ಮಾಡಿದ್ದೀರಾ, ಅಥವಾ ಲೆಜಿಸ್‌ಲೇಚರ್‌ನವರು ಮಾಡಿದ್ದಾರಾ ?

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂಥಾದ್ದು ರೆಕಾರ್ಡ್‌ಗೆ ಹೋಗುತ್ತದೆ. ಅದಕ್ಕೆ ಮೊದಲು ನಾನು ಹೇಳುವುದೇನೆಂದರೆ ನಾವು ಅಮೌಂಟ್ ಬಾರೋ ಮಾಡ ಬೇಕಾಗಿದ್ದದ್ದು ಮೂರು ಸಾವಿರದ ಐವತ್ತು ಕೋಟಿ ರೂಪಾಯಿಗಳು, ಇದನ್ನು ತಾವು ಬೇಕಾದರೆ ಬರೆದುಕೊಳ್ಳಿ, ಆಮೇಲೆ ಇದು ಸರಿಯಾಗಿ ಇದೆಯೋ ಇಲ್ಲವೋ ಎಂಬುದನ್ನು ನೋಡೋಣ. ನಾವು ಒಟ್ಟು ಮೂರು ಸಾವಿರದ ಐವತ್ತು ಕೋಟಿ ರೂಪಾಯಿಗಳ ಸಾಲ ಎತ್ತಬೇಕೆಂದು ತೀರ್ಮಾನ ಮಾಡಿದೆವು. ಇದುವರೆಗೂ ಅಂದರೆ 1995 ರಿಂದ 1998 ರವರೆಗೆ ಸಾಲ ಎತ್ತಿರುವಂಥಾದ್ದು ಎರಡು ಸಾವಿರದ ನೂರ ನಲವತ್ತೈದು ಕೋಟಿ ರೂಪಾಯಿಗಳಾಗಿದ್ದು, ಯು ಕೆ ಪಿಗೆ ಖರ್ಚು ಮಾಡಿರುವಂಥಾದ್ದು ಮೂರು ಸಾವಿರ ಕೋಟಿ ರೂಪಾಯಿಗಳಾಗಿವೆ. ಸ್ಟೇಟ್ ಗೌವರ್ನ್‌ಮೆಂಟ್‌ನಿಂದ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. Interest funded by the government Rs.355 crores, funded to the work by the government Rs.633 crores. Total funding is Rs.989.67 crores. spent is Rs.294 crores Raised is Rs.245 crores.

ಈ ಫಿಗರ್ ನಿಮಗೆ ಬೇಕಾದರೆ ಕಳುಹಿಸಿಕೊಡುತ್ತೇನೆ. ತಾವು ದಯಮಾಡಿ ಇದನ್ನು ವೆರಿಫೈ ಮಾಡಿಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ : ನನಗೆ ಆ ಫಿಗರ್ ಬೇಕಾಗಿಲ್ಲ. 1997-98 ರ ಕೃಷ್ಣ ಜಲ ಭಾಗ್ಯ ನಿಗಮದ 4 ನೇ ವಾರ್ಷಿಕ ವರದಿ ಇದೆ. ಇದು ಆಥರೈಜ್ಡ್ ರಿಪೋರ್ಟ್ ಆಗಿದೆ. ನಿಮ್ಮ ನಿಗಮದ್ದು 738.92 ಕೋಟಿ ರೂಪಾಯಿಗಳು, ಸರ್ಕಾರದ ಕಾಂಟ್ರಿಬ್ಯೂಷನ್ 46.68 ಕೋಟಿ ರೂಪಾಯಿಗಳು, ಒಟ್ಟು ಖರ್ಚು ಮಾಡಿರುವಂಥಾದ್ದು 785.60 ಕೋಟಿ ರೂಪಾಯಿಗಳಾಗಿದೆ. ಈಗ ನೀವು 46.68 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಿಮ್ಮ ಸರ್ಕಾರದ ಕಾಂಟ್ರಿಬ್ಯೂಷನ್ ಏನು ? ನಾವು ನಮ್ಮ ಲೆಕ್ಕಚಾರದ ಪ್ರಕಾರ ಆ ಸಮಯದಲ್ಲಿ 255 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ನೀವು ಕೋನೇಪಕ್ಷ 1997-98 ರಲ್ಲಿ 650 ಕೋಟಿ ರೂಪಾಯಿಗಳನ್ನು ಸರ್ಕಾರದ ಕಾಂಟ್ರಿಬ್ಯೂಷನ್ ಕೊಡಬೇಕಾಗಿತ್ತು. ಆದರೆ ನೀವು ಕೊಡಲಿಲ್ಲ. ಇದು ಜನರ ಜೀವಾಳದ ನದಿಯಾಗಿದೆ. ನಿಮಗೆ ಇರಿಗೇಷನ್ ಮುಖ್ಯವಾಗಲಿಲ್ಲ. ಇದರ ಹಣವನ್ನು ಡೈವರ್ಟ್ ಮಾಡಿದ್ದೀರಿ. It is a diversion which is not justified at all. ಸರ್ಕಾರ ಮತ್ತು ನಿಗಮದ ಒಟ್ಟು ಖರ್ಚು 785 ಕೋಟಿ ರೂಪಾಯಿಗಳಲ್ಲಿ ಸುಮಾರು 168 ಕೋಟಿ ರೂಪಾಯಿಗಳು ಆಗಿದೆ. ಇನ್ನು ಸುಮಾರು 560 ಕೋಟಿ ರೂಪಾಯಿಗಳಲ್ಲಿ ಮೂರನೆ ಒಂದು ಭಾಗ ಸ್ಯಾಲರಿ ಎಂದರೆ ಅದು ಸುಮಾರು 160 ಕೋಟಿ ರೂಪಾಯಿಗಳಾದರೂ ಆಗಬಹುದು. 572 ಕೋಟಿ ರೂಪಾಯಿಗಳಲ್ಲಿ 160 ಕೋಟಿ ರೂಪಾಯಿಗಳ್ನು

ಕೊಟ್ಟರೆ 340-345 ಕೋಟಿ ಖರ್ಚಾಗಿದೆ. ಇವರ ನಿಜವಾದಂತಹ ಖರ್ಚು ಕೆಲಸಕ್ಕೆ 340 ಕೋಟಿ ರೂಪಾಯಿಗಳಾಗಿವೆ. ಆ 340 ಕೋಟಿ ರೂಪಾಯಿಗಳಲ್ಲಿ ನೀವು ಹೇಳಿದಂತಹ ನೂರು ಕೋಟಿ ರೂಪಾಯಿಗಳ ಎಂಟ್ರುಸ್ಟ್‌ಮೆಂಟ್ ಏನಿದೆ, ಅದನ್ನು ಮೈನಸ್ ಮಾಡಿದರೆ ಎಷ್ಟಾಗುತ್ತದೆ ? 106 ಕೋಟಿ ರೂಪಾಯಿಗಳು ಇದೆ. ಈಗ ವಸ್ತು ಸ್ಥಿತಿ ಜಾಗದಲ್ಲಿ ಅಷ್ಟೇ ಇರುವಂಥಾದ್ದು. This is what they have done, what they have achieved. If their report is correct. If this is not the report, ಈ ರಿಪೋರ್ಟ್ ಸರಿಬರಲಿಲ್ಲವೆಂದು ಹೇಳಿ, ಅದನ್ನು ಸರಿ ಮಾಡಬೇಕೆಂದು ಹೇಳಿ, ನಿಮಗೆ ಈಗ ಲೆಕ್ಕ ಸಿಗುತ್ತದೆಯೇ ?

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ವೀರಪ್ಪಮೊಯಿಲಿಯವರು ಹೇಳುವಂಥಾದ್ದು ಸರಿ, ಆದರೆ ನಾನು ಹೇಳುವಂಥಾದ್ದು ಏನೆಂದರೆ ಈ ರಿಪೋರ್ಟ್ ಬಗ್ಗೆ ಫೈನಾನ್ಸ್ ಸೆಕ್ರೆಟರಿರವರ ಹತ್ತಿರ ಮಾತನಾಡಿದೆ. Interest amount paid from the government to the centre. ವರ್ಕ್ಸ್‌ಗೆ ಖರ್ಚು ಮಾಡಿರುವಂತಹ 693 ಕೋಟಿ ರೂಪಾಯಿಗಳು ಗೌವರ್ನ್‌ಮೆಂಟ್ ಹಣವಾಗಿರುವುದರಿಂದ ಇದು ಕೃಷ್ಣ ಜಲ ಭಾಗ್ಯ ನಿಗಮದ ರಿಪೋರ್ಟ್‌ನಲ್ಲಿ ಬಂದಿಲ್ಲ. ಇದು ಸರಿಯಾದ ಫಿಗರ್ ಆಗಿದೆ.

ಶ್ರೀ ಎಂ.ವೀರಪ್ಪಮೊಯಿಲಿ : ನಾನು ಭಾಷಣವನ್ನು ಮಾಡುವಾಗಲೇ ಹೇಳಿದ್ದೇನೆ. 1997-98 ರಲ್ಲಿ 588 ಕೋಟಿ ರೂಪಾಯಿಗಳು, 1998-99 ರಲ್ಲಿ 567 ಕೋಟಿ ರೂಪಾಯಿಗಳು ಒಟ್ಟು 1.155 ಕೋಟಿ ರೂಪಾಯಿಗಳು ಇದೆ. ಅದರಲ್ಲಿ ಶೇ.30 ರಷ್ಟು ಹೋದರೆ ಎಷ್ಟು ಇದೆಯೋ ಅಷ್ಟನ್ನೇ ನೀವು ಎರಡು ವರ್ಷಗಳಲ್ಲಿ ಖರ್ಚು ಮಾಡಿದ್ದೀರಿ. ಮತ್ತೆ ನೂರು ಕೋಟಿ ರೂಪಾಯಿಗಳನ್ನು ತಿಂದು ಹಾಕಿದ್ದಾರೆ, ಅದನ್ನು ಆ ಒಂದು ವರ್ಷದಲ್ಲಿ ಕಳೆಯಬೇಕು, ಆಮೇಲೆ ಎಂಟ್ರುಸ್ಟ್‌ಮೆಂಟ್ ಮಾಡಿದ್ದು ಏನು ಇದೆಯೋ ಅದು ಪ್ರತ್ಯೇಕವಾಗುತ್ತದೆ. ಆದುದರಿಂದ ಇಲ್ಲಿ ಯಾರು ಬಿಟ್ರೇ ಮಾಡಿದ್ದಾರೆ. ಅದು ನಮ್ಮ ಪಕ್ಷವೋ, ಅವರ ಪಕ್ಷವೋ ಎಂಬುದಕ್ಕೆ ಜನರೇ ಉತ್ತರವನ್ನು ಕೊಡುತ್ತಾರೆ. ಇದರ ಬಗ್ಗೆ ನಾನು ಇನ್ನು ಹೆಚ್ಚಿಗೆ ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಇನ್ನು ಕೊನೆಯದಾಗಿ ಅಂತರ ರಾಜ್ಯ ಯೋಜನೆಗಳಾದ ಮಹಾರಾಷ್ಟ್ರದ ಬಿಯೋಪುರಿ ಕರ್ನಾಟಕ ರಾಜ್ಯದ ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೆಯ ಹಂತ, ಹಾಗೂ ಆಂಧ್ರ ಪ್ರದೇಶದ ತೆಲುಗು ಗಂಗಾ ಯೋಜನೆಗಳ ಬಗ್ಗೆ ಟಿಪ್ಪಣಿ ಸೂಚಿಕೆ ನಿಮ್ಮ ಸರ್ಕಾರ ಕೊಟ್ಟಿರುವಂತಹ ಪೇಜ್ ನಂಬರ್ 10 ರಲ್ಲಿ ಇರುವಂಥಾದ್ದನ್ನು ಓದಿ ಹೇಳಿದ್ದೇನೆ. ಮೈಸೂರಿನಲ್ಲಿ ಕಾನ್‌ಸೆನ್‌ಸಸ್ ಆಗಿದೆ. ದಿ : 22-8-1990 ರಂದು ಈ ಮೂರು ರಾಜ್ಯಗಳ ಮಧ್ಯೆ ಒಪ್ಪಂದದ ರೀತಿಯಲ್ಲಿ ಆಗಿದೆ. For framing these issues all the three states have agreed, unanimously, There was no dispute.

ಈ ಇಷ್ಯೂ ಆದಮೇಲೆ ಮಹಾಬಲೇಶ್ವರ ಶ್ರೀಶೈಲಂನಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ಚುನಾವಣೆ ಬಂತು ಎಂದು ತೆಗೆದುಕೊಳ್ಳಲಿಲ್ಲ, ನೀವು ಒಂದು ಹೆಜ್ಜೆ ಮುಂದೆ ಹೋಗಿ ಈ ಮೀಟಿಂಗ್ ಮಾಡಿದ್ದರೆ ನಿಮ್ಮ ಪ್ರಾಮಾಣಿಕತೆಯನ್ನು ನಾವು ಈ ಇಷ್ಯೂ ಬಗ್ಗೆ ಒಪ್ಪಿಕೊಳ್ಳುತ್ತಿದ್ದೆವು. ಆದುದರಿಂದ ದಯಮಾಡಿ ಸರಿಯಾಗಿ ವಿಚಾರ ಮಾಡಿ ಉತ್ತರ ಕೊಡಬೇಕು. ನಮಗೆ ನೀವು ಕೆಲಸ ಮಾಡದೆ ಇದ್ದದ್ದಕ್ಕೆ ಮನೆಗೆ ಹೋಗಿದ್ದೀರಿ ಎಂದು ಹೇಳಿದ್ದೀರಿ. ನಾನು ಕೆಲಸ ಮಾಡದೇ ಮನೆಗೆ ಹೋಗಿದ್ದಲ್ಲ, ಯಾರು ಮಾಡದೇ ಇದ್ದ ಕೆಲಸವನ್ನು ನಾವು ಮಾಡಿದ್ದೇವೆ. ನಾವು ಇರಿಗೇಷನ್‌ನಲ್ಲಿ, ಫೈನಾನ್ಸಿಯಲಿ, ಭೌತಿಕ ಅಭಿವೃದ್ಧಿ ಎರಡರಷ್ಟು ಮಾಡಿದ್ದೇವೆ. ಇರಿಗೇಷನ್ ಆಗಲಿ, ಹೌಸಿಂಗ್

ಆಗಲಿ, ಮತ್ತೆ ನ್ಯೂ ಸಿಸ್ಟಂ ಆಗಿರುವ ಸಿ ಇ ಟಿ ಸಿಸ್ಟಂ ಅನ್ನು ಇಂಟ್ರೊಡ್ಯೂಸ್ ಮಾಡಿದ್ದೇವೆ. ಟೀಚರ್ಸ್ ಅನ್ನು ಅಪಾಯಿಂಟ್ ಮಾಡಿದ್ದೇವೆ. ಕರ್ನಾಟಕ ರಾಜ್ಯ ಪಂಚಾಯತ್ ಆಕ್ಟ್ 1993ನ್ನು ಮಾಡಿದ್ದೇವೆ. ನಾವು ಏನು ಕೆಲಸ ಮಾಡಬೇಕಾಗಿತ್ತೋ ಅದಕ್ಕಿಂತ ಹೆಚ್ಚಿಗೆ ಕೆಲಸವನ್ನು ಮಾಡಿದ್ದೇವೆ. ಆದರೆ ಈ ದೇಶದಲ್ಲಿ ಚುನಾವಣೆಗಳು ಬರೀ ಮೆರಿಟ್ ಮೇಲೆ ಆಗುವುದಿಲ್ಲ. ಲಕ್ನೊದಲ್ಲಿ ದಿ:22-11-1994 ರಂದು ಯಾವುದೋ ಒಂದು ಹಾಸ್ಟೆಲ್‌ನ ರೈಡ್ ಆಯಿತು ಎಂದು 106 ಕ್ಷೇತ್ರಗಳು ನಮ್ಮ ಕೈ ತಪ್ಪಿ ಹೋಯಿತು. ಈ ಘಟನೆ ನಡೆಯದೇ ಹೋಗದಿದ್ದರೆ I would have been the biggest hero chief Minister in the country.

ಅದು ತಪ್ಪಿಹೋಯಿತು. ಈ ರೀತಿ ಆಕಸ್ಮಿಕಗಳು, ಅವಗಢಗಳು ರಾಜ್ಯಕ್ಕೆ ಬರುತ್ತವೆ. ನಮಗೆ ಅದರ ಬಗ್ಗೆ ಚಿಂತೆ ಇಲ್ಲ. I have no regret for what I have done.

ಶ್ರೀ ಟಿ.ಬಿ.ಜಯಚಂದ್ರ : (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ ಇವತ್ತು ಬಹಳ ಮುಖ್ಯವಾದ ವಿಷಯವನ್ನು ನಿಲುವಳಿ ಸೂಚನೆಯ ಮುಖಾಂತರ ಪ್ರಸ್ತಾಪ ಮಾಡಿರುವಂಥಾದ್ದು. ತಮ್ಮ ಆಡಳಿತದ ಅವಧಿಯಲ್ಲಿ 524 ಮೀಟರ್‌ಗಳಷ್ಟು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಎತ್ತರಿಸಬೇಕಾಗಿತ್ತು, ಅದನ್ನು ನೀವು ಎತ್ತರಿಸಲಿಲ್ಲ, ಎಂಬುದು ಮುಖ್ಯವಾದುದು. ಸುಪ್ರೀಂ ಕೋರ್ಟ್‌ನ ಶ್ರೀ ಎಫ್.ಎಸ್.ನಾರಿಮನ್‌ರವರ ಅಫಿಡೆವಿಟ್ ಪ್ರಕಾರ ಅದು 509 ಮೀಟರ್‌ಗೆ ನಿಂತು ಹೋಯಿತು. ಇದನ್ನು ನಾವು ಇವತ್ತು ಮುಖ್ಯವಾಗಿ ವಿಷಯ ಎತ್ತಿರುವಂಥಾದ್ದು 524 ಮೀಟರ್‌ಗೆ ಎತ್ತರಿಸಿದ್ದರೆ ಆಗ ನೀವು ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡಿದಂತೆ ಆಗುತ್ತಿತ್ತು. ಆದರೆ ಅದನ್ನು ನೀವು 509 ಮೀಟರ್‌ಗೆ ನಿಲ್ಲಿಸಿರುವುದರಿಂದ ಇದಕ್ಕೆ ಕಾರಣರು ಯಾರು ಎಂಬುದನ್ನು ನೀವು ವಿವರವಾಗಿ ಹೇಳಬೇಕಾಗಿತ್ತು. ಆದರೆ ನೀವು ಅದನ್ನು ಪ್ರಸ್ತಾಪ ಮಾಡಲಿಲ್ಲ. ತಾವು ಮಾತನಾಡಬೇಕಾದರೆ ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಈಗಾಗಲೇ 729 ಟಿ.ಎಂ.ಸಿ. ನೀರಿನಲ್ಲಿ 711 ಟಿ.ಎಂ.ಸಿ. ನೀರು ಎಗೆನೆಸ್ಟ್ ಪ್ರಾಜೆಕ್ಟ್ ಅಲೊಕೇಷನ್ ಆಗಿದೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಅದು ಅಲೊಕೇಷನ್ ಆಗಿರಬಹುದು. It is on paper. That is not correct. ಈಗಾಗಲೇ ತಾವು ಒರಿಜಿನಲ್ ಸೂಟ್‌ಸುಪ್ರೀಂ ಕೋರ್ಟ್ ಮುಂದೆ ಎಕ್ಸ್‌ಚೇಂಜ್ ಆಫ್ ಪೇಪರ್ ಆಗಿದೆ, ಎಕ್ಸಚೆಂಜ್ ಆಫ್ ವ್ಯೂಸ್ ಆಗಿದೆ. ಅದನ್ನು ನಮ್ಮ ಸ್ಟೇಟ್‌ಮೆಂಟ್‌ನಲ್ಲಿ ಸುಮ್ಮನೆ ಎಕ್ಸ್‌ಚೇಂಜ್ ಮಾಡಿಕೊಂಡಿದ್ದೇವೆನ್ನುವಂತಹ ಮಾತನ್ನು ಹೇಳಿದ್ದೀರಿ. ನಾನು ಅದನ್ನು ಅಲೋಕೇಷನ್ ಆಗಿದೆ ಎಂದು ತಿಳಿದುಕೊಂಡಿದ್ದೆ, ಆದರೆ ನೀವು ಕಮಿಟ್ ಆಗಿದೆ ಎನ್ನುವಂತಹ ಮಾತನ್ನು ಹೇಳಿದ್ದೀರಿ. ಈಗ ನೀವು ಎಕ್ಸ್‌ಚೇಂಜ್ ಮಾಡಿಕೊಂಡಿದ್ದೀರಲ್ಲಾ ಅದನ್ನು ಆ ರಾಜ್ಯಗಳು ಒಪ್ಪಿಕೊಂಡಿದ್ದಾರಾ ? ನಾಳೆ ದಿವಸ ಬಚಾವತ್ ತೀರ್ಪು ರಿವ್ಯೂವಾಗುವಂತಹ ಸಂದರ್ಭ ಬಂದಾಗ ನೀವು ಕೊಟ್ಟಂತಹ ಈ 711 ಟಿ.ಎಂ.ಸಿ ನೀರು ಏನಿದೆ, ಇದು ಶೇ.100 ರಷ್ಟು ಬಚಾವತ್ ತೀರ್ಪಿನ ಪ್ರಕಾರ does it holds good. ಎನ್ನುವಂಥಾದ್ದು, ಇನ್ನು ಎರಡನೆಯದಾಗಿ ನಿಮ್ಮ ಪ್ಲಾನ್ಡ್ ಅಲೋಕೇಷನ್ ಪ್ರಕಾರ 173 ಟಿ.ಎಂ.ಸಿ. ನೀರನ್ನು ಆಲಮಟ್ಟಿಯಲ್ಲಿ ಸ್ಟೋರ್ ಮಾಡಬೇಕಾಗಿತ್ತು. ನೀವು ಕೊಟ್ಟ ಅಫಿಡೆವಿಟ್ ಪ್ರಕಾರ ಎಷ್ಟು ಆಯಿತೆಂದರೆ 155 ಟಿ.ಎಂ.ಸಿ. ಆಗಿದೆ, ಎಂದರೆ ಇನ್ನೂ 18 ಟಿ.ಎಂ.ಸಿ. ನೀರಿನ ಹಕ್ಕು ಸಧ್ಯಕ್ಕೆ ಇಲ್ಲ. ಇದು ಮುಂದೆ ಏನು ಆಗುತ್ತದೆಯೋ ಆ ಪ್ರಶ್ನೆ ಬೇರೆಯಾಗುತ್ತದೆ. ಇದನ್ನು ನೀವು ಹೇಳಿದಾಗ ಶಾಶ್ವತವಾಗಿ ಈ ಹಕ್ಕನ್ನು ಕಳೆದುಕೊಂಡಂತಹ ಸಂದರ್ಭದಲ್ಲಿ ಅದರ ಪ್ರಶ್ನೆ ಏನು ?

ಈಗ ನೀವು ಹೇಳಿದ ಹಾಗೆ ಇನ್ನು ಕೇವಲ 28 ಟಿ.ಎಂ.ಸಿ ನೀರನ್ನು ಮಾತ್ರ ಯುಟಿಲೈಜ್ ಮಾಡಬೇಕೆನ್ನುವಂತಹ ಮಾತನ್ನು ಹೇಳಿದ್ದೀರಿ.

6.10 ಪಿ.ಎಂ

ಅದು ಹೇಗೆ ? ಏಕೆಂದರೆ ನೀವು ಹೇಳತಕ್ಕಂಥದ್ದರ ಬಗ್ಗೆ ನಾಳೆ ಪತ್ರಿಕೆಗಳಲ್ಲಿ ಬರುತ್ತದೆ ಮತ್ತು ಅದನ್ನು ಆಂಧ್ರಪ್ರದೇಶದಲ್ಲಿ ಮಹಾರಾಷ್ಟ್ರಗಳಲ್ಲಿ ಎಲ್ಲರೂ ಓದುತ್ತಾರೆ. ನಿಮ್ಮ ಯುಟಿಲೈಜೇಷನ್ ಬಗ್ಗೆ ನಿಜವಾಗಿಯೂ 711 ಟಿ.ಎಂ.ಸಿ . ನೀರಿನ 100 ಪರ್ಸೆಂಟ್ ಅಲೋಕೇಷನ್ ಕಮಿಟ್‌ಮೆಂಟ್‌ನ್ನು ಬೇರೆ ರಾಜ್ಯದವರು ಒಪ್ಪಿಕೊಂಡರೆ ನಾನೂ ಕೂಡ ಮೆಚ್ಚುತ್ತೇನೆ. ಇದರ ಬಗ್ಗೆ ತಾವು ಕ್ಲಾರಿಫಿಕೇಷನ್ ಕೊಡಬೇಕಾಗಿತ್ತು. ನಾವು ಮುಖ್ಯವಾಗಿ ಪ್ರಸ್ತಾಪ ಮಾಡಿರುವುದು ಇದರ ವಿಷಯವಾಗಿಯೇ ವಿನಃ ನೀವು ಬೇರೆ ಏನೆಲ್ಲಾ ಹೇಳಿದರಲ್ಲಾ ಅದು ಅಷ್ಟು ಮುಖ್ಯವಾದಂಥ ವಿಷಯವಲ್ಲ. ನಿಜ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಅಚೀವ್‌ಮೆಂಟ್ ಏನಾಯಿತು. ತಮ್ಮ ಜನತಾದಳ ಸರ್ಕಾರದ ಆಡಳಿತ ಕಾಲದಲ್ಲಿ ಏನಾಯಿತು ಎನ್ನುವುದನ್ನು ಶ್ರೀಮಾನ್ ವೀರಪ್ಪ ಮೊಯಿಲಿಯವರು ಈಗಾಗಲೇ ಹೇಳಿದರು. ನಿಮ್ಮ ಸರ್ಕಾರದಲ್ಲಿ ಅಚೀವ್‌ಮೆಂಟ್ ಆಗಿರುವುದು only a ten percent of the congress regime. ಆದರೆ ನಿಮ್ಮ ಸರ್ಕಾರದ ಆಡಳಿತದಲ್ಲಿ, ಈ ಯೋಜನೆಗೇ ಎಂದು ಎಷ್ಟು ಹಣ ಖರ್ಚಾಗಿದೆ ? ಆ ಹಣ ಎಲ್ಲೆಲ್ಲಿ ಹೋಗಿದೆ ಎನ್ನತಕ್ಕಂಥದ್ದರ ಬಗ್ಗೆ ಸಿ.ಎ.ಜಿ.ವರದಿ ಇದೆ, ಎಲ್ಲರೂ ಕೂಡ ವರದಿ ಕೊಟ್ಟಿದ್ದಾರೆ. ಅದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡಬೇಕೆಂದು ಕೇಳಿದ್ದೇವೆ. ಈಗಲೂ ಕೂಡ ಎನ್‌ಕ್ವೈರಿ ಮಾಡಬೇಕೆಂದು ಕೇಳುತ್ತಿದ್ದೇನೆ. ಈ ನಾಲ್ಕು ಕ್ಲಾರಿಫಿಕೇಷನ್ಸ್ ನಮ್ಮ ನಿಲುವಳಿ ಸೂಚನೆಯನ್ನು ತಂದಿರುವ ಹಿನ್ನೆಲೆಯಲ್ಲಿ ಬಹಳ ಪ್ರಾಮುಖ್ಯವಾಗಿದೆ ಮತ್ತು ರಾಜ್ಯದ ಜನತೆ ಕೂಡ ಅರ್ಥ ಮಾಡಿಕೊಳ್ಳಬೇಕಾಗಿದೆ. ದಯವಿಟ್ಟು ಈ ಅಂಶಗಳಿಗೆ ಉತ್ತರ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಬೃಹತ್ ನೀರಾವರಿ ಸಚಿವರು ಬಹಳ ಸುದೀರ್ಘವಾದ ಉತ್ತರವನ್ನು ಹೇಳಿದ್ದಾರೆ. ಇದರಲ್ಲಿ ನಾವು ಅತ್ಯಂತ ಸೀಮಿತವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ಅಂದರೆ 2000 ಇಸವಿಯೊಳಗೆ ನಮಗೆ ನಿಗದಿಪಡಿಸಿರತಕ್ಕಂಥ ನೀರನ್ನು ಬಳಕೆ ಮಾಡಿತ್ತೇವೆಯೋ ಅಥವಾ ಇಲ್ಲವೋ ಇದು ಪ್ರಶ್ನೆ. ನಿಮ್ಮ ತದ್ವಿರುದ್ದವಾದಂಥ ಹೇಳಿಕೆಗಳಿಂದಾಗಿ ಬಳಕೆ ಮಾಡುವುದಕ್ಕಾಗುತ್ತಿಲ್ಲ. ಅದಕ್ಕೋಸ್ಕರ ನಮ್ಮ ಪ್ರಸ್ತಾವನೆಯನ್ನು ಇಲ್ಲಿ ಮಾಡಿದ್ದೇವೆ. 2000 ಇಸವಿಯೊಳಗೆ ನಾವು ಇಷ್ಟು ಅಲೊಕೇಟೆಡ್ ವಾಟರ್‌ನ್ನು ಉಪಯೋಗ ಮಾಡುತ್ತೇವೆ ಎಂದು ಸಚಿವರಾದ ತಾವು ಹೇಳಿದಿರಲ್ಲವೇ ? ಆಲಮಟ್ಟಿ ಒಂದೇ ಪ್ರಾಜೆಕ್ಟ್ ಅಲ್ಲ. ಹಲವಾರು ಪ್ರಾಜೆಕ್ಟ್‌ಗಳು ಇವೆ. ಯಾವಯಾವುದರಲ್ಲಿ ಎಷ್ಟೆಷ್ಟು ನೀರನ್ನು ನಾವು ಬಳಕೆ ಮಾಡುವುದಕ್ಕೆ ಸರ್ಕಾರ ಗೊತ್ತುಮಾಡಿದೆ ? 2000 ಇಸವಿಯೊಳಗಾಗಿ ಎಷ್ಟು ನೀರನ್ನು ಬಳಕೆ ಮಾಡುವುದಕ್ಕೆ ಆಗುತ್ತದೆ ? ಎಷ್ಟು ಬಳಕೆ ಮಾಡುವುದಕ್ಕಾಗುವುದಿಲ್ಲ ಅನ್ನುವುದನ್ನು ಸರಿಯಾಗಿ ವಿವರ ಕೊಡುವುದು ಬಿಟ್ಟು, ಚುಳುಕಿನಾಲಾ ಮತ್ತೊಂದು ನಾಲಾ ಎಂದು ಈ ರೀತಿ ಕತೆ ಹೇಳಿದರೆ ಹೇಗೆ?ಇದು ಯಾವ ಕಥೇರಿ? ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ಎದ್ದು ರಾಮ ಯಾರು ಸೀತೆ ಯಾರು ಎಂದು ಕೇಳಿದ ರೀತಿ ಈ ವಿಚಾರವನ್ನು ತಂದಿಟ್ಟದ್ದೀರಲ್ಲಾ, ಇದಕ್ಕೆ ನಾವು ಏನು ಹೇಳಬೇಕು?ನಮಗೆ ಇಷ್ಟಕ್ಕೆ ಮಾತ್ರ ಸೀಮಿತವಾಗಿ ಉತ್ತರ ಹೇಳಿ. ನಮಗೆ ಭಾಷಣ ಬೇಕಾಗಿಲ್ಲ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಬಿಜಾಪುರ) : ಮಾನ್ಯ ಉಪಾಧ್ಯಕ್ಷರೆ, ಯಾವುದಕ್ಕೆ ಸೀಮಿತವಾಗಿ ಉತ್ತರವನ್ನು ಕೊಡಬೇಕಾಗಿತ್ತೋ ಅದನ್ನು ಬಿಟ್ಟು ಇಡೀ ಕೃಷ್ಣಾ ಮೇಲ್ದಂಡೆ ಯೋಜನೆಯ ಇತಿಹಾಸವನ್ನು ಮಾನ್ಯ ಬೃಹತ್ ನೀರಾವರಿ ಸಚಿವರು ಹೇಳಿದ್ದಾರೆ. ಆದರೆ 31-5-2000 ಇಸವಿಯೊಳಗಾಗಿ ನಮ್ಮ ಪಾಲಿನ 729 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಇದರ ಬಗ್ಗೆ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ? ಅದಕ್ಕಾಗಿ ಎಷ್ಟು ಹಣವನ್ನು ತೆಗೆದಿಡಲಾಗಿದೆ? ಬಚಾವತ್ ತೀರ್ಪಿನ ಪ್ರಕಾರ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಕೇವಲ 342 ದಿವಸಗಳು ಮಾತ್ರ ಬಾಕಿ ಇದೆ. ಮುಳವಾಡ ಏತ ನೀರಾವರಿ ಬಗ್ಗೆ ಸ್ಪಷ್ಟವಾದಂಥ ಯಾವುದೇ ವಿಚಾರವನ್ನು ಅವರು ಹೇಳಲಿಲ್ಲ ನಮ್ಮ ಜಿಲ್ಲೆಯ ಸಚಿವರು ಅನೇಕ ಬಾರಿ ಗುತ್ತಿಬಸವಣ್ಣ ಯೋಜನೆಗೆ ಮಂಜೂರಾತಿ ಆಗಿದೆ ಎಂದು ಹೇಳುತ್ತಾರೆ. ಜೊತೆಗೆ ಭೀಮ ನದಿಗೆ ಕಟ್ಟಬೇಕಾದಂಥ ನಾಲ್ಕು ಬ್ಯಾರೇಜ್ ಬಗ್ಗೆ ಸಹ ಉಲ್ಲೇಖ ಮಾಡಿದ್ದಾರೆ. ಆದರೆ ಭೀಮ ನದಿ ಯೋಜನೆ ಕೆಲಸ ಪ್ರಾರಂಭವಾಗಿದೆ, ಮುಳವಾಡ ಏತ ನೀರಾವರಿ ಕೆಲಸ ನಡೆಯುತ್ತಿದೆ, ಭೀಮಾ ನದಿಗೆ ಬ್ಯಾರೇಜ್‌ಗಳು ಆಗುತ್ತಿವೆ, ಗುತ್ತಿಬಸವಣ್ಣ ಯೋಜನೆ ನಡೆಯುತ್ತಿದೆ ಹೀಗೆ ಎಲ್ಲವನ್ನೂ ವೇಗ್ ಆಗಿ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ದಯವಿಟ್ಟು 31-5-2000 ಇಸವಿಯೊಳಗಾಗಿ ಸಂಪೂರ್ಣವಾಗಿ ನೀರಿನ ಬಳಕೆ ಮಾಡಿಕೊಳ್ಳುತ್ತೇವೆಯೇ ಎನ್ನುವುದಕ್ಕೆ ಸೀಮಿತವಾಗಿ ಮಾತ್ರ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಮಹಾರಾಷ್ಟ್ರದವರು ನಮ್ಮ ಮೇಲೆ ಮಾಡಿದಂಥ ಆಕ್ಷೇಪಣೆಗೆ ಕೂಡ ಸ್ಪಷ್ಟವಾಗಿ ಏನೂ ಹೇಳಲಿಲ್ಲ ಮಾನ್ಯ ಮುಖ್ಯಮಂತ್ರಿಗಳು ನಾವು ವಿಶ್ವಾಸವನ್ನು ಇಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡಲಾಗಿದೆ ? ಯಾವುದೇ ಯೋಜನೆಗಳಿಗೆ ಯಾವುದೇ ತರಹದ ಅಡೆತಡೆಗಳು ಆಗದಂತೆ. ಸರ್ಕಾರ ಯಾವ ಯಾವ ತರಹದ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ದಯವಿಟ್ಟು ಹೇಳಬೇಕು

ಶ್ರೀ ಡಿ.ಆರ್ ಪಾಟೀಲ್ (ಗದಗ) ಮಾನ್ಯ ಉಪಾಧ್ಯಕ್ಷರೆ, ಮಹಾರಾಷ್ಟ್ರ ಸರ್ಕಾರದವರು 1997ರಲ್ಲಿ ಏನು ಅಫಿಡೆಮಿಟ್ ಕೊಟ್ಟಿದ್ದರು ಅದು ನಮ್ಮ ಸರ್ಕಾರಕ್ಕೆ ಅನುಕೂಲವಾಗಿಯೇ ಇತ್ತು. ಆದರೆ 1999ರೊಳಗೆ ಅವರು ಏನು ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ ಅದು ನಮ್ಮ ಸರ್ಕಾರಕ್ಕೆ ಅನಾನುಕಾಲವಾಗಿದೆ. ಕಳೆದ ಎರಡು ವರ್ಷದೊಳಗೆ ಶ್ರೀವಾಜಪೇಯಿ ಮತ್ತು ಶ್ರೀಚಂದ್ರಬಾಬುನಾಯಿಡು ಇವರಿಬ್ಬರ ಗೆಳೆತನವಾಯ್ತಲ್ಲವೇ, ಅದಕ್ಕೆ ಏನಾದರೂ ನಮಗೆ ಅಡ್ಡ ಆಗಿದೆ ಹೇಗೆ ಎನ್ನುವುದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಕೆ.ಎನ್.ನಾಗೇಗೌಡ (ಬಹೃತ್ ನೀರಾವರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ನಮಗೆ ಇರತಕ್ಕಂಥ 729 ಟಿಎಂಸಿ ನೀರಿನಲ್ಲಿ 223 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ತುಂಗಭದ್ರ ಇವೆಲ್ಲಾ ಪ್ರಾಜೆಕ್ಟ್‌ಗಳು ಆಗಲೇ ಕಂಪ್ಲೀಟ್ ಆಗಿಬಿಟ್ಟಿವೆ. ಆನ್‌ಗೋಯಿಂಗ್ ಪ್ರಾಜೆಕ್ಟ್ 488 ಟಿ.ಎಂ.ಸಿ.ಗೆ ಸಂಬಂಧಪಟ್ಟ ಹಾಗೆ ಯಾವ ಯಾವ ಪ್ರಾಜೆಕ್ಟ್‌ಗಳು ಯಾವ ಯಾವ ಸ್ಟೇಜ್‌ನಲ್ಲಿ ಇವೆ ಎನ್ನುತಕ್ಕಂಥ ಮಾತನ್ನು ಹೇಳಿದೆ. ಅಂದರೆ 712 ಟಿ.ಎಂ.ಸಿ.ಗೆ ಯುಟಿಲೈಜೇಷನ್ ಕಮಿಟ್‌ಮೆಂಟ್ ಆಗಿಹೋಗಿದೆ. ಇನ್ನು ಉಳಿದಿರತಕ್ಕಂದ್ದು 21ಟಿ.ಎಂ.ಸಿ. ನೀರು ಮಾತ್ರ. ಧೂದ್‌ಗಂಗಾ, ಭೀಮಾ ಮುಂತಾದ 4ಪ್ರಾಜೆಕ್ಟ್ ಬಗ್ಗೆ ತಮಗೆ ಆಗಲೇ ಹೇಳಿದೆ. ಇವೆಲ್ಲಾ ಟೆಕ್ನಿಕಲ್ ಕಮಿಟಿಯಲ್ಲಿ ಅಪ್ರೂವಲ್ ಆದರೆ 21ಟಿ.ಎಂ.ಸಿ.ಗೂ ಕೂಡ ಅವಕಾಶ ಆಗುತ್ತದೆ ಅದು 729 ಟಿ.ಎಂ.ಸಿ. ನೀರನ್ನು

ಉಪಯೋಗಿಸಿಕೊಳ್ಳುವುದಕ್ಕೆ ಇರತಕ್ಕಂಥ ಮಾಸ್ಟರ್‌ಪ್ಲಾನ್. ಇಷ್ಟು ವಾಟರ್ ಅಲೊಕೇಷನ್‌ಗೆ ಸಂಬಂಧಪಟ್ಟ ಹಾಗೆ ಆಯಿತು. ಬಚಾವತ್ ರಿಪೋರ್ಟ್ ಪ್ರಕಾರ ನಮ್ಮ ಇಂಟೆನ್‌ಷನ್ ಏನೆಂದರೆ ಒಂದು ಸಾರಿ ಆನ್‌ಗೋಯಿಂಗ್ ಕಮಿಟ್ ಆದರೆ.

that is called a committed irrigation potential. Clause 14 : "At any a time after 31st may 2000 this order may be reviewed or revised by a commpetent authority or a tribunal, but such review or revision shall not as far as possible disturb any utilisation that may have been undertaken by any State within the limits of the allocation made to it under the foregoing clauses."

...... ನಾನು ಜವಳಿಯವರ ಹತ್ತಿರ ಮೋಹನ್ ಕಾರ್ತಕಿಯವರ ಹತ್ತಿರ ಮಾತನಾಡಿ ನಿಮಗೆ ಹೇಳುತ್ತಿರುವುದು. ತುಂಗಭದ್ರಾ. ಭದ್ರಾ ಈ ಎರಡು ಪ್ರಾಜೆಕ್ಟಗಳು ಬಿಫೋರ್ ಬಚಾವತ್ ನಡೆಯಿತು. ಆಗ ಮಲಪ್ರಭಾ ಘಟಪ್ರಭಾ ಕಟ್ಟುತ್ತಾ ಇದ್ದಂಥ ಸಂದರ್ಭದಲ್ಲಿ ಅವನ್ನು ಅಕೌಂಟಿಗೆ ತೆಗೆದುಕೊಳ್ಳುತ್ತಾರೆ. ತೆಗೆದುಕೊಂಡಾಗ ಏನು ಹೇಳುತ್ತಾರೆಂದರೆ ಯಾವ ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳು ಇವೆ that is also called as a commitment utilisation,

ಅನ್ನುತಕ್ಕಂಥದ್ದು ಹೇಳುತ್ತಾರೆ ಇದರ ಬಗ್ಗೆ ಶ್ರೀನಂಜೇಗೌಡರ ಜೊತೆ ಬೆಳಿಗ್ಗೆ ಮಾತನಾಡಿದೆ, ಅದನ್ನು ಸರಿ ಎಂದು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಲೀಗಲ್ ಎಕ್ಸ್‌ಪರ್ಟ್‌ನ್ನು ನೀವು ಕೇಳಿಲ್ಲ ನಿಮ್ಮ ಅಡ್ಮಿಷನ್ ಪ್ರಕಾರ 21ಟಿ.ಎಂ.ಸಿ. ನೀರಿಗೆ ಅವಕಾಶ ಮಾಡಬೇಕು. ಹೌದಲ್ಲವೇ? 2000 ಇಸವಿಗೆ ಬಹಳ ವರ್ಷ ಇಲ್ಲ, ಕೇವಲ 6ತಿಂಗಳು ಮಾತ್ರ ಇದೆ. ಅದಕ್ಕೆ ಟೆಕ್ನಿಕಲ್ ಆಗಿ ಚರ್ಚೆ ಆಗಿಲ್ಲ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಚರ್ಚೆ ಆಗಿಲ್ಲ. ಏಜೆನ್ಸಿ ಫಿಕ್ಸ್ ಆಗಿಲ್ಲ, ಕೆಲಸ ಪ್ರಾರಂಭ ಮಾಡಿಲ್ಲ. ಆರು ತಿಂಗಳಲ್ಲಿ ಅಷ್ಟನ್ನೂ ಯುಟಿಲೈಜೇಷನ್ ಮಾಡಿಕೊಳ್ಳುತ್ತೇವೆಂದರೆ it is humanly impossible. Forget it. you must take it as if this quantity of water has not been utilised so far.

ಶ್ರೀ ಕೆ.ಎಸ್. ನಾಗೇಗೌಡ : .... 21 ಟಿ.ಎಂ.ಸಿ.ಗೆ ಪ್ಲಾನ್ ಮಾಡುವುದಕ್ಕೋಸ್ಕರ ಎಷ್ಟೆಷ್ಟು ಎಂದು ಆಲೊಕೇಷನ್ ಮಾಡಿದ್ದೇವೆ. ನಾನು ಆಗಲೇ ಅದನ್ನು ಓದಿದೆ. ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ನೋಡಿ.

ಶ್ರೀಕಾಗೋಡು ತಿಮ್ಮಪ್ಪ : ಓದುವುದು ಬೇಕಾಗಿಲ್ಲ for 21 tmc, there is no entrustment.

SRI K.N.NAGE GOWDA :- Entrustment has not taken place so far as 21 tmc is concerend. within one or two months we will commit all these projects.

SRI KAGODU THIMMAPPA :- Entrustment has not taken place. it is an admitted fact. It is humanly impossible to utilise this much of water before 2000.

ಅದಕ್ಕಿಂತ ಮುಂಚಿತವಾಗಿ ಯುಟಿಲೈಜೇಷನ್ ಎಂದು ಹೇಳಿದರೆ ಅದರಲ್ಲಿ ನಿಮ್ಮ ಅಲೋಕೇಷನ್ ಇರುತ್ತದೆ ಆ ಪ್ರಾಜೆಕ್ಟನ್ನು ಕಮಿಷನ್ ಮಾಡಿರುತ್ತೀರಿ. ಇದು ಎಲ್ಲಾ ಸರಿ. ಇಂಪೌಂಡ್ ಮಾಡಿರುತ್ತೀರಿ ಆದರೆ Mere impounding of water does not mean that you have utilised the water.

ಅವರು ಏನು ಅಕೌಂಟ್ ತೆಗೆದುಕೊಳ್ಳುತ್ತಾರೆಂದರೆ 2000ನೇ ಇಸವಿಯಲ್ಲಿ ಕಂಪ್ಲಿಟಾಗುತ್ತದಲ್ಲಾ ಅವತ್ತು ಎಷ್ಟು ನೀರನ್ನು ಯುಟಿಲೈಜ್ ಮಾಡಿದ್ದೀರಿ ಎಂಬುದನ್ನಷ್ಟೇ ತೆಗೆದುಕೊಳ್ಳುತ್ತಾರೆ. By this process, a balance of water has not been utilised as on that day. What are you going to do? How are you going to answer the point which they have already made? this is a decision.

SRI K.N.NAGE GOWDA :- Before Bachawat award was announced, regarding Malaprabha and Ghataprabha, Tungabhadra and Bhadra, two projects were completed, there were another two on- going projects, at that time on going prjoects were treated as the committed utilisation. That is what I am telling, here also 712 TMC is the committed utilisation.

SRI KAGODU THIMMAPPA :- They themselves have admitted, that this is the progress completed and utilisation is there.

ಅದನ್ನೂ ಸೇರಿಸಿಕೊಂಡು ನಮ್ಮ ಅಲೋಕೋಷನ್ ಮಾಡಿದ್ದರು. ಅಲೋಕೇಟೆಡ್ ವಾಟರ್‌ನ್ನು ಯುಟಿಲೈಜ್ ಮಾಡಿಕೊಳ್ಳುವುದಷ್ಟೇ ನಮ್ಮ ಕೆಲಸ. Mere construction of project or impounding of water, that does not mean we have utilised the water.

ಅದರ ಬಗ್ಗೆ ಹೇಳಿ

ಶ್ರೀ ಕೆ.ಎನ್.ನಾಗೇಗೌಡ :- ಟಿ.ಬಿ. ಜಯಚಂದ್ರರವರು ಕೇಳಿದ ಪ್ರಶ್ನೆಗೆ ಹೇಳುವುದಾದರೆ ....

ಶ್ರೀಕಾಗೋಡು ತಿಮ್ಮಪ್ಪ :- ನಾನು ಯಾವುದಕ್ಕೆ ಹೇಳುತ್ತೇನೆಂದರೆ, because of so many reasons or something, in that we have to get share from return flow.

ಎವಾಪರೇಟ್ ಲಾಸ್ ನಿಂದ ಬರುವ ಷೇರ್ ಇದೆ. ನಾವು ಯಾವುದನ್ನೂ ಇನ್ನೂ ಯುಟಿಲೈಜ್ ಮಾಡಿಲ್ಲ. ರೀಜನರೇಷನ್ ಇದೆ. ಅದನ್ನೂ ಯುಟಿಲೈಜ್ ಮಾಡಿಲ್ಲ. ಆಪ್‌ಷೂಟ್‌ನಿಂದ ಬರುವುದಿದೆ. ಅದರಲ್ಲಿ ಸ್ಕೋಪ್ ಇದೆ. ಇವನ್ನೆಲ್ಲಾ ಯುಟಿಲೈಜ್ ಮಾಡಿಕೊಂಡಿದ್ದರೆ,now by this time, evaporation loss return flow of water re-generation. ಇವನ್ನೆಲ್ಲಾ ಯುಟಿಲೈಜ್ ಮಾಡಿಕೊಳ್ಳುವ ಅವಕಾಶವಿತ್ತು ನಾವು ಅಲಾಟೆಡ್ ವಾಟರ್‌ನ್ನು ಪೂರ್ತಿಯಾಗಿ ಉಪಯೋಗಿಸಿ ಕೊಳ್ಳಲಾಗದಿದ್ದ ಮೇಲೆ 2000ನೇ ಇಸವಿ ಆದಮೇಲೆ ಈ ನಾಲ್ಕು ವರ್ಷಗಳಲ್ಲಿ ಅಷ್ಟನ್ನು ಯುಟಿಲೈಜ್ ಮಾಡುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ. ನಮಗೆ ಬೇಕಾಗಿರುವುದು, ಒಂದು ವೇಳೆ ಬಚಾವತ್ ಅವಾರ್ಡ್ ತೀರ್ಪಿನ ಪ್ರಕಾರ ಅಲಾಟೆಡ್ ವಾಟರ್ ಯುಟಿಲೈಜ್ ಆಗದೇ ಹೋದಂಥ ಸಂದರ್ಭದಲ್ಲಿ ನಾವು ಹೇಗೆ ಮೀಟ್ ಮಾಡಬೇಕೆಂಬುದು.

How to get back our right, share, what is your plea?

ಅದಕ್ಕೆ ಪ್ರಿಪರೇಷನ್ ಏನು? ಇನ್ನ ಕೇವಲ 6ತಿಂಗಳಿದೆ. ಅದರಲ್ಲಿ 3ತಿಂಗಳು ರಾತ್ರಿ ವೇಳೆ ಇದೆ. ವರ್ಕಿಂಗ್ ಡೇಸ್ ಇರುವುದೇ 3 ತಿಂಗಳು ಅಷ್ಟರಲ್ಲಿ ಇದನ್ನೆಲ್ಲಾ ಮಾಡುವುದಕ್ಕಾಗುವುದಿಲ್ಲ.

ಶ್ರೀಡಿ. ಮಂಜುನಾಥ್ (ಅರಣ್ಯ ಮಂತ್ರಿಗಳು):- ಯುಟಿಲೈಜ್ ಮಾಡುವುದಕ್ಕೆ ಆಗುವುದಿಲ್ಲವೆಂದು ಹೌಸ್‌ನಲ್ಲಿ ಹೇಳುವುದು ಬೇಡ. ಇದನ್ನೆಲ್ಲಾ ಬೇರೆ ರಾಜ್ಯದವರು ಪತ್ರಿಕೆಯಲ್ಲಿ ಓದುತ್ತಾರೆ, ಯುಟಿಲೈಜ್ ಮಾಡುತ್ತೇವೆಂದೇ ನಾವು ಹೇಳಬೇಕು.

SRI KAGODU THIMMAPPA:-Then call us and discuss.

ಶ್ರೀ ಕೆ.ಎನ್. ನಾಗೇಗೌಡ :- ನೀವು ಕರೆದು ಡಿಸ್ಕಸ್ ಮಾಡಿ ಎಂದು ಹೇಳಿದರೆ ಎಲ್ಲಾ ಹೇಳುತ್ತೇನೆ. Return flow, regenerating, 10% ಇವನ್ನೆಲ್ಲಾ ಕ್ಯಾಲ್ಕುಲೇಟ್ ಮಾಡಿಯೇ 729 ಟಿಎಂಸಿ ನೀರನ್ನು ಕೊಟ್ಟಿರುವುದು. You must know the facts. That is why I am telling.

ಈ ಟೆಕ್ನಿಕಲ್ ಪಾಯಿಂಟ್‌ಗಾಗಿಯೇ ನಾವು ಸೂಟ್(1)ಹಾಕಿರುವುದು. ರಿಮೆನಿಂಗ್ ವಾಟರ್ ಅಂದರೇನು ? ಸರಪ್ಲಸ್ ವಾಟರ್ ಅಂದರೇನು ? ಆಫ್ಟರ್ 2060 ಕ್ವಾಂಟಂ ಅಂದರೇನು? ಇಲ್ಲೇ ಸಮಸ್ಯೆ ಆಗಿರುವುದು. ಇದರ ಬಗ್ಗೆ ನಾನು ಆಮೇಲೆ ಮಾತನಾಡುತ್ತೇನೆ. Return flow, regeneration

ಅವೆಲ್ಲಾ 2060ರಲ್ಲಿ ಸೇರಿ ಅವರಿಗೆ 800ಟಿಎಂಸಿ ನಮಗೆ 700ಟಿಎಂಸಿ ಕೊಟ್ಟು ಅದರಿಂದಾಗಿ ನಮಗೆ 734ಟಿಎಂಸಿ ಆಯಿತು

Sri Kagodu Thimmappa:- Regeneration, evaporation loss ಇದರಲ್ಲಿ ಸೇರಿಲ್ಲ.

ಶ್ರೀ ಕೆ.ಎನ್.ನಾಗೇಗೌಡ :- ಸೇರಿದೆ, ನಮಗೆ ಅಲೋಕೇಟ್ ಆಗಿರುವುದು 700ಟಿಎಂಸಿ. ಉಳಿದದ್ದು 34ಟಿಎಂಸಿ. ಅದರಲ್ಲಿ 5ಟಿಎಂಸಿ ಕೊಟ್ಟಿದ್ದು 729 ಟಿಎಂಸಿ ಇದೆ. ಟಿ.ಬಿ. ಜಯಚಂದ್ರರವರು ಕೇಳಿದ ಪ್ರಶ್ನೆಗೆ 173 ಟಿಎಂಸಿ ಯಾವುದನ್ನೂ ಕೂಡ ಆಕ್ಸೆಪ್ಟ್ ಮಾಡಿಲ್ಲ 154 ಟಿಎಂಸಿಯನ್ನು ಆಂಧ್ರದವರು ಮತ್ತು ಮಹಾರಾಷ್ಟ್ರದವರಿಬ್ಬರೂ ಒಪ್ಪಿಕೊಂಡಿರುವ ಕಮಿಟ್. ಅಂಡರ್ ಬಚಾವತ್ ಅವಾರ್ಡ್ ನಮಗೆ 700 ಟಿಎಂಸಿ ಅಲಾಟ್ ಮಾಡಿದ್ದಾರೆ. ಇಂಟರ್ ಅಲೋಕೇಷನ್ ಮಾಡಿಕೊಳ್ಳುವುದು ಆಯಾಯ ಸ್ಟೇಟ್‌ಗೆ ಬಿಟ್ಟಿದ್ದು 734 ಟಿಎಂಸಿಯಲ್ಲಿ ನೀವು ಯಾವ ಬೇಸಿನ್‌ಗೆ ಯಾವ ಪ್ರಾಜೆಕ್ಟ್‌ಗೆ ಎಷ್ಟು ಬೇಕಾದರೂ ಅಲಾಟ್ ಮಾಡಿಕೊಳ್ಳಬಹುದು. ನಾವು ಏನು ಮಾಡಿದೆವು 154 ಟಿಎಂಸಿ ಸೇರಿಸಿ 173 ಟಿಎಂಸಿ ಎಂದು ಕೊಟ್ಟೆವು. ಆದರೆ, ನಾರಿಮನ್‌ರವರ ಆಲೋಚನೆ ಏನೆಂದರೆ, ಕನಿಷ್ಠ 173 ಟಿಎಂಸಿಯನ್ನೂ ಕೊಡದಿದ್ದರೆ, 154 Which was accepted by both the States, pending suit ಅದನ್ನು ಕೊಡಿ ಎಂದು ಕೇಳುವ ಸಂದರ್ಭದಲ್ಲಿ ಫೈಲ್‌ನ್ನು ನಾನು ತರಿಸಿ ನೋಡಿ, ಅದರ ಮೇಲೆ 173 ಟಿಎಂಸಿ ಎಂದೇ ಬರೆದಿರುವುದು. pending suit ನಮಗೆ 154 ಟಿಎಂಸಿ ಕೊಡಿ ಫೈನಲ್ ಡಿಸ್‌ಪೋಸಲ್ ಮಾಡುವಾಗ 173 ಟಿಎಂಸಿ ಮಾಡಿಕೊಳ್ಳಿ To get the interim order, ಅದನ್ನು ಮಾಡಿರುವುದು ಅದಿನ್ನೂ ಲೀಗಲ್ ಕೋರ್ಟ್‌ನಲ್ಲಿ ಲಾಯರ್ಸ್ ಅರೇಂಜ್‌ಮೆಂಟ್ ಮಾಡಿಕೊಂಡು ಯಾವ ರೀತಿ ಸ್ಕಿನ್ ಪ್ಲೇಟ್‌ಗೆ ಬಿಟ್ಟು ಬೇರೆ ಸ್ಕೆಲಿಟಿನ್ ಆರ್ಡರ್ ತೆಗೆದುಕೊಳ್ಳುವುದಕ್ಕೆ ಮಾಡಿರುವ ಸ್ಟ್ರಾಟಜಿಯೇ ವಿನಃ ಪೆಂಡಿಂಗ್ ಡಿಸ್‌ಪೋಸಲ್ accepted by both the States 154 TMc

ಕೊಡಿ ಎನ್ನುವುದು. ಆದ್ದರಿಂದ ಇದರಲ್ಲಿ ಬೇರೆ ಉದ್ದೇಶ ಇಲ್ಲ. ನಾವು ಯಾವುದೇ ನೀರನ್ನೂ ಕಳೆದುಕೊಳ್ಳವುದಿಲ್ಲ. ನಮ್ಮ ಬಚಾವತ್ ಅವಾರ್ಡ್‌ನಲ್ಲಿ 729 ಟಿಎಂಸಿ ಇದೆ. ಅದು ಇದ್ದೇ ಇರುತ್ತದೆ. ಅದರಲ್ಲಿದ್ದದ್ದು 154 ಟಿಎಂಸಿ. ಆಡ್ ಮಾಡಿಕೊಂಡಿದ್ದು 173ಟಿಎಂಸಿ ಆಗಿದೆ. There is no question of losing our right, over 30 TMC or 20 TMC.

ಶ್ರೀಕಾಗೋಡು ತಿಮ್ಮಪ್ಪ : ರಿವ್ಯೂ ಮಾಡುವುದು ಯಾರಿಗೆ either competent authority or tribunal. ಆಗ ಅವರೇನು ಹೇಳಿದ್ದಾರೆಂದರೆ, ಯುಟಿಲೈಜೇಷನ್ ಆಗಿದ್ದರೆ, ಡಿಸ್ಟರ್ಬ್ ಮಾಡಬೇಡಿ At any time after 31st May, 2000, this order may be reviewed or revised by a competent authority / tribunal but such review or revision shall not as far as possible disturb any utilisation that has been undertaken by any State within the limits of the allocation made to it under the foregoing clauses,s" they say. Therefore utilisation should have taken place.

ನೀವು ಯುಟಿಲೈಜ್ ಮಾಡದಿದ್ದರೆ will it be a Subject matter for review?

SIR T.B.JAYA CHANDRA : Impounding is not a utilisation. It has got a different meaning.

ಶ್ರೀಕೆ.ಎನ್. ನಾಗೇಗೌಡ: ಇಂಪೌಂಡ್ ಮಾಡಿದ ತಕ್ಷಣ ಕೆನಾಲ್ ಕಮಿಟ್ ಆದರೆ, ಡಿಸ್ಟ್ರಿಬ್ಯೂಟರಿ ಕಮಿಟ್ ಆದರೆ, it is called as committed utilisation ಇದು ಲೀಗಲ್ ಟರ್ಮ್‌ನಲ್ಲಿ ಕರಕ್ಟ್ ಆಗಿದೆ. ಬಿಫೋರ್ ಅವಾರ್ಡ್ ಅದನ್ನು ಕನ್‌ಸಿಡರ್ ಮಾಡಿದ್ದಾರೆ. All the judges, including Bachawat ಎಲ್ಲಾ ಓದಿದ್ದೇವೆ. ಇನ್ನೂ ಫಿಗರ್ಸ್, ಪಾಯಿಂಟ್ಸ್ ಬೇಕು ಅಂದರೆ will have a separate meeting.

ಒಟ್ಟಾರೆ ಹೇಳುವುದಾದರೆ, ಸರ್ಕಾರ ಯಾವುದೇ ರೀತಿಯಲ್ಲೂ ಕೆಲಸ ಮಾಡಿದೆ 2000ನೇ ವರ್ಷದಲ್ಲಿ ನಮ್ಮ ರೈತರನ್ನು ಕಾಪಾಡುವುದರಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸ ಮಾಡಿ ಜನತೆಗೆ ಮಾತು ಕೊಟ್ಟಂತೆ ನಡೆದುಕೊಂಡಿದ್ದೇವೆ. ನಡೆದುಕೊಳ್ಳದಿರುವ ಇವರಿಗೆ ಮಾತನಾಡುವ ನೈತಿಕ ಹಕ್ಕು ಇಲ್ಲ. ಇವರೇ ರಾಜ್ಯದ ಹಿತ ಹಾಳು ಮಾಡಿದರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಆಲಮಟ್ಟಿ ಇಂಪೌಂಡ್ ಮಾಡುವುದರಲ್ಲಿ ಇವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಚೌಕಟ್ಟು ಕೂಡಿಸಿ, ಅದಕ್ಕೆ ಪಟ್ಟಿ ಕೂಡಿಸಲಿಲ್ಲವಾದರೆ ನೀರು ಹೋಗದೆ ಇರುತ್ತದೆಯೇ ? he has completely failed. within 2000 AD ಒಳಗೆ 173 ಟಿಎಂಸಿ ನೀರನ್ನು ಅಲ್ಲಿ ಯುಟಿಲೈಜ್ ಮಾಡುವುದಲ್ಲಿ ವಿಫಲರಾಗಿದ್ದೀರಿ. ಅದಕ್ಕೆ ಅವರು ಸರಿಯಾದ ಉತ್ತರ ಕೊಡುತ್ತಿಲ್ಲ, ಸಮರ್ಥನೆಯನ್ನೂ ಮಾಡುತ್ತಿಲ್ಲ. ಎರಡನೆಯಾದಾಗಿ, ಸಿಬಿಐ ತನಿಖೆ ಮಾಡಿ ನೂರು ಕೋಟಿ ರೂಪಾಯಿಗಳ ಮಿಸ್‌ಅಪ್ರೋಪ್ರಿಯೇಷನ್, ಮಿಸ್ ಅಪ್ಲಿಕೇಷನ್ ಆಫ್ ಪಂಡ್ಸ್, ಎಕ್ಸೆಸ್ ಪ್ರೇಮೆಂಟಾಗಿದೆ ಎಂದರೆ, ಅದಕ್ಕೂ ಅವರು ಒಪ್ಪುತ್ತಿಲ್ಲ ಇವತ ಉತ್ತರ ತೃಪ್ತಿಕರವಾಗಿಲ್ಲ ಇವರಿಂದ ರಾಜ್ಯದ ಹಿತ ಕಾಪಾಡುವುದಕ್ಕೆ ಸಾಧ್ಯವಿಲ್ಲ ಅ ಭಾಗದ ರೈತರ ಹಿತದ ಕಡೆ ಇವರ ಗಮನವಿಲ್ಲ. ಕೇವಲ ಭಾಷಣ ಮಾಡುವುದು. ರಾತ್ರಿಹಗಲು ಕೆಲಸ ಮಾಡುತ್ತೇವೆ ಎನ್ನುತ್ತಾರೆ.

ರಾತ್ರಿ ಯಾವುದು, ಹಗಲು ಯಾವ ಕೆಲಸ ಮಾಡುತ್ತಾರೆಯೋ ಗೊತ್ತಿಲ್ಲ. ಆದರೆ, ಇವರಿಂದ ರಾಜ್ಯದ ರೈತರ ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ ಇವರ ಮಾತಿನ ಧಾಟಿ ನೋಡಿದರೆ, ಇವರು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆನ್ನುವುದು ಇದರಿಂದ ಗೊತ್ತಾಗುತ್ತದೆ. ಅದಕ್ಕೆ ಅವರ ಈ ಒಂದು ಮಾತಿಗೆ ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ. (ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಬಚಾವತ್ ತೀರ್ಪನ್ನು ನಾವು ಈಗಲೂ ವಿರೋಧಿಸುತ್ತೇವೆ. ಈಗ ಇದನ್ನು ಬಹಿಷ್ಕಾರ ಮಾಡಬೇಕು ಎನ್ನುವುದೇ ನನ್ನ ನಿಲುವು. ಇದನ್ನು ಸರ್ಕಾರ ಈ ಕ್ಷಣದಿಂದಲೇ ಬಹಿಷ್ಕಾರ ಮಾಡಬೇಕು ಎಂಬುದೇ ನನ್ನ ಅಚಲವಾದ ನಿಲುವು. ತೆಲುಗು ಗಂಗಾ ಇದನ್ನು ನಾವು ವಿರೋಧಿಸುತ್ತೇವೆ. ಇದು ಕೂಡ ನಮಗೆ ಬೇಕಾಗಿಲ್ಲ ಇದನ್ನು ಸರ್ಕಾರ ವಿರೋಧಿಸಬೇಕು. ಸರ್ಕಾರ ಇದನ್ನು ವಿರೋಧ ಮಾಡಬೇಕು ಎನ್ನುವುದೇ ನನ್ನ ಒತ್ತಾಯ ಮತ್ತು ಶ್ವೇತಪತ್ರವನ್ನು ಪ್ರಕಟಿಸಿ ಎಂದು ನಾನು ಆಗ್ರಹಪಡಿಸಿದರೂ ಶ್ವೇತಪತ್ರವನ್ನು ಪ್ರಕಟಿಸುವುದಕ್ಕೆ ಸರ್ಕಾರ ಸಿದ್ಧವಿಲ್ಲ. ಆದ್ದರಿಂದ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀವಾಟಾಳ್ ನಾಗರಾಜ್ ರವರು ಸದನದ ಬಾವಿಗೆ ಬಂದು ನಿಂತರು)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಪಾಂಡವಪುರ) : ಲೀಗಲ್ ಬ್ಯಾಟಲ್‌ನಲ್ಲಿ ಇವರು ಕೋರ್ಟಿಗೆ ಹೋಗಿದ್ದರು. ಕೋರ್ಟಿನ ತೀರ್ಪು ಸರ್ಕಾರದ ವಿರುದ್ಧವಾಯಿತು . 2000ನೇ ಇಸವಿಯೊಳಗೆ ಅದನ್ನು ಮುಗಿಸಬೇಕು ಎನ್ನುವುದಾದರೆ ಅದು ಸಾಧ್ಯವಾಗುವುದಿಲ್ಲ. ಸರ್ಕಾರ ಧೈರ್ಯವಾಗಿ 2000ನೇ ಇಸವಿಯೊಳಗೆ ಮಾಡಲೇ ಬೇಕು ಎನ್ನುವ ವಿಚಾರವನ್ನು ವಿರೋಧಿಸಬೇಕು ಎಂದು ಹೇಳುತ್ತಾ ನಾನು ಕೂಡ ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸದನದ ಬಾವಿಗೆ ಬಂದು ನಿಂತರು)

ಶ್ರೀ ಕೆ.ಎನ್. ನಾಗೇಗೌಡ (ಬಹೃತ್ ನೀರಾವರಿ ಸಚಿವರು) : ಕೋರ್ಟಿನಿಂದ ನಮಗೆ ರಿಲೀಫ್ ದೊರಕುತ್ತದೆ. ನಮಗೆ ಏನು ಡಿಲೇ ಆಗಿದೆ ಅದಕ್ಕೆ ಕೋರ್ಟಿನಿದ ರಿಲೀಫ್ ಸಿಗುತ್ತದೆ. ಇದನ್ನೇ ನಮ್ಮ ಮುಖ್ಯಮಂತ್ರಿಗಳು ಹೇಳಿರುವುದು. ಜಡ್ಜಮೆಂಟ್‌ನಲ್ಲಿ ಆಗಿರತಕ್ಕಂಥ ಡಿಲೇಯನ್ನು ಸುಪ್ರಿಂಕೋರ್ಟ್ ಅರ್ಥಮಾಡಿಕೊಂಡು ರಿಲೀಫ್ ಕೊಡುತ್ತದೆ. ನಾವು ಯಾವಾಗಲೂ ಕೊಡುವುದಿಲ್ಲ ಎಂದು ಭಾವಿಸದೆ ಕೊಡುತ್ತದೆ ಎಂದು ಭಾವಿಸಿಕೊಳ್ಳಬೇಕು Bachawat Award is accepted one. How can you oppose now after 25 years?

ಇಪ್ಪತ್ತೈದು ವರ್ಷಗಳ ನಂತರ ನಾವು ಅಪೋಸ್ ಮಾಡುತ್ತೇವೆಂದರೆ ಇದರಲ್ಲಿ ಏನು ಅರ್ಥ ಇದೆ?

ಶ್ರಿಕೆ.ಎಸ್.ಪುಟ್ಟಣ್ಣಯ್ಯ : ಬಚಾವತ್ ತೀರ್ಪನ್ನು ಕೊಟ್ಟಾದ ಮೇಲೆ ನಾವು ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಆಲೋಚನೆ ಮಾಡಬೇಕು. ರಾಜ್ಯದಲ್ಲಿ ಯಾವಾಗಲೂ ಒಂದೇ ರೀತಿಯ ಆರ್ಥಿಕ ಪರಿಸ್ಥಿತಿ ಇಲ್ಲ. ಇಂಥ ಪರಿಸ್ಥಿತಿ ಬಂದಾಗ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿ ಹಣವನ್ನು

ಸಹಾಯ ಮಾಡತಕ್ಕಂಥ ಆಲೋಚನೆ ಇದ್ದರೆ ಬಚಾವತ್ ತೀರ್ಪನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಯಾವುದೇ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಬಚಾವತ್ ಆಯೋಗ ಹೇಳುವುದಕ್ಕೆ ಹಕ್ಕಿಲ್ಲ ಆದ್ದರಿಂದ ನಾವು ಇವತ್ತು ಕೋರ್ಟಿಗ್ ಹೋಗಿದ್ದೆವು. ಬಚಾವತ್ ಆಯೋಗದ ತೀರ್ಮಾನದಂತೆ 2000ನೇ ಇಸವಿ ಯೊಳಗೆ ಮುಗಿಸಬೇಕು ಎಂದರೆ ಇನ್ನು ಕೇವಲ ಆರು ತಿಂಗಳಳೊಗೆ ಬಚಾವತ್ ಸ್ಕೀಮ್ ಎ ಮತ್ತು ಸ್ಕೀಮ್ ಬಿ ಯಾವ ರೀತಿ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯ?ಆದ್ದರಿಂದ ನಾನು ಏನು ಹೇಳುತ್ತೇನೆಂದರೆ, ಬಚಾವತ್ ಆಯೋಗವನ್ನು ಸಂಪೂರ್ಣವಾಗಿ ವಿರೋಧಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಕೆ.ಎನ್ ನಾಗೇಗೌಡ : ಮಾನ್ಯ ಸದಸ್ಯರು ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ದೇವೇಗೌಡರು ಪ್ರಧಾನಿ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಎಲ್ಲೆಲ್ಲಿ accelerated programmes ಅವುಗಳು ಬಹಳ ತ್ವರಿತಗತಿಯಲ್ಲಿ ನಡೆಯದೆ ಮಂದಗತಿಯಲ್ಲಿ ನಡೆಯುತ್ತಿವೆ ಇಂಥವುಗಳಿಗೆ ಇಡೀ ದೇಶದಲ್ಲಿ ಒಂದು ಯೋಜನೆ ಮಾಡಿ. ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳಿಗೆ ಎ.ಐ.ಬಿ.ಪಿ. ಎಂದು ಒಂದು ಪ್ರೋಗ್ರಾಮ್‌ನ್ನು ಇಂಟ್ರುಡ್ಯೂಸ್ ಮಾಡಿದರು. ಭಾರತ ಸರ್ಕಾರದಲ್ಲಿ ಬಜೆಟ್ ಪ್ರೋಗ್ರಾಂ ಮಾಡಿ ಕರ್ನಾಟಕಕ್ಕೆ ಮೂರು ವರ್ಷಗಳಿಂದ ಸುಮಾರು 180ರಿಂದ200 ಕೋಟಿ ರೂಪಾಯಿಗಳವರೆಗೆ ಹಣ ಕೊಟ್ಟಿದೆ. ನಬಾರ್ಡ್‌ನಿಂದ 100ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದೆ. ಇದರ ಜೊತೆಗೆ ಜಾಗತಿಕ ಬ್ಯಾಂಕ್ ಕೂಡ ಹಣ ಕೊಟ್ಟಿದೆ. ಕೆ.ಜೆ.ಬಿ.ಎಲ್. ನಿಂದ ಹಣ ಕಲೆಕ್ಟ್ ಮಾಡಿದ್ದೇವೆ. ರಾಜ್ಯ ಬಜೆಟ್‌ನಿಂದ 1000 ಕೋಟಿ ಹಣ ನೀಡಿದೆ. ಆದ್ದರಿಂದ ಈ ಅವಾರ್ಡ್‌ನ್ನು ವಿರೋಧ ಮಾಡತಕ್ಕಂಥದ್ದರಲ್ಲಿ ಅರ್ಥ ಇಲ್ಲ. ಏಕೆಂದರೆ, ಈಗಾಗಲೇ ಕೊನೆ ಹಂತದಲ್ಲಿದ್ದೇವೆ.

ಶ್ರೀ ಕೆ.ಸಿ ಪುಟ್ಟಣ್ಣಯ್ಯ : ಎಕ್ಸಟೆನ್‌ಷನ್‌ಗಾಗಿ ಕೋರ್ಟಿಗೆ ಹೋಗುವ ಅವಶ್ಯಕತೆ ಏನಿತ್ತು?

ಶ್ರೀ ಕೆ.ಎನ್.ನಾಗೇಗೌಡ : ನಾನು ಇದನ್ನೂ ಕ್ಲಾರಿಫೈ ಮಾಡುತ್ತೇನೆ. ಕೋರ್ಟಿಗೆ ಹೋಗುವ ಅವಶ್ಯಕತೆ ಇರಲಿಲ್ಲ. ಬಿ ಸ್ಕೀಂ ಅನ್ನು ಜಾರಿಗೊಳಿಸತಕ್ಕಂಥ ಹಂತದಲ್ಲಿ ಅಂತರ ರಾಜ್ಯ ಜಲ ವಿವಾದ (ತಿದ್ದುಪಡಿ)ಕಾಯ್ದೆ ಕೆಳಗಡೆ ಯಾವುದಾದರೂ ಅವಾರ್ಡ್ ಆದರೆ ಆ ಅವಾರ್ಡ್ ಯಾವ ಸರ್ಕಾರದ ಮೇಲೆ ಬೈಂಡ್ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅಧಿಕಾರ ಇರಲಿಲ್ಲ. ಇದು ಸಿಕ್ಸ್‌ನಲ್ಲಿ ಬರುತ್ತದೆ. ಸಿಕ್ಸ್'ಎ' ಮಾಡಿದ ಮೇಲೆ ಯಾವುದಾದರೂ ಅವಾರ್ಡ್ ಬಂದರೆ ಆ ಅವಾರ್ಡ್‌ನ್ನು ಜಾರಿಗೊಳಿಸತಕ್ಕಂಥ ಜವಾಬ್ದಾರಿಯನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡ ಹಿನ್ನೆಲೆಯಲ್ಲಿ ಯಾವ ರೀತಿ ಕಾವೇರಿ ಪ್ರಾಧೀಕಾರ ಮಾಡಿದರೋ ಅದೇ ರೀತಿ ಕೃಷ್ಣಾ ಪ್ರಾಧಿಕಾರ ಮಾಡಿ 'ಬಿ' ಸ್ಕೀಂ ನಲ್ಲಿರತಕ್ಕಂಥ ನೀರನ್ನು ಹಂಚಿಕೊಡಬೇಕು 2000 ಇಸವಿಯವರೆಗೆ ಕಾಯುವ ಅವಶ್ಯಕತೆ ಇಲ್ಲ. ಈಗ 6(A)ಇಂಟ್ರೊಡ್ಯೂಸ್ ಆಗಿದೆ ಎನ್ನುವ ಹಿನ್ನೆಲೆಯಲ್ಲಿ ನಾವು o.s ನಲ್ಲಿ ಸೂಟ್ ಹಾಕಿರತಕ್ಕಂಥದ್ದು. ಎಲ್ಲದಕ್ಕೂ ನಾವು ಲೀಗಲ್ ಬ್ಯಾಟಲ್‌ನಲ್ಲಿ ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ Our lawyers are the best.ಲೀಗಲ್ ಫೈಟ್‌ನಲ್ಲಿ ನಾವು ಎರಡು ಹಂತದಲ್ಲಿ ಗೆದ್ದಿದ್ದೇವೆ. ಎರಡು ಹಂತದಲ್ಲಿ ಆಂಧ್ರ ಪ್ರದೇಶದ ಕೋರ್ಟ್‌ನಲ್ಲಿ ಗೆದ್ದಿದ್ದೇವೆ. ಸುಪ್ರಿಂ ಕೋರ್ಟ್‌ನಲ್ಲಿ ತುಂಬಾ ಮುಖ್ಯವಾಗಿರತಕ್ಕಂಥದ್ದು ಸ್ಕೆಲಿಟಿನ್ ವರ್ಕ್. ಬಟ್ಟೆ ತೆಗೆದುಕೊಂಡು ಬಂದು ಎಲ್ಲಾ ಕಟ್ ಮಾಡಿ ಹೊಲಿದು ಗುಂಡಿ ಹಾಕುವ ಸ್ಥಿತಿ ಯಲ್ಲಿ ನಾವು ನಿಂತಿದ್ದೇವೆ. ಈ ಗುಂಡಿ ಹಾಕತಕ್ಕಂಥದ್ದೇ ಸ್ಕಿನ್ ಪ್ಲೇಟ್, ಇದಕ್ಕೊಂದು ಅವಕಾಶ ಕೊಟ್ಟರೆ......

ಶ್ರೀ ಕೆ.ಎಸ್ ಪುಟ್ಟಣ್ಣಯ್ಯ : ನೀವು ಗುಂಡಿ ಹಾಕಿಲ್ಲ ಎಂದರೆ ನಾವು ಷರ್ಟ್‌ಹಾಕಿಕೊಳ್ಳುವುದಕ್ಕೆ ಬರುವುದಿಲ್ಲವಲ್ಲಾ.

ಶ್ರೀ ಕೆ.ಎನ್.ನಾಗೇಗೌಡ : ಹೌದೂ ಇದು ನಿಜ. ಈಗ ನಾವು ಕೊನೆಯ ಹಂತದಲ್ಲಿದ್ದೇವೆ. ಜುಲೈ 19ಕ್ಕೆ ಕೇಸ್ ಇದೆ ಅವತ್ತು ಕೇಸ್ ಫೈನಲ್ ಆಗುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನೀವು ಎಕ್ಸ್‌ಟೆನ್‌ಷನ್‌ಗೆ ಕೋರ್ಟಿಗೆ ಹೋಗಿರುವುದು.

ಶ್ರೀ ಕೆ.ಎನ್.ನಾಗೇಗೌಡ : ಇಲ್ಲ ಎಕ್ಸ್‌ಟೆನ್‌ಷನ್‌ಗೆ ಕೋರ್ಟಿಗೆ ಹೋಗಲಿಲ್ಲ.

ಶ್ರೀ ಕೆ.ಎಸ್ ಪುಟ್ಟಣ್ಣಯ್ಯ : ಹೋಗಿದ್ದಾರೆ, ಕೋರ್ಟಿಗೆ ಹೋಗಿದ್ದಾರೆ

SRI K.N.NAGE GOWDA : It is premature.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರೇ ಬೆಳಿಗ್ಗೆ ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ದೂರವಾಣಿಯ ಮುಖಾಂತರ ಮಾತನಾಡಿದೆ. ಅವರ ಉದ್ದೇಶ ಏನು ಎಂದರೆ ಜುಲೈ 99ಕ್ಕೆ ಸುಪ್ರಿಂ ಕೋರ್ಟಿನಲ್ಲಿ ನಮ್ಮ ಪ್ರೋಗ್ರಾಂ ಮುಗಿದು ಹೋಗಬೇಕು (ಆಲಮಟ್ಟಿ ಸ್ಟೊರೇಜ್ ಪ್ರೊಗ್ರಾಂ)

Because of this legal battle,

ನಮಗೆ ನಮ್ಮ ಹಕ್ಕು ಹೊರಟು ಹೋಗುತ್ತದೆ. ಈ ಹಕ್ಕು ಕಳೆದು ಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿ ಅಲ್ಲ. ಲೀಗಲ್ ಬ್ಯಾಟ್‌ಲ್ ಒಳಗಡೆ ಲೀಗಲ್‌ನಿಂದ ನಮಗೆ ತಕ್ಷಣಕ್ಕೆ ರಿಲೀಫ್ ಬೇಕು ಎನ್ನುವ ಉದ್ದೇಶ ನಮಗಿತ್ತು.

(ಗೊಂದಲ)

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ರವರೇ ನೀವು ನಿಮ್ಮ ಜಾಗದಲ್ಲಿ ಹೋಗಿ ಮಾತನಾಡಿ. I request you to take your seat please. Consent for the Adjournment motion is withheld.

ಈಗ ಸದನವನ್ನು ನಾಳೆ10ಗಂಟೆಯವರೆಗೆ ಮುಂದೂಡುತ್ತಿದ್ದೇನೆ

(ಸದನವು ಸಂಜೆ ಆರು ಗಂಟೆ ಮೂವತ್ತೈದು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 25ನೇ ಜೂನ್ ಮಾಹೆ 1999ರ ಶುಕ್ರವಾರದಂದು ಬೆಳಿಗ್ಗೆ 10-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 31 - 350 ಪುಸ್ತಕಗಳು ದಿ: 30-8-2001.